ಬ್ಯಾಂಕ್‌ಗಳಲ್ಲಿ ಗ್ರಾಮೀಣ ಪ್ರದೇಶಗಳಲ್ಲಿ ನಮ್ಮ ರೈತ ಬಾಂಧವರು ಏನು ಸಾಲವನ್ನು ತೆಗೆದುಕೊಳ್ಳುತ್ತಾರೆ, ಅವರಿಗೆ ಈ ಶೇಕಡ 1ರಷ್ಟು ವಿನಾಯಿತಿ ಏನಿದೆ ಅದನ್ನು ಮುಂದುವರೆಸಬೇಕು ಮತ್ತು ಇದರ ಬಗ್ಗೆ ಏನು ಅಧಿಸೂಚನೆಯನ್ನು ಹೊರಡಿಸಿದ್ದೀರಿ, ಅದನ್ನು ರದ್ದು ಮಾಡಬೇಕೆಂದು ತಮ್ಮ ಮೂಲಕ ಸರ್ಕಾರದ ಗಮನಕ್ಕೆ ತರಬಯಸುತ್ತಿದ್ದೇನೆ, ಸರ್ಕಾರ ಈ ವಿಚಾರವನ್ನು ಬಹಳ ಗಂಭೀರವಾಗಿ ತೆಗೆದುಕೊಳ್ಳಬೇಕಾಗುತ್ತದೆ, ಇದು ಇಡೀ ರಾಜ್ಯದಲ್ಲಿ ಲಕ್ಷಾಂತರ ಜನರಿಗೆ ಅನುಕೂಲವಾಗುವಂಥಾದ್ದು, ಇದು ರೈತ ಬಾಂಧವರ ಮೇಲೆ ದೊಡ್ಡ ಭಾರ ಬೀಳುವಂಥಾದ್ದು, ಅದಕ್ಕಾಗಿ ಈ ರಾಷ್ಟ್ರೀಕೃತ ಬ್ಯಾಂಕ್‌ಗಳಿಂದ ರೈತರು ಏನು ಕೃಷಿ ಸಾಲವನ್ನು ತೆಗೆದುಕೊಳ್ಳುತ್ತಾರೆ, ಅದರ ಮೇಲೆ ಇರುವಂಥ ಶೇಕಡ 1ರಷ್ಟು ಸ್ಟ್ಯಾಂಪ್ ಡ್ಯೂಟಿ ರದ್ದು ಮಾಡಬೇಕೆಂದು ನಾನು ಸರ್ಕಾರವನ್ನು ಒತ್ತಾಯ ಮಾಡುತ್ತಿದ್ದೇನೆ.

ಉಪಾಧ್ಯಕ್ಷರು:– ಈಗ ಸಭೆಯಲ್ಲಿ ಕಂದಾಯ ಸಚಿವರು ಇಲ್ಲ, ಶೂನ್ಯವೇಳೆ ಕಲಾಪ ಮುಗಿಯಿತು, ಮತ್ತೆ ಸಭೆ 2.30ಕ್ಕೆ ಸಮಾವೇಶಗೊಳ್ಳುವುದು.

(ಸಭೆಯು ಮಧ್ಯಾಹ್ನ 1.34 ಗಂಟೆಗೆ ಮುಂದೂಡಲ್ಪಟ್ಟ ಪುನಃ 2.30 ಗಂಟೆಗೆ ಸೇರಲು ತೀರ್ಮಾನಿಸಿತು).

(ಸದನವು 3 ಗಂಟೆಗೆ ಸಮಾವೇಶಗೊಂಡಿತು)

(ಶ್ರೀ ಮನೋಹರ್ ಹೆಚ್. ತಹಶೀಲ್ದಾರ್ ಉಪಾಧ್ಯಕ್ಷರು, ಅಧ್ಯಕ್ಷ ಪೀಠವನ್ನಲಂಕರಿಸಿದ್ದರು).

5. ನಿಯಮ 159ರ ಮೇರೆಗೆ ಚರ್ಚೆ

ರಾಜ್ಯದ ಬಹುತೇಕ ಜಿಲ್ಲೆಗಳಲ್ಲಿ ಮಳೆಯ ಅಭಾವದಿಂದ ಉಂಟಾಗಿರುವ ಭೀಕರ ಬರಗಾಲದ ಪರಿಸ್ಥಿತಿ ಹಾಗೂ ಕಾಮಗಾರಿ ಕುರಿತು

ಶ್ರೀ ಎಸ್.ಪಿ. ಮುದ್ದಹನುಮೇಗೌಡ (ಕುಣಿಗಲ್):– ಸನ್ಮಾನ್ಯ ಉಪಾಧ್ಯಕ್ಷರೆ, ನಮ್ಮ ರಾಜ್ಯದಲ್ಲಿ ಬಂದಿರುವ ಬರ ಮತ್ತು ಆ ದಿಸೆಯಲ್ಲಿ ಸರ್ಕಾರ ಕೈಗೊಂಡಿರುವ ಕಾರ್ಯಕ್ರಮಗಳು ಇದರ ಬಗ್ಗೆ ಈಗಾಗಲೇ ಕಳೆದ 3 ದಿವಸಗಳಿಂದ ಈ ಸದನದಲ್ಲಿ ಬಹಳ ಸುದೀರ್ಘವಾಗಿ ಚರ್ಚೆ ನಡೆದಿದೆ. ಇನ್ನೂ ಅನೇಕ ಶಾಸಕ ಮಿತ್ರರು ಮತ್ತು ವಿರೋಧ ಪಕ್ಷದ ಮುಖಂಡರೂ ಕೂಡ ಮಾತನಾಡುವವರಿದ್ದಾರೆ. ಈ ಬರ ಈ ರಾಜ್ಯಕ್ಕೆ ನಾವು ಬಯಸದೇ ಬಂದಂಥ ಬರ. ನಾವು ಯಾರೂ ಕೂಡ ಇದನ್ನು ಬಯಸಲಿಲ್ಲ. ಬಹುಶಃ ಯಾವ ಸರ್ಕಾರವೇ ಆಗಲಿ, ಯಾವ ದೇಶದ ಸತ್ ಪ್ರಜೆಗಳೇ ಆಗಲಿ ನಮ್ಮ ದೇಶಕ್ಕೆ, ನಮ್ಮ ನಾಡಿಗೆ ಬರ ಬರಬೇಕೆಂದು ಯಾರೂ ಕೂಡ ಬಯಸುವುದಿಲ್ಲ. ಈ ಬಯಸದೇ ಬಂದಂಥ ಬರ, ನಮ್ಮ ದುರಾದೃಷ್ಟಕ್ಕೆ ಇದು ರಾಜ್ಯಕ್ಕೆ ಮಾತ್ರ ಸೀಮಿತವಾಗಲಿಲ್ಲ. ಈ ದೇಶದ ಅನೇಕ ರಾಜ್ಯಗಳಲ್ಲಿ ಇಂಥ ಬೀಕರ ಬರವನ್ನು ನಾವು ನೋಡುತ್ತಿದ್ದೇವೆ. ನಮ್ಮ ನೆರೆ ರಾಜ್ಯಗಳಾದ ಆಂದ್ರ ಪ್ರದೇಶ, ತಮಿಳುನಾಡು, ಕೇರಳ, ಮಹಾರಾಷ್ಟ್ರ ಹೀಗೆ ದೇಶದ ನಾನಾ ಕಡೆ ಬರದ ಛಾಯೆ ಈ ದೇಶದ ಜನರುಗಳನ್ನು ಕಾಡುತ್ತಿರುವುದನ್ನು ನಾವೆಲ್ಲರೂ ಇಂದು ನೋಡುತ್ತಿದ್ದೇವೆ. ಒಟ್ಟಾರೆಯಾಗಿ ಇದು ನಮ್ಮ ರಾಜ್ಯದ ಸಮಸ್ಯೆಯಾಗಿ ಅಷ್ಟೇ ಉಳಿಯದೇ ರಾಷ್ಟ್ರದ ಸಮಸ್ಯೆಯಾಗಿದೆ ಎನ್ನುವುದು ನಾವೆಲ್ಲರೂ ಒಪ್ಪಬೇಕಾಗುತ್ತದೆ. ಈ ರಾಜ್ಯದಲ್ಲಿಯೂ ಸರ್ವೇ ಸಾಮಾನ್ಯವಾಗಿ ಎಲ್ಲಾ ಕಡೆಯ ಎಲ್ಲಾ ಭಾಗದಲ್ಲೂ ಬರ ಇದ್ದರೂ ಈ ಭೌಗೋಳಿಕ ವ್ಯತ್ಯಾಸಗಳಿಂದಾಗಿ ಕೆಲವು ಕಡೆ ಒಂದೊಂದು ಭಾಗದಲ್ಲಿ ಒಂದೊಂದು ರೀತಿಯ ಸಮಸ್ಯೆಗಳನ್ನು

ನಾವು ನೋಡುತ್ತಿದ್ದೇವೆ. ಉದಾಹರಣೆಗೆ ಇವತ್ತು ಕರಾವಳಿ ಪ್ರದೇಶದಲ್ಲಿ ಪ್ರವಾಹ ಬರುತ್ತಿದೆ, ಆದರೆ ನಮ್ಮ ರಾಯಚೂರು, ಕೊಪ್ಪಳ, ಬಳ್ಳಾರಿ, ತುಮಕೂರು, ಕೋಲಾರ, ಚಿತ್ರದುರ್ಗ, ಈ ಭಾಗದಲ್ಲೂ ಇನ್ನೂ ಬರದ ಛಾಯೆ ನಮ್ಮನ್ನು ಅಗಲಿ ಹೋಗಿಲ್ಲ. ನಮ್ಮ ರಾಜ್ಯದಲ್ಲೂ ಅದರಲ್ಲೂ ನಮ್ಮ ಜಿಲ್ಲೆಗೆ ಸೀಮಿತವಾಗಿ ಹೇಳುವುದಾದರೆ ಪಾವಗಡದಲ್ಲಿರತಕ್ಕಂಥ ಸಮಸ್ಯೆ ಕೊರಟಗೆರೆಯಲ್ಲಿ ಇಲ್ಲ, ಕೊರಟಗೆರೆಯಲ್ಲಿ ಇರತಕ್ಕಂಥ ಸಮಸ್ಯೆ ತುರುವೇಕೆರೆಯಲ್ಲಿ ಇಲ್ಲ ಇಲ್ಲಿ ವ್ಯತ್ಯಾಸ ಕಾಣಿಸುತ್ತಿದೆ. The situation prevailing in Koppal, Raichur, is different from the situation prevailing either at Hassan or at Tumkur. ಅಲ್ಲಿಯ ಜನಗಳ ಸಮಸ್ಯೆಯೇ ಬೇರೆ, ನಮ್ಮ ಭಾಗದ ಜನರ ಸಮಸ್ಯೆಯೇ ಬೇರೆ, ಒಟ್ಟಾರೆ The undisputed fact is, in the whole of Karantaka, there is a drought situation and that has continued for the last two years. ಕಳೆದ ಎರಡು ವರ್ಷಗಳಿಂದ ನಮ್ಮ ರಾಜ್ಯದಲ್ಲಿ ಸತತವಾಗಿ ಬರ ನಮ್ಮನ್ನು ಕಾಡುತ್ತಿದ್ದರೂ ಸಹ ನಮ್ಮ ಸರ್ಕಾರ ಯಾವ ರೀತಿ ಅದನ್ನು ಸಮರ್ಥವಾಗಿ ಎದುರಿಸಿದೆ ಎನ್ನುವ ಪ್ರಶ್ನೆ ಇವತ್ತು ನಮ್ಮ ಸದನದಲ್ಲಿ ನಡೆಯುತ್ತಿರತಕ್ಕಂಥ ಚರ್ಚೆ. ಈಗಾಗಲೇ ಮಾತನಾಡಿರತಕ್ಕಂಥ ಗೌರವಾನ್ವಿತ ಸದಸ್ಯರು ತಮ್ಮದೇ ಆದ ಧಾಟಿಯಲ್ಲಿ ಈ ಬರ ಪರಿಹಾರ ಕಾಮಗಾರಿಯ ಬಗ್ಗೆ ಮತ್ತು ಬರವನ್ನು ಎದುರಿಸತಕ್ಕಂಥ ನಿಟ್ಟಿನಲ್ಲಿ ಸರ್ಕಾರ ಕೈಗೊಂಡಿರತಕ್ಕಂಥ ಕಾರ್ಯ ಕ್ರಮಗಳ ಬಗ್ಗೆ ತಮ್ಮ ತಮ್ಮ ವಾದವನ್ನು ಅವರು ಮಂಡಿಸಿದ್ದಾರೆ. ಆದರೆ ನಾನು ಅತ್ಯಂತ ವಿಶ್ವಾಸದಿಂದ. with all responsibility and confidence at my command, I would like to make a clear statement on the floor of the House that for the first time in the history of Karantaka, our Government of Karnataka has done the drought relief work, extremely well. The Government of Karnataka has effectively implemented the programme of drought relief work. ಇದನ್ನು ಅತ್ಯಂತ ವಿಶ್ವಾಸದಿಂದ ನಮ್ಮ ನಮ್ಮ ಕ್ಷೇತ್ರಗಳಲ್ಲಿ ಆಗಿರತಕ್ಕಂಥ ಅಭಿವೃದ್ಧಿ ಕೆಲಸಗಳು ನಮ್ಮ ನಮ್ಮ ಕ್ಷೇತ್ರದಲ್ಲಿ ನಾವು ಯಾವ ರೀತಿ ಬರವನ್ನು ಎದುರಿಸಲಿಕ್ಕೆ ನಾವು ಕೈಗೊಂಡಿರುವ ಕಾರ್ಯಕ್ರಮಗಳು ಪರಿಣಾಮಕಾರಿಯಾಗಿ ನಡೆದಿದೆ ಎನ್ನುವುದಕ್ಕೆ ನಾವು ಎಲ್ಲರೂ ಅದಕ್ಕೆ ಸಾಕ್ಷಿಗಳಾಗಿದ್ದೇವೆ. ಇವತ್ತು ಈ ಸರ್ಕಾರ ಈ ಬರವನ್ನು ಎದುರಿಸಲಿಕ್ಕೆ ಯಾವ ರೀತಿಯಲ್ಲಿ ಕಾರ್ಯಕ್ರಮಗಳನ್ನು ಹಾಕಿಕೊಂಡಿತು. ಈ ಕಾರ್ಯಕ್ರಮಗಳನ್ನು ಯಾವ ರೀತಿಯಲ್ಲಿ ಇಂಪ್ಲಿಮೆಂಟೇಷನ್ ಮಾಡುತ್ತಿದ್ದಾರೆನ್ನುವುದು ನಮ್ಮ ಮುಂದಿರುವ ಪ್ರಶ್ನೆ. ತಮಗೆಲ್ಲರಿಗೂ ಗೊತ್ತಿರುವಂತೆ ರಾಜ್ಯ ಸರ್ಕಾರ ಈ ಬರ ಪರಿಹಾರ ಕಾಮಗಾರಿಗಳ ಪರಿಣಾಮಕಾರಿಯಾದಂಥ ಅನುಷ್ಟಾನಗೋಸ್ಕರ ಪ್ರತಿಯೊಂದು ವಿಧಾನ ಸಭೆಯ ಕ್ಷೇತ್ರದಲ್ಲಿಯೂ ಕೂಡ ವಿಧಾನ ಸಭಾ ಸದಸ್ಯರ ಅಧ್ಯಕ್ಷತೆಯಲ್ಲಿ ಒಂದು ಕಮಿಟಿಯನ್ನು ಮಾಡಿ ಆ ಗೌರವಾನ್ವಿತ ವಿಧಾನ ಸಭಾ ಸದಸ್ಯರು ಅವರವರ ಕ್ಷೇತ್ರದಲ್ಲಿ ಈ ಬರದ ಛಾಯೆಯನ್ನು ಅಳಿಸಲಿಕೋಸ್ಕರ, ಬರದಿಂದ ತತ್ತರಿಸಿರತಕ್ಕಂಥ ಜನರ ರಕ್ಷಣೆಗಾಗಿ ಈ ಬರವನ್ನು ಸಮರ್ಥವಾಗಿ ಎದುರಿಸಲಿಕ್ಕೆ ಆಯಾಯಾ ವಿಧಾನ ಸಭೆಯ ಕ್ಷೇತ್ರದಲ್ಲಿ ಯಾವ್ಯಾವ ರೀತಿಯ ಕಾಮಗಾರಿಗಳು ಆಗಬೇಕು ಎನ್ನುವ ತೀರ್ಮಾನವನ್ನು ಆಯಾಯ ವಿಧಾನ ಸಭಾ ಸದಸ್ಯರುಗಳು, ಈ ಘನ ಸರ್ಕಾರ ರಚಿಸಿರತಕ್ಕಂಥ ಸಮಿತಿಯ ಅಧ್ಯಕ್ಷರಾಗಿ, ತಾಲ್ಲೂಕು ಪಂಚಾಯಿತಿ ಅಧ್ಯಕ್ಷರೂ ಒಳಗೊಂಡಂತೆ, ಆ ತಾಲ್ಲೂಕಿನ ಅಧಿಕಾರಿಗಳ ನೇತೃತ್ವದಲ್ಲಿ ಏನು ಒಂದು ವಿಶೇಷವಾದಂಥ ತಂಡ ರಚನೆಯಾಗಿದೆ

ಆ ತಂಡದ ಮುಖ್ಯಸ್ಥರಾಗಿ ಶಾಸಕರು ಈ ದಿನ ತೀರ್ಮಾನವನ್ನು ತೆಗೆದುಕೊಂಡಿದ್ದಾರೆ. ಇದನ್ನು ಯಾರೂ ಡಿಸ್‌ಪ್ಯೂಟ್ ಮಾಡುತ್ತಿಲ್ಲ. ಈ ಸಮಿತಿ ಏನೇನು ಜವಾಬ್ದಾರಿಗಳನ್ನು ಹೊಂದಿದೆ? What are the duties and responsibilities of this Task Force, being headed by the legislators of the respective constituencies? ಸುಮ್ಮನೆ ಏನೋ ನಾನು ಟಾಸ್ಕ್‌ಫೋರ್ಸ್ ಛೇರಮನ್ ಆಗಿದ್ದೇನೆಂದು ಇರಲಿಕ್ಕೆ ಆಗುವುದಿಲ್ಲ. The Task Force is answerable not only to the Government of Karnataka, but also answerable to the people of the State. In addition to that, they are answerable to their voters. The Government of Karnataka is reposing confidence on us. Our people have voted us, reposing confidence on us. They have made the respective legislators to be the Chairmen of the Task Forces. ನಾವು ಸಮರ್ಥವಾಗಿ ನಮ್ಮ ನಮ್ಮ ಕ್ಷೇತ್ರಗಳಲ್ಲಿ ಈ ಬರ ಪರಿಹಾರದ ಕಾಮಗಾರಿಗಳನ್ನು ತೆಗೆದುಕೊಂಡಿರತಕ್ಕಂಥ ಕೆಲಸಗಳನ್ನು ಮಾಡಿದ್ದೇವೆಯೇ ಇಲ್ಲವೇ ಎನ್ನುವ ಆತ್ಮಾವಲೋಕನ ಇವತ್ತು ಇಲ್ಲಿ ನಡೆಯಬೇಕಾಗಿದೆ. ನಾವು ಮಾಡಿದ್ದರೆ ನಾವು ಅತ್ಯಂತ ಆತ್ಮವಿಶ್ವಾಸದಿಂದ ಈ ಸದನದ ಮುಂದೆ ನಾವು ಹೇಳಿಕೆಯನ್ನು ಕೊಡಬಹುದಾಗಿದೆ. ನಮ್ಮ ನಮ್ಮ ಕ್ಷೇತ್ರದಲ್ಲಿ ಈ ಬರ ಪರಿಹಾರ ಕಾಮಗಾರಿಗಳನ್ನು ಅತ್ಯಂತ ಪ್ರಾಮಾಣಿಕವಾಗಿ, ಯಶಸ್ವಿಯಾಗಿ ನಡೆಸುವುದರ ಜೊತೆಗೆ ಇವತ್ತು ಈ ರಾಜ್ಯದ ಜನತೆಯ ಪರವಾಗಿ ಆ ಕ್ಷೇತ್ರದ ಜನಪ್ರನಿಧಿಗಳಾಗಿ ಮಾಡಿದ್ದೇವೆ ಎನ್ನುವ ಹೇಳಿಕೆಯನ್ನು ನಾವು ಇವತ್ತು ಇಲ್ಲಿ ಮಾಡಬೇಕಾಗುತ್ತದೆ. ನಾನು I posed a question to the honable member Mr. Krishnamurthy. Yesterday he was reluctant to answer any question. Had he answered the question. It would have minimised my discussion. ನಾನು ಬಹಳ ನೇರವಾಗಿ ಒಂದು ಪ್ರಶ್ನೆ ಕೇಳಿದೆ, ಸ್ವಾಮಿ ತಾವು ವಿರೋಧ ಪಕ್ಷದ ನಾಯಕರಿದ್ದೀರಿ, ರಾಜ್ಯದಲ್ಲಿ ಈ ಸರ್ಕಾರ ಯಾವ ರೀತಿ ಬರ ಪರಿಹಾರದ ಕಾಮಗಾರಿ ನಡೆಸಿದೆ, ಯಾವ ರೀತಿ ಬರವನ್ನು ಸಮರ್ಥವಾಗಿ ಎದುರಿಸಿದೆ ಎನ್ನುವುದರ ಬಗ್ಗೆ ಅಥವಾ ಎಲ್ಲಿ ರಾಜ್ಯ ಸರ್ಕಾರ ವಿಫಲವಾಗಿದೆ ಎನ್ನುವುದರ ಬಗ್ಗೆ ಚರ್ಚೆ ಮಾಡತಕ್ಕಂಥ ಸರ್ವಾಧಿಕಾರ ಇವತ್ತು ವಿರೋಧ ಪಕ್ಷದ ನಾಯಕರಿಗೆ ಇದೆ. ಅದರ ಜೊತೆಗೆ ನಾವು ಗೌರವಾನ್ವಿತ ಸದಸ್ಯರಾಗಿ ಇವತ್ತು ರಾಜ್ಯದಲ್ಲಿ ಯಾವ ರೀತಿಯಾಗಿ ಕೆಲಸ ನಡೆದಿದೆ, ನಡೆದಿರತಕ್ಕಂಥ ಕಡೆ ಎಷ್ಟು ಸಮರ್ಥವಾಗಿ ನಡೆದಿದೆ, ಅಥವಾ ಎಷ್ಟು ಲೋಪದೋಷಗಳಾಗಿವೆ, ಎನ್ನುವುದನ್ನು, ನಾನು ಒಬ್ಬ ಶಾಸಕನಾಗಿ ಬೇರೆ ಇತರೇ ಕ್ಷೇತ್ರಗಳಲ್ಲಿ ಏನಾಗಿದೆ ಎಂದು ಹೇಳುವುದಕ್ಕೆ ಆಗುವುದಿಲ್ಲ. ಅದರೆ ನನ್ನ ಕ್ಷೇತ್ರದಲ್ಲಿ ಏನು ನಡೆದಿರತಕ್ಕಂಥ ಕಾಮಗಾರಿಗಳ ಬಗ್ಗೆ, ನನ್ನ ಕ್ಷೇತ್ರದಲ್ಲಿ ನಡೆದಿರತಕ್ಕಂಥ ಈ ಒಂದು ಬರ ಪರಿಸ್ಥಿತಿಯನ್ನು ಎದುರಿಸಿರತಕ್ಕಂಥದ್ದರ ಬಗ್ಗೆ ನಾನು ಸಂಪೂರ್ಣವಾದ ವಿವರಗಳನ್ನು ಕೊಡಬಹುದು. ಒಂದು ವೇಳೆ ನನ್ನ ಕ್ಷೇತ್ರ ಅಲ್ಲದೇ ಬೇರೆ ಯಾವುದೇ ಕ್ಷೇತ್ರವಿರಲಿ, ಅವರವರ ಕ್ಷೇತ್ರಗಳಲ್ಲಿ ಆಗಿರತಕ್ಕಂಥ ಲೋಪದೋಷಗಳ ಬಗ್ಗೆಯೂ ಎತ್ತಿ ಹಿಡಿಯಲಿಕ್ಕೆ ಆಗುತ್ತದೆ, ಲೋಪದೋಷಗಳನ್ನು ಸರ್ಕಾರದ ಗಮನಕ್ಕೆ ತರಬಹುದು, ಎಲ್ಲಿ ಸರ್ಕಾರ ಎಡವಿದೆ, ಸರ್ಕಾರ ಯಾವ ಹಂತದಲ್ಲಿ ಇದನ್ನು ಸುಧಾರಣೆ ಮಾಡಬೇಕು, ಸರ್ಕಾರ ಯಾವ ರೀತಿ ಈ ಒಂದು ಕಾಮಗಾರಿಗಳ ಅನುಷ್ಠಾನದಲ್ಲಿ ಯಾವ ರೀತಿ ಎಡವಿದೆ ಎನ್ನುವುದರ ಬಗ್ಗೆ ಮಾಹಿತಿಯನ್ನು ಆಯಾಯಾ ಕ್ಷೇತ್ರದ ಶಾಸಕರು ಆ ಒಂದು ಅನುಷ್ಠಾನದ ಸಮಿತಿಯ ಅಧ್ಯಕ್ಷರಾಗಿ ಇವತ್ತು ಸದನ ಮುಂದೆ ಇಡುವುದರ ಮೂಲಕ ಈ ರಾಜ್ಯದ ಜನತೆಗೂ

ಕೂಡ ತಿಳಿಸಬೇಕಾಗುತ್ತದೆ. ಆದ್ದರಿಂದ, ಬಹಳ ಅತ್ಯಂತ ಜವಾಬ್ದಾರಿಯಿಂದ ನಾನೊಂದು ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇವತ್ತು ರಾಜ್ಯ ಸರ್ಕಾರ ರಚಿಸಿದಂಥ ಈ ಅನುಷ್ಠಾನ ಸಮಿತಿಯ ಅಧ್ಯಕ್ಷರಾಗಿ ನಾವುಗಳು ನಮ್ಮ ನಮ್ಮ ಕ್ಷೇತ್ರದಲ್ಲಿ ಯಾವ ರೀತಿ ಕೆಲಸವನ್ನು ಮಾಡಿದ್ದೇವೆ, ಏನಾಗಿದೆ, ಎಲ್ಲಿ ಲೋಪದೋಷಗಳಾಗಿವೆ, ನಮ್ಮ ನಮ್ಮ ಕ್ಷೇತ್ರಗಳಲ್ಲಿ ಭ್ರಷ್ಟಚಾರ ನಡೆದಿದ್ದರೆ ಅದನ್ನು ನಾವು ಹೇಳಬೇಕಾಗುತ್ತದೆ. ಇದನ್ನು ಯಾರೂ ಹೇಳಲಿಲ್ಲ, ನಾನು ಹಾಗೂ ನನ್ನ ಇತರ ಸ್ನೇಹಿತರು ಕಾತುರದಿಂದ ಕಾಯುತ್ತಿದ್ದೇವೆ. ಇಲ್ಲಿ ಮಾತನಾಡಿರತಕ್ಕಂಥ ಮುಖಂಡರುಗಳ ಕ್ಷೇತ್ರದಲ್ಲಿ ಭ್ರಷ್ಟಚಾರ ನಡೆದಿದ್ದರೆ, ಯಾವುದಾದರೂ ಲೋಪದೋಷಗಳಾಗಿದ್ದರೆ, ಅಥವಾ ದೊಡ್ಡ ಮನಸ್ಸಿನಿಂದ ನಮ್ಮ ನಮ್ಮ ಕ್ಷೇತ್ರದಲ್ಲಿ ಆಗಿರತಕ್ಕಂಥ ಸಾಧನೆಗಳ ಬಗ್ಗೆಯಾದರೂ ಹೇಳಬೇಕೆ? ಯಾರು ಹೇಳಲಿಲ್ಲ. ಇಡಿ ರಾಜ್ಯದ ಸಮಸ್ಯೆಗೆ ಒಟ್ಟಾರೆ a blank statement- ಓಹೋ ಬಾರಿ ಅವ್ಯವಹಾರ ನಡೆಯಿತು, ಇದು ಸರಿಯಾಗಿ ನಡೆಯಲಿಲ್ಲ, ಕಾಂಗ್ರೆಸ್ ಪುಡಾರಿಗಳ ಜೇಬಿಗೆ ಹೊರಟು ಹೋಯಿತು. ಅಧಿಕಾರಿಗಳು ಹೊಡೆದುಬಿಟ್ಟರು, ಹಬ್ಬವಾಗಿ ಹೋಯಿತು, ಬಹಳ ಬಣ್ಣ ಬಣ್ಣದ ಪದಗಳನ್ನು ಉಪಯೋಗಿಸಿ, ಇವತ್ತು ಬಹಳ ಪ್ರಾಮಾಣಿಕವಾಗಿ ರಾಜ್ಯ ಸರ್ಕಾರ ಈ ಬರ ಪರಿಹಾರದ ಕಾಮಗಾರಿಗಳನ್ನು ರಾಜ್ಯದ ಜನತೆಯ ನೆರವಿಗೆ ಬರುವುದು ಮೂಲಕ ಏನು ನೆರವೇರಿಸಿದ್ದಾರೆ ಅದರ ಬಗ್ಗೆ ಅತ್ಯಂತ ದುರದೃಷ್ಟದ ಸಂಗತಿ ಏನೆಂದರೆ, ಮಾತನಾಡಿದಂಥ ವಿರೋಧ ಪಕ್ಷದ ಮುಖಂಡರುಗಳು ತಮ್ಮ ಕ್ಷೇತ್ರದಲ್ಲಿ ಆಗಿರತಕ್ಕಂಥ ಸಾಧನೆಗಳ ಬಗ್ಗೆ ಒಂದೆರಡು ಮಾತುಗಳನ್ನು ಹೇಲಲಿಲ್ಲ. ಮಾನ್ಯ ವಿರೋಧ ಪಕ್ಷದ ನಾಯಕರಿಗೆ ನಾನೊಂದು ಪ್ರಶ್ನೆ ಹಾಕಿದೆ. ನಿಮ್ಮ ಪಕ್ಷದ ಶಾಸಕರಾದ ಮಾನ್ಯ ಶಿವಣ್ಣನವರು ನನ್ನ ಸ್ನೇಹಿತರು, ನಾನು ಅವರು ಒಂದೆ ತಾಲ್ಲೂಕಿನ ಪ್ರತಿನಿಧಿಗಳು, ತುಮಕೂರು ತಾಲ್ಲೂಕನ್ನು ಅವರು ಹಾಗೂ ನಾನು ಪ್ರತಿನಿಧಿಸುತ್ತೇವೆ. ಅವರು ಬೇಕಾದರೆ ಹೇಳಲಿ. ಅವರ ಕ್ಷೇತ್ರದಲ್ಲಿ ಕರಡಿಗುಡ್ಡ ಎನ್ನುವ ಒಂದು ಕೆರೆಯನ್ನು ನಿರ್ಮಾಣ ಮಾಡಿದ್ದಾರೆ.

ಮಾನ್ಯ ಬೋಸರಾಜುರವರು ದಯಮಾಡಿ ಕೇಳಬೇಕು. ಬೋಸರಾಜುರವರೇ, ಒಂದು ನಿಮಿಷ ಇಲ್ಲಿ ಅತ್ಯಂತ ಸ್ವಾರತ್ಯಕರವಾದ ಒಂದು ಘಟನೆಯನ್ನು ಹೇಳುತ್ತೇನೆ. ಮಾನ್ಯ ಶಿವಣ್ಣನವರು ಇವತ್ತು ಬಿಜೆಪಿ ಪಕ್ಷದಿಂದ ಆಯ್ಕೆಯಾಗಿರತಕ್ಕಂಥ ಒಬ್ಬ ಗೌರವಾನ್ವಿತ ಸದಸ್ಯರು. ಅವರ ಕ್ಷೇತ್ರದಲ್ಲಿ ಒಂದು ಕರಡಿಗುಡ್ಡ ಎಂಬ ಕೆರೆಯನ್ನು ಇವತ್ತು ಬರ ಕಾಮಗಾರಿ ಯೋಜನೆಯಲ್ಲಿ ನಿರ್ಮಾಣ ಮಾಡಿದ್ದಾರೆ. ಸುಮಾರು 50 ಲಕ್ಷ ರೂಪಾಯಿಗಳ ಹಣವನ್ನು ಖರ್ಚು ಮಾಡಿದ್ದಾರೆ. ಅದು ಕೆರೆಯಲ್ಲ ಅದೊಂದು ಪುಟ್ಟ ಅಣೆಕಟ್ಟು. ಎರಡು ಬೆಟ್ಟಗಳನ್ನು ಸೇರಿಸಿ ಒಂದು ಅಣೆಕಟ್ಟನ್ನು ನಿರ್ಮಾಣ ಮಾಡಿದರು. ನೂರಾರು, ಸಾವಿರಾರು ಜನರು ಕೆಲಸವನ್ನು ಮಾಡಿದ್ದಾರೆ. ಮಾನ್ಯ ಶಿವಣ್ಣನವರು ಸ್ವತಃ ಪತ್ರಿಕಾ ಕರ್ತರು ಹೌದು, ಅವರು ಪತ್ರಿಕಾ ಮಿತ್ರರನ್ನು ಕರೆದುಕೊಂಡು ಹೋಗಿ ತೋರಿಸಿದರು. ನೋಡಿ ರಾಜ್ಯ ಸರ್ಕಾರ ಇವತ್ತು ಎಷ್ಟು ಚೆನ್ನಾಗಿ ಬರ ಕಾಮಗಾರಿಯನ್ನು ನಡೆಸುತ್ತಿದೆ. ಇವತ್ತು ಅತ್ಯುತ್ತಮವಾದ ಒಂದು ಕೆರೆಯನ್ನು ನನ್ನ ಕ್ಷೇತ್ರದಲ್ಲಿ ಮಾಡಿದ್ದೇನೆಂದು ಹೇಳಿ ಪತ್ರಕರ್ತರನ್ನು ಕರೆದುಕೊಂಡು ಹೋಗಿ ತೋರಿಸಿದರು. ಅದನ್ನು ಟಿವಿಯಲ್ಲಿ ನೋಡಿ ಸಾಕಾಯಿತು, ಟಿವಿ ಯವರನ್ನು ಕರೆದುಕೊಂಡು ಹೋಗಿ ತೋರಿಸಿದರು. ನಾನು ಬಹಳ ಸಂತೋಷವನ್ನು ಪಟ್ಟಿದ್ದೇನೆ. ಮಾನ್ಯ ಶಿವಣ್ಣನವರ ಕ್ಷೇತ್ರದಲ್ಲಿ ಅತ್ಯುತ್ತಮವಾದ ಒಂದು ಕೆರೆಯಾಗುವುದರ ಜೊತೆಗೆ ರಾಜ್ಯ ಸರ್ಕಾರ ಇವತ್ತು ಎಷ್ಟೊಂದು ಕಳಕಳಿಯಿಂದ ಬರ ಪರಿಹಾರ ಕಾಮಗಾರಿಯಲ್ಲಿ ಎಂತಹ ಅಸ್ತಿಗಳನ್ನು ನಿರ್ಮಾಣ ಮಾಡಿದ್ದಾರೆ ಎನ್ನುವ ವಿಷಯದಲ್ಲಿ ನಾನು ಅತ್ಯಂತ ಸಂತೋಷವನ್ನು ಪಡುತ್ತೇನೆ. ಮಾನ್ಯ ಗೌರವಾನ್ವಿತ

ಸದಸ್ಯರಾದ ಶಿವಣ್ಣನವರು ನನ್ನ ಕ್ಷೇತ್ರದಲ್ಲಿ ಆಗಿಲ್ಲವೆಂದು ಹೇಳಲಿ. ಅವರು ಇಲ್ಲಿಯೇ ಕುಳಿತಿದ್ದಾರೆ. ಅಂತಹ ಹತ್ತಾರು ಕೆಲಸಗಳನ್ನು ಇವತ್ತು ಮಾನ್ಯ ಶಿವಣ್ಣನವರೂ ಕೂಡ ಮಾಡಿದ್ದಾರೆ. ಹೇಳಲಿ ಸ್ವಾಮಿ ಅವರು ತಮ್ಮ ಕ್ಷೇತ್ರದಲ್ಲಿ ಏನೇನು ಆಗಿ ಹೋಯಿತು ಎನ್ನುವುದನ್ನು ಮಾನ್ಯ ರೇವಣ್ಣನವರು ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಸಚಿವರಾಗಿ....

ಶ್ರೀ ಜಗದೀಶ್ ಶೆಟ್ಟರ್:- ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಮುದ್ದಹನುಮೇಗೌಡರು ಬಹಳ ಗಂಭೀರವಾಗಿ ಬರಗಾಲದ ಬಗ್ಗೆ ಚರ್ಚೆಯನ್ನು ಮಾಡುವಂಥ ಸಂದರ್ಭದಲ್ಲಿ ಮುಂದಿನ ಸಾಲಿನಲ್ಲಿರುವ ಒಬ್ಬ ಹಿರಿಯ ಮಂತ್ರಿಗಳು ಇರುವುದಿಲ್ಲ. ಅದಕ್ಕೆ ಸಂಬಂಧಪಟ್ಟಂಥ ಕಂದಾಯ ಸಚಿವರು ಇಲ್ಲ, ಮಾನ್ಯ ಖರ್ಗೆಯವರು ಇಲ್ಲ, ಕೇವಲ ಮೂರು-ನಾಲ್ಕು ಜನ ಮಂತ್ರಿಗಳಿದ್ದಾರೆ, ಒಟ್ಟು 49 ಜನ ಮಂತ್ರಿಗಳು. ಅದು ಇನ್ನೂ ಇನ್‌ಕ್ರೀಸ್ ಆಗುತ್ತಾ ಹೋಗುತ್ತಿದೆ. ಇಲ್ಲಿ ಬರಗಾಲದ ಬಗ್ಗೆ ಚರ್ಚೆ ನಡೆಯುತ್ತಿದೆ, ಇವತ್ತು ಮಂತ್ರಿಗಳಿಗೂ ಬರ. ಅವರು ಎಲ್ಲರೂ ವಿಧಾನ ಪರಿಷತ್ತಿನಲ್ಲಿ ಹೋಗಿ ಕುಳಿತುಕೊಂಡಿದ್ದಾರೆಯೇ? ನನಗೆ ಅರ್ಥವಾಗುತ್ತಿಲ್ಲ. ಸರ್ಕಾರ ಏಕೆ ಈ ರೀತಿಯಾದ ನಿಷ್ಕಾಳಜಿ, ರೂಲಿಂಗ್ ಪಾರ್ಟಿಯ ಎಂಎಲ್‌ಎ ಯವರು ಶಾಸಕರು ಈ ರೀತಿಯಾಗಿ ಮಾತನಾಡುವಂಥ ಸಂದರ್ಭದಲ್ಲಿ ಸಂಬಂಧಪಟ್ಟವರು ಯಾರೂ ಇಲ್ಲ. ದಯವಿಟ್ಟು ಮಾನ್ಯ ಉಪಾಧ್ಯಕ್ಷರು ಇದರ ಬಗ್ಗೆ ಸರ್ಕಾರಕ್ಕೆ ಎಚ್ಚರಿಕೆಯನ್ನು ಮುಟ್ಟಿಸಬೇಕಾಗುತ್ತದೆ. ಈ ರೀತಿ ಚರ್ಚೆ ಮಾಡುವಂಥದಲ್ಲ.

ಶ್ರೀ ಸಿ. ಬೈರೇಗೌಡ:- ಮಾನ್ಯ ಉಪಾಧ್ಯಕ್ಷರೆ, ತಾವು ದಯವಿಟ್ಟು ಸದನವನ್ನು ಮುಂದೂಡಿ, ಅವರು ಬಿಡುವು ಮಾಡಿಕೊಂಡು ಬರಲಿ, ಅವರಿಗೆ ಯಾವಾಗ ಬಿಡುವು ಆದಾಗ ಆಗ ಸದನವನ್ನು ನಡೆಸೋಣ. ಅವರು ಪಾಪ ಬಿಜಿಯಾಗಿದ್ದಾರೆ. ಬರಗಾಲದ ಬಗ್ಗೆ ಬಹಳ ಚಿಂತನೆ ಮತ್ತೆ ಬಹಳ ಕೆಲಸ, ಮತ್ತೆ ಬಹಳ ಓಡಾಟ, ಹೆಲಿಕ್ಯಾಪ್ಟರ್ ಆಯಿತು. ಇವತ್ತು ಒಂದು ಎರ್‌ಕ್ರಾಫ್ಟ್ ತೆಗೆದುಕೊಂಡು ಹೋಗಿರಬೇಕು. ನಮ್ಮ ಸ್ನೇಹಿತರು ಹೇಳುವಂತೆ ಸಬ್‌ರೀನ್‌ನಲ್ಲಿ ಬರಗಾಲವನ್ನು ಪರಿಶೀಲನೆ ಮಾಡುವುದಕ್ಕೆ ಹೊರಟಿದ್ದಾರೆ. ಅದೆಲ್ಲವನ್ನೂ ನೋಡಿ ಬಿಡುವು ಮಾಡಿಕೊಂಡು ಅವರು ಬರಲಿ. ಅವತ್ತು ನಾವೆಲ್ಲಾ ಸೇರಿ ಮಾತನಾಡೋಣ.

ಶ್ರೀ ಸಿ.ಆರ್. ಸಗೀರ್ ಅಹ್ಮದ್ (ವಸತಿ ಸಚಿವರು):- ಈ ರಾಜ್ಯದಲ್ಲಿ ಬರ ಪರಿಸ್ಥಿತಿಯನ್ನು ಸಮೀಕ್ಷೆ ಮಾಡುವುದಕ್ಕಾಗಿ ಸಬ್ ಮೆರೀನ್‌ನಲ್ಲಿ ಹೋಗಿ ಎಂದು ಶ್ರೀ ಬೈರೇಗೌಡರು ಹೇಳಬೇಕಾಗುತ್ತದೆ. ಏಕೆಂದರೆ ಸದನಕ್ಕೆ ತಪ್ಪು ದಾರಿಗೆ ಎಳೆಯುವಂಥ ಅವಶ್ಯಕತೆ ಇಲ್ಲ. ಸಬ್ ಮೆರೀನ್‌ನಲ್ಲಿ ಹೋಗಿರುವ ಜಾಗ ಯಾವುದು ಎಂಬುದನ್ನು ತಾವು ಹೇಳಬೇಕು.

ಶ್ರೀ ಸಿ. ಬೈರೇಗೌಡ:- ಮಾನ್ಯ ಉಪಾಧ್ಯಕ್ಷರೆ, ಅವರು ಸಹಾಯ ಮಾಡಿರುವುದಕ್ಕೆ ತಮಗೆ ಧನ್ಯವಾದಗಳು. ಏಕೆಂದರೆ ನಮ್ಮ ರಾಜ್ಯದಲ್ಲಿ ಬರ ನೋಡುವುದಕ್ಕೆ ಆಕಾಶದಲ್ಲಿ ಹೋಗಿರತಕ್ಕಂಥದ್ದು ಇಡೀ ದೇಶದಲ್ಲಿ ಯಾವತ್ತೂ ಕೂಡ ಆಕಾಶದಲ್ಲಿ ಓಡಾಡಿರುವುದನ್ನು ನಾವು ಕೇಳಿರುವುದಿಲ್ಲ. ಆದು ಇವತ್ತು ನಮ್ಮ ರಾಜ್ಯದಲ್ಲಿ ಆಗಿದೆ. ಅದೊಂದು ಪ್ರಥಮ ಸಮುದ್ರದ ಬರ, ಅಲ್ಲಾ ಸ್ವಾಮಿ ಬರ ಇರುವಂಥದ್ದು ಸಮುದ್ರದಲ್ಲಿ ಅದಕ್ಕೆ ತಾವು ಸಬ್ ಮೆರಿನ್‌ನಲ್ಲಿ ಹೋಗಿರಬಹುದು.

(ಗೊಂದಲ)

ಶ್ರೀ ಸಿ.ಆರ್. ಸಗೀರ್ ಅಹ್ಮದ್:- ಯಾರು ಹೋಗಿದ್ದಾರೆಂಬುದನ್ನು ತಾವು ಹೇಳಬೇಕು.

ಶ್ರೀ ಸಿ. ಬೈರೇಗೌಡ:– ಮಾನ್ಯ ಉಪಾಧ್ಯಕ್ಷರೆ, ನೋಡಿ ಇಲ್ಲಿ 9 ಖುರ್ಚಿಗಳು ಖಾಲಿ ಇವೆ, ಆ 9 ಖುರ್ಚಿಗಳಲ್ಲಿ ಕೂಡಬೇಕಾದವರು ಕೆಲವರು ಜೆಟ್ ಏರಕ್ರಾಫ್ಟ್ ತೆಗೆದುಕೊಂಡು ಹೋಗಿದ್ದಾರೆ, ಕೆಲವರು ಸಬ್‌ಮೇರಿನ್ ಹೋಗಿದ್ದಾರೆ. ಅವರು ಪಾಪ ಬರಲಿ, ನಿಜವಾಗಲೂ ಅವರು ಶ್ರಮ ವಹಿಸುತ್ತಿದ್ದಾರೆ ನಿಧಾನವಾಗಿ ಬರಲಿ. ಜನರ ಕಷ್ಟವನ್ನು ವಿಚಾರಿಸುವುದಕ್ಕೆ ಹೋಗಿದ್ದಾರೆ. ಅವರು ವಿಚಾರಿಸಿಕೊಂಡು ಬರಲಿ, ಪರವಾಗಿಲ್ಲ ನಾವಂತೂ ಎಷ್ಟು ಹೊತ್ತಾದರೂ ಕಾಯುವುದಕ್ಕೆ ತಯಾರಾಗಿದ್ದೇವೆ. ನಮಗೆ ಬೇರೆ ಏನೂ ಕೆಲಸವಿಲ್ಲ. ಬಿಡುವಾಗಿ ಕುಳಿತುಕೊಂಡಿದ್ದೇವೆ, ಅದಕ್ಕಾಗಿ ನಾವು ಇಲ್ಲಿಯೇ ಇರುತ್ತೇವೆ, ತಾವು ದಯವಿಟ್ಟು ಸದನವನ್ನು ಮುಂದೂಡಿ, ಅವರು ಆರಾಮವಾಗಿ ಬರಲಿ, ಬಂದಾಗ ಚರ್ಚೆಯನ್ನು ಮಾಡೋಣ.

ಶ್ರೀ ಬಿ. ಸೋಮಶೇಖರ್:– ಮಾನ್ಯ ಉಪಾಧ್ಯಕ್ಷರೆ, ಸಂಬಂಧಪಟ್ಟ ಅಧಿಕಾರಿಗಳು ಹೋಗಲಿ, ಮಂತ್ರಿಗಳು ಇಲ್ಲದಿದ್ದರೆ, ಇನ್ನೊಬ್ಬರು ಬರೆದುಕೊಳ್ಳುತ್ತಾರೆಂದು ಹೇಳಬಹುದು, ರೆವಿನ್ಯೂ ಇಲಾಖೆಯವರು ಒಬ್ಬರು ಇಲ್ಲ. ಈಗ ಒಬ್ಬರು ಮಂತ್ರಿಗಳು ಬಂದಿದ್ದಾರೆ. ಮತ್ತು ಖರ್ಗೆಯವರು ಇಲ್ಲ, ಇದು ಸರ್ಕಾರವೇ ಮಂಡಿಸಿರತಕ್ಕಂಥ ಒಂದು ಮೋಷನ್. ಸರ್ಕಾರ ಎಷ್ಟು ಸೀರಿಯಸ್ಸಾಗಿ ತೆಗೆದುಕೊಂಡಿದೆ ಎನ್ನುವುದರ ಬಗ್ಗೆ ಆಡಳಿತ ಪಕ್ಷದ ಸದಸ್ಯರು ಮಾತನಾಡುತ್ತಿದ್ದಾರೆ. ತುಂಬಾ ಚೆನ್ನಾಗಿ ಶಹಭಾಷ್‌ಗಿರಿಯನ್ನು ಕೊಡುತ್ತಿದ್ದಾರೆ. ಅದನ್ನು ಕೇಳುವುದಕ್ಕಾದರೂ ಒಬ್ಬರು ಇಲ್ಲವೆಂದರೆ, ಹೇಗೆ? ಒಬ್ಬರು ಮಂತ್ರಿಗಳು ಕಾಣಿಸುತ್ತಿಲ್ಲವಲ್ಲಾ.

ಶ್ರೀ ಸಿ.ಆರ್. ಸಗೀರ್‌ಷ ಅಹ್ಮದ್:– ನಾವು ಮಾಡಿರುವಂಥ ಕೆಲಸಗಳ ಬಗ್ಗೆ ತಾವು ತಾಳ್ಮೆಯಿಂದ ಕೇಳಲು ತಯಾರಿಲ್ಲವಲ್ಲ.

ಶ್ರೀ ಬಿ. ಸೋಮಶೇಖರ್:– ಅದಕ್ಕಾಗಿ ಅವರು ಬರುವವರೆಗೆ ತಾವು ಸ್ವಲ್ಪ ಮುಂದೂಡಿ. ಅಧಿಕಾರಿಗಳನ್ನು ನೀವು ಎಷ್ಟು ಬಿಗಿ ಇಟ್ಟಿದ್ದೀರಿ ಎಂದರೆ, ಚರ್ಚೆಯು ಶುರುವಾಗುವ ತನಕ ಅವರು ಕಾಯಬೇಕಾಗಿತ್ತು. ಒಬ್ಬರೂ ಇಲ್ಲ. ಎಷ್ಟು ಆಡಳಿತದಲ್ಲಿ ಬಿಗಿ ಇದೆ ಎನ್ನುವುದು ನಿಮ್ಮ ಸರ್ಕಾರದ ಮೇಲೆ ಗೊತ್ತಾಗುತ್ತದೆ.

ಶ್ರೀ ಸಿ. ಚನ್ನಿಗಪ್ಪ:– ಮಾನ್ಯ ಉಪಾಧ್ಯಕ್ಷರೆ, ಈ ಸರ್ಕಾರವನ್ನು ನಾಲ್ಕು ವರ್ಷಗಳಿಂದ ನೋಡುತ್ತಿದ್ದೇವೆ. ಕೆಲವು ಅಧಿಕಾರಿಗಳು ಬರುತ್ತಾರೆ, ಅವರು ಕೆಲಸವನ್ನು ಮಾಡುತ್ತಾರೆ. ಮಾನ್ಯ ಸಚಿವರುಗಳು ನಾವು ಈ ರಾಜ್ಯಕ್ಕೆ ಉತ್ತಮವಾದಂಥ ಆಡಳಿತವನ್ನು ಕೊಡುತ್ತೇವೆ. ಪಾರದರ್ಶಕ ಆಡಳಿತವನ್ನು ಕೊಡುತ್ತೇವೆಂದು ಹೇಳುತ್ತಾರೆ. ಇಲ್ಲಿ ನೋಡಿದರೆ ಮುಂದಿನ ಸಾಲಿನ 8–10 ಸಚಿವರುಗಳು ಇದ್ದಾರೆ. ಶಾಸಕರು ಎಲ್ಲಾ ಕೆಲಸವನ್ನು ಬಿಟ್ಟು ನಾವು ಇಲ್ಲಿ ಬಂದಾಗ, ರಾಜ್ಯದ ಜನತೆಗೆ ಆದಂಥ ಕಷ್ಟ ಕಾಲದಲ್ಲಿ ಅವರು ಇರಬೇಕು. ಅದಕ್ಕಾಗಿ ತಾವು ದಯಮಾಡಿ ಸದನವನ್ನು ಮುಂದೂಡಿ. ಇದು ಈ ರಾಜ್ಯದ ಜನತೆಗೆ ಮಾಡಿರುವಂಥ ಅವಮಾನ. ಸದನವನ್ನು ಮುಂದೂಡುವುದು ಬಹಳ ಒಳ್ಳೆಯದು.

ಶ್ರೀ ಎಂ. ಮಹದೇವು (ಪಶು ಸಂಗೋಪನೆ ಮತ್ತು ಸಕ್ಕರೆ ಸಚಿವರು):– ಮಾನ್ಯ ಉಫಾಧ್ಯಕ್ಷರೆ, ಸಚಿವರಾಗಿ ನಾವು ಸರ್ಕಾರದ ಪರವಾಗಿ ಇಷ್ಟು ಜನ ನಾವಿದ್ದೇವೆ. ನೀವಿದ್ದೀರಾ?

ಶ್ರೀ ಬಿ.ಬಿ. ಶಿವಪ್ಪ:– ಮಾನ್ಯ ಭೈರೇಗೌಡರೇ, ಒಂದು ಮಾತು.

ಶ್ರೀ ಸಿ. ಬೈರೇಗೌಡ:– ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಮಹದೇವು ರವರಿಗೆ ಒಂದು ಮಾತನ್ನು ಹೇಳುವುದಕ್ಕೆ ನಾನು ಇಷ್ಟಪಡುತ್ತೇನೆ. ಅವರ ಹೆಸರು ಬೆಂಕಿ ಮಹದೇವು, ನಾನು ಬೆಂಕಿಯನ್ನು ಇಡುತ್ತಿದ್ದೆ, ನೀವೂ ಬೆಂಕಿಯನ್ನು ಇಡುತ್ತೀರಾ ಎಂದು ದಿವಸ ಕೇಳಿದಂತಾಯಿತು.

ಶ್ರೀ ಬಿ.ಬಿ. ಶಿವಪ್ಪ:– ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಬೈರೇಗೌಡರು ಮರೆತು ಬಿಟ್ಟಿದ್ದಾರೆಂದು ಕಾಣುತ್ತದೆ. ಚರ್ಚೆ ನಡೆಯುತ್ತಿರುವುದೇ ಬರಗಾಲ. ಮಂತ್ರಿಗಳಿಗೂ ಬರಗಾಲ! ಅದಕ್ಕಾಗಿ ನೀವು ಏಕೆ ಚಿಂತೆಯನ್ನು ಮಾಡುತ್ತೀರಾ?

ಶ್ರೀ ಎಸ್.ಎಸ್ ಪಾಟೀಲ್:– ಮಾನ್ಯ ಉಪಾಧ್ಯಕ್ಷರೆ, ಈ ಕಡೆ ಕುಳಿತುಕೊಂಡಿರುವವರು ತಪ್ಪು ತಿಳಿದುಕೊಂಡಿದ್ದಾರೆ. ಏಕೆಂದರೆ ಇನ್ನು ಒಂದು ವರ್ಷದ ಮೇಲೆ ಖಾಲಿಯಾಗುವುದನ್ನು ಇವತ್ತೇ, ಖಾಲಿ ಮಾಡಿಬಿಡುತ್ತೇವೆಂದು ಖಾಲಿಯಾಗಿ ಬಿಟ್ಟಿದ್ದಾರೆ. ಒಂದು ವರ್ಷದ ಮೇಲೆ ಖಾಲಿಯಾಗಿಯೇ ಆಗುತ್ತೇವೆ. ಇವತ್ತೆ ಖಾಲಿ ಮಾಡಿಕೊಡುತ್ತಿದ್ದೇವೆಂದು ಅವರು ಹೇಳುತ್ತಿದ್ದಾರೆ, ನೀವು ಸುಮ್ಮನೆ ಏಕೆ ಹೇಳುತ್ತಿದ್ದೀರಿ?

ಶ್ರೀ ಸಿ.ಆರ್. ಸಗೀರ್ ಅಹ್ಮದ್:– ಮಾನ್ಯ ಉಪಾಧ್ಯಕ್ಷರೆ, ಎಸ್‌ಎಸ್ ಪಾಟೀಲರು ಒಂದು ಸಮೀಕ್ಷೆಯನ್ನು ನಡೆಸುತ್ತಿದ್ದಾರೆ, ಅವರು ಇಲ್ಲಿಗೆ ಬಂದು ಬಿಡುತ್ತೇವೆಂದು.

ಶ್ರೀ ಎಸ್.ಎಸ್. ಪಾಟೀಲ್:– ಮಾನ್ಯ ಉಪಾಧ್ಯಕ್ಷರೆ, ನಾಳೆಯೇ ಚುನಾವಣೆ ನಡೆದರೆ ನಾವು ನಾಡಿದ್ದು ಬಂದು ಕುಳಿತುಕೊಳ್ಳುತ್ತೇವೆ. ಅದರಲ್ಲಿ ಏನೂ ಸಂಶಯವಿಲ್ಲ.

ಶ್ರೀ ಎಂ. ಮಹದೇವ್:– ನಮಗೆ ಇಲ್ಲಿಯೇ ಖಾಯಂ, ನೀವು ಅಲ್ಲಿಯೇ ಖಾಯಂ.

ಉಪಾಧ್ಯಕ್ಷರು:– ಯಾವ ಯಾವ ಮಂತ್ರಿಗಳು ಅಲಟ್ ಮಾಡಿದ್ದಾರೆ, ಕೌನ್ಸಿಲ್‌ಗೆ ಯಾರು ಅಲಾಟ್ ಆಗಿದ್ದಾರೆ ಎನ್ನುವ ಲಿಸ್ಟ್‌ನ್ನು ತರಿಸಿನೋಡಿ, ತಕ್ಷಣ ಅವರನ್ನು ಕರೆಯುವುದಕ್ಕೆ ಕಳುಹಿಸುವ ವ್ಯವಸ್ಥೆಯನ್ನು ಮಾಡುತ್ತೇನೆ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ:– ಮಾನ್ಯ ಉಪಾಧ್ಯಕ್ಷರೆ, ಮೇಲ್ಮನೆಯಲ್ಲಿ ಈಗ ಲಂಚಬ್ರೇಕ್. ನಾನು ಈಗ ಆ ಕಡೆಯಿಂದಲೇ ಬಂದಿರುತ್ತೇನೆ.

ಉಪಾಧ್ಯಕ್ಷರು:– ಅದು 2.40ಕ್ಕೆ ಬಿಟ್ಟಿದೆ, ಒನ್ ಅವರ ಲಂಚ್‌ಗೆ ಬಿಟ್ಟಿದ್ದಾರೆ.

ಶ್ರೀ ಕೆ. ಜಯಪ್ರಕಾಶ ಹೆಗ್ಡೆ:– ಅಲ್ಲಿ ಈಗ ಯಾರೂ ಇಲ್ಲ. ಮಂತ್ರಿಗಳು ಅಲ್ಲಿ ಇರುವುದಿಲ್ಲ.

ಉಪಾಧ್ಯಕ್ಷರು:– ಮೇಲ್ಮನೆ 2.40ಕ್ಕೆ ಮುಗಿದು 3.45ಕ್ಕೆ ಪ್ರಾರಂಭವಾಗುತ್ತದೆ. ಇಲ್ಲಿ ಯಾರ್‍ಯಾರಿಗೆ ಅಲಾಟ್ ಅವರನ್ನು ಇಲ್ಲಿಗೆ ಕರೆಸುತ್ತೇನೆ. ನಾನು ಲಿಸ್ಟ್‌ನ್ನು ಪ್ರೊಡ್ಯೂಸ್ ಮಾಡುತ್ತೇನೆ.

ಶ್ರೀ ಕರಿಯಣ್ಣ:– ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಶ್ರೀಕಂಠಯ್ಯನವರು, ಆ ಮನೆಯಲ್ಲಿ ಈಗ ರಿಪ್ಲೈ ಇರುವುದರಿಂದ ಅವರು ರಿಪ್ಲೈಗೆ ಹೋಗುತ್ತಿದ್ದಾರೆ, ಅದಕ್ಕೋಸ್ಕರವಾಗಿ ಇಷ್ಟು ಹೊತ್ತು ಅಲ್ಲಿಯೇ ಇದ್ದರಂತೆ, ಈಗ ಅವರಿಗೆ ಆ ಮನೆಯಲ್ಲಿ ಡ್ಯೂಟಿ ಇದೆ ಎಂದು ಹೇಳಿದ್ದಾರೆ, ಅದಕ್ಕಾಗಿ ಇಲ್ಲಿ ಮಾನ್ಯ ಮಲ್ಲಿಕಾರ್ಜುನ ನಾಗಪ್ಪರವರು ಇದ್ದಾರೆ.

ಶ್ರೀ ಸಿ. ಬೈರೇಗೌಡ:– ಮಾನ್ಯ ಉಪಾಧ್ಯಕ್ಷರೆ 2.40ಕ್ಕೆ ಸದನ ಮುಂದೂಡಲಾಗಿದೆ ಎಂದು ಹೇಳಿದರೂ ಕೂಡ ಮಾನ್ಯ ಶ್ರೀಕಂಠಯ್ಯನವರು ಅಲ್ಲಿ ಉತ್ತರವನ್ನು ಕೊಡುವುದಕ್ಕೆ ಹೋಗಿದ್ದಾರೆಂದು ಹೇಳಿದರೆ ಏನು ಅರ್ಥ?

ಶ್ರೀ ಕರಿಯಣ್ಣ:– ಮಾನ್ಯ ಉಪಾಧ್ಯಕ್ಷರೆ, ತಾವು ಹೇಳುವುದನ್ನು ಸರಿಯಾಗಿ ಕೇಳಿಸಿಕೊಳ್ಳುವುದಿಲ್ಲ. ಸದನ ಮುಂದೂಡಿದ್ದಕ್ಕಾಗಿ ಊಟಕ್ಕೆ ಹೋಗಿದ್ದಾರೆ, ಊಟ[illegible]ಗದಲ್ಲಿ

ರಿಪ್ಲೈ ಕೊಡುತ್ತಾರೆ, ಅದಕ್ಕೋಸ್ಕರವಾಗಿ ಮಾನ್ಯ ಮಲ್ಲಿಕಾರ್ಜುನ ನಾಗಪ್ಪರವನ್ನು ಇಲ್ಲಿಗೆ ಕಳುಹಿಸಲಾಗಿದೆ. ನೀವು ಪೂರ್ಣ ಹೇಳುವುದನ್ನು ಕೇಳುವುದಕ್ಕೆ ತಯಾರಾಗಿಲ್ಲ.

ಶ್ರೀ ಎಸ್.ಎಸ್. ಪಾಟೀಲ್:– ಮಾನ್ಯ ಉಪಾಧ್ಯಕ್ಷರೆ, ಯಾವ ಹೌಸ್‌ನಲ್ಲಿ ಯಾರ್‍ಯಾರು ಮಂತ್ರಿಗಳು ಇರಬೇಕೆಂದು ಹಂಚಿಕೆಯಾಗಿರುತ್ತದೆ, ದಯವಿಟ್ಟು ಅದನ್ನು ಓದಿ ಬಿಡಿ.

ಉಪಾಧ್ಯಕ್ಷರು:– ಪಾಟೀಲರೆ, ಈಗಾಗಲೇ, ಪಟ್ಟಿ ಒದಗಿಸಿ ಎಂದು ಹೇಳಿದ್ದೇನೆ.

ಶ್ರೀ ಎಸ್.ಎಸ್. ಪಾಟೀಲ್:– ಸದನಕ್ಕೆ ವಿವರವನ್ನು ತರಿಸಿ ಹೇಳಿ. ತಮ್ಮ ಕಡೆ ಪಟ್ಟಿ ಬಂದಿರುತ್ತದೆ. ತಾವು ತಮ್ಮ ಸೆಕ್ರೆಟರಿಯವರಿಗೆ ಹೇಳಿ, ಇವತ್ತು ಯಾರ್‍ಯಾರು ಇರಬೇಕು ಏಕೆ ಅಬ್ಸೆಂಟ್ ಇದ್ದಾರೆ ಎನ್ನುವುದನ್ನು ಹೇಳಿಬಿಡಲಿ. ಇದರ ಬಗ್ಗೆ ಹಗಲೆಲ್ಲಾ ಚರ್ಚೆ ಮಾಡುವುದು ಬೇಡ, ಅದಕ್ಕಾಗಿ ತಾವು ಈಗ ಮುಂದೂಡಿ ಬಿಡಿ. ಅವರು ಪಾಸ್ ಮಾಡಿಕೊಂಡು ಹೋಗಿ ಬಿಡಲಿ, ಏಕೆಂದರೆ ಅವರಿಗೆ ಮೆಜಾರಿಟಿ ಇದೆ.

ಶ್ರೀ ಎಂ. ಮಲ್ಲಿಕಾರ್ಜುನ ನಾಗಪ್ಪ (ಕಂದಾಯ ರಾಜ್ಯ ಸಚಿವರು):– ಆ ಮನೆಯಲ್ಲಿ 12.30 ರಿಂದ 2.30 ರವರೆಗೆ ಬರಗಾಲದ ಬಗ್ಗೆ ರಿಪ್ಲೈ ಆಗಿದೆ. 2.50 ರಿಂದ ಅಲ್ಲಿ ಲಂಚಬ್ರೇಕ್ ಮಾಡಿದ್ದಾರೆ. ನಾನು ಅಲ್ಲಿಯೇ ಇದ್ದೆ, ಫೋನ್ ಬಂದ ತಕ್ಷಣ ಇಲ್ಲಿಗೆ ಬಂದಿರುತ್ತೇನೆ.

ಶ್ರೀ ಎಸ್.ಎಸ್. ಪಾಟೀಲ್:– ಮಾನ್ಯ ಉಪಾಧ್ಯಕ್ಷರೆ, ನಾವು ಮಂತ್ರಿಗಳಾಗಿ ಕೆಲಸವನ್ನು ಮಾಡಿರುತ್ತೇವೆ, ಏನು ನಡೆಯುತ್ತಿದೆ ಎನ್ನುವುದು ಗೊತ್ತಿದೆ. ಇಲ್ಲಿ ಹಂಚಿಕೆಯನ್ನು ಮಾಡಿರುತ್ತಾರೆ. ಮಾನ್ಯ ಮುಖ್ಯಮಂತ್ರಿಗಳು ಈ ಸದನದಲ್ಲಿ ಯಾರ್‍ಯಾರು ಇರಬೇಕು ಆ ಸದನದಲ್ಲಿ ಯಾರ್‍ಯಾರು ಇರಬೇಕೆಂದು ಕಳುಹಿಸಿರುತ್ತಾರೆ. ಇವತ್ತು ಯಾರ್‍ಯಾರು ಇರಬೇಕು ಅದನ್ನು ತಾವು ದಯವಿಟ್ಟು ಓದಿಬಿಡಿ.

ಶ್ರೀ ಎಂ. ಮಲ್ಲಿಕಾರ್ಜುನ ನಾಗಪ್ಪ:– ಮಾನ್ಯ ಉಪಾಧ್ಯಕ್ಷರೆ, ಇವತ್ತು ನಮ್ಮದು ಇಲ್ಲಿಯೇ ಇತ್ತು, ಅದರೆ ಇವತ್ತು ಅಲ್ಲಿ ರಿಪ್ಲೈ ಇರುವುದರಿಂದ ಅಲ್ಲಿಗೆ ಹೋಗಿದ್ದೆವು.

ಶ್ರೀ ಎಸ್.ಎಸ್. ಪಾಟೀಲ್:– ಮಾನ್ಯ ಉಪಾಧ್ಯಕ್ಷರೆ, ಇವತ್ತು ಇಲ್ಲಿ ಯಾವ್ಯಾವ ಸಚಿವರು ಇರಬೇಕು, ಉಳಿದವರು ಅಲ್ಲಿ ಇದ್ದವರು ಅಲ್ಲಿ ಇರಲಿ, ಆ ಸದನಕ್ಕೂ ಸರ್ಕಾರ ಗೌರವವನ್ನು ಕೊಡಬೇಕಾಗುತ್ತದೆ.

ಶ್ರೀ ಕರಿಯಣ್ಣ:– ಮಾನ್ಯ ಉಪಾಧ್ಯಕ್ಷರೆ, ಅಯಿತು ಸ್ವಾಮಿ, ನಿಮಗೆ ಚರ್ಚೆ ಮಾಡಲು ಬರಗಾಲ ಇತ್ತು ಸಹಾಯಕ ರೆವಿನ್ಯೂ ಮಿನಿಸ್ಟರ್ ಇದ್ದಾರಲ್ಲಾ. ಎಲ್ಲಾ ಮಂತ್ರಿಗಳು ಒಂದೇ ಸಲ ಕುಳಿತುಕೊಳ್ಳಬೇಕೆಂದರೆ, ಮೇಲ್ಮನೆಗೆ ಹೋಗಬೇಕು, ಇಲ್ಲಿಗೂ ಬರಬೇಕು.

ಶ್ರೀ ಎಸ್.ಎಸ್. ಪಾಟೀಲ್:– ಮಾನ್ಯ ಉಪಾಧ್ಯಕ್ಷರೇ, ಈಗ ಒಬ್ಬರು ಬಂದರು ಅದನ್ನು ಕೂಡ ನಾವು ಒಪ್ಪಿಕೊಳ್ಳುತ್ತೇವೆ. ಅಷ್ಟಿದ್ದರೆ ಸಾಕು ನಮಗೆ.

ಉಪಾಧ್ಯಕ್ಷರು:– ಕಂದಾಯ ರಾಜ್ಯ ಮಂತ್ರಿಗಳು ಇದ್ದಾರೆ ಎಂದು ಅವರು ಹೇಳುತ್ತಿದ್ದಾರೆ.

3.30 ಪಿ.ಎಂ.

ಶ್ರೀ ಎಸ್.ಎಸ್. ಪಾಟೀಲ್:– ಇಲ್ಲಿ ಯಾರ್‍ಯಾರು ಇರಬೇಕು ಅದನ್ನು ಹೇಳಿಬಿಡಿ.

ಶ್ರೀ ಜಗದೀಶ್ ಶೆಟ್ಟರ್ (ವಿರೋಧ ಪಕ್ಷದ ನಾಯಕರು):– ಮುಖ್ಯವಾಗಿ ಹೇಳುವುದಾದರೆ ಸದನದಲ್ಲಿ ರೆವಿನ್ಯೂ ಸೆಕ್ರೆಟರಿಯವರು ಇರಬೇಕಾಗಿತ್ತು, ಅವರು ಇಲ್ಲಿ ಇಲ್ಲ.

ಶ್ರೀ ಎಸ್.ಎಸ್. ಪಾಟೀಲ್:– ತಮಗೆ ಬರೆದು ತಮ್ಮ ಪರವಾನಗಿಯನ್ನು ತೆಗೆದುಕೊಂಡು ಹೋಗಿದ್ದರೆ ಅದಕ್ಕೆ ಅಡ್ಡಿಯಿಲ್ಲ. ಇಲ್ಲಿ ಯಾರ್‍ಯಾರು ಇರಬೇಕು ಅದನ್ನು ಓದಿಬಿಡಿ. ಅದನ್ನು ಸದನಕ್ಕೆ ತಿಳಿಸಿಬಿಡಿ ದಯಮಾಡಿ.

ಉಪಾಧ್ಯಕ್ಷರು:– ಪಟ್ಟಿ ಬರುತ್ತದೆ, ಅಲ್ಲಿಯವರೆವಿಗೂ ಸ್ಟಾರ್ಟ್ ಮಾಡಿ.

ಶ್ರೀ ಎಸ್.ಎಸ್. ಪಾಟೀಲ್:– ಅಲ್ಲಿ ಒಬ್ಬರು ಹಿರಿಯ ಸಚಿವರು ಕುಳಿತಿದ್ದಾರೆ, ಅವರು ಇದ್ದರೆ ಇದ್ದಹಾಗೆ ಈ ಸದನದಲ್ಲಿ ಇವತ್ತಿನ ದಿವಸ ಯಾರು ಸಚಿವರು ಇರಬೇಕು, ಅವರು ತಮ್ಮ ಪರವಾನಗಿಯನ್ನು ತೆಗೆದುಕೊಂಡು ಹೋಗಿದ್ದಾರೆಯೇ? ಹೇಗೆ? ಅದು ಏನು ಎಂದು ನಮಗೆ ಹೇಳಬೇಕು.

ಉಪಾಧ್ಯಕ್ಷರು:– ಮಾನ್ಯ ಪಾಟೀಲ್‌ರವರೆ, ತಾವು ಕುಳಿತುಕೊಳ್ಳಿ, ನಾನು ಪಟ್ಟಿಯನ್ನು ತರಿಸಿ ತಮಗೆ ಹೇಳುತ್ತೇನೆ.

ಶ್ರೀ ಎಸ್.ಪಿ. ಮುದ್ದಹನುಮೇಗೌಡ:– ಸನ್ಮಾನ್ಯ ಉಪಾಧ್ಯಕ್ಷರೆ, ನಾನು ಮಾತನಾಡತಕ್ಕಂತಹ ಸಂದರ್ಭದಲ್ಲಿ ಹಿರಿಯ ಸದಸ್ಯರುಗಳು ಮತ್ತು ನಾಯಕರಾದಂತಹ ಶ್ರೀ ಬಿ. ಸೋಮಶೇಖರ್‌ರವರು ಮತ್ತು ಮಾನ್ಯ ಬೈರೇಗೌಡರು ಒಂದೆರಡು ವಿಷಯಗಳನ್ನು ಹೇಳಿದ್ದಾರೆ, ಅದಕ್ಕೆ ಒಂದು ಸ್ವಲ್ಪ ಉತ್ತರವನ್ನು ಹೇಳಿ ಅಮೇಲೆ ನನ್ನ ಭಾಷಣವನ್ನು ಮುಂದುವರಿಸುತ್ತೇನೆ. ಮಾನ್ಯ ಸೋಮಶೇಖರ್‌ರವರು ಸರ್ಕಾರಕ್ಕೆ ಶಹಭಾಷಗಿರಿಯನ್ನು ಕೊಡುತ್ತಿದ್ದಾರೆ ಎನ್ನುವಂತಹ ಮಾತನ್ನು ಹೇಳಿದರು. ನಮ್ಮ ನಮ್ಮ ಕ್ಷೇತ್ರಗಳಲ್ಲಿ ಒಳ್ಳೆಯ ಕೆಲಸಗಳಾದರೆ ಒಳ್ಳೆಯ ಕೆಲಸವನ್ನು ಮಾಡಿದ್ದೇವೆ, ಸರ್ಕಾರ ಮಾಡಿದೆ ಎಂದು ಹೇಳಿದರೆ ಅದು ಶಹಭಾಷಗಿರಿನಾ? ತಾವೆಲ್ಲರೂ ಹಿಂದಿನ ಸರ್ಕಾರದಲ್ಲಿದ್ದು ಆಡಳಿತವನ್ನು ಮಾಡಿದ್ದೀರಿ, ಇರಲಿ, ಈಗ ಈ ತರಹ ಹೇಳುತ್ತಿದ್ದೀರಿ. I can understand the logic behind your words.

ಶ್ರೀ ಬಿ. ಸೋಮಶೇಖರ್:– ನಿಮ್ಮ ಸ್ಥಾನದಲ್ಲಿ ನಾನೇ ಇದ್ದರೆ ಅದೇ ರೀತಿ ಮಾತನಾಡುತ್ತಿದ್ದೆ.

ಶ್ರೀ ಎಸ್.ಪಿ. ಮುದ್ದಹನುಮೇಗೌಡ:– ಇರಲಿ, ಅದನ್ನು ತಾವು ಹೇಳತಕ್ಕಂಥದ್ದಲ್ಲಿ ನಾನು ಅರ್ಥಮಾಡಿಕೊಂಡೆ. ಅದಕ್ಕೆ ನನ್ನದೇನೂ ಅಭ್ಯಂತರವಿಲ್ಲ. ತಾವು ಆ ಸ್ಥಾನದಲ್ಲಿದ್ದುಕೊಂಡು ಹೇಳಬೇಕಾಗುತ್ತದೆ. ನಾನು ಒಂದು ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ನಾನು ವಿರೋಧಪಕ್ಷದ ಸ್ಥಾನದಲ್ಲಿ ಕುಳಿತುಕೊಂಡಂತಹ ಸಂದರ್ಭದಲ್ಲಿ ತಾವು ಸರ್ಕಾರವನ್ನು ನಡೆಸುತ್ತಿದ್ದೀರಿ, ಅನೇಕ ಸಂದರ್ಭದಲ್ಲಿ ಇದರ ಬಗ್ಗೆ ಮಾನ್ಯ ಬಚ್ಚೇಗೌಡರಿಗೂ ಗೊತ್ತಿದೆ. ಅನೇಕ ಸಂದರ್ಭದಲ್ಲಿ ತಾವು ಮಾಡಿರತಕ್ಕಂತಹ ಒಳ್ಳೆಯ ಕೆಲಸಗಳನ್ನು ಚೆನ್ನಾಗಿ ಮಾಡಿದ್ದೀರೆಂದು ನಾವು ಸದನದಲ್ಲಿ ಹೇಳಿದ್ದೇವೆ. ಇದರ ಬಗ್ಗೆ ಮಾನ್ಯ ಸದಸ್ಯರಾದ ಶ್ರೀ ಜಯಪ್ರಕಾಶ್ ಹೆಗಡೆಯವರೇ ತಮಗೆ ಜ್ಞಾಪಕವಿದೆ. ಇದರ ಬಗ್ಗೆ ನಾವು ಸದನದಲ್ಲಿ ಹೇಳಿದ್ದೇವೆ, ಜನರು ಅದನ್ನು ಒಪ್ಪಿಕೊಂಡರು. ಇವರು ಬಹಳ ದೊಡ್ಡತನವಿದೆ, ಇವರಿಗೆ ದೊಡ್ಡ ಮನಸ್ಸು ಇದೆ, ಸತ್ಯವನ್ನು ಸತ್ಯವೆಂದು ಹೇಳುತ್ತಾರೆ. ಆದ್ದರಿಂದ ಇವರು ಅಧಿಕಾರಕ್ಕೆ ಯೋಗ್ಯರೆಂದು ಪುನಃ ನಮ್ಮನ್ನು ಇಲ್ಲಿಗೆ ಕರೆದು ತಂದಿದ್ದಾರೆ. ಆದ್ದರಿಂದ ತಾವು ದೊಡ್ಡತನವನ್ನು ಬೆಳೆಸಬೇಕು. ಏನಪ್ಪಾ ದೊಡ್ಡತನವೆಂದರೆ, ಇವತ್ತು ರಾಜ್ಯದಲ್ಲಿ ಸರ್ಕಾರ ಬರ ಪರಿಹಾರ ಕಾಮಗಾರಿಗಳನ್ನು ಅತ್ಯಂತ ಪ್ರಾಮಾಣಿಕವಾಗಿ ಮತ್ತು ಯಶಸ್ವಿಯಾಗಿ ಎಲ್ಲಾ ವಿಧಾನಸಭಾ ಕ್ಷೇತ್ರಗಳಲ್ಲಿಯೂ ಕೂಡ ಇದನ್ನೂ ಚೆನ್ನಾಗಿ ಮಾಡಿದ್ದೀರಿ ಕೆಲಸವನ್ನು ಒಳ್ಳೆಯ ಕೆಲಸಗಳಾಗಿದೆ ನೀವು ಇನ್ನು ಈ ರೀತಿ ಮಾಡಿ ಎನ್ನತಕ್ಕಂತಹ ಔದಾರ್ಯತೆ ನಿಮಗೆ ಇಲ್ಲದೆ ಹೋದರೆ ಅದು

ದುರದೃಷ್ಟಕರ, ನಾವೇನೂ ಮಾಡುವುದಕ್ಕಾಗುವುದಿಲ್ಲ. ನಿಮ್ಮನ್ನು ಜನ ಇಲ್ಲಿಗೆ ತರುವುದಕ್ಕೆ ಅವಕಾಶವೇ ಇದೆ.

ಶ್ರೀ ಶಿವಾನಂದ ಎಸ್ ಪಾಟೀಲ್:- ಮಾನ್ಯ ಮುದ್ದಹನುಮೇಗೌಡರೆ, ತಾವು ಒಂದು ನಿಮಿಷ ಯೀಲ್ಡ್ ಆಗಬೇಕು.

ಶ್ರೀ ಎಸ್.ಪಿ. ಮುದ್ದಹನುಮೇಗೌಡ:- ಮಾನ್ಯ ಶಿವಾನಂದಪಾಟೀಲರೆ, ಇಲ್ಲ, ಈಗ ಬಹಳ ಹೊತ್ತು ಆಗಿದೆ, ಮಾನ್ಯ ರೇವಣ್ಣನವರು ಬೆಂಗಳೂರು ಗ್ರಾಮಾಂತರ ಜಿಲ್ಲೆಗಳಲ್ಲಿ ಬರಪರಿಹಾರ ಕಾಮಗಾರಿಗಳ ಬಗ್ಗೆ ವೀಕ್ಷಣೆ ಮಾಡುವ ಬಗ್ಗೆ ಪ್ರವಾಸವನ್ನು ಮಾಡಿದರು. ಮಾನ್ಯ ಬಚ್ಚೇಗೌಡರ ಕ್ಷೇತ್ರಕ್ಕೆ, ಮಾನ್ಯ ಸಿಂಧ್ಯಾರವರ ಕ್ಷೇತ್ರಕ್ಕೆ, ಮತ್ತು ಮಾನ್ಯ ಚೆನ್ನಿಗಪ್ಪನವರ ಕ್ಷೇತ್ರಕ್ಕೆ ಎಲ್ಲಾ ಕಡೆ ಹೋಗಿರುವಂತಹದ್ದು ಪೇಪರ್‌ನಲ್ಲಿ ಬರುತ್ತಿತ್ತು. ನಾನು ಕ್ಯೂರಿಯಾಸಿಟಿಗೋಸ್ಕರ ಅವರನ್ನು ನಾನು ಕೇಳಿದೆ, ಏನೂ ಮಾನ್ಯ ಸಚಿವರೆ, ಇವರ ಕ್ಷೇತ್ರಗಳಿಗೆಲ್ಲಾ ನೀವು ಹೋಗಿದ್ದರಲ್ಲಾ, ಇವರು ನಮ್ಮ ಅಭ್ಯರ್ಥಿಗಳನ್ನು ಪ್ರತಿ ಎಲೆಕ್ಷನ್‌ನಲ್ಲೂ ಉರುಳಿ ಹಾಕುತ್ತಿದ್ದಾರಲ್ಲಾ ಈ ಬರ ಪರಿಹಾರ ಕಾಮಗಾರಿಗಳು ಹೇಗೆ ನಡೆದಿವೆ ಎಂದು ನಾನು ಕೇಳಿದೆ. ಮಾನ್ಯ ಸಚಿವರು ಬಹಳ ವಿಶ್ವಾಸದಿಂದ ಹೇಳಿದರು.

ಇವತ್ತು ಮಾನ್ಯ ಸಿಂಧ್ಯಾರವರ ಕ್ಷೇತ್ರದಲ್ಲಿ ಮತ್ತು ಮಾನ್ಯ ಬಚ್ಚೇಗೌಡರ, ಮಾನ್ಯ ಚೆನ್ನಿಗಪ್ಪನವರ ಕ್ಷೇತ್ರದಲ್ಲಿ ಈ ಕಾಮಗಾರಿಗಳು ಅತ್ಯಂತ ಯಶಸ್ವಿಯಾಗಿ ಮತ್ತು ಪ್ರಾಮಾಣಿಕವಾಗಿ ನಡೆದಿದೆ ಎನ್ನುವ ಮಾತನ್ನು ಸಂತೋಷದಿಂದ ಹೇಳಿದರು. ನನಗೆ ಅರ್ಥವಾಯಿತು, ನಾನು ಏತಕ್ಕಾಗಿ ಕೇಳಿದೆ ಎಂದರೆ, ನಾನು ಬೇರೆ ಉದ್ದೇಶದಿಂದ ಕೇಳಲಿಲ್ಲ, ನಾವು ಯಾವ ರೀತಿಯಾಗಿ ಇಂತಹ ಸಿಚ್ಯುಯೇಷನ್‌ನಲ್ಲಿ, ಯಾವ ರೀತಿಯಾಗಿ ನಮ್ಮ ನಮ್ಮ ಕ್ಷೇತ್ರಗಳಲ್ಲಿ ಮಾಡಬೇಕಾಗುತ್ತದೆ, ಅರ್ಥ ಮಾಡಿಕೊಳ್ಳುವುದಕ್ಕೋಸ್ಕರ, ಕ್ಯೂರಿಯಾಸಿಟಿಗೋಸ್ಕರ ಕೇಳಿದೆ. ಬಹಳ ಸಂತೋಷ, ಇವತ್ತು ತಾವು ಅತ್ಯಂತ ಪ್ರಬಲವಾಗಿ ತಮ್ಮ ತಮ್ಮ ಕ್ಷೇತ್ರಗಳಲ್ಲಿ ಕೆಲಸವನ್ನು ಮಾಡುತ್ತಿದ್ದೀರಿ. ನನಗೆ ಸಂತೋಷ ಏನೆಂದರೆ, ಇವತ್ತು ಬರ ಪರಿಹಾರ ಕಾಮಗಾರಿಗಳನ್ನು ಕೂಡ ಬಹಳ ಯಶಸ್ವಿಯಾಗಿ ಮಾಡಿದ್ದೀರಿ ಎಂದು ನನಗೆ ಸಂತೋಷ ತರತಕ್ಕಂತಹ ವಿಚಾರವಾಗಿದೆ. ಇವತ್ತು ಮಾನ್ಯ ಸದಸ್ಯರಾದ ಶ್ರೀ ಬೈರೇಗೌಡರು ಒಂದು ವಿಚಾರವನ್ನು ಹೇಳಿದರು. ಬರ ಪರಿಹಾರ ಕಾಮಗಾರಿಯನ್ನು ನೋಡಿಕೊಂಡು ಬರಲು ಏರೋಪ್ಲೇನ್‌ನಲ್ಲಿ, ಸಬ್‌ಮೇರಿನ್ ಇವರು ಹೋಗುತ್ತಿದ್ದಾರೆ, ಏತಕ್ಕಾಗಿ ನೋಡಬೇಕು ಸ್ವಾಮಿ? ಅವರು ಯಾತಕ್ಕಾಗಿ ಬರಬೇಕು? ಇವತ್ತು ರಾಜ್ಯ ಸರ್ಕಾರ ಜನ ವಿಶ್ವಾಸದಿಂದ ಈ ಕೆಲಸಗಳನ್ನು ನೀವು ಮಾಡಿ ಎಂದು ನಿಮ್ಮ ನೇತೃತ್ವದಲ್ಲಿಯೇ ಸಮಿತಿಗಳನ್ನು ಮಾಡಿ, ನೀವು ಯಾವ ಕೆಲಸಗಳನ್ನು ಹೇಳುತ್ತೀರೋ ಆ ಕೆಲಸಗಳನ್ನು ತೆಗೆದುಕೊಳ್ಳುವಂಥದ್ದು, ನೀವು ಯಾವ ರೀತಿ ಮಾಡಬೇಕೋ ಆ ಕೆಲಸಗಳನ್ನು ನೀವು ಮಾಡಿ ಎಂದು ಹೇಳಿಬಿಟ್ಟು ಜನ ನಿಮಗೆ ಅಧಿಕಾರವನ್ನು ಕೊಟ್ಟಂತಹ ಸಂದರ್ಭದಲ್ಲಿ, ಸರ್ಕಾರ ನಿಮಗೆ ಅಧಿಕಾರವನ್ನು ಕೊಟ್ಟಂತಹ ಸಂದರ್ಭದಲ್ಲಿ, ಸರ್ಕಾರ ನಿಮಗೆ ಜವಾಬ್ದಾರಿಯನ್ನು ವಹಿಸಿರುವಂತಹ ಸಂಬಂಧವಲ್ಲ. ಬೇರೆಯವರು ಬಂದು ನೋಡತಕ್ಕಂತಹ ಅವಶ್ಯಕತೆ ಇಲ್ಲ. ಆದರೂ ಕೂಡ ಇವತ್ತು ಶಾಸಕರೆಲ್ಲರೂ ಕೂಡ ಅವರವರ ಕ್ಷೇತ್ರಗಳಲ್ಲಿ ನಡೆದಿರತಕ್ಕಂತಹ ಕೆಲಸಗಳನ್ನು ಸಂಪೂರ್ಣವಾಗಿ ಸೂಪರವೈಸ್ ಮಾಡಿದ್ದಾರೆ, ಮಾನಿಟರ್ ಮಾಡಿದ್ದಾರೆ. ಅದು ಅವರ ಜವಾಬ್ದಾರಿಯೂ ಕೂಡ ಆಗಿದೆ. ಇವತ್ತು ಈ ಟಾಸ್ಕ್‌ಫೋರ್ಸ್‌ನಡಿಯಲ್ಲಿ ಅವರ ಜವಾಬ್ದಾರಿಯೂ ಕೂಡ ಇದೆ, ಯಾವ ಕೆಲಸವನ್ನು ಅವರು ಸೂಚನೆ ಮಾಡಿದ್ದಾರೆ.

ಆ ಕೆಲಸವನ್ನು ಮಾನಿಟರ್ ಮಾಡಿದ್ದಾರೆ, ಅ ಕೆಲಸವನ್ನು ಖುದ್ದಾಗಿ ಪರಿಶೀಲನೆ ಮಾಡಿದ್ದಾರೆ, ಅಧಿಕಾರಿಗಳ ಜೊತೆ ಕೂಡ ಹೋಗಿ ಪರಿಶೀಲನೆ ಮಾಡಿದ್ದಾರೆ, ಅದರ ಜೊತೆಗೆ ಆಯಾ ಜಿಲ್ಲಾ ಉಸ್ತುವಾರಿ ಸಚಿವರೂ ಕೂಡ ಪ್ರತಿಯೊಂದು ಕಾಮಗಾರಿಗಳ ಕಡೆಗೆ ಭೇಟಿಯನ್ನು ಕೊಟ್ಟಿದ್ದಾರೆ. ಅಲ್ಲಿ ಯಾವ ರೀತಿಯಾಗಿ ಕೆಲಸಗಳು ನಡೆಯುತ್ತಿದೆ, ಬರ ಪರಿಸ್ಥಿತಿಯಲ್ಲಿ ನಾವು ಯಾವ ರೀತಿಯಾಗಿ ಹತೋಟಿಗೆ ತರಬೇಕೆಂಬ ವಿಚಾರದ ಬಗ್ಗೆ ಅಧಿಕಾರಿಗಳ ಮತ್ತು ಶಾಸಕರ ಸಭೆಯನ್ನು ಸೇರಿಸಿ, ಜನಪ್ರತಿನಿಧಿಗಳ ಸಭೆಯನ್ನು ಸೇರಿಸಿ ಎಲ್ಲಾ ಜಿಲ್ಲೆಗಳಲ್ಲೂ ಕೂಡ ಸಭೆಯನ್ನು ಮಾಡಿದ್ದಾರೆ. ಅದರ ಜೊತೆಗೆ ಆಯಾಯ ಜಿಲ್ಲೆಯ ನೋಡಲ್ ಆಫೀಸರ್ For example, in our District, Mr. Kedar, has almost visited almost each every work. ಪ್ರತಿಯೊಂದು ಮೀಟಿಂಗ್‌ನ್ನು ಮಾಡಿದ್ದಾರೆ, ಯಾವ ರೀತಿಯಾಗಿ ನಡೆಯಿತು ಎಂದು ನೋಡಿದ್ದಾರೆ, ಸೂಪರವೈಸ್ ಮಾಡಿದ್ದಾರೆ, ನಾನು ಏನು ವಿಷಯವನ್ನು ಹೇಳುವುದಕ್ಕೆ ಹೊರಟ್ಟಿದ್ದೇನೆಂದರೆ, ಇವತ್ತು ಏನೋ ನಮ್ಮ ಕ್ಯಾಬಿನೆಟ್ ಸಬ್ ಕಮಿಟಿ ಏನಿದೆ, ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರ ನೇತೃತ್ವದಲ್ಲಿ ಇವತ್ತು ಹೆಲಿಕಾಪ್ಟರ್‌ನಲ್ಲಿ ಹೋಗಿರುವಂತಹದ್ದು ದೊಡ್ಡ ಪ್ರಮಾದವಾಗಿದೆ, ಎಂದು ಹೇಳುವುದು ಸರಿಯಲ್ಲ. ಇವತ್ತು ಸೌಲಭ್ಯ ಇದೆ ಅದಕ್ಕೆ ಹೋಗಿದ್ದಾರೆ. ಹಿಂದೆ ಆ ಸೌಲಭ್ಯವಿರಲಿಲ್ಲ ಅದಕ್ಕಾಗಿ ಕಾರಿನಲ್ಲಿ ಹೋಗಿದ್ದರು. ಹೋಗಬೇಕಾಗಿತ್ತು, ಮೊದಲು ಕಾರು ಇರಲಿಲ್ಲ ಬಸ್ಸಿನಲ್ಲಿ ಹೋಗಬೇಕಾಗುತ್ತಿತ್ತು, ಬಸ್ ಕೂಡ ಇರಲಿಲ್ಲ, ಸೈಕಲ್‌ನಲ್ಲಿ ಓಡಾಡುತ್ತಿದ್ದರು, ಆದ್ದರಿಂದ ಅಂತಹ ಸೌಲಭ್ಯ ಇರತಕ್ಕಂಥವನ್ನು ಉಪಯೋಗಿಸಿಕೊಂಡು ರಾಜ್ಯದ ಎಲ್ಲಾ ಕಡೆಗಳಲ್ಲೂ ಕೂಡ ಯಾವ ರೀತಿಯಾಗಿ ಕೆಲಸಗಳಾಗುತ್ತಿದೆ, ನಮ್ಮ ಜಿಲ್ಲಾ ಮಂತ್ರಿಗಳು ಏನು ಮಾಡಿದ್ದಾರೆ. ಶಾಸಕರುಗಳು ಏನು ಮಾಡಿದ್ದಾರೆ, ಅಧಿಕಾರಿಗಳು ಯಾವ ರೀತಿಯಾಗಿ ಕೆಲಸವನ್ನು ಮಾಡುತ್ತಿದ್ದಾರೆ, ಎನ್ನುವುದನ್ನು ಇವತ್ತು ಹೆಲಿಕಾಪ್ಟರ್ ಮೂಲಕ ನಮ್ಮ ಕ್ಯಾಬಿನೆಟ್ ಉಪಸಮಿತಿಯವರು ನೋಡಿರತಕ್ಕಂಥದ್ದು ಒಂದು ದೊಡ್ಡ ತಪ್ಪು ಎಂದು ಹೇಳತಕ್ಕಂಥದ್ದು ಅತ್ಯಂತ ದುರದೃಷ್ಟಕರ. ಇವತ್ತು ತಾವು ಹಿಂದೆ ಏನು ಮಾಡಿದ್ದೀರಿ, ಅದೇ ಕೆಲಸವನ್ನು ಇವತ್ತು ಇವರು ಮಾಡಿದ್ದಾರೆ. ಇವತ್ತು ಸರ್ಕಾರದ ಜವಾಬ್ದಾರಿ ಇದೆ, ಇವತ್ತು ಸರ್ಕಾರ ಜಿಲ್ಲಾ ಮಂತ್ರಿಗಳಿಗೆ ಜವಾಬ್ದಾರಿಯನ್ನು ಕೊಟ್ಟಿದ್ದಾರೆ. ಶಾಸಕರಿಗೆ ಜವಾಬ್ದಾರಿಯನ್ನು ಕೊಟ್ಟಿದ್ದಾರೆ, ಆದ್ದರಿಂದ ಹೆಲಿಕಾಪ್ಟರ್‌ನಲ್ಲಿ ಹೋಗಿರುವುದು ದೊಡ್ಡ ತಪ್ಪು ಎಂದು ಹೇಳಿಬಿಟ್ಟು ಅದನ್ನು ಬೇರೆ ತರಹದಲ್ಲಿ ಮಾತನಾಡಿದ್ದಕ್ಕೆ ಅದು ಸರಿಯಿಲ್ಲ ಎನ್ನುವಂತಹ ಮಾತನ್ನು ಹೇಳುತ್ತಾ, ನಾನು ಈಗಾಗಲೇ ಹೇಳಿದ ಹಾಗೆ ನಮ್ಮ ನಮ್ಮ ಕ್ಷೇತ್ರಗಳಲ್ಲಿ ಬಹಳ ಹೆಚ್ಚಿನ ರೀತಿಯಲ್ಲಿ ಉತ್ತಮವಾದಂತಹ ಕೆಲಸಗಳಾಗಿವೆ, ನಮ್ಮ ಜಿಲ್ಲೆಯಲ್ಲಿ, ನಾನು ರಾಜ್ಯದ್ದೂ ನೋಡಿಲ್ಲ. ನನ್ನ ಕ್ಷೇತ್ರ ಮತ್ತು ನನ್ನ ಜಿಲ್ಲೆಯ ಪರಿಸ್ಥಿತಿಯ ಬಗ್ಗೆ ನಮಗೆ ಸಂಪೂರ್ಣವಾದಂತಹ ಮಾಹಿತಿ ಇದೆ. ನಾನು ಜಿಲ್ಲೆಯ ಎಲ್ಲಾ ಕಡೆಗಳಲ್ಲೂ ಹೋಗಿ ಬಂದಿದ್ದೇನೆ, ನಮ್ಮ ಕ್ಷೇತ್ರದಲ್ಲಿ ಪ್ರತಿಯೊಂದು ಕೆಲಸವನ್ನೂ ಕೂಡ ಎಲ್ಲಾ ರೀತಿಯಿಂದಲೂ ಕೂಡ ನಾವು ಮಾನಿಟರ್ ಮಾಡಿದ್ದೇವೆ. ಇದನ್ನು ನಾನು ಅತ್ಯಂತ ವಿಶ್ವಾಸದಿಂದ ಗೌರವಾನ್ವಿತ ಸಭೆಯಲ್ಲಿ ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇವತ್ತು ನಮ್ಮ ಜಿಲ್ಲೆಯಲ್ಲಿ ಒಂದು ಉದಾಹರಣೆಯನ್ನು ಕೊಡುತ್ತೇನೆ, ನಾನು ಮಾನ್ಯ ಶಿವಣ್ಣನವರ ಕ್ಷೇತ್ರದಲ್ಲಿ ಆಗಿರವಂತಹ ಕರಡಿಗುಡ್ಡದ ಕೆರೆಯ ಜೊತೆಗೆ 24 ಹೊಸ ಕೆರೆಗಳು ನಿರ್ಮಾಣವಾಗಿದೆ. ಇವತ್ತು ನಮ್ಮ ತುಮಕೂರಿನಲ್ಲಿ 24 ಹೊಸ ಕೆರೆಗಳು ಇವತ್ತು ಬರಪರಿಹಾರ ಕಾಮಗಾರಿಗಳ ಅಡಿಯಲ್ಲಿ ನಿರ್ಮಾಣವಾಗಿದೆ. ಅದು ಏನು ದೊಡ್ಡ ಸಾಧನೆ ಎಂದು ತಾವು ಹೇಳಬಹುದು. ಹಿಂದೆ ಯಾವತ್ತು

ಆಗಿತ್ತು ಸ್ವಾಮಿ? ಯಾವ ಕಾಲದಲ್ಲಿ ಆಗಿತ್ತು? ಯಾವ ಕಾಲದಲ್ಲಿ ಇಷ್ಟೊಂದು ಬೃಹತ್ ಪ್ರಾಮಾಣದಲ್ಲಿ ಕೆರೆಗಳಾಗಿತ್ತು? ಯಾವ ಕಾಲದಲ್ಲಿಯೂ ಆಗಿರಲಿಲ್ಲ. ನಾವು ಹಿಂದಿನ 5 ವರ್ಷಗಳಲ್ಲಿ ಒಂದು ಕೆರೆಯನ್ನೂ ಕೂಡ ನಿರ್ಮಾಣ ಮಾಡುವುದಕ್ಕಾಗಲಿಲ್ಲ. 150 ವರ್ಷದ ಹಿಂದೆ ಓಡೆದು ಹೋಗಿದ್ದಂತಹ ಒಂದು ಕೆರೆಯನ್ನು ನಿರ್ಮಾಣ ಮಾಡಬೇಕಾದರೆ ಇವತ್ತೂ ಕೂಡ ಆಗಲಿಲ್ಲ. ಇವತ್ತು 24 ಕೆರೆಗಳು ಎಷ್ಟು ಎಂದು ಮಾನ್ಯ ಜಿಲ್ಲಾ ಉಸ್ತುವಾರಿ ಸಚಿವರು ಹೇಳಬೇಕು.

ಶ್ರೀ ಡಾ: ಜಿ. ಪರಮೇಶ್ವರ್ (ಉನ್ನತ ಶಿಕ್ಷಣ ಸಚಿವರು):– 26 ಕೆರೆಗಳು.

ಶ್ರೀ ಎಸ್.ಪಿ. ಮುದ್ದಹನುಮೇಗೌಡ:– ಸಾರಿ, 26 ಕೆರೆಗಳು, ನಿರ್ಮಾಣವಾಗಿದೆ. ಏನಾಯಿತು, ಈ ಕೆರೆಗಳಾಯಿತು ಏನಾಯಿತು ಎಂದು ತಾವು ಕೇಳಬಹುದು. ತಾವು ಈ ಕಡೆಗೆ ಬರುತ್ತಿರಬೇಕಾದರೆ ಹೇಳಿದೆ, ನನಗೆ ಒಂದು ಆಸಕ್ತಿ ಇತ್ತು, ತಮ್ಮ ಕ್ಷೇತ್ರದಲ್ಲಿ ಏನಾಗಿದೆ ಎಂದು ನಾನು ಮಾನ್ಯ ರೇವಣ್ಣನವರಿಗೆ ಕೇಳಿದೆ, ಅವರು ಬಹಳ ಸಂತೋಷವನ್ನು ಪಟ್ಟರು. ನನಗೆ ಸಂತೋಷವಾಯಿತು, ಬಹಳ ಚೆನ್ನಾಗಿ ಕೆಲಸವನ್ನು ಮಾಡಿದ್ದಾರೆ ಸಾರ್, ಆದರಲ್ಲೂ ಬರ ಪರಿಹಾರ ಕಾಮಗಾರಿಗಳಂತೂ ಬಹಳ ಚೆನ್ನಾಗಿ ಮಾಡಿದ್ದಾರೆಂದು ಸರ್ಟಿಫಿಕೇಟನ್ನು ಕೊಟ್ಟರು. ನಾನು ಬಹುಶಃ ಬಹಳ ಆತ್ಮವಿಶ್ವಾಸದಿಂದ ನಂಬಿಕೆಯನ್ನು ಇಟ್ಟುಕೊಂಡಿದ್ದೇನೆ, ನೀವು ಆ ಮಾತನ್ನು ಹೇಳುತ್ತಿರೆಂದು ನಾನು ನಂಬಿಕೆಯನ್ನು ಇಟ್ಟುಕೊಂಡಿದ್ದೇನೆ. ಏನು ಹೇಳುತ್ತಿರೆಂದು ನಾನು ನೀವು ಭಾಷಣ ಮಾಡತಕ್ಕಂತಹ ಸಂದರ್ಭದಲ್ಲಿ ನಾನು ಕೇಳುತ್ತೇನೆ. ನಾನು ಏತಕ್ಕಾಗಿ ಈ ಮಾತನ್ನು ಹೇಳುತ್ತೇನೆಂದರೆ, ನಮ್ಮಲ್ಲಿ ಆಗಿರುವಂತಹ ಕೆಲಸ, ನಾವು ಮಾಡಿರುವಂತಹ ಕೆಲಸ ಮತ್ತು ಸಾಧನೆಗಳನ್ನು ನಾವು ಹೇಳಿಕೊಳ್ಳುವುದರಲ್ಲಿ ಏನು ತಪ್ಪು? ತುಮಕೂರು ಜಿಲ್ಲೆಯಲ್ಲಿ 26 ಕೆರೆಗಳ ಬಗ್ಗೆ ಮಾತ್ರ ನಾನು ಹೇಳಿದ್ದೇನೆ. ಕೆರೆಗಳ ಜೊತೆಗೆ ರಸ್ತೆಗಳಾಗಿವೆ, ಇವತ್ತು ಅಂತರ್ಜಲ ಅಭಿವೃದ್ಧಿಗೋಸ್ಕರ ಅನೇಕ ತಡೆಅಣೆಗಳು ನಿರ್ಮಾಣವಾಗಿವೆ, ಕೂಲಿ ಕಾರ್ಮಿಕರಿಗೆ ಕೆಲಸವನ್ನು ಕೊಡತಕ್ಕಂಥದ್ದು ಆಗಿದೆ, 26 ಕೆರೆಗಳು ಸುಮ್ಮನೆ ಮೇಷಿನ್‌ನ್ನು ತೆಗೆದುಕೊಂಡು ಹೋಗಿ ಜೆಸಿಬಿ ತೆಗೆದುಕೊಂಡು ಹೋಗಿ ಅಡ್ಡ ಹಾಕುವುದಕ್ಕೆ ಆಗುವುದಿಲ್ಲ. ಇವತ್ತು ಸಾವಿರಾರು ಜನರು ಕೂಲಿಕಾರ್ಮಿಕರು ಕೆಲಸವನ್ನು ಮಾಡಿದ್ದಾರೆ. ಲಕ್ಷಾಂತರ ಮಾನವದಿನಗಳು ನಿರ್ಮಾಣವಾಗಿದೆ, ಬರಪರಿಹಾರ ಕಾಮಗಾರಿಯ ಮೂಲ ಉದ್ದೇಶ ಇವತ್ತು ಅದು ಸಫಲವಾಗಿದೆ. ಜೆಸಿಬಿಯಿಂದ ಕೆಲವು ಕಡೆಗಳಲ್ಲಿ ಕೆಲಸಗಳಾಗಿದೆ ಎಂದು ತಾವು ಹೇಳುತ್ತಿದ್ದೀರಿ, ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಜೆಸಿಬಿ ಯಂತ್ರವನ್ನು ಉಪಯೋಗಿಸಬಾರದೆಂದು ಎಲ್ಲಿಯೂ ಕೂಡ ನಿರ್ಭಂದವಿಲ್ಲ. ನೀವು ನಾವು ಕೊಡತಕ್ಕಂತಹ ಮಾನ್ಯ ಶಿವಣ್ಣನವರೆ, ನಾವು ಕೊಡತಕ್ಕಂತಹ ಕ್ಯಾಷ್ ಕಾಂಪೊನೆಂಟ್ ಏನಿದೆ, ನಾವು ಯಂತ್ರವನ್ನು ಉಪಯೋಗಿಸಬೇಕಾಗುತ್ತದೆ. ಕೆರೆಯನ್ನು ನಿರ್ಮಾಣ ಮಾಡುತ್ತೀರಿ, ಕೆರೆಯನ್ನು ನಿರ್ಮಾಣ ಮಾಡಬೇಕಾದರೆ ಕಲ್ಲನ್ನು ಕಟ್ಟುವುದಿಲ್ಲವೇ? ಕಲ್ಲನ್ನು ನೀವು ಕಟ್ಟಬೇಕಾದರೆ, ಕಲ್ಲನ್ನು ಉಪಯೋಗಿಸಬೇಕಾದರೆ, ಕಲ್ಲನ್ನು ಎತ್ತಿ ಹಿಡಿಯಬೇಕಾದರೆ ಆ ಮಣ್ಣನ್ನು ಸೇರಿಸಬೇಕಾದರೆ ಅಗತ್ಯವಾಗಿ ಅಲ್ಪಸ್ವಲ್ಪ ಯಂತ್ರಗಳ ಉಪಯೋಗ ಆಗಬೇಕಾಗುತ್ತದೆ. ಅದಕ್ಕೆ ನಿರ್ಬಂಧವಿಲ್ಲ. ಆದರೆ ಒಟ್ಟಾರೆ ನಮ್ಮ ಉದ್ದೇಶವೇನೆಂದರೆ ಅಸೆಟ್ಸ್ ಕ್ರಿಯೇಷನ್ ಆಗಬೇಕು ಮತ್ತು ಕೂಲಿ ಕಾರ್ಮಿಕರಿಗೆ ಕೆಲಸ ಸಿಗಬೇಕು, ಯಾವ ಬಡವನಿಗೆ ಇವತ್ತು ಅಕ್ಕಿ ಸಿಗುತ್ತಿಲ್ಲ ಅವನಿಗೆ ಊಟ ಕೊಡಬೇಕಾಗುತ್ತದೆ, ಇದು ಬಹಳ ಮೂಲ ಉದ್ದೇಶ. ಇವತ್ತು ಅಂತರ್ಜಲ ಅಭಿವೃದ್ಧಿಗೋಸ್ಕರ ನಮ್ಮ ಜಿಲ್ಲೆಯಲ್ಲಿ ಆಗಿರತಕ್ಕಂತಹ ಪ್ರಗತಿ ಏನಿದೆ, ಬರ ಪರಿಹಾರ ಕಾಮಗಾರಿಗಳಲ್ಲಿ ಆಗಿರತಕ್ಕಂತಹ

ಪ್ರತಿ ಏನಿದೆ, ಇವತ್ತು ಈ ರಾಜ್ಯಕ್ಕೆ ಮಾದರಿ, ಇವತ್ತಿಗೂ ಈ ರಾಜ್ಯದ ಎಲ್ಲಾ ಕಡೆಗೂ ನಡೆದಿದೆ ಎಂದರೆ ಅದು ಕಡಿಮೆ; ಮಾನ್ಯ ವೆಂಕಟರಮಣಪ್ಪ ನಮ್ಮ ಸ್ನೇಹಿತರು ಬರುತ್ತಿದ್ದಾರೆ. ಇವತ್ತು ಇಡೀ ರಾಜ್ಯದಲ್ಲೇ ಬರಪರಿಸ್ಥಿತಿಗೆ ಒಂದು ತಾಲ್ಲೂಕು ಇದ್ದರೆ typical example - ಅದು ಪಾವಗಡ. ಎಲ್ಲಾ ರೀತಿಯ ಸಮಸ್ಯೆಗಳು ಇವೆ, ಅಲ್ಲಿರತಕ್ಕಂತಹ ಪರಿಸ್ಥಿತಿ ನೋಡಿದರೆ ನೀವು ಯಾವುದೇ ರಾಜ್ಯ ಅಥವಾ ರಾಷ್ಟ್ರದಲ್ಲಿ ಬರ ಎಂದರೆ ಹೇಗಿರುತ್ತದೆಂದು ನೋಡಬೇಕಾದರೆ ನೀವು ಪಾವಗಡಕ್ಕೆ ಹೋಗಿ ನೋಡಿದರೆ ಗೊತ್ತಾಗುತ್ತದೆ. ನಮ್ಮ ಸ್ನೇಹಿತರ ಮುಂದೆ ಇವತ್ತು ಬಹಳ ಸಂತೋಷದಿಂದ ಹೇಳುತ್ತೇನೆ ಇವತ್ತು ಪಾವಗಡದಲ್ಲಿ ಬರ ಪರಿಹಾರ ಕಾಮಗಾರಿಗಳಲ್ಲಿ ಏನು ಪರಿಸ್ಥಿತಿಯನ್ನು ಎದುರಿಸಿದ್ದಾರೆ, ಏನು ಕೆಲಸಗಳು ಆಗಿವೆ ಅವು ಬಹಳ ಸಮರ್ಥನೀಯವಾಗಿ ನಡೆದಿದೆ. ಶ್ರೀ ವೆಂಕಟರಮಣಪ್ಪರವರು ಆ ಕ್ಷೇತ್ರದಲ್ಲಿ ಆ ಕೆಲಸವನ್ನು ಮಾಡಿರುವುದರಿಂದ ಇಡೀ ರಾಜ್ಯಕ್ಕೆ ಈ ತಾಲ್ಲೂಕು ಮಾದರಿಯಾಗುತ್ತದೆಂದು ಅತ್ಯಂತ ವಿಶ್ವಾಸದಿಂದ ನಾನು ಹೇಳುತ್ತೇನೆ. ಸದನದ ಕ್ಯಾಬಿನೆಟ್‌ನ ಉಪ ಸಮಿತಿ ರಾಜ್ಯದಲ್ಲೆ ಪಾವಗಡಕ್ಕೆ ಹೋಗಿ ಬರ ಪರಿಹಾರದ ಕೆಲಸ ಕಾರ್ಯಗಳ ಬಗ್ಗೆ ನಮೂದು ಮಾಡಿದ್ದಾರೆ, ಪಾವಗಡದಲ್ಲಿ ಆ ರೀತಿ ಕೆಲಸವಾಗಿದೆ. ಕೆಲಸವಾಗದೇ ಸುಮ್ಮನೆ ನಾವು ಇವತ್ತು ಬೊಗಳೆ ಹೊಡೆಯಲು ಸಾಧ್ಯವಿಲ್ಲ, ಏಕೆಂದರೆ ಇವತ್ತಿನ ಜನರು ಪ್ರಜ್ಞಾವಂತರಿದ್ದಾರೆ ಬಹಳ ಬುದ್ಧಿವಂತರಿದ್ದಾರೆ, ನಾವು ಅವರಿಗೆ ಇವತ್ತು ಮೋಸ ಮಾಡಲಿಕ್ಕೆ ಸಾಧ್ಯವಿಲ್ಲ. ಆದ್ದರಿಂದ ಕ್ಷೇತ್ರಗಳಲ್ಲಿ ಏನು ನಡೆಯುತ್ತಿದೆ, ಬರ ಪರಿಹಾರ ಕಾಮಗಾರಿಗಳಿಗೆ ರಾಜ್ಯ ಸರ್ಕಾರ ಏನು ಕೊಟ್ಟಿದೆ? ಶಾಸಕರು ಯಾವ ಕೆಲಸವನ್ನು ಸೂಚಿಸಿದ್ದಾರೆ? ಎಷ್ಟು ಅನುದಾನವನ್ನು ಕೊಟ್ಟಿದ್ದಾರೆ? ಏನು ಕೆಲಸಗಳು ನಡೆದಿವೆ ಎನ್ನುವುದನ್ನು ನೀವು ಟಾಸ್ಕ್‌ಫೋರ್ಸ್‌ನಲ್ಲೇ ಅಷ್ಟೇ ನೋಡಬೇಕಾಗಿಲ್ಲ, ನಮ್ಮ ಇಲಾಖಾ ಅಧಿಕಾರಿಗಳು ಅಷ್ಟೇ ನೋಡಬೇಕಾಗಿಲ್ಲ, ಜಿಲ್ಲಾ ಮಂತ್ರಿಗಳಷ್ಟೇ ನೋಡಬೇಕಾಗಿಲ್ಲ, ಅಥವಾ ಅವರ ಸಂಪುಟ ಸಮಿತಿಯವರು ನೋಡಬೇಕಾಗಿಲ್ಲ, ಇವತ್ತು ಜನ ನೋಡುತ್ತಿದ್ದಾರೆ, ಒಂದು ಲಕ್ಷ ರೂಪಾಯಿ ಕೆಲಸ ಕೊಟ್ಟರೆ ಎಷ್ಟು ಖರ್ಚಾಗಿದೆ, ಏನು ಕೆಲಸವಾಗಿದೆ ಎಂದು ರಾಜ್ಯದ ಪ್ರಜ್ಞಾವಂತ ಜನರು ನೋಡುತ್ತಿದ್ದಾರೆ. ಬರ ಪರಿಹಾರ ಕಾಮಗಾರಿಗಳಲ್ಲಿ ನಡೆದಿರುವ ಭ್ರಷ್ಟಾಚಾರದ ಬಗ್ಗೆ ಪ್ರಜ್ಞಾವಂತ ಜನರು ಹಾಹಾಕಾರವನ್ನು ಎಬ್ಬಿಸಿಲ್ಲ, ಎಲ್ಲಿಯೂ ಕೂಡ ಅವರು ಹಾಗೆ ಹೇಳಿಲ್ಲ. ಸದನದಲ್ಲಿರತಕ್ಕಂತಹ 80 ಜನ ವಿರೋಧ ಪಕ್ಷದ ಶಾಸಕರು ಹೇಳಿ ಯಾರ ಕ್ಷೇತ್ರದಲ್ಲಿ ಭ್ರಷ್ಟಾಚಾರ ಆಗಿದೆ ಹೇಳಿ, ಧೈರ್ಯವಾಗಿ ಹೇಳಿ, ನನ್ನ ಕ್ಷೇತ್ರದಲ್ಲಿ ಕೆಲಸವಾಗಿಲ್ಲ, ಭ್ರಷ್ಟಾಚಾರವಾಗಿದೆ, ಕೂಲಿಗಾಗಿ ಕಾಳು ಎನ್ನುವಂಥ ಯೋಜನೆಯಲ್ಲಿ ದುರುಪಯೋಗವಾಗಿದೆ ಯಾವುದಾದರೂ ಇದ್ದರೆ..

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ:- ನಮ್ಮ ಕ್ಷೇತ್ರದಲ್ಲಿ ಹಣವನ್ನೇ ಕೊಟ್ಟಿಲ್ಲದಿರುವ ಕಾರಣ ಕೆಲಸಗಳೇ ಆಗಿಲ್ಲ.

ಶ್ರೀ ವೆಂಕಟರಾಮಪ್ಪ:- ಯಾವುದೇ ಬರ ಪರಿಹಾರ ಕಾಮಗಾರಿಗೆ ಸೂಚನೆಯನ್ನು ಮಾಡುವಂಥದ್ದು, ಉಸ್ತುವಾರಿಯನ್ನು ನೋಡತಕ್ಕದ್ದು ಟಾಸ್ಕ್‌ಫೋರ್ಸ್‌ನ ಅಧ್ಯಕ್ಷರು ಹಾಗೂ ಆ ತಾಲ್ಲೂಕಿನ ಅಧ್ಯಕ್ಷರೇ, ಇದಕ್ಕೆ ಬಿ.ಜೆ.ಪಿ. ಯವರಿಗೆ, ಬೇರೆ, ಕಾಂಗ್ರೆಸ್‌ನವರಿಗೆ ಬೇರೆ ಎಂದು ಮಾಡಿಲ್ಲ. ಬರ ಪರಿಹಾರದಲ್ಲಿ ಕಾಮಗಾರಿಗಳಿಗೆ ಯಾವುದೇ ವ್ಯತ್ಯಾಸವಿಲ್ಲದೆ ಎಲ್ಲಾ ತಾಲ್ಲೂಕುಗಳಿಗೆ ಸಮನಾಗಿ ಕೊಟ್ಟಿದ್ದಾರೆ. ಕಾಂಗ್ರೆಸ್‌ನವರಿಗೆ ಹೆಚ್ಚಿಗೆ, ಬಿ.ಜೆ.ಪಿ. ಯವರಿಗೆ ಕಡಿಮೆಯೆಂದು ಏನೂ ಕೊಟ್ಟಿಲ್ಲ.

ಶ್ರೀ ಅಭಯಚಂದ್ರ:– ಅಧ್ಯಕ್ಷರೇ, ದಕ್ಷಿಣ ಕನ್ನಡ ಜಿಲ್ಲೆಗೆ ಕೊಡಲಿಲ್ಲ ಎಂದು ಅವರ ಬೇಡಿಕೆ, ಉಡುಪಿ ಜಿಲ್ಲೆಗೆ ಕೊಡಲಿಲ್ಲ ಎಂದು ಅವರ ಬೇಡಿಕೆ.

ಶ್ರೀ ವೆಂಕಟರಮಣಪ್ಪ:– ಎಲ್ಲರಿಗೂ ಸಮನಾಗಿ ಕೊಟ್ಟಿರುವುದು.

ಶ್ರೀ ಅಭಯಚಂದ್ರ:– ಮಾನ್ಯ ಶಾಸಕರೇ, ದಕ್ಷಿಣ ಕನ್ನಡ ಜಿಲ್ಲೆಗೆ, ಉಡುಪಿ ಜಿಲ್ಲೆಗೆ ಕೊಡಲಿಲ್ಲವೆಂದು ನೋವು ನಮಗೆ,

ಶ್ರೀ ವೆಂಕಟರಮಣಪ್ಪ:– ನಿಮ್ಮಲ್ಲಿ ಹೆಚ್ಚಿಗೆ ಮಳೆ ಬಂದಿದೆಯೆಲ್ಲಾ.

ಶ್ರೀ ಅಭಯ ಚಂದ್ರ:– ನಮಗೆ ಏನೂ ಕೊಟ್ಟಿಲ್ಲ.

(ಗೊಂದಲ)

ಶ್ರೀ ಚನ್ನಿಗಪ್ಪ:– ಮಾನ್ಯ ಅಧ್ಯಕ್ಷರೇ, ತುಮಕೂರು ತಾಲ್ಲೂಕಿಗೆ ಮೂರುವರೆ ಕೋಟಿ ರೂ. ಕೊಟ್ಟಿದ್ದಾರೆ.

ಉಪಾಧ್ಯಕ್ಷರು:– ನೀವು ಮಧ್ಯೆ ಮಾತನಾಡುವುದಿದ್ದರೆ ನಮ್ಮನ್ನು ಉದ್ದೇಶಿಸಿ ಕೇಳಿ ಮಾತನಾಡಬೇಕೇ ಹೊರತು ಹೀಗೆ ಸಿಕ್ಕಾಪಟ್ಟೆ ಎದ್ದು ನಿಂತು ಮಾತನಾಡುವುದಿಲ್ಲ. ಅದಕ್ಕಾಗಿ ನೀವು ಪಾಯಿಂಟ್ ಆಫ್ ಆರ್ಡರ್ ಕೇಳಿರಿ, ಪರ್ಮಿಷನ್ ಕೇಳಬೇಕು. ಅದು ಬಿಟ್ಟು ಸುಮ್ಮನೆ ಎಲ್ಲರೂ ಎದ್ದು ನಿಂತರೆ ಎನರ್ಥ? ಸಭೆಯೇ ಏನಿದು? ಅದೆಲ್ಲಾ ಗೊತ್ತಿಲ್ಲ, ಇನ್ನು ಮುಂದೆ ಮಾತನಾಡುವುದಿದ್ದರೆ ನಮ್ಮನ್ನು ಉದ್ದೇಶಿಸಿ, ನೀವು ಈಲ್ಡ್ ಆಗಿ, ನೀವು ಈಲ್ಡ್ ಆಗಿ ಎಂದು ಅವರಿಗೆ ಏಕೆ ಹೇಳುತ್ತೀರಿ? ಹಾಗೆ ಹೇಳಬಾರದು, ನೀವು ನನ್ನ ಅನುಮತಿಯನ್ನು ಪಡೆದು ಮಾತನಾಡಬೇಕು ಮಧ್ಯೆ ಇಂಟರ್‌ಫಿಯರೆನ್ಸ್ ಮಾಡಬಾರದು ನಿಮ್ಮ ಅವಕಾಶ ಬಂದಾಗ ನೀವು ಮಾತನಾಡಬೇಕು, ಕುಳಿತುಕೊಳ್ಳಬೇಕು, ನೀವು ಮಾತ್ರ ಅಲ್ಲ ಮಧ್ಯೆ ಯಾರೂ ಮಾತನಾಡಬಾರದು.

ಶ್ರೀ ಸಿ. ಬೈರೇಗೌಡ:– ಶ್ರೀ ಮುದ್ದಹನುಮೇಗೌಡರು ಯಾವ ಕ್ಷೇತ್ರದಲ್ಲಿ ಬರ ಪರಿಹಾರ ಕೆಲಸ ಆಗಿಲ್ಲ ಎಂದು ಹೇಳಿ ಎಂದು ನಮ್ಮನ್ನೆಲ್ಲಾ ಒಂದು ಸವಾಲು ರೂಪದಲ್ಲಿ ಹೇಳಿದ್ದಾರೆ. ನಾನು ಅವರಲ್ಲಿ ವಿನಂತಿಸಿಕೊಳ್ಳುವುದೇನೆಂದರೆ 224 ಕ್ಷೇತ್ರಗಳಲ್ಲಿ ಕೆಲವು ಕ್ಷೇತ್ರಗಳಲ್ಲಿ ಬರ ಪರಿಹಾರ ಕಾಮಗಾರಿಗಳು ತೆಗೆದುಕೊಂಡಿಲ್ಲ. ಎಲ್ಲೆಲ್ಲಿ ಆಗಿದೆ ಎಲ್ಲಾ ಕಡೆಯಲ್ಲೂ ಕೆಲಸಗಳು ಸಮರ್ಪಕವಾಗಿ ಆಗಿದೆ ಎನ್ನುವ ಮಾತನ್ನು ಅವರು ಹೇಳುತ್ತಿದ್ದಾರೆ. ಆದುದರಿಂದ ಮಾನ್ಯ ಶಾಸಕರೊಬ್ಬರು ಹೇಳಿದರೆ ಆಗುವುದಿಲ್ಲ. ಅವರ ಮಾತನ್ನು ಪುಷ್ಟೀಕರಿಸಲಿಕ್ಕೆ ಈ ಸದನದ ಸಮಿತಿಯೊಂದನ್ನು ಮಾಡಿ, ಎಲ್ಲೆಲ್ಲಿ ಏನಾಗಿದೆ ಎಂಬುದನ್ನು ಸದನದ ಸಮಿತಿ ತನಿಖೆ ಮಾಡಿ ವರದಿಯನ್ನು ಕೊಟ್ಟರೆ ಅದನ್ನು ಸಲಹೆ ಮಾಡಿದರೆ ನಾವು ಒಪ್ಪುತ್ತೇವೆ.

ಉಪಾಧ್ಯಕ್ಷರು:– ಅದು ಅವರ ಅನಿಸಿಕೆ, ಅದು ಅವರ ಅಭಿಪ್ರಾಯ, ತಮಗೆ ಅವಕಾಶ ಸಿಕ್ಕಾಗೆ ಇಲ್ಲ ಎಂದು ಹೇಳಿರಿ, ಅವರು ಹೇಳುವುದನ್ನು ಹೇಳುತ್ತಾರೆ, ಇಲ್ಲ ಎಂದು ನಿಮಗೆ ಅವಕಾಶ ಸಿಕ್ಕಾಗ ಹೇಳಿ.

ಶ್ರೀ ಸಿ. ಬೈರೇಗೌಡ:– ನಾವು ಹೇಳುತ್ತೇವೆ, ಆದರೆ ಈಗ ಎಲ್ಲಾ ಸರಿಯಾಗಿ ಆಗಿರುವಾಗ ಮಾನ್ಯ ಮುದ್ದಹನುಮೇಗೌಡರು ನಮ್ಮ ಸಹಾಯಕ್ಕೆ ಬಂದರೆ ನಾವು ಅವರಿಗೆ ಧನ್ಯವಾದಗಳನ್ನು ಅರ್ಪಿಸುತ್ತೇವೆ.

ಶ್ರೀ ಎಸ್.ಪಿ. ಮುದ್ದಹನುಮೇಗೌಡ:– ಹಿರಿಯ ಸದಸ್ಯರಾದಂತಹ ಮಾನ್ಯ ಬೈರೇಗೌಡರು ಇದನ್ನು ಚಾಲೆಂಜ್ ಆಗಿ ಹೇಳಿದ್ದೇನೆ ಅಂದರು, ಹೌದು ಇದು ಚಾಲೆಂಜ್ ಈಗ ಸದನ ಸಮಿತಿ

ಯಾಕೆ ಬೇಕು, ಈಗ ಸರ್ಕಾರ ನಿಮ್ಮನ್ನೇ ಅಧ್ಯಕ್ಷರನ್ನಾಗಿ ಮಾಡಿ ಜನ ವಿಶ್ವಾಸವಿಟ್ಟುಕೊಂಡು ನಿಮಗೆ ಸಂಪೂರ್ಣ ಅಧಿಕಾರ ಕೊಟ್ಟು, ನೀವು ಹೇಳಿದ್ದೇ ಕೆಲಸ, ನೀವು ಹೇಳಿದ್ದಕ್ಕೆ ಹಣ ಬಿಡುಗಡೆ ನೀವು ವರದಿ ಕೊಟ್ಟರೆ ಅಪ್ರೂವ್ ಕೊಟ್ಟರೆ ಮಾತ್ರ ಆ ಕೆಲಸವನ್ನು ತೆಗೆದುಕೊಳ್ಳುವಂಥದ್ದು, ನಿಮ್ಮ ನಿಮ್ಮ ಕ್ಷೇತ್ರದಲ್ಲಿ ಪ್ರತಿ ಸಾರಿ ಹೋಗಿ ಕೆಲಸವನ್ನು ಪರೀಕ್ಷೆ ಮಾಡುವಂಥದ್ದು ನಡೆದರೆ ಈ ಸದನ ಸಮಿತಿ ಏಕೆ ಬೇಕು? Why should we suspect your bona fides? We are under the impression that you are effectively discharging your duties in your constituency. ನಿಮಗೆ ನಿಮ್ಮ ನಿಮ್ಮ ಕ್ಷೇತ್ರದಲ್ಲಿ ಸರಿಯಾಗಿ ಕೆಲಸ ಮಾಡಿಲ್ಲ ಎಂದು ಅನುಮಾನವಿದ್ದರೆ ಆಗ ಕೇಳಿ, ನಮ್ಮ ಕ್ಷೇತ್ರದಲ್ಲಿ ಕೆಲಸವಾಗಿಲ್ಲ, ಭ್ರಷ್ಟಾಚಾರವಾಗಿದೆ, ನಾವು ಪರಿಣಾಮಕಾರಿಯಾಗಿ ಕೆಲಸವಾಗಿಲ್ಲ, ಬರಪರಿಹಾರ ಕಾಮಗಾರಿಗಳಲ್ಲಿ ನಾವು ವಿಫಲರಾಗಿದ್ದೇವೆಂದು...

ಶ್ರೀ ಸಿ. ಬೈರೇಗೌಡ:- ನಾನು ಈ ಮಾತನ್ನು ಬಹಳ ಜವಾಬ್ದಾರಿಯಿಂದ ಹೇಳುತ್ತಿದ್ದೇನೆ, ಇವತ್ತು ಪತ್ರಿಕೆಗಳಲ್ಲಿ ವರದಿಯಾಗಿರುವಂತೆ ಅನೇಕ ಕಡೆ ಇದರ ದುರುಪಯೋಗವಾಗಿದೆ, ಲೋಕಾಯುಕ್ತ ಸರ್ಕಾರಕ್ಕೆ ವರದಿಯನ್ನು ನೀಡಿದ್ದಾರೆ, ಹಾಗಾದರೆ ನುಣುಚಿಕೊಳ್ಳುವಂತಹ ಪ್ರಯತ್ನ ಸರ್ಕಾರದಿಂದ ಏತಕ್ಕೆ ಬರಬೇಕು? ಲೋಕಾಯುಕ್ತದ ವರದಿಯನ್ನು ಇಲ್ಲಿ ಇಡಿ. ಅದರಲ್ಲಿ ಏನಿದೆ ಎಂಬುದನ್ನು ನೋಡೋಣ, ಏತಕ್ಕೆ ಅದನ್ನು ಮುಚ್ಚಿಟ್ಟುಕೊಳ್ಳುತ್ತಿದ್ದೀರಿ? ಅದನ್ನು ಕಾನೂನಿನಲ್ಲಿ ನೆಪವೊಡ್ಡಿ ಆ ವರದಿಯನ್ನು ಕೊಟ್ಟಿದ್ದೇವೆ ಅಂತದ್ದು, ಇಲ್ಲಿ ಚರ್ಚೆಯಾದ ಮೇಲೆ ಲೋಕಾಯುಕ್ತ ಕೂಡ ಅವರೂ ಕೂಡ ಹೇಳಿದ್ದಾರೆ ಹೌದು ನಾವು ವರದಿ ಕೊಟ್ಟಿರುವುದು ನಿಜವೆನ್ನುವಂಥ ಮಾತನ್ನು ಹೇಳಿದ್ದಾರೆ, ಆದರೆ ಸರ್ಕಾರದಿಂದ ಇಲ್ಲಿ ಇವತ್ತು ಸದನವನ್ನು ತಪ್ಪು ದಾರಿಗೆ ಎಳೆಯುವಂತಹ ಪ್ರಯತ್ನ ಆಗಿದೆ. ಏಕೆ ಆ ವರದಿಯನ್ನು ಬಚ್ಚಿಟ್ಟುಕೊಂಡಿದ್ದೀರಿ? ಅದಕ್ಕೆ ಕಾರಣವೇನು? ಅದೇ ಇವತ್ತಿನ ಅನುಮಾನಕ್ಕೆ ಎಡೆ ಮಾಡಿಕೊಟ್ಟಿರುವಂತಹದು.

ಉಪಾಧ್ಯಕ್ಷರು:- ಅವರಿಗೆ ತಮ್ಮ ವಿಚಾರವನ್ನು ಹೇಳುವುದಕ್ಕೆ ಹಕ್ಕಿದೆ. ಅವರಿಗೆ ತಮ್ಮ ವಿಚಾರವನ್ನು ಈ ಸದನದಲ್ಲಿ ಮಂಡಿಸಲಿಕ್ಕೆ ಸಂಪೂರ್ಣ ಹಕ್ಕಿದೆ. ನಿಮ್ಮ ಅವಕಾಶ ಬಂದಾಗ ಅದನ್ನು ಖಂಡಿಸುವಂತಹ, ವಿರೋಧಿಸುವಂತಹ ಹಕ್ಕು ನಿಮಗೆ ಇದೆ ಆಗ ನೀವು ಮಾತನಾಡಿ. ಮಧ್ಯೆ ಇಂಟರ್‌ಫಿಯರೆನ್ಸ್ ಆಗುವುದು ಬೇಡ.

ಶ್ರೀ ಸಿ. ಬೈರೇಗೌಡ:- ಎಲ್ಲೂ ಕೂಡ ಭ್ರಷ್ಟಾಚಾರ ಆಗಿಲ್ಲ, ಆದರೆ ಆ ಲೋಕಾಯುಕ್ತದ ವರದಿ ಇಲ್ಲಿ ಇಡಿ ಆಗ ಬಂಡವಾಳ ಗೊತ್ತಾಗುತ್ತದೆ.

ಉಪಾಧ್ಯಕ್ಷರು:- ಭೈರೇಗೌಡರೇ, ತಾವು ಹಿರಿಯ ಸದಸ್ಯರು, ನಿಮಗೆ ಗೊತ್ತಿದೆ, ಅವರು ವಿಚಾರವನ್ನು ಮಂಡಿಸುತ್ತಾರೆ, ನೀವು ನಾಳೆ ನಿಮ್ಮ ವಾದವನ್ನು ಮಂಡಿಸಿ. ನಿಮಗೆ ನಿರ್ಬಂಧ ಯಾರೂ ಮಾಡುವುದಿಲ್ಲ.

ಶ್ರೀ ಸಿ. ಭೈರೇಗೌಡ:- ಅವರ ಮಾತಿನ ಧಾಟಿ ಅವರ ವಿವರಣೆಯೆಲ್ಲವನ್ನೂ ನಾನು ಒಪ್ಪುತ್ತೇನೆ, ಅದೇ ರೀತಿ ಅವರು ಸದನದ ಸಮಿತಿ ರಚನೆ ಮಾಡಲಿಕ್ಕೆ ಒಪ್ಪಿಕೊಳ್ಳಲಿ ಇಲ್ಲವೇ ಲೋಕಾಯುಕ್ತದ ವರದಿ ಕೊಡಲಿಕ್ಕೆ ಸರ್ಕಾರಕ್ಕೆ ಹೇಳಲಿ.

(ಗೊಂದಲ)

ಉಪಾಧ್ಯಕ್ಷರು:- ಮಾನ್ಯ ಭೈರೇಗೌಡರೇ, ಸದನದ ಸಮಿತಿಯನ್ನು ರಚನೆ ಮಾಡುವವರು, ಮಾನ್ಯ ಮುದ್ದಹನುಮೇಗೌಡರಲ್ಲ ನಿಮಗೆ ಗೊತ್ತಿದೆ, ಸಂಬಂಧಿಸಿದ ಮಂತ್ರಿಯವರು ಬಂದಾಗ

ನೀವು ಮಾತನಾಡಿ ಅವರು ನಿಮಗೆ ಉತ್ತರಿಸುತ್ತಾರೆ. ಅವರು ನೋಡಿದ್ದನ್ನು ಅವರು ಪ್ರತಿಪಾದಿಸುತ್ತಿದ್ದಾರೆ.

(ಗೊಂದಲ)

ಶ್ರೀ ಸಿ.ಆರ್. ಸಗೀರ್ ಅಹ್ಮದ್:- (ವಸತಿ ಸಚಿವರು) ಅವರಿಗೆ ಮಾತನಾಡುವ ಹಕ್ಕಿಲ್ಲವೇ? ಅವರೇನು ಭೈರೇಗೌಡರ ವಿರುದ್ಧ ಮಾತನಾಡುತ್ತಿದ್ದಾರೆಯೇ?

ಉಪಾಧ್ಯಕ್ಷರು:- ಅವರಿಗೆ ಮಾತನಾಡುವ ಹಕ್ಕಿದೆ.

(ಗೊಂದಲ)

ಶ್ರೀ ಸಿ. ಭೈರೇಗೌಡ:- ನಾನು ಅವರಿಗೆ ಸಂಪೂರ್ಣವಾದ ಬೆಂಬಲವನ್ನು ಕೊಡುತ್ತಿದ್ದೇನೆ. ಲೋಕಾಯುಕ್ತ ಏನು ವರದಿಯನ್ನು ಕೊಟ್ಟಿದೆ, ಅದನ್ನು ಮಂಡಿಸುತ್ತೇವೆ ಎನ್ನತಕ್ಕಂಥ ಮಾತು ಅವರ ಬಾಯಿಂದ ಬರಲಿ.

ಉಪಾಧ್ಯಕ್ಷರು:- ಸಧ್ಯಕ್ಕೆ ಅವರಿಗೆ ಮಾತನಾಡಲಿಕ್ಕೆ ಬೆಂಬಲ ಕೊಡಿ. ದಯವಿಟ್ಟು ಕುಳಿತುಕೊಳ್ಳಿ. ಅವರು ಮಾತನಾಡಲಿ.

ಶ್ರೀ ವೆಂಕಟರಮಣಪ್ಪ:- ಮಾನ್ಯ ಭೈರೇಗೌಡರು ಇಂತಹ ಕಡೆ ಅವ್ಯವಹಾರ ಆಗಿದೆ ಎಂದು ಸಾಬೀತು ಮಾಡಲಿ. ಬರೇ ಲೋಕಾಯುಕ್ತದ ಬಗ್ಗೆ ಮಾತ್ರ ಹೇಳುವುದಿಲ್ಲ. ತಮ್ಮ ಕ್ಷೇತ್ರದಲ್ಲಿ ಅವ್ಯವಹಾರ ಆಗಿದ್ದರೆ, ನನ್ನ ಕ್ಷೇತ್ರದಲ್ಲಿ ಭಾರಿ ಅವ್ಯವಹಾರ ಆಗಿದೆ ಎಂದು ಅವರು ಹೇಳಲಿ.

(ಗೊಂದಲ)

ಉಪಾಧ್ಯಕ್ಷರು:- ಅವರಿಗೆ ಮಾತನಾಡಲಿಕ್ಕೆ ಬಿಡುತ್ತೀರೋ, ಇಲ್ಲ ನೀವೇ ಮಾತನಾಡುತ್ತೀರೋ? ಮಾನ್ಯ ಮುದ್ದಹನುಮೇಗೌಡರೇ, ನಿಮ್ಮ ಟೈಮ್ ಆಗುತ್ತಾ ಬಂತು. ಇನ್ನು ಐದು ನಿಮಿಷದಲ್ಲಿ ನೀವು ಮುಗಿಸಬೇಕು.

ಶ್ರೀ ಎನ್.ಎಸ್. ಬೋಸರಾಜು:- ಮಾನ್ಯ ಉಪಾಧ್ಯಕ್ಷರೇ, ಈ ವಿಷಯದ ಬಗ್ಗೆ ಯಾರಾದರೂ ಸದಸ್ಯರು ಮಾತನಾಡಿದರೆ ಅವರ ಕ್ಷೇತ್ರದಲ್ಲಿ ನಡೆದಿರುವುದರ ಬಗ್ಗೆ ಮೊದಲು ಹೇಳಿ ನಂತರ ಅವರು ರಾಜ್ಯದ ಬಗ್ಗೆ ಮಾತನಾಡಲಿ. ಇಲ್ಲಿ ಎಲ್ಲಾ ಶಾಸಕರುಗಳೂ ಕೂಡ ಜವಾಬ್ದಾರಿಯುಳ್ಳವರು ಇದ್ದೇವೆ. ಯಾವುದೇ ಕ್ಷೇತ್ರದ ಶಾಸಕರು ತಾವು ಮಾತನಾಡುವಂಥ ಸಂದರ್ಭದಲ್ಲಿ ಅವರ ಕ್ಷೇತ್ರದಲ್ಲಿ ಆಗಿರತಕ್ಕಂಥ ಉತ್ತಮ ಕೆಲಸ ಇಲ್ಲವೇ ಅವ್ಯವಹಾರದ ಬಗ್ಗೆ ಅವರು ಮಾತನಾಡಿ ನಂತರ ಬೇರೆಯದ್ದರ ಬಗ್ಗೆ ಮಾತನಾಡಬೇಕು.

ಶ್ರೀ ಎಸ್.ಪಿ. ಮುದ್ದಹನುಮೇಗೌಡ:- ಮಾನ್ಯ ಉಪಾಧ್ಯಕ್ಷರೇ, ಇವತ್ತು ನಾನು ಬಹಳ ಸ್ಪಷ್ಟವಾಗಿ ಹೇಳಿದ್ದೇನೆ. ನಾನು ಇಡೀ ರಾಜ್ಯದಲ್ಲಿ ನೋಡಿಲ್ಲ. ನಾನು ನನ್ನ ಕ್ಷೇತ್ರದಲ್ಲಿ, ನನ್ನ ಜಿಲ್ಲೆಯಲ್ಲಿ ಎಷ್ಟು ಸಮರ್ಪಕವಾಗಿ ಈ ಪರಿಸ್ಥಿತಿಯನ್ನು ನಾವು ಎದುರಿಸಿದ್ದೇವೆ ಎನ್ನುವುದರ ಬಗ್ಗೆ ವಿವರಣೆಯನ್ನು ಕೊಡುತ್ತಿದ್ದೇನೆ. ಮಾನ್ಯ ಭೈರೇಗೌಡರು ಸದನ ಸಮಿತಿ ಬಗ್ಗೆ ಕೇಳಿರತಕ್ಕಂಥಾದ್ದರ ಬಗ್ಗೆ ನನಗೆ ಏನು ಅನ್ನಿಸುತ್ತದೆ ಎಂದರೆ ಇವತ್ತು ನಮ್ಮ ಬಗ್ಗೆ ನಮಗೇ ವಿಶ್ವಾಸ ಇಲ್ಲ, ನಮ್ಮ ಬಗ್ಗೆ ನಮಗೇ ನಂಬಿಕೆ ಇಲ್ಲ. ನಾವು ನಮ್ಮ ನಮ್ಮ ಕ್ಷೇತ್ರಗಳಲ್ಲಿ ಈ ಕೆಲಸವನ್ನು ಎಷ್ಟು ಪರಿಣಾಮಕಾರಿಯಾಗಿ ಮಾಡಿದ್ದೇವೆ ಎನ್ನುವುದರ ಬಗ್ಗೆ ನಾವೇ ಅನುಮಾನ ಪಟ್ಟುಕೊಂಡು 'ಇಲ್ಲ ಸ್ವಾಮಿ, ನೀವು ಬಂದು ನೋಡಿ' ಎಂದು ಹೇಳತಕ್ಕಂಥ ಪರಿಸ್ಥಿತಿ ನಿರ್ಮಾಣ ಆದರೆ ಅದು ಅತ್ಯಂತ ದುರಾದೃಷ್ಟಕರವಾದ

ಸಂಗತಿಯಾಗುತ್ತದೆ. ಆದರೆ ನನ್ನ ಕ್ಷೇತ್ರ ಮತ್ತು ಜಿಲ್ಲೆ ಬಗ್ಗೆ ಅತ್ಯಂತ ವಿಶ್ವಾಸಪೂರ್ವಕವಾಗಿ ಈ ಸದನದ ಮುಂದೆ ಅತ್ಯಂತ ಭಕ್ತಿ ಮತ್ತು ನಮ್ರತೆಯಿಂದ ನನ್ನ ಹೇಳಿಕೆಯನ್ನು ಮಾಡುತ್ತಿದ್ದೇನೆ. ನಾವು ಬಹಳ ಪರಿಣಾಮಕಾರಿಯಾಗಿ ಕೆಲಸ ಮಾಡಿದ್ದೇವೆ. ಮಾನ್ಯ ಶಿವಣ್ಣನವರು, ವಿರೋಧ ಪಕ್ಷದವರು ನಮ್ಮ ಜಿಲ್ಲೆಯವರು ಇದ್ದಾರೆ. ಹಾಗೆಯೇ ಮಾನ್ಯ ಚೆನ್ನಿಗಪ್ಪನವರು ಇದ್ದಾರೆ ಮತ್ತು ಮಾನ್ಯ ಚೆಲುವರಾಯಸ್ವಾಮಿಯವರು ಇದ್ದಾರೆ. ಇದು ಎಲ್ಲರಿಗೂ ಕೂಡ ಗೊತ್ತಿದೆ. ನಮ್ಮ ಜಿಲ್ಲೆಯಲ್ಲಿ ನಾವು ಅತ್ಯಂತ ಸಮರ್ಥವಾಗಿ ಪರಿಸ್ಥಿತಿಯನ್ನು ಎದುರಿಸಿದ್ದೇವೆ ಮತ್ತು ಇವತ್ತು ಬಹಳ ಉತ್ತಮವಾಗಿ ನಮ್ಮ ಜಿಲ್ಲೆಯಲ್ಲಿ ಕೆಲಸ ಆಗಿದೆ. ನಾನು ಏನು ಅಂದುಕೊಂಡಿದ್ದೇನೆ ಎಂದರೆ ಇವತ್ತು ಇಡೀ ರಾಜ್ಯದಲ್ಲಿ ಎಲ್ಲಾ ಶಾಸಕರ ಕ್ಷೇತ್ರದಲ್ಲಿ ಕೂಡ ಅತ್ಯಂತ ಪರಿಣಾಮಕಾರಿಯಾದ ಕೆಲಸ ಆಗಿದೆ ಎನ್ನತಕ್ಕಂಥ ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಸನ್ಮಾನ್ಯ ಬೈರೇಗೌಡರು ಲೋಕಾಯುಕ್ತ ಎನ್ನುವ ಮಾತನ್ನು ಹೇಳಿದರು. ಅದಕ್ಕೋಸ್ಕರ ನಾನು ಒಂದು ಮಾತನ್ನು ಹೇಳಬೇಕಾಗುತ್ತದೆ. ಇವತ್ತು ಲೋಕಾಯುಕ್ತ ಸೆಕ್ಷನ್ 12ರ ಪ್ರಕಾರ ಬಹಳ ಕ್ಲಿಯರ್ ಆಗಿದೆ. ಲೋಕಾಯುಕ್ತದವರು ಯಾವಾಗ ವರದಿಯನ್ನು ಕೊಡಬೇಕಾಗುತ್ತದೆ, ಯಾವ ವಿಷಯಗಳ ಬಗ್ಗೆ ವರದಿಯನ್ನು ಕೊಡಬೇಕಾಗುತ್ತದೆ, ಅವರ ವ್ಯಾಪ್ತಿ ಏನು ಮತ್ತು ವರದಿಯನ್ನು ಅವರು ಯಾರಿಗೆ ಕೊಡಬೇಕು, ತದನಂತರ ಸರ್ಕಾರ ಮಾಡಬೇಕಾದ ಕೆಲಸ ಏನು, ಸರ್ಕಾರ ಮಾಡದೇ ಇರತಕ್ಕಂಥ ಸಂದರ್ಭದಲ್ಲಿ ಲೋಕಾಯುಕ್ತದವರು ಯಾವ ರೀತಿ ಗವರ್ನರ್ ಅವರಿಗೆ ಕೊಡಬೇಕಾಗುತ್ತದೆ than the report has to be placed before this Home. There are all procedures very clearly stated under Sec. 12 of the Lok Ayuktha Act. ಆದ್ದರಿಂದ ಒಂದು ವಿಷಯವನ್ನು ನಾನು ಸ್ಪಷ್ಟವಾಗಿ ಹೇಳುತ್ತಿದ್ದೇನೆ. ಮಾನ್ಯ ಭೈರೇಗೌಡರೂ ಕೂಡ ಈ ಕಡೆ ಅವರು ಸಚಿವರಾಗಿದ್ದಂಥ ಸಂದರ್ಭದಲ್ಲಿ ನಾವು ವಿರೋಧ ಪಕ್ಷದ ಶಾಸಕರಾಗಿದ್ದೆವು. ಆದರೆ ಒಂದು ಬಹಳ ನಿರ್ವಿವಾದವಾದಂಥ ಸಂಗತಿ ಏನು ಎಂದರೆ ಪ್ರಥಮ ಬಾರಿಗೆ ಈ ರಾಜ್ಯದಲ್ಲಿ ಲೋಕಾಯುಕ್ತ ಅವರಿಗೆ ಅತ್ಯಂತ ಹೆಚ್ಚು ಬಲವನ್ನು, ಶಕ್ತಿಯನ್ನು ನೀಡಿದಂಥ ಸರ್ಕಾರ ಎಂದರೆ ಸನ್ಮಾನ್ಯ ಎಸ್.ಎಂ. ಕೃಷ್ಣ ಅವರ ಸರ್ಕಾರ. This Government has strengthened the hands of the Lok Ayuktha. They have given him more powers. You should appreciate it.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ:– ಒಂದು ನಿಮಿಷ. ಈಗ ಲೋಕಾಯುಕ್ತಕ್ಕೆ ಅತ್ಯಂತ ಹೆಚ್ಚು ಶಕ್ತಿಯನ್ನು ಕೊಟ್ಟಿದ್ದೇವೆ ಎಂದು ಅವರು ಹೇಳಿದರು. ಅವರು ಯಾವ ವರದಿಯನ್ನು ಸರ್ಕಾರಕ್ಕೆ ಕೊಟ್ಟರು, ಆ ವರದಿ ಸರಿಯಿಲ್ಲವೆಂದು ಪ್ರತಿಯೊಂದು ಎನ್‌ಕ್ವೈರಿ ರಿಪೋರ್ಟ್‌ನ್ನು ಕ್ಯಾಬಿನೆಟ್‌ನಲ್ಲಿ ಟರ್ನ್‌ಡೌನ್ ಮಾಡಿ ಏನೂ ಕ್ರಮವನ್ನು ಅಧಿಕಾರಿಗಳ ಮೇಲೆ ತೆಗೆದುಕೊಳ್ಳದೇ ಇರುವುದಕ್ಕೆ ಏನು ಹೇಳುತ್ತೀರಿ?

(ಗೊಂದಲ)

ಶ್ರೀ ಎಸ್.ಪಿ. ಮುದ್ದಹನುಮೇಗೌಡ:– ಸನ್ಮಾನ್ಯ ಉಪಾಧ್ಯಕ್ಷರೇ, ನಾನು ಯೀಲ್ಡ್ ಆಗಿಲ್ಲ.

ಶ್ರೀ ಕರಿಯಣ್ಣ:– ಇವರು ಮಾತನಾಡಿದ ಮೇಲೆ, ಅವರಿಗೆ ಅವಕಾಶ ಕೊಟ್ಟಾಗ ಅದರ ಮೇಲೆ ಏನಾದರೂ ಸಲಹೆಯನ್ನು ಅವರು ಮಾಡಲಿ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ:– ಅವರು ಕೊಟ್ಟ ವರದಿ ಸರಿಯಿಲ್ಲವೆಂದು ಸರ್ಕಾರ ಕ್ಯಾಬಿನೆಟ್‌ನಲ್ಲಿ ಟರ್ನ್‌ಡೌನ್ ಮಾಡಿದೆ.

Sri S.P. Mudda Hanume Gowda:- I am not competent to comment, which are all the reports accepted by the Government, what are the actions taken by the Government. I cannot concerned with that. I am only making a statement that it is because of Mr. S.M. Krishna - on his guidelines the Lok Ayuktha is strengthened and more powers are given. ಇವತ್ತು ರಾಜ್ಯದಲ್ಲಿ ಎಲ್ಲಾ ಕಡೆಯಲ್ಲೂ ಕೂಡ ಒಂದು ಅವೇರ್‌ನೆಸ್ ಕ್ರಿಯೇಟ್ ಆಗಿದೆ. ಅವರ ವರದಿ ಬಗ್ಗೆ ಏನು ಕ್ರಮ ಜರುಗಿಸಿದ್ದಾರೆ ಅದು ಬೇರೆ ವಿಷಯ. ಆದರೆ ಒಂದು ಅವೇರ್‌ನೆಸ್ ರಾಜ್ಯದಲ್ಲಿ ಕ್ರಿಯೇಟ್ ಆಗಿದೆ. ಲೋಕಾಯುಕ್ತ ಎನ್ನುವ ಒಂದು ಸಂಸ್ಥೆ ಇದೆ, ಇವತ್ತು ಯಾರೇ ರಾಜಕಾರಣಿ ಇರಬಹುದು, ಅಧಿಕಾರಿಗಳು ಇರಬಹುದು, ಸಾರ್ವಜನಿಕರು ಇರಬಹುದು, ಲೀಲಾ ಜಾಲವಾಗಿ ಭ್ರಷ್ಟಾಚಾರವನ್ನು ಮಾಡುವುದಕ್ಕೆ ಆಗುವುದಿಲ್ಲ. ಅದಕ್ಕೆ ಒಂದು ಕಡಿವಾಣ ಇದೆ, ಅದನ್ನು ಕೇಳುವುದಕ್ಕೆ ಒಂದು ಸಂಸ್ಥೆ ಇದೆ ಎನ್ನುವಂಥ ಒಂದು ಹೊಸ ಅಲೆ ಇವತ್ತು ರಾಜ್ಯದ ಎಲ್ಲಾ ಕಡೆಯಲ್ಲಿ ಎದ್ದಿದೆ. ಅದನ್ನು ನಾವು ಒಪ್ಪಿಕೊಳ್ಳಬೇಕಾಗುತ್ತದೆ. ಆದ್ದರಿಂದ ಇದರ ಬಗ್ಗೆ ತದನಂತರ ಸೂಕ್ತ ಸಂದರ್ಭದಲ್ಲಿ ಚರ್ಚೆ ಮಾಡೋಣ. ಮಾನ್ಯ ಉಪಾಧ್ಯಕ್ಷರೇ, ನಾನು ಈ ಬಗ್ಗೆ ಇಷ್ಟೇ ಹೇಳಿ ಇನ್ನೊಂದು ಹತ್ತು ನಿಮಿಷದೊಳಗಡೆ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಉಪಾಧ್ಯಕ್ಷರು:- ಇಲ್ಲ, ನಾಲ್ಕು ಗಂಟೆಗೆ ನೀವು ಮುಗಿಸಬೇಕು.

ಶ್ರೀ ಎಸ್.ಪಿ. ಮುದ್ದಹನುಮೇಗೌಡ:- ನಾಲ್ಕು ಗಂಟೆ ಐದು ನಿಮಿಷಕ್ಕೆ ಮುಗಿಸುತ್ತೇನೆ ಸ್ವಾಮಿ. ಇವತ್ತು ಈ ಬರದ ಛಾಯೆ ಕಳೆದ ಎರಡು ವರ್ಷಗಳಿಂದ ನಮ್ಮನ್ನು ಕಾಡುತ್ತಾ ಇದೆ. ರಾಜ್ಯದ ಎಲ್ಲಾ ಕಡೆ ಕೂಡ ಇದರ ನೇರವಾದ ಪರಿಣಾಮ ಕುಡಿಯುವ ನೀರಿನ ಮೇಲೆ ಬೀರುತ್ತದೆ. ಇವತ್ತು ನಾವೆಲ್ಲರೂ ಕೂಡ ಒಂದು ವಿಷಯವನ್ನು ಬಹಳ ನಿರ್ವಿವಾದವಾದಂಥ ಸಂಗತಿಯೆಂದು ಒಪ್ಪಿಕೊಳ್ಳಬೇಕಾಗುತ್ತದೆ. ಇವತ್ತು ಏನು ಈ ಬರ ಬಂದ ಮೇಲೆ ರಾಜ್ಯ ಸರ್ಕಾರದ ಈ deepening of Borewells - ಕೊಳವೆ ಬಾವಿಗಳನತ ಆಳಪಡಿಸತಕ್ಕಂಥ ಕೆಲಸ ಬಹಳ ಅತ್ಯಂತ ಒಂದು ಕ್ರಾಂತಿಕಾರಕವಾದಂಥ ರೀತಿಯಲ್ಲಿ ಆಗಿದೆ. ಇದನ್ನು ಯಾರೂ ಕೂಡ ಇಲ್ಲವೆಂದು ಹೇಳುವುದಕ್ಕೆ ಆಗುವುದಿಲ್ಲ. ಇದರ ಬಗ್ಗೆ ವರದಿ ಇದೆ ಮತ್ತು ಸರ್ಕಾರ ಇವತ್ತು ಎಷ್ಟೆಷ್ಟು ಬೋರ್‌ವೆಲ್‌ಗಳನ್ನು ಡೀಪನಿಂಗ್ ಮಾಡಿದ್ದೇವೆ ಎಂದು ವರದಿಯನ್ನು ಕೊಟ್ಟಿದೆ. ಇದು ಏನಾಗಿದೆ ಎಂದರೆ ನನ್ನ ಕ್ಷೇತ್ರದ, ನನ್ನ ಜಿಲ್ಲೆಯ ಮಟ್ಟಿಗೆ ಶೇಕಡಾ 98 ಭಾಗ Deepening of Borewells success ಆಗಿದೆ. ನಾನು ಮೊದಲೇ ಮಾತನಾಡತಕ್ಕಂಥ ಸಂದರ್ಭದಲ್ಲಿ ಹೇಳಿದೆ. ಇದು geographical differences ಇದೆ. I cannot speak with the same spirit so far as Chincholi is concerned. I can only speak with regard to Kunigal constituency and Tumkur District. ಭೌಗೋಳಿಕ ವ್ಯತ್ಯಾಸದಿಂದ ಅದು ಎಲ್ಲಾ ಕಡೆಯೂ ಒಂದೇ ತರಹ ಇದೆಯೆಂದು ಒಪ್ಪಿಕೊಳ್ಳುವುದಕ್ಕೆ ನಾನು ತಯಾರಿಲ್ಲ. ಆದರೆ ಕುಡಿಯುವ ನೀರಿನ ವ್ಯವಸ್ಥೆಯಲ್ಲಿ ಇವತ್ತು deepening of Borewells ರಾಜ್ಯ ಸರ್ಕಾರ ಏನು ಮಾಡಿದೆ ಅದು ಈ ಬರವನ್ನು ಸಮರ್ಥವಾಗಿ ಎದುರಿಸಿ ಜನರಿಗೆ ಕುಡಿಯುವ ನೀರನ್ನು ಕೊಡತಕ್ಕಂಥ ದಿಸೆಯಲ್ಲಿ ಒಂದು ಅತ್ಯಂತ ಕ್ರಾಂತಿಕಾರಕವಾದಂಥ ಕಾರ್ಯಕ್ರಮವಾಗಿದೆ ಎಂದು ನಾನು ಬಹಳ ವಿಶ್ವಾಸದಿಂದ ಹೇಳುವುದಕ್ಕೆ

ಇಚ್ಚೆಪಡುತ್ತೇನೆ. ಇದು ಎಲ್ಲ ಕಡೆ ಕೂಡ ಆಗಿದೆ. ಸರ್ಕಾರ ಹೊಸ ಬೋರ್‌ವೆಲ್‌ಗಳನ್ನು ಕೊಡದೇ ಇರಬಹುದು. ಆದರೆ ಕುಡಿಯುವ ನೀರಿಗೋಸ್ಕರ ಸಮಸ್ಯೆ ಇದೆಯೆಂದು ನಾವು ಒಪ್ಪಿಕೊಳ್ಳಬೇಕಾಗುತ್ತದೆ. ಆದರೆ ಇದರ ಬಗ್ಗೆ ಹಾಹಾಕಾರ ಏನೂ ಆಗಲಿಲ್ಲ. ಕುಡಿಯುವ ನೀರಿಗೋಸ್ಕರ ಜನ ಮೈಲುಗಟ್ಟಲೆ, ಗಂಟೆಗಟ್ಟಲೆ ಹೋಗಿ ನಿಂತುಕೊಂಡು, ಗಡಿಗೆಗಳನ್ನು ಹೊತ್ತುಕೊಂಡು ಹೋಗತಕ್ಕಂಥ ಪರಿಸ್ಥಿತಿ ಎಲ್ಲಿಯೂ ನಿರ್ಮಾಣ ಆಗಲಿಲ್ಲ. ಅತ್ಯಂತ ಸಮರ್ಥವಾಗಿ ಇವತ್ತು ಬಹಳ ಪರಿಣಾಮಕಾರಿಯಾದಂಥ ರೀತಿಯಲ್ಲಿ ಇದನ್ನು ಸರ್ಕಾರ ಎದುರಿಸಿದೆ ಎಂಬ ಮಾತನ್ನು ಹೇಳುತ್ತಾ ಈ deepening of Borewells ಸರ್ಕಾರ ಏನು ಮಾಡಿದೆ, ಇದು ನಿಜವಾಗಿಯೂ ಕೂಡ ಒಂದು ಕ್ರಾಂತಿಕಾರಕವಾದಂಥ ಕೆಲಸ ಎಂದು ಅತ್ಯಂತ ವಿಶ್ವಾಸದಿಂದ ಮತ್ತೊಮ್ಮೆ ನಾನು ಹೇಳಿ ಮಾನ್ಯ ಉಪಾಧ್ಯಕ್ಷರೇ, ಇವತ್ತು ಮಾನ್ಯ ವಿರೋಧ ಪಕ್ಷದ ನಾಯಕರು ಇಲ್ಲಿ ಇಲ್ಲ, ಆದರೆ ಅವರ ಪಕ್ಷದ ಸದಸ್ಯರುಗಳು ಇದ್ದಾರೆ. ಒಂದು ನನಗೆ ಅರ್ಥವಾಗಲಿಲ್ಲ. ಇದನ್ನು ನಾನು ಮೊದಲೇ ಹೇಳಿದೆ. ಇದು ರಾಜ್ಯ ಸರ್ಕಾರದ ಸಮಸ್ಯೆ ಅಷ್ಟೇ ಅಲ್ಲ. ಇದು ಒಂದು ರಾಷ್ಟ್ರೀಯ ಸಮಸ್ಯೆಯೂ ಆಗಿದೆ. ಬರ ಇವತ್ತು ದೇಶದ ಎಲ್ಲಾ ಕಡೆ ಕೂಡ ಇದೆ. ಆದರೆ ಬರಕ್ಕೂ ನಮಗೂ ಸಂಬಂಧವೇ ಇಲ್ಲ ಎನ್ನುವ ತರಹ ಕೇಂದ್ರ ಸರ್ಕಾರ ನಡೆದುಕೊಂಡರೆ ಇದು ಯಾವ ನ್ಯಾಯ? ರಾಜ್ಯದಲ್ಲಿ ಇರತಕ್ಕಂಥ ಬರ ಪರಿಸ್ಥಿತಿಯನ್ನು ಎದುರಿಸುವಂತಹ ಜವಾಬ್ದಾರಿ ಕೇಂದ್ರ ಸರ್ಕಾರಕ್ಕೆ ಇಲ್ಲವೇನು? ಬರವನ್ನು ಎದುರಿಸಲಿಕ್ಕೆ....

(ಗೊಂದಲ)

ಶ್ರೀ ಎಸ್. ಶಿವಣ್ಣ:– ಮಾನ್ಯ ಉಪಾಧ್ಯಕ್ಷರೇ.....

ಶ್ರೀ ಎಸ್.ಪಿ. ಮುದ್ದಹನುಮೇಗೌಡ:– ನಾನು ಮುಗಿಸುತ್ತೇನೆ, ಆಮೇಲೆ ಅವರು ಮಾತನಾಡಲಿ. ನಾನು ಯೀಲ್ಡ್ ಆಗುವುದಿಲ್ಲ. ಇವರಿಗೆ ಕೇಂದ್ರ ಸರ್ಕಾರ ಎಂದರೆ ಬಿ.ಜೆ.ಪಿ. ಮೆಂಬರ್ಸ್‌ಗೆ ಗುತ್ತಿಗೆಯಾಗಿದೆ. ಅಲ್ಲಿ ಎನ್.ಡಿ.ಎ. ಸರ್ಕಾರ ಇದೆ.

(ಗೊಂದಲ)

ಉಪಾಧ್ಯಕ್ಷರು:– ನಿಮಗೆ ಅವಕಾಶ ಬಂದಾಗ ಮಾತನಾಡಿ.....

ಶ್ರೀ ಎಂ.ಪಿ. ಅಪ್ಪಚ್ಚುರಂಜನ್:– ಮಾನ್ಯ ಉಪಾಧ್ಯಕ್ಷರೇ....

(ಗೊಂದಲ)

ಶ್ರೀ ಎಸ್.ಪಿ. ಮುದ್ದಹನುಮೇಗೌಡ:– ಮಾನ್ಯ ಉಪಾಧ್ಯಕ್ಷರೇ, ದಯಮಾಡಿ ಅವರು ಕುಳಿತುಕೊಳ್ಳಲಿ, ನಾನು ಯೀಲ್ಡ್ ಆಗಿಲ್ಲ. I cannot yield to anybody. I have given you the promise that I will complete my discussion before 4.05 p.m. ದಯಮಾಡಿ ನನಗೆ ಎರಡು–ನಿಮಿಷ ಹೆಚ್ಚಿಗೆ ಕೊಡಿ. ರಾಜ್ಯದಲ್ಲಿ ಇರತಕ್ಕಂಥ ಬರ ಪರಿಸ್ಥಿತಿಯನ್ನು ಎದುರಿಸಲಿಕ್ಕೆ ಕೇಂದ್ರ ಸರ್ಕಾರಕ್ಕೆ ಏನೂ ಜವಾಬ್ದಾರಿ ಇಲ್ಲಾ? How is that the Central Government is not discharging its duty..?

ಶ್ರೀ ಎಸ್. ಶಿವಣ್ಣ:– ಕೇಂದ್ರ ಸರ್ಕಾರ ಹಣ ಕೊಟ್ಟಿದೆ...

ಶ್ರೀ ಎಸ್.ಪಿ. ಮುದ್ದಹನುಮೇಗೌಡ:– ಎಷ್ಟು ಕೊಟ್ಟಿದೆ ಎಂಬುದು ನನಗೆ ಗೊತ್ತಿದೆ, ನೀವು ಕುಳಿತುಕೊಳ್ಳಿ.

ಶ್ರೀ ವೆಂಕಟರಮಣಪ್ಪ:- ಮಾನ್ಯ ಸದಸ್ಯರಾದ ಶಿವಣ್ಣನವರು ಬಹಳ ಮಾತನಾಡುತ್ತಾರೆ. ಕೇಂದ್ರ ಸರ್ಕಾರದವರು ಆಂಧ್ರ ಪ್ರದೇಶಕ್ಕೆ ಎಷ್ಟು ಕೊಟ್ಟಿದ್ದಾರೆ ಮತ್ತು ಕರ್ನಾಟಕಕ್ಕೆ ಎಷ್ಟು ಕೊಟ್ಟಿದ್ದಾರೆ ಎಂದು ಎಲ್ಲರಿಗೂ ಗೊತ್ತು. ನೋಡಿ ಶಿವಣ್ಣನವರೇ...

(ಗೊಂದಲ)

ಮಾನ್ಯ ಸದಸ್ಯರು:- ಉಪಾಧ್ಯಕ್ಷರೇ, ನೋಡಿ. ಅವರವರೇ ಮಾತನಾಡಿಕೊಳ್ಳುತ್ತಿದ್ದಾರೆ.

ಶ್ರೀ ಎಸ್.ಪಿ. ಮುದ್ದಹನುಮೇಗೌಡ:- ಕೇಂದ್ರ ಸರ್ಕಾರ ಎಷ್ಟು ಕೊಟ್ಟಿದೆ ಎಂಬುದು ನಮಗೆ ಗೊತ್ತಿದೆ.

ಶ್ರೀ ಸಿ.ಎಸ್. ಈಶ್ವರಗೌಡ:- ಇವತ್ತು ಎಲ್ಲಾ ಕಡೆ ಹೋಗಿ ನೋಡಿ. ಒಂದು ಕಡೆಯಾದರೂ ಸರಿಯಾಗಿ ನೀರು ಸಿಗುತ್ತಿದೆಯಾ?

(ಗೊಂದಲ)

4.00 ಪಿಎಂ

Sri S.P. Mudda Hanume Gowda:- You are not representing the Central Government here. You are only the Opposition Member here. You cannot hold vakalath on behalf of the Central Government. ಮಾನ್ಯ ಅಧ್ಯಕ್ಷರೇ, ನನ್ನ ಆರೋಪ ಇಷ್ಟೇ. ಇದು ಬರಗಾಲ ನಮ್ಮ ಕರ್ನಾಟಕ ರಾಜ್ಯಕ್ಕೆ ಮಾತ್ರ ಸೀಮಿತವಾಗಿಲ್ಲ. ದೇಶದಲ್ಲಿ ಎಲ್ಲಾ ಕಡೆ ಇದೆ. ಇವತ್ತು ಕೇಂದ್ರ ಸರ್ಕಾರದ ಜವಾಬ್ದಾರಿಯು ಇದೆ. I am making an allegation that the Central Government has utterly failed to discharge its duty. They have simply escaped from the responsibilities. They have failed to come to the rescue of the State. Is it not the duty of the Central Government to come to the rescue of the State Government? ಕೇಂದ್ರ ಸರ್ಕಾರಕ್ಕೆ ಜವಾಬ್ದಾರಿ ಇಲ್ಲವಾ ಯಾವ ರೀತಿ ಮಾಡಿದ್ದಾರೆ, ಸ್ವಾಮಿ?

ಶ್ರೀ ಎಂ.ಪಿ. ರಂಜನ್:- ಮಾನ್ಯ ಅಧ್ಯಕ್ಷರೇ, ಅವರು ಕೇಂದ್ರ ಸರ್ಕಾರದ ಮೇಲೆ ಜವಾಬ್ದಾರಿ ಹೊರೆಸುತ್ತಿದ್ದಾರೆ...

(ಗೊಂದಲ)

ಶ್ರೀ ಎಸ್.ಪಿ. ಮುದ್ದಹನುಮೇಗೌಡ:- ಮಾನ್ಯ ಅಧ್ಯಕ್ಷರೇ, ನಾನು ಲೆಕ್ಕ ಹಾಕಿದ್ದೇನೆ. 25 ನಿಮಿಷಗಳನ್ನು ಮಾನ್ಯ ವಿರೋಧ ಪಕ್ಷದ ಸದಸ್ಯರು ತೆಗೆದುಕೊಂಡಿದ್ದಾರೆ. ಮಾನ್ಯ ಭೈರೇಗೌಡರು ಇವರೆಲ್ಲರೂ ಸೇರಿ. ಅದನ್ನು ತಾವು ಕೊಡಬೇಕಾಗುತ್ತದೆ. ಇನ್ನು ನಾನು 10 ನಿಮಿಷದಲ್ಲಿ ಮುಗಿಸುತ್ತೇನೆ.

ಉಪಾಧ್ಯಕ್ಷರು:- ಇಲ್ಲ, ಇಲ್ಲ, ಆಗುವುದಿಲ್ಲ, ತಾವು ಬೇಗ ಮುಗಿಸಿ.

ಶ್ರೀ ಎಸ್.ಪಿ. ಮುದ್ದಹನುಮೇಗೌಡ:- ಮಾನ್ಯ ಅಧ್ಯಕ್ಷರೇ, ನಮ್ಮ ಪಕ್ಷದವರು ನಾವು ಮಾತನಾಡುತ್ತಿಲ್ಲ. ಬರ ಪರಿಹಾರಕ್ಕೂ ನಮಗೂ ಸಂಬಂಧವಿಲ್ಲವೇ? ದಯಮಾಡಿ 5 ನಿಮಿಷ ಕೊಡಿ. ಈಗ ಮಾನ್ಯ ಗೌರವಾನ್ವಿತ ಸದಸ್ಯರು ಅತ್ಯಂತ ಗುರುತರವಾದ ಆರೋಪವನ್ನು ನಮ್ಮ ಸರ್ಕಾರದ ಮೇಲೆ ಮಾಡಿದ್ದಾರೆ. ಏನು ಈ ಮಂತ್ರಿಗಳು ಹೆಲಿಕ್ಯಾಪ್ಟರ್‌ನಲ್ಲಿ ಹಾರಾಡಿ ಬಿಟ್ಟರು. ಹೋಗಲಿಲ್ಲ, ನೋಡಲಿಲ್ಲ ಎಂದು. ನಾನು ಒಂದು ಪ್ರಶ್ನೆಯನ್ನು ಕೇಳುತ್ತೇನೆ. ಕೇಂದ್ರ ಸರ್ಕಾರದ

ಮಂತ್ರಿಗಳು ಇದ್ದಾರೆ. ಬಡತನ ನಿರ್ಮೂಲನ ಮಂತ್ರಿಗಳು. ಅವರು ಇದ್ದರು. ಇವತ್ತು ಇಲ್ಲ. I do not want to mention his name. ಇವತ್ತು ಬಡತನ ನಿರ್ಮೂಲನ ಮಂತ್ರಿಗಳು ಈ ರಾಜ್ಯದಲ್ಲಿ ಬರ ನಿರ್ಮೂಲನೆಗೋಸ್ಕರ ಯಾವುದಾದರೂ ಪ್ರವಾಸ ಕೈಗೊಂಡರೇ ಯಾವತ್ತಾದರೂ ಬಂದರಾ? ಕೇಂದ್ರದಿಂದ ತಂಡ ಬಂದು ಏನು ಕರ್ನಾಟಕ ರಾಜ್ಯದಲ್ಲಿ ಬರಪರಿಸ್ಥಿತಿ ಇದೆ, ಯಾವ ನೆರವನ್ನು ಕೇಂದ್ರ ಸರ್ಕಾರದಿಂದ ರಾಜ್ಯ ಸರ್ಕಾರಕ್ಕೆ ಕೊಡಬೇಕಾಗುತ್ತದೆ ಎಂದು ಯೋಚನೆ ಮಾಡಿದ್ದಾರಾ? ಈ ರಾಜ್ಯದಲ್ಲಿರತಕ್ಕಂಥ ಜನರೂ ಕೂಡ. ಈ ರಾಷ್ಟ್ರದ ಸತ್ಪ್ರಜೆಗಳು ಎನ್ನುವಂತಹ ಒಂದು ವಿಷಯವನ್ನು ಸಂಪೂರ್ಣವಾಗಿ ಮರೆತು ಕೇಂದ್ರ ಸರ್ಕಾರ ಇವತ್ತು ನಮ್ಮ ಸರ್ಕಾರದ ನೆರವಿಗೆ ಬರಲಿಲ್ಲ. ಮಾನ್ಯ ಅಧ್ಯಕ್ಷರೇ,

ಶ್ರೀ ಎಸ್. ಶಿವಣ್ಣ:– ತಾವು ಹೇಳಿದಿರಲ್ಲಾ. ಕೇಂದ್ರ ಸರ್ಕಾರದಿಂದ ನೆರವು ಬರಲಿಲ್ಲ ಎಂದು. ಮಾನ್ಯ ಡಿ.ಕೆ. ಶಿವಕುಮಾರ್‌ರವರನ್ನು ಕರೆಸಿ. ಇದೇ ವಿಧಾನಸೌಧದ ಮುಂದೆ ಕೇಂದ್ರ, ಸರ್ಕಾರವನ್ನು ಹಾಡಿ ಹೊಗಳಿದರು. ಮಾನ್ಯ ಅನಂತಕುಮಾರ್‌ರವರು ಕೇಂದ್ರದಲ್ಲಿ ಇಲ್ಲದಿದ್ದರೆ ಸರ್ಕಾರದ ಮರ್ಯಾದೆ ಹಾಳಾಗಿ ಹೋಗುತ್ತಿತ್ತು ಎಂದು ಮಾನ್ಯ ಮಂತ್ರಿಗಳಾದ ಡಿ.ಕೆ. ಶಿವ ಕುಮಾರ್‌ರವರು ಹಾಡಿ ಹೊಗಳಿದರು.

ಉಪಾಧ್ಯಕ್ಷರು:– ಈ ರೀತಿ ಎಲ್ಲರೂ ಎದ್ದು ನಿಂತು ಮಾತನಾಡಿದರೆ ಅದು ಯಾವುದು ಕಡತಕ್ಕೆ ಹೋಗುವುದಿಲ್ಲ.

ಶ್ರೀ ಎಸ್. ಶಿವಣ್ಣ:– ಮಾನ್ಯ ಅಧ್ಯಕ್ಷರೇ, ಪತ್ರಿಕೆಗಳವರು ಇಲ್ಲೇ ಇದ್ದಾರೆ. ಅವರನ್ನು ಬೇಕಾದರೆ ಕೇಳಿ. ಮಾನ್ಯ ಅನಂತಕುಮಾರ್‌ರವರು ಪ್ರವಾಸ ಮಾಡಲಿಲ್ಲವೇ ಎಂದು.

ಉಪಾಧ್ಯಕ್ಷರು:– ನೀವು ಎಲ್ಲರೂ ಮಾತನಾಡಿದರೆ ಅದು ಯಾವುದೂ ಕಡತಕ್ಕೆ ಹೋಗುವುದಿಲ್ಲ. ದಯವಿಟ್ಟು ಕುಳಿತುಕೊಳ್ಳಿ. ನಿಮ್ಮ ಸರದಿ ಬಂದಾಗ ನೀವು ಅವರು ಏನು ಹೇಳಿದರೋ ಅದಕ್ಕೆ ಸರಿಯಾಗಿ ಮಾತನಾಡಿ.

ಶ್ರೀ ಎಸ್. ಶಿವಣ್ಣ:– ಮಾನ್ಯ ಅಧ್ಯಕ್ಷರೇ, ಬಡತನ ನಿರ್ಮೂಲನಾ ಮಂತ್ರಿಗಳು ಪ್ರವಾಸ ಮಾಡಿಲ್ಲ ಎಂದು ಹೇಳಿದರು. ಪತ್ರಿಕೆಗಳಲ್ಲಿ ವರದಿಗಳು ಬಂದಿವೆ. ಇವರ ಘನ ಸರ್ಕಾರ ಏನು ಮಾಡಿದೆ ಎಂದು ಪತ್ರಿಕೆಗಳಲ್ಲಿ ವರದಿಗಳು ಬಂದಿವೆ. ಅವರ ಬಗ್ಗೆ ಇವರು ಇವತ್ತು ಮಾತನಾಡುತ್ತಾರೆ.**xx**

ಶ್ರೀ ಎಸ್. ಪಿ. ಮುದ್ದಹನುಮೇಗೌಡ:– ಮಾನ್ಯ ಅಧ್ಯಕ್ಷರೇ, it is not our duty to beg to them. It is their duty to come to the rescue of this Government. ನಾವು ಹೋಗಿ ಅವರಿಗೆ ಹಾರ ತುರಾಯಿ ಹಾಕಿ, ಸ್ವಾಮಿ ಎಂದು ನೋಡಬೇಕಾ? ಬೇಕಾಗಿಲ್ಲ. ಅವರು ಬಂದು ನೋಡಬೇಕಾಗಿತ್ತು. ಏನು ಪರಿಸ್ಥಿತಿ ರಾಜ್ಯದಲ್ಲಿ ಇದೆ ಎಂದು. ಕೇಂದ್ರ ಸರ್ಕಾರ ಏನು ಕೆಲಸ ಮಾಡಬೇಕು ಎಂದು ಬಂದು ಅವರು ನೋಡಬೇಕಾಗಿತ್ತು. ಅಲ್ಲಿನ ಪ್ರತಿನಿಧಿಗಳು ಫೋಲ್ಲೂರ್ ಆಗಿದ್ದಾರೆ. ಮತ್ತೆ ಅದಕ್ಕೆ ಸಂಬಂಧಪಟ್ಟಂತೆ ಇಡೀ ರಾಜ್ಯಕ್ಕೆ ಸಂಬಂಧಪಟ್ಟಂತೆ ಹೆಚ್ಚಿನ ನೆರವು ಕೊಡತಕ್ಕಂಥಾದ್ದರಲ್ಲೂ ಕೂಡ ಕೇಂದ್ರ ಸರ್ಕಾರ ವಿಫಲವಾಗಿದೆ. ಏಕೆಂದರೆ ಮಾನ್ಯ ಅಧ್ಯಕ್ಷರೇ, ಅನೇಕ ಸಲ ಈ ವಿಷಯದ ಬಗ್ಗೆ ಚರ್ಚೆಯಾಗಿದೆ. ನಾನು ಒಂದು ಮಾತನ್ನು ಹೇಳುವುಧಕ್ಕೆ ಇಷ್ಟಪಡುತ್ತೇನೆ. ಇವತ್ತು ಕರ್ನಾಟಕ ರಾಜ್ಯದಲ್ಲಿರತಕ್ಕ ಬರಪರಿಸ್ಥಿತಿ ಆಂದ್ರ ಪ್ರದೇಶದಲ್ಲಿರತಕ್ಕಂಥ ಬರ ಪರಿಸ್ಥಿತಿ ಹೆಚ್ಚು ಕಡಿಮೆ ಒಂದೇ. ಎರಡೂ ರಾಜ್ಯಗಳು ಕೂಡ they are sailing in the same boat. ಇಲ್ಲಿ ಜನಸಂಖ್ಯೆ ಸ್ವಲ್ಪ ಕಡಿಮೆ ಇರಬಹುದು, ಅಲ್ಲಿ ಜನ ಸಂಖ್ಯೆ ಸ್ವಲ್ಪ ಜಾಸ್ತಿ

(**xx** ಈ ಪದವನ್ನು ಅಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದು ಹಾಕಲಾಗಿದೆ.)

ಇರಬಹುದು. ಸ್ವಲ್ಪ ಜಲಆಸ್ತಿ ಕೊಡಲಿ ವಿರೋಧ ಇಲ್ಲ. ನಮಗೆ 7 ಲಕ್ಷ ಟನ್ ಅಕ್ಕಿ ಕೊಟ್ಟರೆ ಅವರಿಗೆ 45 ಲಕ್ಷ ಟನ್ ಅಕ್ಕಿ ಕೊಡುತ್ತಾರೆ. ಯಾವ ನ್ಯಾಯ ಸ್ವಾಮಿ ಇದು? 600 ಪಟ್ಟು ಜಾಸ್ತಿ. 7 ಲಕ್ಷ ಟನ್ ಅಕ್ಕಿ ನಮಗೆ ಕೊಟ್ಟರೆ 45 ಲಕ್ಷ ಟನ್ ಅಕ್ಕಿಯನ್ನು ಅವರಿಗೆ ಕೊಡುತ್ತಾರೆ. ನಾವು ಮನವಿ ತೆಗೆದುಕೊಂಡು ಹೋಗಿದ್ದೇವೆ. ಸನ್ಮಾನ್ಯ ಮುಖ್ಯಮಂತ್ರಿಗಳು ಹೋಗಿದ್ದಾರೆ. ಸನ್ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಆ ಸಮಿತಿಯ ಅಧ್ಯಕ್ಷರಾಗಿ ಅವರು ಹೋಗಿದ್ದಾರೆ. ನಮ್ಮ ಸದಸ್ಯರುಗಳೆಲ್ಲರೂ ಕೂಡ ಹೋಗಿದ್ದಾರೆ. ಇವತ್ತು ಇವರ ಮೇಲೆ ಕೇಂದ್ರ ಸರ್ಕಾರದ ಮೇಲೆ ಪ್ರಭಾವವನ್ನು ಬೀರಿ ಈ ರಾಜ್ಯದಲ್ಲಿರತಕ್ಕಂಥ ಅತ್ಯಂತ ಬರಪರಿಸ್ಥಿತಿಯ ನೆರವಿಗೆ ಕೇಂದ್ರ ಸರ್ಕಾರ ಬರಬೇಕು ಎಂದು ಇವರು ಪ್ರಯತ್ನ ಮಾಡಿಲ್ಲವೇ ಸ್ವಾಮಿ? ನಾನು ಅವರ ಹೆಸರು ಹೇಳುವುದಕ್ಕೆ ಇಷ್ಟಪಡುವುದಿಲ್ಲ. ಬಹಳಷ್ಟು ಜವಾಬ್ದಾರಿಯುತವಾದ ಸ್ಥಾನದಲ್ಲಿರತಕ್ಕಂಥವರು ಈ ರಾಜ್ಯದ ನೆರವಿಗೆ ಬರಲಿಕ್ಕೆ ಸಂಪೂರ್ಣವಾಗಿ ವಿಫಲರಾಗಿದ್ದಾರೆ ಎನ್ನುವಂತಹ ಒಂದು ಆರೋಪವನ್ನು ನಾನು ಇಲ್ಲಿ ಮಾಡಬೇಕಾಗುತ್ತದೆ.

ಉಪಾಧ್ಯಕ್ಷರು:– ಆಯಿತು, ಸಾಕು.

ಶ್ರೀ ಎಸ್.ಪಿ. ಮುದ್ದಹನುಮೇಗೌಡ:– ಮಾನ್ಯ ಅಧ್ಯಕ್ಷರೇ, ಆಯಿತು, ಮುಗಿಸುತ್ತೇನೆ. ಇನ್ನು ಎರಡು ನಿಮಿಷ. ನಾನು ಇನ್ನೂ ಅನೇಕ ವಿಚಾರಗಳನ್ನು ಹೇಳಬೇಕೆಂದು ಇದ್ದೆ. ಆದರೆ ತಾವು ಬಹಳ ಸಲ ಬೆಲ್ ಹೊಡೆದಿದ್ದೀರಿ, ಅದ್ದರಿಂದ ನಾನು ತಮ್ಮ ತಾಳ್ಮೆಯನ್ನು ಪರೀಕ್ಷೆ ಮಾಡಲಿಕ್ಕೆ ಇಲ್ಲ. ನಮ್ಮ ಹಿರಿಯ ಸದಸ್ಯರಾದ ಮಾನ್ಯ ಸಿಂಧ್ಯಾರವರೂ ಕೂಡ ಆಗಿನಿಂದಲೂ ಟೈಮ್ ನೋಡುತ್ತಿದ್ದಾರೆ. ನನ್ನ ಕಡೆಗೂ ನೋಡುತ್ತಿದ್ದಾರೆ. ನಾನು ಹೆಚ್ಚಿಗೆ ಹೇಳುವುದಕ್ಕೆ ಹೋಗುವುದಿಲ್ಲ. ಮಾನ್ಯ ಅಧ್ಯಕ್ಷರೇ, ಎರಡೇ ಎರಡು ವಿಚಾರಗಳನ್ನು ಹೇಳಿ ನಾನು ನನ್ನ ಮಾತನ್ನು ಮುಗಿಸುತ್ತೇನೆ. ಇವತ್ತು ಯಾರು, ಯಾವ ರೀತಿ ಕೆಲಸವನ್ನು ಮಾಡಿದ್ದಾರೆ ಯಾರ್ಯ್ಯಾರದ್ದು ಎಷ್ಟೇಷ್ಟು ಎನ್ನತಕ್ಕಂಥ ವಿಚಾರಗಳನ್ನು ಅವರು ವಿರೋಧಪಕ್ಷದವರು ಹೇಳುತ್ತಾರೆ. ಸರ್ಕಾರದವರೂ ಕೂಡ ಅದಕ್ಕೆ ಸಮರ್ಥವಾಗಿ ಉತ್ತರವನ್ನು ನೀಡುತ್ತಾರೆ. ಅದು ನನ್ನ ಜವಾಬ್ದಾರಿಯಲ್ಲ. ನಾನು ಹೇಳುವುದು ಇಷ್ಟೇ. ಇವತ್ತು ಕಳೆದ ಎರಡು ವರ್ಷಗಳಿಂದ ಈ ರಾಜ್ಯಬರಗಾಲವನ್ನು ಎದುರಿಸುತ್ತಿದೆ, ಮಳೆ I am optimistic. ಮಳೆ ಬರುತ್ತದೆ, ಈ ವರ್ಷ ನಮಗೆ ಏನೂ ತೊಂದರೆಯಾಗುವುದಿಲ್ಲ, ಎನ್ನುವುದು ನನ್ನ ನಂಬಿಕೆ. ಸಧ್ಯ ಬಂದರೆ ಒಳ್ಳೆಯದು. ಅದರೂ ಇಂತಹ ಪರಿಸ್ಥಿತಿ ಆಗಾಗ್ಗೆ ಉದ್ಭವವಾಗತಕ್ಕಂಥಾದ್ದನ್ನು ನಾವು we cannot rule it out. ಇವತ್ತು ಬರದ ಪರಿಸ್ಥಿತಿ ಇರಬಹುದು, ಇಲ್ಲಾ ಅತ್ಯಂತ ಭೀಕರವಾದ ಪ್ರವಾಹಗಳು ಬರಬಹುದು. ಪ್ರಕೃತಿಯ ವಿಕೋಪದಿಂದ ಅನೇಕ ಸಲ ನಮ್ಮ ರಾಜ್ಯ ಸಂಕಷ್ಟಕ್ಕೆ ಸಿಲುಕತಕ್ಕಂಥ ಪರಿಸ್ಥಿತಿಯನ್ನು ನಾವು ವರ್ಷ ವರ್ಷ ಕೂಡ ನೋಡುತ್ತಿದ್ದೇವೆ. ಅದಕ್ಕೆ ನಾನು ಈ ಸರ್ಕಾರವನ್ನು ಪ್ರಾರ್ಥನೆ ಮಾಡತಕ್ಕಂಥಾದ್ದು, ಶಾಶ್ವತವಾದಂತಹ ಒಂದು ನಿಧಿಯನ್ನು ಈ ಒಂದು ಬರಪರಿಹಾರಕೋಸ್ಕರ ಮತ್ತೆ ಪ್ರಕೃತಿಯ ವಿಕೋಪದಲ್ಲಿ ಬರುವಂತಹ ಪರಿಸ್ಥಿತಿಯನ್ನು ಎದುರಿಸಲಿಕ್ಕೋಸ್ಕರ ಶಾಶ್ವತವಾದಂತಹ ಒಂದು ನಿಧಿಯನ್ನು ಸ್ಥಾಪನೆ ಮಾಡತಕ್ಕಂಥಾದ್ದು, ರಾಜ್ಯ ಮತ್ತು ಕೇಂದ್ರ ಸರ್ಕಾರ, ಎರಡು ಸರ್ಕಾರಗಳ ಒಂದು ಜವಾಬ್ದಾರಿ. ದಯಮಾಡಿ ಆ ಕೆಲಸವನ್ನು ಮಾಡಬೇಕು. ಯಾವುದೇ ಸಂದರ್ಭದಲ್ಲಿ ಈ ರಾಜ್ಯದ ಬಡಜನರು, ರೈತರು ಸಂಕಷ್ಟಕ್ಕೆ ಸಿಲುಕಿದಂತಹ ಸಂದರ್ಭದಲ್ಲಿ ಅಂತಹ ಸಂದರ್ಭದಲ್ಲಿ ತತಕ್ಷಣ ಅವರ ನೆರವಿಗೆ ಹೋಗತಕ್ಕಂಥ ಪರಿಸ್ಥಿತಿಗೆ ಇವತ್ತು ಶಾಶ್ವತವಾದಂತಹ ಒಂದು ನಿಧಿಯನ್ನು ಸ್ಥಾಪನೆ ಮಾಡಬೇಕು ಎನ್ನುವ ಒಂದು ಮಾತನ್ನು ಹೇಳುತ್ತಾ, ಕೊನೆಯದಾಗಿ ನಮ್ಮ ಕ್ಷೇತ್ರದಲ್ಲಿ ನಮ್ಮ ಜಿಲ್ಲೆಯಲ್ಲಿ ಸ್ವಲ್ಪ

ಮಳೆಯಾಗುತ್ತಿದೆ. ನಾನು ಮಳೆಯಾಗುತ್ತಾ ಇರುವುದಕ್ಕೆ ನಮ್ಮ ಮಾನ್ಯ ಯೋಗಿಶ್, ಭಟ್ಟರು ನಿನ್ನೆ ಕೊಟ್ಟ ಕಾರಣವನ್ನು ನಾನು ಹೇಳುವುದಕ್ಕೆ ತಯಾರಾಗಿಲ್ಲ. ನಮ್ಮಲ್ಲಿ ಎಲ್ಲಾ ಒಳ್ಳೆಯ ಜನ ಇದ್ದಾರೆ ಅದ್ದರಿಂದ ಮಳೆಯಾಗುತ್ತಿದೆ ಎಂದು ಹೇಳಿದರು. ನಾನು ಆ ಕಾರಣ ಹೇಳುಪುದಕ್ಕೆ ತಯಾರಾಗಿಲ್ಲ. ಆದರೆ ನಮ್ಮಲ್ಲಿ ಸ್ವಲ್ಪ ದಿನಗಳಿಂದ ಮಳೆ ಬೀಳುತ್ತಿದೆ. ಬಿತ್ತನೆ ಕಾರ್ಯಕ್ರಮಗಳು ಪ್ರಾರಂಭವಾಗಿದೆ. ದಯಮಾಡಿ ನಾನು ಒಂದು ಮನವಿಯನ್ನು ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ನಮ್ಮ ಜಿಲ್ಲೆಗೆ ರಿವ್ಯೂಗ್ ಬಂದಂತಹ ಸಂದರ್ಭದಲ್ಲೂ ಕೂಡ ನಾನು ಅವರ ಗಮನಕ್ಕೆ ತಂದಿದ್ದೇನೆ. ನಮ್ಮಲ್ಲಿ ಬಿತ್ತನೆ ಬೀಜಕ್ಕೆ ಸಬ್ಸಿಡಿಯನ್ನು ಎಲ್ಲಾ ತಾಲ್ಲೂಕುಗಳಲ್ಲೂ ಕೂಡ ಏಕ ರೂಪದಲ್ಲಿ ಸಬ್ಸಿಡಿಯನ್ನು ಕೊಡುತ್ತಿಲ್ಲ. ಆದ್ದರಿಂದ ನಾನು ದಯಮಾಡಿ ಸರ್ಕಾರಕ್ಕೆ ಮನವಿಯನ್ನು ಮಾಡಿಕೊಳ್ಳುತ್ತೇನೆ, ಇವತ್ತು ರಾಜ್ಯದ್ಯಾಂತ ಎಲ್ಲೆಲ್ಲಿ ಬಿತ್ತನೆಯನ್ನು ಮಾಡತಕ್ಕಂಥ ಅವಕಾಶ ಇದೆ, ಅದರಲ್ಲೂ ನಮ್ಮ ತುಮಕೂರು ಜಿಲ್ಲೆಯಲ್ಲಿ ಎಲ್ಲಾ ತಾಲ್ಲೂಕುಗಳಿಗೂ ಕೂಡ ಏಕ ರೂಪದ ಸಬ್ಸಿಡಿಯನ್ನು ದಯಮಾಡಿ ಬಿತ್ತನೆ ಬೀಜಕ್ಕೋಸ್ಕರ ಸರ್ಕಾರ ಕೊಡಬೇಕು ಎನ್ನುವಂತಹ ಮಾತನ್ನು ಹೇಳುತ್ತಾ, ಇನ್ನೂ ಅನೇಕ ವಿಚಾರಗಳನ್ನು ನಾನು ಹೇಳಬೇಕು ಎನ್ನುವಂತಹ ಮನಸ್ಸು ಇದ್ದರೂ ಕೂಡ ಸಮಯದ ಅಭಾವವಿರುವುದರಿಂದ ಈ ಒಂದು ಬರ ಮತ್ತು ಪರಿಹಾರ ಕಾರ್ಯಕ್ರಮಗಳು ಈ ಚರ್ಚೆಯಲ್ಲಿ ಭಾಗವಹಿಸುವುದಕ್ಕೆ ಅವಕಾಶವನ್ನು ಮಾಡಿಕೊಟ್ಟ ಅಧ್ಯಕ್ಷರಿಗೆ ವಂದಿಸಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

+ಶ್ರೀ ಪಿ.ಜಿ.ಆರ್. ಸಿಂಧ್ಯಾ:- (ಕನಕಪುರ) ಮಾನ್ಯ ಅಧ್ಯಕ್ಷರೇ, ನಾನು ನಿರೀಕ್ಷೆಯನ್ನು ಮಾಡಿದ್ದೆ, ಈ ಸರ್ಕಾರದವರು ಪ್ರಾರಂಭದಲ್ಲಿಯೇ ಮಾನ್ಯ ವಿರೋಧ ಪಕ್ಷದ ನಾಯಕರು ನಿಲುವಳಿ ಸೂಚನೆಯನ್ನು ಮಂಡಿಸಿದಾಗ ನಿಲುವಳಿ ಸೂಚನೆಗೆ ಒಪ್ಪಿಗೆಯನ್ನು ಕೊಡುತ್ತಾರೆಂದು. ಏಕೆಂದರೆ ಈ ಮನೆಯಲ್ಲಿ ಈ ಸದನದಲ್ಲಿ ಬೇಕಾದಷ್ಟು ಪ್ರಿಸಿಡೆಂಟ್ಸ್ ಇವೆ. ಮಹತ್ವದ ವಿಚಾರಗಳು ಬಂದಂತಹ ಸನ್ನಿವೇಶದಲ್ಲಿ ಸರ್ಕಾರ ಒಪ್ಪಿ, ಇಡೀ ರಾಜ್ಯಕ್ಕೆ 27 ಜಿಲ್ಲೆಗೆ ಕೋಟ್ಯಾಂತರ ಜನಗಳಿಗೆ ಸಂಬಂಧಪಟ್ಟ ವಿಷಯವಾಗಿರುವಾಗ ನಿಲುವಳಿ ಸೂಚನೆಗೆ ಸರ್ಕಾರ ಒಪ್ಪಿಗೆ ಕೊಟ್ಟಿದೆ ತಕ್ಕಂಥಾದ್ದು ಇದೆ. ಆದರೆ ಇದನ್ನೇ ಒಂದು ಒಣಪ್ರತಿಷ್ಠೆಯ ವಿಚಾರವನ್ನಾಗಿ ಸರ್ಕಾರದವರು ಮಾಡಿಕೊಂಡು ನಿಯಮ 60ರ ಅಡಿಯಲ್ಲಿ ಚರ್ಚೆ ಮಾಡಬೇಕೋ, ನಿಯಮ 69ರ ಅಡಿಯಲ್ಲಿ ಚರ್ಚೆ ಮಾಡಬೇಕೋ ಎನ್ನುವುದರಲ್ಲಿಯೇ ಅರ್ಧದಿನ ಕಾಲ ಹರಣವಾಯಿತು. ಕೊನೆಗೂ ಸಹ ಸರ್ಕಾರದವರು ತಮ್ಮ ಒಣ ಪ್ರತಿಷ್ಠೆಯನ್ನು ಹೆಚ್ಚು ಮಾಡಿಕೊಂಡರೇ ವಿನಹಃ ಈಗ ರಾಜ್ಯದ ಪರಿಸ್ಥಿತಿ ಏನಿದೆ ಎನ್ನತಕ್ಕಂಥಾದ್ದನ್ನು ಜನಗಳಿಗೆ ತಿಳಿಸಿಲ್ಲ. ಮಾನ್ಯ ಅಧ್ಯಕ್ಷರೇ, ಈ ಬರಗಾಲದ ಬಗ್ಗೆ ಚರ್ಚೆ ಹೇಗೆ ಆಗಿದೆ ಅಂದರೆ ಕಳೆದ 2 ವರ್ಷಗಳಲ್ಲಿ ನಾವು ಸಾಕಷ್ಟು ಸಲಹೆಗಳನ್ನು ಕೊಟ್ಟಿದ್ದೇವೆ. ಬರಗಾಲದ ಬಗ್ಗೆ ಚರ್ಚೆ 2001ರಲ್ಲಿ ಆಗಿದೆ. 2002ರಲ್ಲಿ ಆಗಿದೆ. 2003ರಲ್ಲೂ ಸಹ ಅದೇ ನಾವು ಮಾಡುತ್ತಿದ್ದೇವೆ. ನಮ್ಮ ಚರ್ಚೆಗೆ ಈ ಸರ್ಕಾರ ಏನಾದರೂ ಬೆಲೆ ಕೊಡುತ್ತದೆಯೇ ಎನ್ನತಕ್ಕಂಥ ಮಾತು ನನಗಂತೂ ಅರ್ಥವಾಗುತ್ತಿಲ್ಲ. ಇದರ ಜೊತೆಗೆ ಎಲ್ಲೋ ಒಂದು ಕಡೆ ಈ ಚರ್ಚೆಯ ದಾರಿ ತಪ್ಪಿದೆಯೋ ಏನೋ ಎಂದು ನನಗನ್ನಿಸುತ್ತಿದೆ.

ಬಹಳ ಬುದ್ಧಿವಂತರಾಗಿ ಸರ್ಕಾರದವರು ನಮ್ಮ ನಮ್ಮ ಕ್ಷೇತ್ರಗಳಲ್ಲಿ ಆಯಾ ವಿಧಾನ ಸಭಾ ಕ್ಷೇತ್ರದ ಶಾಸಕರನ್ನು ಟಾಸ್ಕಫೋರ್ಸ್ ಕಮಿಟಿಯ ಚೇರ್ಮನ್‌ಗಳನ್ನಾಗಿ ಮಾಡಿ, ನಾವೇ ಕಾಂಟ್ರಾಕ್ಟ್ ಕೊಡತಕ್ಕಂಥಾದ್ದು, ನಾವೇ ಟೇಪ್ ಹಿಡಿದುಕೊಂಡು ಅಳೆದು, ಮೆಷರ್‌ಮೆಂಟನ್ನು ತೆಗೆದುಕೊಂಡು,

---

(+ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ)

ನಾವೇ ಅಕ್ಕಿಯನ್ನು ಡಿಸ್ಟ್ರಿಬ್ಯೂಟ್ ಮಾಡಿ, ನಾವೇ ಚೆಕ್‌ಗೆ ಸೈನ್ ಮಾಡತಕ್ಕಂಥ ಕೆಲಸ ಮಾಡುತ್ತಿದ್ದೇವೆಯೋ ಏನೋ ಎಂಬ ರೀತಿಯಲ್ಲಿ, ಆ ಅರ್ಥ ಬಿಂಬಿಸುವ ರೀತಿಯಲ್ಲಿ, ಇವತ್ತು ಸಾರ್ವಜನಿಕರಿಗೆ ಅರ್ಥವಾಗುವ ರೀತಿಯಲ್ಲಿ ನಾವು ಪರಸ್ಪರ ದೋಷಾರೋಪಣೆಗಳನ್ನು ಇಲ್ಲಿ ಮಾಡಿಕೊಂಡಿದ್ದೇವೆ. ಇದರ ಜೊತೆಗೆ ಕೇಂದ್ರ ಸರ್ಕಾರದವರನ್ನು ಆಡಳಿತ ಪಕ್ಷದವರು ಬೈಯ್ಯುವುದು. ವಿರೋಧ ಪಕ್ಷದವರು ಕೇಂದ್ರ ಸರ್ಕಾರ ಇಷ್ಟೊಂದು ಕೊಟ್ಟಿದೆ, ನೀವೇನೂ ಕೊಡಲಿಲ್ಲವೆಂದು ಹೇಳತಕ್ಕಂಥಾದ್ದು. ಇದೊಂದು ದಾರಿ ತಪ್ಪಿದೆಯೇನೋ ಚರ್ಚೆ ಎನ್ನತಕ್ಕಂಥಾದ್ದು ನನ್ನ ಅಭಿಪ್ರಾಯ. ಈ ರೀತಿ ಆಗಬಾರದಾಗಿತ್ತು. ಇದನ್ನು ಯಾರು ತಪ್ಪಿಸಬಹುದಾಗಿತ್ತು. ಈ ಬರಗಾಲದ ಪರಿಸ್ಥಿತಿಯನ್ನು ನಿಭಾಯಿಸಲಿಕ್ಕೆ ಎಂದು ಮಾನ್ಯ ಗೃಹ ಸಚಿವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ಮಾಡಿದ್ದಾರೆ. ನಮ್ಮ ಮುಖ್ಯ ಮಂತ್ರಿಗಳು ಬಹಳ ಚಾಣಾಕ್ಷ ಮುಖ್ಯಮಂತ್ರಿಗಳು ಮತ್ತು ಅವರು ಬಹಳ ಬುದ್ಧಿವಂತರು. ಯಾವುದಾದರೂ ಸಂಕಷ್ಟ ಬಂದಾಗ ಜವಾಬ್ದಾರಿಯಿಂದ ಹೇಗೆ ತಪ್ಪಿಕೊಳ್ಳಬೇಕೆಂಬುದು ಬಹಳ ಚೆನ್ನಾಗಿ ಗೊತ್ತಿದೆ. ವೀರಪ್ಪನ್ ಸಂಕಷ್ಟ ಬಂತು, ಆಗ ಖರ್ಗೆಯವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿ ಮಾಡಿದರು. ಆ ಸಮಿತಿ ಇನ್ನೂ ಸ್ಥಗಿತವಾಗಿಯೇ ಇಲ್ಲ ಪ್ರೊ. ಬಿ.ಕೆ. ಚಂದ್ರಶೇಖರ್‌ರವರನ್ನು ಆ ಸಂಕಷ್ಟದ ಕಾಲದಲ್ಲಿ ಇವರ ಸ್ಪೋಕ್ಸ್‌ಮನ್ ಆಗಿ ಮಾಡಿದರು. ಸಿ.ಇ.ಟಿ. ಬಂತು, ಗ್ರಾಮೀಣ ಕೃಪಾಂಕ ಬಂತು. ಮುಂಚೆ ಕಾಗೋಡು ತಿಮ್ಮಪ್ಪನವರ ಅಧ್ಯಕ್ಷತೆಯಲ್ಲಿ ಆಯಿತು, ಖರ್ಗೆಯವರ ಅಧ್ಯಕ್ಷತೆಯಲ್ಲಿ ಆಯಿತು. ಕೊನೆಗೆ ಡಿ.ಬಿ. ಚಂದ್ರೇಗೌಡರ ಕೊರಳಿಗೆ ಹಾಕಿದರು. ಈ ರೀತಿ, ಅದು ಯಾರು ಯಾರು ಒಪ್ಪಿಕೊಂಡರೋ ಗೊತ್ತಿಲ್ಲ. ಒಟ್ಟಾರೆ ಖರ್ಗೆಯವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ಮಾಡಿದ್ದಾರೆ. ಖರ್ಗೆಯವರಾದರೂ ಸಹಿತ, ನಾನು ಅಂದುಕೊಂಡಿದ್ದೆ. ಏಕೆಂದರೆ, ಅವರು ಸದನದಲ್ಲಿ ಈ ಸಂಸದೀಯ ವ್ಯವಹಾರಗಳಲ್ಲಿ, ಚರ್ಚೆಗಳಲ್ಲಿ ಸ್ವಲ್ಪ ಸಂಪೂರ್ಣವಾಗಿ ನಂಬಿಕೆ ಇಟ್ಟುಕೊಂಡಿರುವವರು. ಸ್ಪಂದಿಸುತ್ತಾರೆ. ನಮ್ಮ ಮುಖ್ಯ ಮಂತ್ರಿಗಳಿಗೆ ಶ್ರೀಮದ್ ಗಾಂಭೀರ್ಯ. ಅವರು ಮಾತನಾಡಿದರೆ ಮುತ್ತು ಉದುರಿ ಹೋಗುತ್ತದೋ ಏನೋ. ಅನೇಕ ಸಂದರ್ಭಗಳಲ್ಲಿ ನಮಗಾದರೂ ಅನ್ನಿಸುತ್ತದೆ, ಯಾವುದೇ ಚರ್ಚೆಯಲ್ಲಿ ಅವರು ಭಾಗವಹಿಸುವುದಿಲ್ಲ. ಖರ್ಗೆಯವರಾದರೆ ಭಾಗವಹಿಸುತ್ತಾರೆ. ನಾನೇನು ನಿರೀಕ್ಷೆ ಮಾಡಿದ್ದೆ ಎಂದರೆ, ಈ ಬರಗಾಲ ಬಂದ ತಕ್ಷಣವೇ ಕೇಂದ್ರ ಸರ್ಕಾರ ಎಷ್ಟು ಹಣ ಕೊಟ್ಟಿದೆ, ಎಷ್ಟು ಆಹಾರ ಧಾನ್ಯಗಳನ್ನು ಕೊಟ್ಟಿದೆ. ರಾಜ್ಯ ಇದುವರೆಗೂ ಎಷ್ಟು ಹಣವನ್ನು ಜಿಲ್ಲಾವಾರು ಖರ್ಚು ಮಾಡಿದೆ, ಕ್ಷೇತ್ರಾವಾರು ಎಷ್ಟು ಖರ್ಚು ಮಾಡಿದೆ ಎಂಬುದನ್ನು ಹೇಳಿ, ಈಗ ಬಿಡುಗಡೆಯಾಗಿರುವಂಥದ್ದು ಇಷ್ಟು ಬಾಕಿ ಇಷ್ಟಿದೆ ಎಂದು ಹೇಳಿದಿದ್ದರೆ, ಆಗ ಈ ಚರ್ಚೆಗೆ ಇನ್ನೂ ಹೆಚ್ಚು ಅರ್ಥ ಬರುತ್ತಿತ್ತೇನೋ, ಇನ್ನೂ ಹೆಚ್ಚು ಮಹತ್ವ ಬರುತ್ತಿತ್ತೇನೋ ಎಂದು ನನಗಾದರೂ ಅನಿಸುತ್ತಿದೆ. ಈಗಲಾದರೂ ಸಹಿತ ನಾನು ಈ ಬರಗಾಲದ ವಿಚಾರದಲ್ಲಿ, ಎಲ್ಲಿ ನಾವು ಎಡವಿದ್ದೇವೆ, ಎನ್ನತಕ್ಕಂಥಾದ್ದನ್ನು ತಿದ್ದಿಕೊಂಡರೆ ಬಹುಶಃ ಈ ಸಮಸ್ಯೆಯನ್ನು ಬಗೆಹರಿಸಲಿಕ್ಕೆ ಉಪಯೋಗವಾಗುತ್ತದೆಂದು ಹೇಳಿ ಕೆಲವು ಸಲಹೆಗಳನ್ನು ಸರ್ಕಾರಕ್ಕೆ ಕೊಡಲಿಕ್ಕೆ ಬಯಸುತ್ತೇನೆ. ನಾನು ಹೆಚ್ಚು ಮಾತನಾಡಲಿಕ್ಕೆ ಹೋಗುವುದಿಲ್ಲ. ನನ್ನ ಮೊದಲನೇ ಸಲಹೆ, ಒಂದು ಶ್ವೇತ ಪತ್ರವನ್ನು ಅಂದರೆ, ಕರ್ನಾಟಕ ಸರ್ಕಾರ ಇದಕ್ಕೋಸ್ಕರ ಎಷ್ಟು ಹಣವನ್ನು ಖರ್ಚು ಮಾಡಿದ್ದೀರಿ, ಕೇಂದ್ರ ಸರ್ಕಾರದವರು ಎಷ್ಟು ಹಣವನ್ನು ಕೊಟ್ಟಿದ್ದಾರೆ. ಆಹಾರ ಧಾನ್ಯಗಳನ್ನು ಎಷ್ಟು ಕೊಟ್ಟಿದ್ದಾರೆ, ಇದರ ಬಗ್ಗೆ ಒಂದು ಆಗಬೇಕು. ಆದಾದ ಮೇಲೆ ಸುಮಾರು 15 ಸಾವಿರವೋ 12 ಸಾವಿರವೋ ಕೆಲಸಗಳನ್ನು ಮಾಡಿದ್ದೇವೆಂದು ಮಾನ್ಯ ಖರ್ಗೆಯವರು ಆಗಾಗ್ಗೆ

ಹೇಳಿಕೆಗಳನ್ನು ಕೊಡುತ್ತಾರೆ. ಅವರ ಹೇಳಿಕೆಗಳಲ್ಲಿರತಕ್ಕ ಎಲ್ಲಾ ತುಣುಕುಗಳನ್ನು ಮತ್ತೆ ಬರಗಾಲದ ಪರಿಸ್ಥಿತಿಯನ್ನು ವಿಜಯ ಕರ್ನಾಟಕ, ಸಂಯುಕ್ತ ಕರ್ನಾಟಕ ಮತ್ತು ಕನ್ನಡ ಪ್ರಭಾದಂಥ ಪತ್ರಿಕೆಗಳು ರಾಜ್ಯದ 27 ಜಿಲ್ಲೆಗಳಲ್ಲಿ ಯಾವ ಪರಿಸ್ಥಿತಿ ಇದೆ ಎಂಬುದನ್ನು ಬಹಳ ಚೆನ್ನಾಗಿ, ವಿಸ್ತೃತವಾಗಿ ಹೇಳಿದ್ದಾರೆ. ಅದನ್ನು ಸದನದಲ್ಲಿ ನಾನು ಓದುವುದರ ಬದಲಾಗಿ, ಮಾನ್ಯ ಖರ್ಗೆಯವರು ಅದನ್ನು ಒಂದು ಸಾರಿ ಓದಿದರೆ, ಅವರಿಗೆ ಉತ್ತರ ಕೊಡಲಿಕ್ಕೆ ಬಹಳ ಅನುಕೂಲವಾಗುತ್ತದೆಂದು ನಾನು ತಿಳಿದುಕೊಂಡಿದ್ದೇನೆ. ಕೇಂದ್ರ ಸರ್ಕಾರದವರು ಎಷ್ಟು ಹಣ ಬಿಡುಗಡೆ ಮಾಡಿದ್ದಾರೆ, ಇವತ್ತಿಗೂ ಸಹಿತ ನಮಗೆ ಗೊತ್ತಿಲ್ಲ. ಸರಿಯಾದ ಅಂಕಿ ಅಂಶಗಳು ಯಾರ ಹತ್ತಿರವೂ ಇಲ್ಲ. ಖರ್ಗೆಯವರು ನಿನ್ನೆ ಏನು ಹೇಳಿದರು, ಜಿಲ್ಲಾಧಿಕಾರಿಗಳ ಹತ್ತಿರ ದುಡಿದೆ 8 ಕೋಟಿ ರೂ. 7 ಕೋಟಿ ರೂ, 6 ಕೋಟಿ ರೂ. ದುಡ್ಡಿದೆ. ಇವತ್ತು ಮಾನ್ಯ ಕೋಳಿವಾಡ್‌ರವರು ಇಲ್ಲ. ಅವರು ಹೊಸದಾಗಿ ಮಂತ್ರಿಯಾಗಿದ್ದಾರೆ, ಉತ್ಸಾಹ. ಕೇಳಿದ ತಕ್ಷಣ ನಿಮಿಷಕ್ಕೊಂದು ಬೋರ್‌ವೆಲ್ ಹಾಕಿಸಿ ಕೊಡುತ್ತೇನೆಂಬ ಭಾಷಣ ಮಾಡಿದರು. ಬಹುಶಃ ಅವರಿಗೇ ಗೊತ್ತಿದೆ. ಹೊಸದಾಗಿ ಬೋರ್‌ವೆಲ್ ಹಾಕಬಾರದು ಎಂದು ಸರ್ಕಾರಿ ಆಜ್ಞೆ ಇದೆ. ಹೀಗಾಗಿ ಹೊಸದಾಗಿ ಬೋರ್‌ವೆಲ್‌ಗಳನ್ನು ಹಾಕುವ ಹಾಗೆ ಇಲ್ಲ. ಎಷ್ಟೇ ಒಳ್ಳೆಯ ಕೆಲಸ, ಯಾವುದೇ ಕ್ಷೇತ್ರದಲ್ಲಿ ಆಗಿದ್ದರೂ ಸಹಿತ ಆಳ ಮಾಡುವುದಕ್ಕೆ ಅವಕಾಶವಿದೆಯೇ ಹೊರತು, ಹೊಸ ಬೋರ್‌ವೆಲ್‌ಗಳನ್ನು ಟೌನ್ ಪ್ರದೇಶಗಳಲ್ಲಿ ಹಾಕುವುದಕ್ಕೆ ಆಗುವುದೇ ಇಲ್ಲ. ಇರತಕ್ಕ 224 ಕ್ಷೇತ್ರಗಳಲ್ಲೂ ಪಟ್ಟಣ ಪ್ರದೇಶಗಳಲ್ಲಿ ಹಾನಗಲ್ ಆದಿಯಾಗಿ ಕುಡಿಯುವ ನೀರಿಗೆ ತೀವ್ರವಾಗಿ ತೊಂದರೆ ಇರತಕ್ಕಂಥಾದ್ದು ನಮಗೆ ತಿಳಿದಿರುವ ವಿಚಾರ. ಎಷ್ಟು ಹಣ ಬೇಕು, ಇದರ ಬಗ್ಗೆ ಅಂಕಿ ಅಂಶಗಳ ವಿವರಗಳನ್ನು ತೋರಿಸುವ ಶ್ವೇತ ಪತ್ರವನ್ನು ಸರ್ಕಾರ ಮೊದಲನೆಯದಾಗಿ ಹೊರಡಿಸಬೇಕು. ಇವರು ಕೇಂದ್ರ ಸರ್ಕಾರವನ್ನು ದೂಷಣೆ ಮಾಡುತ್ತಾ ಇದ್ದಾರೆ. ಮೊದಲನೇ ಸಾರಿ ಸರ್ವ ಪಕ್ಷದವರನ್ನೂ ಡೆಲ್ಲಿಗೆ ಕರೆದುಕೊಂಡು ಹೋಗಿದ್ದರು. ಆ ಸಂದರ್ಭದಲ್ಲಿ 1,500 ಕೋಟಿ ರೂಪಾಯಿಗಳಷ್ಟು ನಮಗೆ ಪರಿಹಾರ ಕೊಡಬೇಕೆಂದು ಕೇಳಿದರು. 12 ಲಕ್ಷ ಟನ್, 13 ಲಕ್ಷ ಟನ್ ಆಹಾರಧಾನ್ಯ ನಮಗೆ ಬೇಕು ಎಂದು ಹೇಳಿದರು. ಖರ್ಗೆಯವರು ಇನ್ನೂ ಡೆಲ್ಲಿಯಲ್ಲಿಯೇ ಇದ್ದರು. ನಾನೂ ಅವರ ಪಕ್ಕದಲ್ಲಿಯೇ ಕುಳಿತಿದ್ದೆ. ಬೇರೆ ವಿಚಾರಕ್ಕೆ ನಾವೊಂದು ಡೆಲಿಗೇಷನ್ ಮಾಡಿ; ಆಂಧ್ರದವರ ಹಾವಳಿಯನ್ನು ತಪ್ಪಿಸಿಕೊಳ್ಳುವುದಕ್ಕಾಗಿ ಪ್ರಧಾನಿಯವರು, ಉಪ ಪ್ರಧಾನಿಯವರನ್ನು ಮತ್ತು ರಾಷ್ಟ್ರಪತಿಗಳನ್ನು ನೋಡುವುದಕ್ಕೆ ಹೋಗಿದ್ದೆವು. ಆ ಸಂದರ್ಭವಲ್ಲಿ ಈ ಜಿಲ್ಲಾಧಿಕಾರಿಗಳು ಏನೇನು ಹೇಳಿಕೆಗಳನ್ನು ಕೊಡುತ್ತಿದ್ದರು ಎಂಬುದನ್ನು ಅವರೇ ದೂರದರ್ಶನದಲ್ಲಿ ಓದಿದರು, ನೋಡಿದರು, ಕೇಳಿದರು. ಅಂದರೆ, ಸಮನ್ವಯ ಎಷ್ಟರಮಟ್ಟಿಗೆ ಇದೆ ಎಂಬುದನ್ನು ಯೋಚನೆ ಮಾಡಬೇಕಾಗುತ್ತದೆ. ಈಗ ಕೇಂದ್ರ ಸರ್ಕಾರದಿಂದ 1500 ಕೋಟಿ ರೂಪಾಯಿಗಳ ಪರಿಹಾರವನ್ನು ಕೇಳಿದ್ದೇವಲ್ಲಾ, ನಾನು ಹೇಳುತ್ತೇನೆ, ಇದು ಕೊಟ್ಟು ಒಂದು ವರ್ಷ ಅಯಿತು; 8 ತಿಂಗಳು ಅಯಿತು. ಇದುವರೆಗೂ ನೀವು, ಈ 8 ತಿಂಗಳಿಂದ ಏನು ನಷ್ಟ ಆಗಿದೆ, ಆ ಒಂದು 1500 ಕೋಟಿ ರೂಪಾಯಿಗಳ ಪರಿಹಾರ ಕೇಳಿರುವುದನ್ನು ಪರಿಷ್ಕರಣ ಮಾಡಿ ನೀವು ಮೊಮೋ ರ್‍ಯಾಂಡಂ ಅನ್ನು ಕೊಡುವ ಕೆಲಸ ಮಾಡಲಿಲ್ಲ. ನನಗನ್ನಿಸುತ್ತದೆ, ತೋಟಗಾರಿಕಾ ಮಂತ್ರಿಗಳು ಇಲ್ಲಿ ಇಲ್ಲ. ಸುಮಾರು 70 ಲಕ್ಷ ತೆಂಗಿನ ಮರಗಳು ಒಣಗಿ ಹೋಗಿವೆ. ಇವತ್ತು ರಾಜ್ಯದಲ್ಲಿ ಶಿವಮೊಗ್ಗ, ಚಿಕ್ಕಮಗಳೂರು, ಚಿತ್ರದುರ್ಗ ಜಿಲ್ಲೆ ಮತ್ತು ತುಮಕೂರು ಜಿಲ್ಲೆ, ಈ ತುಮಕೂರು ಜಿಲ್ಲೆಯಲ್ಲಂತೂ ವಿಶೇಷವಾಗಿ, ಅಲ್ಲಿಯ ಜನರೆಲ್ಲರೂ ಈ ತೆಂಗಿನ ಬೆಳೆಯ ಮೇಲೆಯೇ ಅವಲಂಬಿಸಿರತಕ್ಕಂಥಾದ್ದು.

ಅನಂತರ, ಬೆಂಗಳೂರು ಗ್ರಾಮಾಂತರ ಜಿಲ್ಲೆ ಮತ್ತೆ ಚಾಮರಾಜನಗರ ಜಿಲ್ಲೆಯೂ ಹೌದು. ನೀವು ಲೆಕ್ಕ ಹಾಕಿಸಿ. ಸುಮಾರು 80 ಲಕ್ಷದಿಂದ ಒಂದು ಕೋಟಿಯಷ್ಟು ತೆಂಗಿನ ಮರಗಳು, ಸುಳಿ ಸಮೇತ ಒಣಗಿ ಹೋಗಿವೆ. ಮಾನ್ಯ ಶಿವಾನಂದ ಪಾಟೀಲರು ಹೇಳುತ್ತಾ ಇದ್ದರು. ದ್ರಾಕ್ಷಿ ಬೆಳೆ ಯಾವ ರೀತಿ ಒಣಗಿ ಹೋಗಿದೆ ಎಂದು ಹೇಳಿದರು. ಇವತ್ತು ಸಂಪೂರ್ಣವಾಗಿ ತೋಟಗಾರಿಕಾ ಬೆಳೆಗಳು ನಾಶವಾಗಿವೆ. ಈ ತೋಟಗಾರಿಕಾ ಬೆಳೆಗಳು ಮತ್ತೆ ಫಲ ಬರಬೇಕಾದರೆ, ಕನಿಷ್ಟ ಪಕ್ಷ 5–10–15 ವರ್ಷ ಕಾಯಬೇಕಾಗುತ್ತದೆ. ಹಾಗಾದರೆ, ನೀವು ಅವರಿಗೆ ಪರಿಹಾರ ಕೊಡುವುದಿಲ್ಲವೇ? ಅವರಿಗೆ ಪರಿಹಾರ ಕೊಡಬೇಕಾಗುತ್ತದೆ. ರಾಜ್ಯ ಸರ್ಕಾರವೇ ಪರಿಹಾರ ಕೊಡುವುದಕ್ಕಾಗದೇ ಇರಬಹುದು. ಕೇಂದ್ರ ಸರ್ಕಾರದ ಯಾವುದಾದರೊಂದು ಹಣಕಾಸಿನ ಸಂಸ್ಥೆಯಿಂದ, ಸಾಲ ಪಡೆದು ಅವರಿಗೆ ಬಡ್ಡಿ ಇಲ್ಲದ ಹಾಗೆ ದುಡ್ಡನ್ನು ಕೊಡಬೇಕಾದರೆ, ರಾಜ್ಯ ಸರ್ಕಾರದವರು ಹೋಗಿ ಕೇಂದ್ರ ಸರ್ಕಾರಕ್ಕೆ ಹೇಳಬೇಕಾಗುತ್ತದೆ. ನನಗನಿಸುತ್ತದೆ, 5 ಸಾವಿರ ಕೋಟಿಯಷ್ಟು ರೂ ಹಣ ನಮಗೆ ಬೇಕಾಗುತ್ತದೆ. ನೀವೆಲ್ಲಿ ತಪ್ಪು ಮಾಡಿದ್ದೀರಿ ಎಂದು ಹೇಳುವುದಕ್ಕೆ ಸರ್ಕಾರದ ವೈಫಲ್ಯತೆ ಏನು? ಬರಗಾಲ ಎದುರಿಸತಕ್ಕ ವಿಚಾರದಲ್ಲಿ, ರಾಜ್ಯ ಸರ್ಕಾರ ಎಲ್ಲಿ ಎಡವಿದೆ ಎಂಬುದನ್ನು ನಾನು ಹೇಳಲಿಕ್ಕೆ ಬಯಸುತ್ತೇನೆ. ಈಗಲೂ ಸಹಿತ ನೀವು ತಿದ್ದಿಕೊಳ್ಳುವುದಕ್ಕೆ ಅವಕಾಶ ಇದೆ. ಕೇಂದ್ರ ಸರ್ಕಾರಕ್ಕೆ ನೀವು ಮನವಿ ಮಾಡಿ, ಕರ್ನಾಟಕದಲ್ಲಿ ಈ ರೀತಿ ತೋಟಗಾರಿಕಾ ಬೆಳೆಗಳು ಸಂಪೂರ್ಣವಾಗಿ ನಾಶವಾಗಿವೆ, ಇದಕ್ಕೆ ನೀವು ಪರಿಹಾರ ಕೊಡಬೇಕು, ಪರಿಹಾರ ಕೊಡಬೇಕಾದರೆ ಇಷ್ಟೊಂದು ಹಣ ಬೇಕಾಗುತ್ತದೆಂದು ಹೇಳಬೇಕು. ಒಂದು ಪಕ್ಷ ನೀವು ಪರಿಹಾರ ಕೊಡುವುದಕ್ಕಾಗುವುದಿಲ್ಲವೆಂದು ಇಟ್ಟುಕೊಳ್ಳೋಣ. ಅವರಿಗೆ ಮತ್ತೆ ಬೆಳೆಸಲಿಕ್ಕೆ ಬೇಕಾಗಿರತಕ್ಕಂಥ ಸಾಲವನ್ನು ಬಡ್ಡಿ ಇಲ್ಲದ ಹಾಗೆ ಕೊಡಬೇಕೆಂದು ಬರವಣಿಗೆಯಲ್ಲಿ ಹೇಳುವುದಕ್ಕೆ ನಿಮ್ಮ ಪೆನ್ನಿನಲ್ಲಿ ಇಂಕ್ ಇರಲಿಲ್ಲವೇ? ನಿಮ್ಮ ಫ್ಯಾಕ್ಸ್ ಕೆಲಸ ಮಾಡುತ್ತಾ ಇಲ್ಲವೇ? ಈ ಇನ್‌ಫಾರ್ಮೇಷನ್ ಟೆಕ್ನಾಲಜಿ ಸರ್ಕಾರ ಸತ್ತು ಹೋಗಿತ್ತೇ? ಕೇಂದ್ರ ಸರ್ಕಾರಕ್ಕೆ ಕೊಡುವುದಕ್ಕೇ ನಿಮಗೆ ಏನಾಗಿತ್ತು? ಇಷ್ಟು ಮಾಹಿತಿಯನ್ನು ಜಿಲ್ಲಾಧಿಕಾರಿಗಳಿಂದ ತರಿಸಿಕೊಳ್ಳುವುದಕ್ಕಾಗುವುದಿಲ್ಲವೇ. ಎ.ಸಿ. ಗಳಿಂದ ತರಿಸಿಕೊಳ್ಳುವುದಕ್ಕಾಗುವುದಿಲ್ಲವೇ. ಟಾಸ್ಕ್‌ಫೋರ್ಸ್ ಕಮಿಟಿ ಚೇರ್ಮನ್‌ಗಳು ನಾವು ಇದನ್ನು ಕೊಡುವುದಕ್ಕಾಗುತ್ತದೆಯೇ? ನೀವೆ ಹೇಳಿ. ಇದನ್ನು ಯಾರು ಕೊಡಬೇಕು? ತಹಶೀಲ್ದಾರ್ ಕಡೆಯಿಂದ, ಅಸಿಸ್ಟೆಂಟ್ ಕಮೀಷನರುಗಳ ಕಡೆಯಿಂದ, ಜಿಲ್ಲಾಧಿಕಾರಿಗಳ ಕಡೆಯಿಂದ ವರದಿಗಳನ್ನು ತೆಗೆದುಕೊಂಡು 4 ಸಾವಿರದಿಂದ 5 ಸಾವಿರ ಕೋಟಿ ರೂಪಾಯಿಗಳಷ್ಟು ತೋಟಗಾರಿಕಾ ಬೆಳೆಗಳಿಗೆ ಕರ್ನಾಟಕದಲ್ಲಿ ನಷ್ಟವಾಗಿದೆ. ಇನ್ನು 10 ರಿಂದ 15 ವರ್ಷಗಳ ಕಾಲ ಈ ಸಂಕಷ್ಟದಿಂದ ನಮ್ಮ ಜನ, ಅದು ಅಡಿಕೆ ವ್ಯಾಪಾರಸ್ಥರಿಂದ ಹಿಡಿದು, ಅಡಿಕೆ ಬೆಳೆಗಾರರವರೆಗೆ, ತೆಂಗಿನ ಬೆಳೆಗಾರರಿಂದ ಹಿಡಿದು, ತೆಂಗಿನ ಕಾಯಿ ಸುಲಿದು ಮಾರುವವರಿಂದ ಹಿಡಿದು, ತೆಂಗಿನ ಮರ ಇರತಕ್ಕ ರೈತರಿಗೂ ಸಹಿತ ಕನಿಷ್ಟ ಪಕ್ಷ 10 ರಿಂದ 15 ವರ್ಷಗಳ ಕಾಲ ಸಂಕಷ್ಟದಿಂದ ಹೊರಗೆ ಬರಲು ಕಾಲ ಹಿಡಿಯುತ್ತದೆ. ಅವರಿಗೆ ನೀವು ಪರಿಹಾರ ಕೊಡಲಿಕ್ಕೆ ಆಗಿರತಕ್ಕ ತೊಂದರೆ ಏನು? ಇದುವರೆಗೂ ಸಹಿತ ಈ ವಿಚಾರವನ್ನು ನೀವೇಕೆ ಕೇಂದ್ರ ಸರ್ಕಾರಕ್ಕೆ ಹೋಗಿ ಹೇಳಲಿಲ್ಲ. ಇದನ್ನು ನಾನು ಕೇಳುತ್ತಾ ಇರತಕ್ಕಂಥಾದ್ದು. ಮತ್ತೆ ನೀವೇನು ಹೇಳುತ್ತಿದ್ದೀರಿ. ಕೇಂದ್ರ ಸರ್ಕಾರ ನಾರಮ್ಸ್ ಹಾಕಿದ್ದಾರೆ, ಆ ನಾರಮ್ಸ್ ಪ್ರಕಾರವಾಗಿಯೇ ನಾವು ಎಲ್ಲಾ ಕೆಲಸ ಮಾಡಿಸಬೇಕಾಗುತ್ತದೆ. ಆದರಿಂದ ಅಸೆಟ್ ಕ್ರಿಯೇಟ್ ಮಾಡತಕ್ಕಂಥ ವರ್ಕನ್ನು ನಾವು ಮಾಡುವುದಕ್ಕಾಗುತ್ತಾ ಇಲ್ಲವೆಂದು ಹೇಳುತ್ತಿದ್ದಾರೆ. ಹಾಗಾದರೆ ನಾನು ಕೇಳುತ್ತೇನೆ. ನೀವು

ಕೇಂದ್ರ ಸರ್ಕಾರಕ್ಕೆ ನಾರಮ್ಸ್‌ನ್ನು ಯಾವ ರೀತಿ ಬದಲಾವಣೆ ಮಾಡಬೇಕೆಂಬ ಗೈಡ್‌ಲೈನ್ಸ್ ನೀವು ಕೇಳಿದ್ದೀರಾ ದಯವಿಟ್ಟು ಹೇಳಿ. ಮಾನ್ಯ ಮುಖ್ಯಮಂತ್ರಿಗಳು ಈವರೆಗೆ ಸದನದಲ್ಲಿ ಇರಲಿಲ್ಲ. ಅವರು ನನ್ನ ಭಾಷಣವನ್ನು ಕೇಳಿರುತ್ತಾರೆಂದು ನಾನಂದುಕೊಂಡಿದ್ದೇನೆ. ಸರ್ವ ಪಕ್ಷಗಳ ನಿಯೋಗ ಹೋಗಿ, 1500 ಕೋಟಿ ರೂಪಾಯಿಗಳ ಪರಿಹಾರ ಕೊಡಬೇಕೆಂದು ಪ್ರಧಾನಿಗಳನ್ನು, ಕೃಷಿ ಸಚಿವರನ್ನು ಭೇಟಿ ಮಾಡಿ ಮೆಮೋರ್‍ಯಾಂಡಂ ಅನ್ನು ಕೊಟ್ಟಿದ್ದೇವೆ. ಇದು ಕೊಟ್ಟಿದ್ದು ಸುಮಾರು 8 ತಿಂಗಳು ಅಥವಾ ಒಂದು ವರ್ಷದ ಹಿಂದೆ.

2000 ಮತ್ತು 2001ರ ಬರಗಾಲದಲ್ಲಿ ಆಗಿರತಕ್ಕಂಥ ಪರಿಹಾರವನ್ನು ಕೊಡಿ ಎಂದು ಹೇಳಿ. ಅದು ಎಷ್ಟು ಕೊಟ್ಟಿದ್ದಾರೆ, ಬಿಟ್ಟಿದ್ದಾರೆಂಬ ಅಂಕಿಅಂಶಗಳನ್ನು ಈ ಸದನಕ್ಕೆ ಕೊಡಬಹುದಾಗಿತ್ತು, ಅದನ್ನು ಇನ್ನು ಮುಂದಾದರೂ ಉತ್ತರ ಕೊಡುವಾಗ ಕೊಡಿ. ಆದರೆ ಈಗ ಆಗಿರತಕ್ಕಂಥ ಕಷ್ಟ ಏನಿದೆ, ಸಂಪೂರ್ಣವಾಗಿ ತೋಟಗಾರಿಕೆ ಬೆಳೆಗಳು ನಿಂತು ಹೋಗಿವೆ. ಸತ್ತು ಹೋಗಿವೆ. ಅವುಗಳನ್ನು ಬೆಳೆಯಲು ಇನ್ನು 10 ರಿಂದ 15 ವರ್ಷಗಳು ಬೇಕಾಗುತ್ತದೆ. ಅವರಿಗೆ ಪರಿಹಾರವನ್ನು ಕೊಡುವ ವಿಚಾರದಲ್ಲಿ ನಾನು ಸರಕಾರಕ್ಕೆ ಕೇಳುತ್ತಿದ್ದೇನೆ. ನಿಮಗೆ ಕೇಂದ್ರ ಸರಕಾರಕ್ಕೆ ಇದು ಬೇಕು ಎಂದು ಕೇಳುವುದಕ್ಕೆ ಏನು ತೊಂದರೆಯಾಗಿತ್ತು? ಇದು ನನಗೆ ಅರ್ಥವಾಗುತ್ತಾ ಇಲ್ಲ. ನಿಮ್ಮ ಇ-ಗವರ್ನೆನ್ಸ್ ಸರಕಾರಕ್ಕೆ ಇದು ಗೊತ್ತಾಗಲಿಲ್ಲವೋ? ಇದು ನನಗೆ ಅರ್ಥವಾಗದೆ ಇರತಕ್ಕಂಥ ವಿಚಾರ. ಆ ಮೇಲೆ ಗೈಡ್‌ಲೈನ್ಸ್ ವಿಚಾರದಲ್ಲಿ ಹೇಳುವುದಾದರೆ, ಈಗ ನಾವು ಎಲ್ಲಾ ಟಾಸ್ಕ್‌ಫೋರ್ಸ್ ಚೇರ್ಮನ್‌ಗಳು ಎಂದು ಮಾಡಿದ್ದೀರಿ. ಗೈಡ್‌ಲೈನ್ಸ್ ಕೊಟ್ಟಿದ್ದಾರೆ. ಗೈಡ್‌ಲೈನ್ಸ್‌ನ್ನು ಚೇಂಜ್ ಮಾಡಬೇಕೆಂದು ನಾವೆಲ್ಲರೂ ಹೇಳಿದ ಮೇಲೆ, ನೀವು ಗೈಡ್‌ಲೈನ್ಸ್ ಚೇಂಜ್ ಮಾಡಬೇಕೆಂದು ಹೇಳಿ, ಕೇಂದ್ರ ಸರಕಾರದವರಿಗೆ ಮೆಮೊರಂಡಮ್‌ನ್ನು ಕೊಟ್ಟಿದ್ದೀರಾ? ಕೊಟ್ಟಿದ್ದರೆ ಬಹಳ ಸಂತೋಷ ಸ್ವಾಮಿ... ಅದನ್ನು ತೋರಿಸಿ ನಮಗೆ ಹೇಳಿ. ನಾವು ಇಷ್ಟೊಂದು ಎಕ್ಸ್‌ಟ್ರಾ ಪರಿಹಾರವನ್ನು ಕೇಳಿದ್ದೇವೆ. ನಮ್ಮ ವಿರೋಪಕ್ಷದ ನಾಯಕರನ್ನು ಅಲ್ಲಿಗೆ ಕರೆದುಕೊಂಡು ಹೋಗಿದ್ದೀರೋ ಏನೋ ಗೊತ್ತಿಲ್ಲ. ನನಗೆ ಗೊತ್ತಿರುವ ಹಾಗೆ ಅವರನ್ನು ಕರೆದುಕೊಂಡು ಹೋಗಿಲ್ಲ. ಹಾಗೆ ಆ ಗೈಡ್‌ಲೈನ್ಸ್ ಚೇಂಜ್ ಮಾಡುವುದಕ್ಕೆ ನೀವೇನಾದರೂ ಲೆಟರ್‌ಗಳನ್ನೇನಾದರೂ ಕೊಟ್ಟಿದ್ದೀರಾ? ಅಡಿಶನಲ್ ಆಗಿ ದುಡ್ಡು ಕೇಳಬೇಕೆಂದು ಏನಾದರೂ ಕೇಳಿದ್ದೀರಾ? ಇದರ ಬಗ್ಗೆ ತಾವು ದಯವಿಟ್ಟು ತಿಳಿಸಬೇಕು. 12 ಲಕ್ಷ ಟನ್ ಆಹಾರ ಧಾನ್ಯವನ್ನು ಕೇಳಿದ್ದೀರಿ ಎನ್ನುವುದನ್ನು ಬಿಟ್ಟರೆ, 7 ಲಕ್ಷದಷ್ಟು ಕೊಟ್ಟಿದ್ದಾರೆ, ಇನ್ನು 5 ಲಕ್ಷಗಳಷ್ಟು ಶಾರ್ಟೇಜ್ ಇದೆ ಎನ್ನುವುದನ್ನು ಬಿಟ್ಟರೆ, ಬಾಕಿ ನೀವು ಕೊಟ್ಟಿರತಕ್ಕಂಥಾದ್ದು ಏನು? ಇದನ್ನು ನಾನು ಕೇಳುತ್ತಾ ಇದ್ದೇನೆ. ಅದಾದಮೇಲೆ ಇವೊತ್ತು ರೆಗ್ಯುಲರ್ ಆಕ್ಷನ್ ಪ್ಲಾನ್ ಏನಿದೆ ನೋಡಿ, ತಾಲ್ಲೂಕು ಪಂಚಾಯತಿಗೆ ಒಂದು ಆಕ್ಷನ್ ಪ್ಲಾನ್ ಇದೆ. ಗ್ರಾಮ ಪಂಚಾಯತಿಗೆ ಒಂದು ಆಕ್ಷನ್ ಪ್ಲಾನ್ ಇದೆ. ಎಸ್‌ಜಿಆರ್‌ಓಗೆ ಒಂದು ಆಕ್ಷನ್ ಪ್ಲಾನ್ ಇದೆ. ಈ ಬರಗಾಲಕ್ಕೆ ಕೊಟ್ಟಿರತಕ್ಕಂಥ ಆಹಾರಧಾನ್ಯಗಳನ್ನು ರೆಗ್ಯುಲರ್ ಆಕ್ಷನ್ ಪ್ಲಾನ್‌ಗೆ ನೀವು ಡೀವಿಯೇಟ್ ಮಾಡಿದ್ದೀರಿ. ಯಾಕೆಂದರೆ ನಿಮ್ಮ ಸರಕಾರದಲ್ಲಿ ದುಡ್ಡು ಇಲ್ಲ. ಸರಕಾರದಲ್ಲಿ ದುಡ್ಡು ಇಲ್ಲದಿರುವುದರಿಂದಾಗಿ, ರೆಗ್ಯುಲರ್ ಆಗಿ ರಾಜ್ಯ ಸರಕಾರದಿಂದ ನೀವು ಕೊಡಬೇಕಾಗಿರುವಂಥ ಹಣವನ್ನು ಜಿಲ್ಲಾ ಪಂಚಾಯಿತಿ ಆಕ್ಷನ್ ಪ್ಲಾನ್‌ಗೆ, ತಾಲ್ಲೂಕು ಪಂಚಾಯತಿ ಹಾಗೂ ಗ್ರಾಮ ಪಂಚಾಯತಿ, ಆಕ್ಷನ್ ಪ್ಲಾನ್‌ಗೆ ಸಹಿತ ನೀವು ಡೀವಿಯೇಟ್ ಮಾಡಿದ್ದೀರಿ. ಸಂಪೂರ್ಣವಾಗಿ ಬರಗಾಲಕ್ಕೆ ಕೊಡುತ್ತಾ ಇಲ್ಲ. ಇದಾದ ಮೇಲೆ ನೀವು ಡಿ.ಸಿ. ಗಳಿಗೆ ಕೊಟ್ಟಿರತಕ್ಕಂಥ ಗೈಡ್‌ಲೈನ್ಸ್. ಇವರು ಟಾಸ್ಕ್‌ಫೋರ್ಸ್ ಚೇರ್ಮನ್‌ಗೆ

ಹೇಳಿಬಿಟ್ಟು ಎಲ್ಲಾ ಕೆಲಸಗಳನ್ನು ಅಪ್ರೂವ್ ಮಾಡಿಲ್ಲ. ಮಾನ್ಯ ಮುದ್ದಹನುಮೇಗೌಡರು ಮಾತನಾಡುತ್ತ ಇದ್ದರು... ಕೆಲವು ಕ್ಷೇತ್ರಗಳಲ್ಲಿ ಒಳ್ಳೆಯ ಕೆಲಸವಾಗಿದೆ ಎಂಬುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಎಲ್ಲಿ ಬಹಳ ಮುತುವರ್ಜಿವಹಿಸಿ ಕೆಲಸ ಮಾಡುವ ಒಳ್ಳೆಯ ಅಧಿಕಾರಿಗಳಿದ್ದಾರೆ, ಎಲ್ಲಿ ಒಳ್ಳೆಯ ಡಿ.ಸಿ. ಗಳು ಇದ್ದಾರೆ, ಎಲ್ಲಿ ಶಾಸಕರುಗಳು ಹೆಚ್ಚು ಮುತುವರ್ಜಿ ವಹಿಸಿ ಹೆಚ್ಚಿನ ಕಾಳಜಿ ವಹಿಸಿದ್ದಾರೆ, ಅಂಥ ಕಡೆಗಳಲ್ಲಿ ಒಳ್ಳೆಯ ಕೆಲಸವಾಗಿದೆ. ಎಲ್ಲಾ ಕಳಪೆ ಕೆಲಸವಾಗಿದೆ ಎಂದು ನಾನು ಹೇಳುವುದಕ್ಕೆ ತಯಾರಾಗಿಲ್ಲ. ನಾನು ಪುನಃ ಕೇಳುತ್ತಿರತಕ್ಕಂಥಾದ್ದು, ಇವೊತ್ತು ಯಾವ ತೀವ್ರತೆಯಿಂದ ಸರಕಾರದವರು ಬರಗಾಲವನ್ನು ಎದುರಿಸಬೇಕಾಗಿತ್ತು, ಆ ತೀವ್ರತೆಯು ಸರಕಾರಕ್ಕೆ ಇಲ್ಲ. ನಿಮಗೆ ನಿಜವಾಗಿಯೂ ಸಹಿತ ಬರಗಾಲ ಕರ್ನಾಟಕದಲ್ಲಿ ಬಂದಿದೆ, ನಾವೆಲ್ಲರೂ ಇದಕ್ಕೆ ಯುದ್ಧೋಪಾದಿಯಲ್ಲಿ ಕೆಲಸ ಮಾಡಬೇಕೆಂದು ಹೇಳಿದ್ದಿದ್ದರೆ, ನಿಮ್ಮ ಮೇಲೆ ನೀವೇ ಕಡಿವಾಣವನ್ನು ಹಾಕಿಕೊಳ್ಳುತ್ತ ಇದ್ದೀರಿ. ಎಂದು ಭಾವಿಸಬಹುದಾಗಿತ್ತು. ಆದರೆ ನೀವು ಯಾವ ರೀತಿಯ ಕಡಿವಾಣ.. ಹಾಕಿಕೊಳ್ಳುತ್ತಾ ಇದ್ದೀರಾ? ಸರಕಾರದಲ್ಲಿ ಹಣವಿಲ್ಲ. ನಾನು ಮಾನ್ಯ ಧರ್ಮಸಿಂಗ್‌ರವರನ್ನು ಟೀಕೆ ಮಾಡಲು ಹೋಗುವುದಿಲ್ಲ. 3054ರಲ್ಲಿ ಎಷ್ಟೊಂದು ಬಾಕಿ ಬಿಲ್ಲ್‌ಗಳಿವೆ ಆ ಬಗ್ಗೆ ನಾನು ಮಾತನಾಡುವುದಕ್ಕೆ ಹೋಗುವುದಿಲ್ಲ. ನಬಾರ್ಡ್ ಕೆಲಸಗಳೆಲ್ಲಾ ಸ್ಥಗಿತವಾಗಿದೆ, ಅದರ ಬಗ್ಗೆ ಬಾಕಿ ಬಿಲ್‌ಗಳು ಎಷ್ಟಿವೆ, ಅದೆಲ್ಲವನ್ನೂ ನಾನು ಮಾತನಾಡಲು ಹೋಗುವುದಿಲ್ಲ. ಫೈನಾನ್ಸ್ ಡಿಮಾಂಡ್ ಬಗ್ಗೆ ಮಾತನಾಡತಕ್ಕಂಥ ಸಂದರ್ಭದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಯಾವ ರೀತಿಯಲ್ಲಿ ಅವರ ಮಾತನ್ನು ಉಳಿಸಿಕೊಳ್ಳುವುದಕ್ಕೆ ಆಗಿಲ್ಲವೆಂದು ನಾನು ಹೇಳುತ್ತೇನೆ. 1400 ಕೋಟಿ ರೂಪಾಯಿಗಳ ಗುತ್ತಿಗೆದಾರರ ಬಾಕಿ ಬಿಲ್‌ಗಳು ಮಾರ್ಚ್ ತಿಂಗಳಲ್ಲಿ ಇತ್ತು. ಪ್ರತಿ ತಿಂಗಳೂ 100 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡುತ್ತೇವೆಂದು ನಮಗೆ ಹೇಳಿದ್ದರು. ಮಾನ್ಯ ಮುಖ್ಯ ಮಂತ್ರಿಗಳು ಸಮಜಾಯಿಶಿ ಕೊಟ್ಟಿದ್ದರು. ಅದರಲ್ಲಿ ಎಷ್ಟು ಕೋಟಿ ರೂ. ಗಳನ್ನು ಇದುವರೆಗೆ ಬಿಡುಗಡೆ ಮಾಡಿದ್ದಾರೆ ಎನ್ನತಕ್ಕಂಥಾದ್ದನ್ನು ಅವರ ಸಚಿವ ಸಂಪುಟದ ಸಹೋದ್ಯೋಗಿಗಳು ಪತ್ರಿಕಾ ಹೇಳಿಕೆಗಳನ್ನು ಮಾಡಿ, ಇಷ್ಟು ಕೋಟಿ, ಅಷ್ಟು ಕೋಟಿಗಳ ಸಾಲವನ್ನು ತೆಗೆದುಕೊಂಡು ಬರುತ್ತೇವೆಂದು ಹೇಳುತ್ತಾರೆಯೇ ಹೊರತು, ಇಷ್ಟು ಹಣವನ್ನು ಬಿಡುಗಡೆ ಮಾಡಿದ್ದೇವೆಂದು ಹೇಳುವಂಥ ಸ್ಥಿತಿಯಲ್ಲಿ ಇವರು ಯಾರು ಇಲ್ಲ. ರಾಜ್ಯ ಸರಕಾರವು ಈ ಒಂದು ಹಣಕಾಸಿನ ಬಿಕ್ಕಟ್ಟನ್ನು ಎದುರಿಸಲಿಕ್ಕೆ ರಾಜ್ಯದಲ್ಲಿ ಬರಗಾಲ ಬಂದಿದೆ, ಅದಕ್ಕೋಸ್ಕರ ರಾಜ್ಯದಲ್ಲಿ ನಾವು ಹೊಸ ಕಾರುಗಳನ್ನು ತೆಗೆದುಕೊಳ್ಳುವುದಿಲ್ಲವೆಂಬ ತೀರ್ಮಾನವನ್ನು ನೀವು ಮಾಡಬಹುದಾಗಿತ್ತು. ನೀವು ಎಷ್ಟೊಂದು ಲ್ಯಾನ್ಸರ್ ಕಾರುಗಳನ್ನು ಈ ಬರಗಾಲದ ಪರಿಸ್ಥಿತಿಯಲ್ಲಿ ತೆಗೆದುಕೊಂಡಿದ್ದೀರ ಎನ್ನುವ ಲೆಕ್ಕಾಚಾರವನ್ನು ನೀವೆ ಹಾಕಿಕೊಳ್ಳಿ ನಾನು ಹೇಳುವುದಕ್ಕೆ ಹೋಗುವುದಿಲ್ಲ. ಅಧಿಕಾರಿಗಳಿಗೆ ಅವಶ್ಯವಿರುವಂಥವರಿಗೆ, ವಿಶ್ವಬ್ಯಾಂಕ್ ಸ್ಕೀಮ್‌ಗಳಿಗೆ ತೆಗೆದುಕೊಳ್ಳಲಿ ನಾವೇನೂ ಬೇಡವೆಂದು ಹೇಳುವುದಿಲ್ಲ. ನೀವು ಹೀಗೆ ಆದರ್ಶಗಳ ಬಗ್ಗೆ ಮಾತನಾಡುವವರು, ಬರಗಾಲದ ಬಗ್ಗೆ ಮಾತನಾಡತಕ್ಕಂಥವರು ಎಷ್ಟು ಜನ ಮಂತ್ರಿಗಳಿಗೆ ಹೊಸ ಕಾರುಗಳನ್ನು ಕೊಳ್ಳುವುದನ್ನು ನಿಲ್ಲಿಸಿದ್ದೀರೆಂದು ದಯಮಾಡಿ ಹೇಳಿ. ಅ ಬೋರ್ಡ್ ಕಾರ್ಪೋರೇಷನ್‌ಗಳು ಸತ್ತು ಹೋಗುತ್ತಾ ಇವೆ. ಇಲ್ಲದೇ ಇರುವ ಬೋರ್ಡಗಳಿಗೆಲ್ಲಾ ನೀವು ಡೈರೆಕ್ಟರ್‌ಗಳನ್ನು ಅಪಾಯಿಂಟ್ ಮಾಡುತ್ತಾ ಇದ್ದೀರಿ... ನಿನ್ನೆಯೂ ಸಹಿತ ಕೆಲವು ಡೈರೆಕ್ಟರ್‌ಗಳನ್ನು, ಆಫೀಸರ್‌ಗಳನ್ನು ಪೋಸ್ಟ್ ಮಾಡಿದ್ದೀರಿ. ಏನಿದರ ಅರ್ಥ? ಮಾನ್ಯ ಎಸ್.ಎಂ. ಕೃಷ್ಣರವರು ಮುಖ್ಯಮಂತ್ರಿಗಳಾಗುವುದಕ್ಕೆ ಮುಂಚೆ ಕಾಂಗ್ರೆಸ್‌ನ ಅಧ್ಯಕ್ಷರಾಗಿದ್ದರು. ಆಗ ಜೆ.ಹೆಚ್. ಪಟೇಲರವರು ಮುಖ್ಯ ಮಂತ್ರಿಗಳಾಗಿದ್ದರು. ನಮ್ಮಲ್ಲಿ ಕೆಲವು ಮಂತ್ರಿಗಳು, ನಾನೂ

ಸಹಿತ ವಿದೇಶಕ್ಕೆ ಹೋಗಿದ್ದೆವು. ಇವರು ಆಗ ರಾಮನಗರದಲ್ಲಿ ಭಾಷಣ ಮಾಡಿದರು. ಜನತಾ ಸರಕಾರದ ಮಂತ್ರಿಗಳು ಮೈ ತೀಟೆ ತೀರಿಸಿಕೊಳ್ಳುವುದಕ್ಕೆ ಎಂದು ಹೇಳಿ ವಿದೇಶಕ್ಕೆ ಹೋಗುತ್ತಾ ಇದ್ದಾರೆ ಎಂದು ಹೇಳಿದ್ದರು. ಆಗ ಇಂಥ ಬರಗಾಲವಿರಲಿಲ್ಲ. ನಮ್ಮ ಮಾನ್ಯ ಇನಾಂದಾರ್‌ರವರು ವಿದೇಶದಿಂದ ನಿನ್ನೆ ತಾನೇ ಬಂದರು. ಮಾನ್ಯ ಸಾಲಿಯಾನರವರು ನಿನ್ನೆ ತಾನೇ ಬಂದರು. ಪತ್ರಿಕೆಗಳಲ್ಲಿ ಫೋಟೋವನ್ನು ನೋಡಿದ್ದೇವೆ. ಇವರು ಏತಕ್ಕೋಸ್ಕರ ಹೋಗಿದ್ದರು, ನಿಮ್ಮ ಬಾಯಲ್ಲಿ ಯಾವ ಶಬ್ದ ಬಂತು ಅದನ್ನು ನಾನು ಈಗ ಹೇಳುವುದಕ್ಕೆ ತಯಾರಿಲ್ಲ. ಆದರೆ ನೀವೇ ಕಡಿವಾಣ ಹಾಕಿಕೊಂಡಿದ್ದಿದ್ದರೆ ಚೆನ್ನಾಗಿರುತ್ತಿತ್ತು... ನಾವು ವಿದೇಶಕ್ಕೆ ಹೋಗುವುದಿಲ್ಲ. ನಮ್ಮಲ್ಲಿ ದುಡ್ಡಿಲ್ಲ, ನಾವು ಹೊಸ ಕಾರುಗಳನ್ನು ತೆಗೆದುಕೊಳ್ಳುವುದಿಲ್ಲ, ನಾವು ನಾನ್‌ಪ್ಲಾನ್ ಎಕ್ಸ್‌ಪೆಂಡೀಚರ್ ಮಾಡುವುದಿಲ್ಲ, ಎನ್ನುವುದನ್ನು ನೀವು ಹೇಳಿಕೊಂಡಿದ್ದರೆ, ಆಗ ಬರಗಾಲದ ಪರಿಸ್ಥಿತಿಯ ತೀವ್ರತೆಯು ನಿಮಗೆ ಅರ್ಥವಾಗುತ್ತಾ ಇದೆ ಎನ್ನುವುದನ್ನು ನಾವು ಹೇಳಬಹುದಾಗಿತ್ತು. ನೀವು ಅದ್ಯಾವುದನ್ನೂ ಮಾಡಿಲ್ಲ. ಚುನಾವಣೆಗಳು ಜನವರಿ, ಫೆಬ್ರವರಿ ತಿಂಗಳಲ್ಲಿ ಆಗಬಹುದೆಂದು ಅದಕ್ಕೆ ಸಿದ್ಧತೆಗಳನ್ನು ನೀವು ನಡೆಸುತ್ತಾ ಇದ್ದೀರಿ. ಮಾನ್ಯ ಮುಖ್ಯಮಂತ್ರಿಗಳು ಬಜೆಟ್ ಭಾಷಣದಲ್ಲಿಯೇ ಹೇಳಿ ಬಿಟ್ಟರು. ಹೌದು ನಾನು ಮಾತನಾಡುವುದೇ ರಾಜಕೀಯ... ನಾನು ಮಾಡುವುದೇ ರಾಜಕೀಯ... ರಾಜಕೀಯ ಪಕ್ಷದಿಂದಲೇ ನಾನು ಗೆದ್ದು ಬಂದಿರತಕ್ಕಂಥಾದ್ದು... ನನ್ನ ಕಾರ್ಯಕ್ರಮಗಳು ರಾಜಕೀಯವಾಗಿಯೇ ಇರುತ್ತವೆ ಎನ್ನತಕ್ಕಂಥ ಯುದ್ಧದ ಘೋಷಣೆಯನ್ನು ಬಡಪಾಯಿ ನಿಶ್ಶಸ್ತ್ರರಾಗಿರತಕ್ಕಂಥ ನಮ್ಮ ಮೇಲೆ ಮಾಡಿದರು. ಇದನ್ನು ನೀವೇ ಹೇಳಿದ್ದು... ನಾನು ಹೇಳಿದ್ದಲ್ಲ... ಏನೋ ಸೃಷ್ಟಿ ಮಾಡಿಕೊಂಡು ಕಥೆ ಕಟ್ಟಿರತಕ್ಕಂಥ ವಿಚಾರವಲ್ಲ ಅದು. ಹಾಗಾದರೆ ನೀವೂ ಕೂಡ ರಾಜಕೀಯ ಮಾಡಲು ಹೊರಟಿದ್ದೀರಿ ಎನ್ನತಕ್ಕಂತಾದ್ದನ್ನು ಅನಿವಾರ್ಯವಾಗಿ ನಾನು ಹೇಳಬೇಕಾಗುತ್ತದೆ ಎಂಬ ಮಾತನ್ನು ಈ ಸಂದರ್ಭದಲ್ಲಿ ಹೇಳಲು ಬಯಸುತ್ತೇನೆ. ಈಗ ಬರಗಾಲ ಹೊಸತೇನೂ ಅಲ್ಲ. Nobody invites drought. ಯಾರು ಬರಗಾಲವನ್ನು ಇನ್‌ವೈಟ್ ಮಾಡುವುದಿಲ್ಲ. ನಿಮ್ಮ ಕಾಂಗ್ರೆಸ್ ಅಧ್ಯಕ್ಷರು ಈ ಸದನದ ಸದಸ್ಯರು ಅಲ್ಲ. ನಾನು ಹಾಗಾಗಿ ಅವರ ಹೆಸರು ಹೇಳಲು ಹೋಗುವುದಿಲ್ಲ. ನಿಮ್ಮ ಆಡಳಿತ ಪಕ್ಷದ ಅಧ್ಯಕ್ಷರು, ಈ ದೇಶದ ಪ್ರೈಮ್‌ಮಿನಿಸ್ಟ್‌ರವರು ಎಷ್ಟು ಕಡೆಗಳಲ್ಲಿ ಹೋಗಿ ಬಿಟ್ಟು ಬರಗಾಲ ಪರಿಹಾರ ಕಾಮಗಾರಿಗಳನ್ನು ನೋಡಿದ್ದಾರೆ ಎನ್ನತಕ್ಕಂಥ ಪ್ರಶ್ನೆಗಳನ್ನೆಲ್ಲಾ ಆಗಾಗ ಕೇಳುತ್ತ ಇರುತ್ತಾರೆ. ಆ ಪ್ರಶ್ನೆಯನ್ನು ನಾವು ನಿಮಗೆ ಕೇಳಬಹುದಲ್ಲವೇ? ಕೊನೆಯಲ್ಲಿ ಈ ಅಧಿವೇಶನ ಬಂತು, ಮಳೆ ಬರಲಿಲ್ಲ, ಇನ್ನೂ ಈ ವಿಚಾರದಲ್ಲಿ ತೀವ್ರತೆಯುಂಟಾಗ ಬಹುದೆನ್ನುವ ಕಾರಣದಿಂದ ಒಂದು ನಾಲ್ಕೈದು ಜನ ಮಂತ್ರಿಗಳನ್ನು ಹೋಗಿ ಅರ್ಧ ಗಂಟೆಗಳಲ್ಲಿ ಬರಗಾಲ ಪರಿಸ್ಥಿತಿಯನ್ನು ನೋಡಿಕೊಂಡು ಬರುವುದಕ್ಕೆ ಎಂದು ಕಳುಹಿಸಿದಿರಿ. ಈ ಮಧ್ಯದಲ್ಲಿ ಮಾನ್ಯ ಉಪಾಧ್ಯಕ್ಷರೇ, ಇದೇ ಒಂದು ವಿಚಾರವನ್ನು ಕೇಂದ್ರ ಸರಕಾರಕ್ಕೂ ರಾಜ್ಯ ಸರಕಾರಕ್ಕೂ ಒಂದು ರೀತಿಯಲ್ಲಿ ವ್ಯಾಜ್ಯ ಮಾಡುವ ರೀತಿಯಲ್ಲಿ ನೀವು ಮಾಡುತ್ತ ಇದ್ದೀರಿ... ಇದರ ಅವಶ್ಯಕತೆಯೇನಿದೆ? ಕೇಂದ್ರ ಸರ್ಕಾರಕ್ಕೂ ರಾಜ್ಯ ಸರಕಾರಕ್ಕೂ ವ್ಯಾಜ್ಯ ಮಾಡುವ ರೀತಿಯಲ್ಲಿ ಈ ಬರಪರಿಹಾರದ ಕೆಲಸಗಳಿಗೆ ಹಣವನ್ನು ಕೊಡಲಿಲ್ಲ, ಅಕ್ಕಿಯನ್ನು ಕೊಡಲಿಲ್ಲ, ಆಂಧ್ರಪ್ರದೇಶಕ್ಕೆ ಹೆಚ್ಚು ಕೊಟ್ಟಿದ್ದಾರೆ, ನಮಗೆ ಕೊಡಲಿಲ್ಲ ಎಂದು ಹೇಳಿದರೆ ಅದನ್ನು ಒಪ್ಪಬಹುದಾಗಿತ್ತು. ಆದರೆ ನೀವು ಇದನ್ನು ರಾಜಕೀಯಕ್ಕೆ ಬಳಸಿಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತಾ ಇದ್ದೀರಿ ಮಾನ್ಯ ಮುಖ್ಯಮಂತ್ರಿಯವರು ನೀವು ನ್ಯಾಷನಲ್ ಡೆವಲಪ್‌ಮೆಂಟ್ ಕೌನ್ಸಿಲ್ ಮೆಂಬರ್ ಆಗಿದ್ದೀರಿ.

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಯವರು):– ಎನ್‌ಡಿಸಿ ಮೀಟಿಂಗ್ ಕರೆದು ಒಂದು ವರ್ಷವಾಯಿತು.

ಶ್ರೀ ಪಿ.ಜಿ.ಆರ್. ಸಿಂಧ್ಯ:-- ಅಯಿತು, ಎನ್‌ಡಿಸಿ ಮೀಟಿಂಗ್ ಕರೆದು ಒಂದು ವರ್ಷವಾಯಿತು ಎನ್ನುವುದಾದರೆ, ಅದನ್ನು ನೀವು ಇಲ್ಲಿ ಹೇಳುವುದರ ಬದಲಾಗಿ ಪ್ರಧಾನ ಮಂತ್ರಿಗಳಿಗೆ ಪತ್ರವನ್ನು ಬರೆದು ಪ್ರತಿಭಟನೆಯನ್ನು ಮಾಡಬೇಕಾಗಿತ್ತು.

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಯವರು):– ಕೇಂದ್ರ ಸರಕಾರವು ಇನ್ನೂ ಅಬ್‌ಜೆಕ್ಟಿವ್ ಆಗಿ ಇನ್ನೂ ಇಂಪಾರ್ಶಿಯಲ್ ಆಗಿ, ಅವರು ಈ ಕಾಳು ವಿತರಣೆಯ ವಿಚಾರದಲ್ಲಿ ಒಂದು ನಿಲುವನ್ನು ತೆಗೆದುಕೊಳ್ಳಬೇಕೆಂದು ಹೇಳಿ, ಬೆಂಗಳೂರಿನಿಂದ ನಾನು ಹೇಳದೆ ಇನ್ನೆಲ್ಲಿಂದ ಹೇಳಲಿ?

ಶ್ರೀ ಪಿ.ಜಿ.ಆರ್. ಸಿಂಧ್ಯ:– ನಾನು ತಾವುಗಳು ಎಲ್ಲಿಂದ ಹೇಳಬೇಕೆಂದು ಬಯಸುತ್ತೇನೆ ಎಂದರೆ, ನಮ್ಮ ಮುಖ್ಯಮಂತ್ರಿಗಳು ಎನ್‌ಡಿಸಿ ಮೀಟಿಂಗ್‌ನಲ್ಲಿ ಇದನ್ನು ಹೇಳಬೇಕು. ಅಲ್ಲಿ ನೀವು ಪ್ರೊಟೆಸ್ಟ್ ಮಾಡಿ ಆಚೆ ಬರಬೇಕು. ಅದನ್ನು ಬಿಟ್ಟು ಮೀಟಿಂಗ್ ಆಗಿ ಒಂದು ವರ್ಷವಾಯಿತು ಎಂದು ಈಗ ಹೇಳುವುದರ ಬದಲಾಗಿ, ಎನ್‌ಡಿಸಿ ಮೀಟಿಂಗ್‌ನ್ನು ಕರೆಯಲಿಲ್ಲವೆಂದು ನೀವು ಏಕೆ ಹೇಳಲಿಲ್ಲ?

ಶ್ರೀ ಎಸ್.ಎಂ. ಕೃಷ್ಣ (ಮುಖ್ಯ ಮಂತ್ರಿಯವರು):– ನಮ್ಮ ಮತ್ತು ಕೇಂದ್ರ ಸರಕಾರದವರ ಬಾಂಧವ್ಯ ಬಹಳ ಮಾಧುರ್ಯವಾಗಿದೆ. ಆದುದರಿಂದ ನಾನು ಅದನ್ನು ಕೆದುಕುವುದಕ್ಕೆ ಪ್ರಯತ್ನ ಮಾಡುವುದಿಲ್ಲ. ಹಾಗೆಯೇ ಕಾಲು ಕರೆದುಕೊಂಡು ನಾನು ನಿಂತಿಲ್ಲ. ಅದರೆ ಎಲ್ಲಿ ನಮಗೆ ತೊಂದರೆಯಾಗಿದೆ, ಅಲ್ಲಿ ಕೇಂದ್ರ ಸರಕಾರದ ಗಮನವನ್ನು ಆಗಿಂದಾಗೆ ಸೆಳೆಯುತ್ತಾ ಇರುತ್ತೇನೆ. ಅಂಥಾದ್ದೊಂದು ವ್ಯವಹಾರ ಇದು.

ಶ್ರೀ ಪಿ.ಜಿ.ಆರ್. ಸಿಂಧ್ಯ:– ಸ್ವಾಮಿ ನಾನು ಹೇಳತಕ್ಕಂಥಾದ್ದು ಏನೆಂದರೆ, ನಿಮ್ಮ ಸಹೋದ್ಯೋಗಿಗಳ ಮತ್ತು ನಿಮ್ಮ ಹೇಳಿಕೆಗಳೇನಿವೆ, ಅವುಗಳು ಪ್ರಚೋದನಕಾರಿಯಾಗಿರತಕ್ಕಂಥ ಭಾಷಣಗಳಾಗಿವೆ. ಹಾಗೆಂದು ಹೇಳಿ ನಾನು ಕೇಂದ್ರ ಸರಕಾರದವರು ಮಾಡಿದ್ದೆಲ್ಲ ಸರಿ, ಎಂದು ಹೇಳಲು ನಾನು ಕೇಂದ್ರ ಸರಕಾರದ ಏಜೆಂಟ್ ಅಲ್ಲ. ಅವರ ಪರವಾಗಿ ವಾದ ಮಾಡಲು ಆ ಪಾರ್ಟಿಗೆ ಸೇರಿರತಕ್ಕಂತವನೂ ಅಲ್ಲ. ಆದರೆ ನಾನು ಹೇಳಬಯಸುವುದೇನೆಂದರೆ, ನೀವು ಮುಖ್ಯಮಂತ್ರಿಗಳಾಗಿರತಕ್ಕಂಥ ಸಂದರ್ಭದಲ್ಲಿ being a congress Chief Minister, non NDA Chief Minister, you should have written to the Prime Minister, ತಾವು ಹೇಳಬೇಕಾಗಿತ್ತು. ಆಂಧ್ರ ಪ್ರದೇಶಕ್ಕೆ ಈ ತರಹ 45 ಲಕ್ಷ ಟನ್‌ಗಳಷ್ಟು ಕೊಟ್ಟಿದ್ದಾರೆ, ನಮಗೆ ಏಳೇ ಲಕ್ಷಗಳಷ್ಟು ಕೊಟ್ಟಿರತಕ್ಕಂತಾದ್ದು, ನಾವೇನು ಮಲತಾಯಿ ಮಕ್ಕಳೇ ಎಂದು ಕೇಳುವ ಧೈರ್ಯವನ್ನು ನೀವು ಏಕೆ ತೋರಿಸಲಿಲ್ಲ?

4.30 ಪಿಎಂ

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಸಚಿವರು):– ಅಧ್ಯಕ್ಷರೇ ನಾನು ಸಂಪುಟ ಸಭೆಯ ಉಪಸಮಿತಿ ಸದಸ್ಯರು ಸುಮಾರು ಮೂನಾಲ್ಕು ಸಲ ಹೋಗಿದ್ದೆವು. ಉಪ ಪ್ರಧಾನಿಯಿಂದ ಹಿಡಿದು ಯೋಜನಾ ಆಯೋಗದ ಉಪಾಧ್ಯಕ್ಷರು, ಕೃಷಿ ಸಚಿವರು, ಆಹಾರ ಸಚಿವರು, ಗ್ರಾಮೀಣಾಭಿವೃದ್ಧಿ ಸಚಿವರು ಇವರನ್ನೆಲ್ಲಾ ನಾನೂ ಘೋರ್ಪಡೆಯವರು ಶ್ರೀಮಾನ್ ಕೋಳಿವಾಡ್ ರವರು, ಎಚ್.ಕೆ ಪಾಟೀಲರು ಮತ್ತು ಕೌಜಲಗಿಯವರು, ಮಹದೇವ್‌ರವರು ಎಲ್ಲಾ ಸೇರಿ ಅನೇಕ

ಸಲ ಭೇಟಿಯಾಗಿ ನಾವು ಏನು ಬೇಡಿಕೊಂಡಿದ್ದೇವೆ ಮತ್ತು ನಿಮ್ಮ guidelines ಏನಿದೆ ಅದರಲ್ಲೂ ನೀವು ಪರಿವರ್ತನೆ ಮಾಡಬೇಕು ಎಂದು ಯಾವುದು? ಈ BPL Families ಏನಿವೆ 22 ಲಕ್ಷ ಅವರು count ಮಾಡಿರುವುದು ಅದರಲ್ಲಿ 11 ಲಕ್ಷ ಮಾತ್ರ, ಅದರಲ್ಲೂ ಮನೆಗೆ ಒಬ್ಬರು ಮಾತ್ರ, ಅದರಲ್ಲೂ ತಿಂಗಳಲ್ಲಿ ಅವರಿಗೆ 10 ದಿವಸ ಮಾತ್ರ ಆಹಾರಧಾನ್ಯ ಒದಗಿಸಿಕೊಡತಕ್ಕಂತಹ guidelines ಅವರದ್ದು. ನಾವು ಹೋಗಿ ಅದನ್ನು ವಾದ ಮಾಡಿ ಮುಖ್ಯಮಂತ್ರಿಗಳೂ ಇದ್ದರು, ನಾವೆಲ್ಲಾ ಸೇರಿ 33 ಲಕ್ಷ BPL Families ಏನಿವೆ ಅದನ್ನು ಲೆಕ್ಕಕ್ಕೆ ತೆಗೆದುಕೊಂಡು ಕನಿಷ್ಟ ಅದನ್ನಾದರೂ ನೀವು consider ಮಾಡಿ ಎಂದು ಕೇಳಿದೆವು. ಒಂದು ಸಲ ಅಲ್ಲ ಎರಡು ಮೂರು ಸಲ ಹೋಗಿದ್ದೇವೆ. ಈಗೇನು ಪ್ರತಿಯೊಂದು ಅಲ್ಲಿ ಹೇಳಿದ್ದನ್ನು ಹೊರಗಡೆ ಹೇಳಿ, ತಾವೇ ಹೇಳಿದಿರಿ, ಯುದ್ಧಕ್ಕೆ ನಿಂತಿರಿ, ಕಚ್ಚಾಡುತ್ತೀರಿ ಎಂದು ಅದು ಕಚ್ಚಾಟ ಇದೆ ಎಂದು ಯಾರಿಗೂ ಗೊತ್ತಾಗಬಾರದು, ಆದರೆ ಅವರಿಗೆ ಮಾತ್ರ effective ಆಗಿ ಹೇಳಬೇಕು ಎಂದು ಮೂರು ಸಲ ಹೇಳಿದ್ದೇವೆ. ಆದರೆ ಅದರ ಪರಿಣಾಮ ಆಗಲಿಲ್ಲ. ಬಹುಶಃ ಮುಂದಿನ ಸಲ ತಮ್ಮನ್ನೂ ಕರೆದುಕೊಂಡು ಹೋದ ಮೇಲೇನಾದರೂ ಪರಿಣಾಮ ಬೀರಬಹುದೇನೋ; ಖಂಡಿತವಾಗಿ ಆ sub committee ಹೋಗುವಾಗ ನಾನು ಕರೆದುಕೊಂಡು ಹೋಗುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ:- ಮಾನ್ಯ ಖರ್ಗೆಯವರು ಕರೆದಾಗಲೆಲ್ಲಾ ನಾನು ದೆಹಲಿಗೆ ಹೋಗಿದ್ದೇನೆ. ಸರ್ಕಾರದ ಕೆಲಸಕ್ಕೆ ಎಂದು ಮುಖ್ಯಮಂತ್ರಿಗಳು 24 ಗಂಟೆ ಮುಂಚೆ ನೋಟಿಸ್ ಕೊಟ್ಟರೂ ನಾವು ಹೋಗಿದ್ದೇವೆ. ನಾವು ಬರುತ್ತೇವೆ, ನಮ್ಮ ತಕರಾರೇನೂ ಇಲ್ಲ. ಆದರೆ ಮಾನ್ಯ ಮುಖ್ಯಮಂತ್ರಿಗಳು ಎಲ್ಲಿ ಎಡವಿದ್ದಾರೆ ಎಂಬುದನ್ನು ನಾನು ಹೇಳಲು ಬಯಸುತ್ತಿದ್ದೇನೆ. ಏಕೆಂದರೆ ನಾನು ಮಾನ್ಯ ಖರ್ಗೆಯವರನ್ನು ಹಾಗೂ ಮಾನ್ಯ ಶ್ರೀಕಂಠಯ್ಯನವರನ್ನು ಟೀಕೆ ಮಾಡಲು ಹೋಗುವುದಿಲ್ಲ. Captain of the team has to lead the team, he should not be a player, ಆದರಿಲ್ಲೇನಾಗಿದೆ ಅಂದರೆ ನೀವೇ captain, ನೀವೇ players ಹೇಗೆ ಎಂದು ಹೇಳುತ್ತೇನೆ ಉಪಾಧ್ಯಕ್ಷರೇ.

ಶ್ರೀ ಮಲ್ಲಿಕಾರ್ಜುನ ಖರ್ಗೆ:- ಮುಖ್ಯಮಂತ್ರಿಗಳ ಜೊತೆಯಲ್ಲಿ ಎರಡು ಸಲ ಹೋಗಿದ್ದೆವು. ಅದಾದ ಮೇಲೆ ತಿರುಗಿ ನಾವು ಹೋಗಿದ್ದೆವು. Memorandum ಕೊಡುವುದಕ್ಕೆ ಎಲ್ಲಾ ವಿರೋಧ ಪಕ್ಷದವರ ಜೊತೆಯಲ್ಲಿ ಒಂದು ಸಲ ಹೋದೆವು. ಇನ್ನೊಂದು ಸಾರಿ ನಾವು ಅವರನ್ನು ಕರೆದುಕೊಂಡು ಹೋಗಿ ಅದ್ವಾನಿಯವರನ್ನು ಭೇಟಿ ಮಾಡಿದೆವು. ಮೊನ್ನೆ ಕೂಡ ಸರ್ವ ಪಕ್ಷದ ಸಭೆ ಆದ ಮೇಲೆ ನಿಮ್ಮ ಎದುರಿಗೇ ಮಾನ್ಯ ಮುಖ್ಯಮಂತ್ರಿಗಳು, ನಾನೂ ಹಾಗೂ ಮಾನ್ಯ ಅನಂತಕುಮಾರರೂ ಬಂದಿದ್ದರು, ಹೋದೆವು, ಅವರ ಎದುರಿಗೇನೇ ಪುನಃ ನಮ್ಮ ವಾದ ಮಂಡಿಸಿದೆವು, ನಮಗೆ ಎಷ್ಟು ಸಿಗಬೇಕಾಗಿತ್ತೋ ಅಷ್ಟು ಆಹಾರಧಾನ್ಯ ಸಿಕ್ಕಲಿಲ್ಲ. ದುಡ್ಡಂತೂ ಬರಲಿಲ್ಲ, ಕನಿಷ್ಟ ಆಹಾರಧಾನ್ಯವಾದರೂ ನೀವು ಕೊಡಿ ಎಂದು ಪುನಃ ಅವರಿಗೆ ಕೇಳಿಕೊಂಡೆವು. ಆದರೆ ನಮಗೆ ಸಿಕ್ಕಿದ್ದು ಏನೆಂದರೆ ನಾವು ಕೇಳಿದ್ದು ಮೂರಿದ್ದರೆ ಐವತ್ತು ಸಾವಿರ!

ಶ್ರೀ ಜಗದೀಶ ಶೆಟ್ಟರ್ (ವಿರೋಧ ಪಕ್ಷದ ನಾಯಕರು):- ನೀವು ಕೇಳಿದ್ದು 11 ಲಕ್ಷ ಮೆಟ್ರಿಕ್ ಟನ್, ಅದರಲ್ಲಿ 7 ಲಕ್ಷ ಈಗಾಗಲೇ ಬಂದಿದೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ:- ಸ್ವಲ್ಪ ತಾವು ಅರ್ಥ ಮಾಡಿಕೊಳ್ಳಿ, ಮೊದಲು ಕೇಳಿದ 11 ಲಕ್ಷದ ಜೊತೆಗೆ ಮತ್ತೆ ಮೊನ್ನೆ ಮೂರು ಲಕ್ಷ ಕೇಳಿದೆವು.

ಶ್ರೀ ಜಗದೀಶ ಶೆಟ್ಟರ್:– ಅಂದರೆ ಒಟ್ಟು 14 ಆಯಿತಲ್ಲಾ ಸುಮ್ಮನೆ ಆಂಧ್ರದ ಜೊತೆ comparison ಮಾಡಿಕೊಂಡು, ಅಲ್ಲಿ 40 ಲಕ್ಷ ಕೊಟ್ಟಿದ್ದಾರೆ ಅಂದರೆ ಹೇಗೆ ನೀವು ಕೇಳಿದ್ದೇ 14 ಲಕ್ಷ.

ಶ್ರೀ ಮಲ್ಲಿಕಾರ್ಜುನ ಖರ್ಗೆ:– ಸ್ವಲ್ಪ ಕೇಳಿ, ನಾವು ಕೇಳಿದ್ದು 1580 ಕೋಟಿ, ರೂ. ಕೊಟ್ಟಿದೆಷ್ಟು 200 ಕೋಟಿ ರೂ ಇದು ಹೇಳಿ ಮೊದಲು.

ಶ್ರೀ ಜಗದೀಶ ಶೆಟ್ಟರ್:– ಹಾಗಾದರೆ ಅವರು ಎಷ್ಟು ಕೇಳಿದ್ದರು ಅದನ್ನು ಹೇಳಿ. ಆ ಅಂಕಿ ಸಂಖ್ಯೆನೂ ಬೇಕಾಗುತ್ತದೆ. ಸುಮ್ಮನೆ comparison ಮಾಡಿಕೊಂಡು ಹೋದರೆ ಹೇಗೆ, ಆಂಧ್ರ ಪ್ರದೇಶದವರು ಎಷ್ಟು ಕೇಳಿದರು. ಅವರಿಗಿಷ್ಟು ಕೊಟ್ಟರು ಅನ್ನುವುದು. ಆ ಸಂಖ್ಯೆನೂ ಬೇಕಾಗುತ್ತದೆ. ಆ ಮೇಲೆ ನಿವೇಷ್ಟು ಕೇಳಿದಿರಿ ನಿಮಗೆ ಎಷ್ಟು ಕೊಟ್ಟರು ಅದು ಬೇಕಾಗುತ್ತದೆ. ನಿಮಗೆ ಕೊಟ್ಟಿದ್ದನ್ನೇ ಖರ್ಚು ಮಾಡಲು ನಿಮಗೆ ಆಗುತ್ತಿಲ್ಲ.

ಶ್ರೀ ಮಲ್ಲಿಕಾರ್ಜುನ ಖರ್ಗೆ:– ಆಂಧ್ರದವರು ಎಷ್ಟು ಕೇಳಿದ್ದರು. I am not bothered. ಅವರು ಕೇಳಿದ್ದು 54 ಲಕ್ಷ ರೂ. 46 ರೂ. ಹೇಗೆ ಕೊಟ್ಟರು?

ಶ್ರೀ ಜಗದೀಶ ಶೆಟ್ಟರ್:– ಸುಮ್ಮನೆ ತಾರತಮ್ಯ ಎಂದು ಹೇಳುವುದು ಸರಿಯಿಲ್ಲ. ನಿಮಗೆಷ್ಟು ಕೊಟ್ಟಿದ್ದಾರೋ ಅದನ್ನು ಉಪಯೋಗ ಮಾಡದಿರುವುದು ಒಂದು ಕಾರಣ.

ಶ್ರೀ ಮಲ್ಲಿಕಾರ್ಜುನ ಖರ್ಗೆ:– ತಾರತಮ್ಯ ಮಾಡಿದ್ದಾರೆ ಎಂದು ಅಲ್ಲೇ ಹೇಳಿದ್ದೇವೆ. ಪದೇ ಪದೇ ಅದನ್ನು ಹೇಳುವುದು... ನಾನು ಮೊದಲೇ ಹೇಳಿದ್ದೇನೆ, ನಾವು ಕಾಲು ಕೆದರಿ ಜಗಳ ಮಾಡುವವರು ಅಲ್ಲ, ಅಥವಾ ಬೇರೆಯವರಿಗೆ ಕೊಡಬೇಡಿ ಎಂದು ನಾವು ಹೇಳುವುದಿಲ್ಲ, ನಮಗೆ ಮಾತ್ರ ನ್ಯಾಯ ಒದಗಿಸಿಕೊಡಿ ಎಂದು ಕೇಳುತ್ತೇವೆ ಎಂದು ಒಂದು ಸಲ ಅಲ್ಲ ಹತ್ತು ಸಲ ಇಲ್ಲೇ ಹೇಳಿದ್ದೇವೆ, ನಿಮಗೂ ಕೂಡ ಹೇಳಿದ್ದೇವೆ. ಆದರೆ ಪದೇ ಪದೇ ನೀವೇ defend ಮಾಡಿಕೊಳ್ಳುತ್ತೀರಿ?

ಶ್ರೀ ಜಗದೀಶ ಶೆಟ್ಟರ್:– ನೀವು ಪದೇಪದೇ ಆಪಾದನೆ ಮಾಡುತ್ತಿದ್ದರೆ ನಾವು ಆ ರೀತಿ ಹೇಳಬೇಕಾಗುತ್ತದೆ. ಇಲ್ಲಿ ನಿಮಗೆ ಕೆಲಸ ಮಾಡಲು ಆಗುವುದಿಲ್ಲ, ಬಂದಿದ್ದ foodgrains ನೀವು lift ಮಾಡಲು ಆಗುವುದಿಲ್ಲ, ಅದನ್ನು use ಮಾಡಲು ಆಗುವುದಿಲ್ಲ, ಪದೇಪದೇ ಹೇಳುವುದು.

ಶ್ರೀ ಮಲ್ಲಿಕಾರ್ಜುನ ಖರ್ಗೆ:– ನೀವು ನಿಮ್ಮ ತಾಲ್ಲೂಕಿನ task force chairman ಇದ್ದೀರಿ ಹೇಳಿ ನೀವು use ಮಾಡಿಲ್ಲವಾ?

ಶ್ರೀ ಜಗದೀಶ ಶೆಟ್ಟರ್:– ಎಷ್ಟು ಬಂದಿದೆ ಎಷ್ಟು ಆಗಿಲ್ಲ ಎಂಬ ಬಗ್ಗೆ ಒಂದು ಶ್ವೇತ ಪತ್ರ ಹೊರಡಿಸಿರಿ, ಇಲ್ಲೀವರೆಗೂ ಎಷ್ಟು ಖರ್ಚು ಮಾಡಿದ್ದೀರಿ ಎಂದು ಶ್ವೇತ ಪತ್ರ ಹೊರಡಿಸಿ. ರಾಜ್ಯದಿಂದ ಎಷ್ಟು ಕೊಟ್ಟಿದ್ದೀರಿ; ಅದನ್ನೂ ತೋರಿಸಿ, ಅವಾಗ ಗೊತ್ತಾಗುತ್ತದೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ:– ಅದಕ್ಕೇ ಸಿಂಧ್ಯಾಜಿ ಹೇಳಬೇಕಾಗಿತ್ತು ಎಂದು ಹೇಳಿದಾಗ ನಾನು ಹೇಳಿದೆ ಮಾನ್ಯ ಮುಖ್ಯಮಂತ್ರಿಗಳು ನನಗೆ ಸವಿಸ್ತಾರವಾಗಿ ಒಂದು ಹೇಳಿಕೆ ಮಾಡಿ, ಆಮೇಲೆ ಬೇಕಾದರೆ ಅವರು ಚರ್ಚೆಗೆ ತೆಗೆದುಕೊಳ್ಳಲಿ ಎಂದು ಹೇಳಿದ್ದರು. ನಾನು ರಾತ್ರಿ ಬೆಳಿಗ್ಗೆ ಕೂತು ಒಂದು ಹೇಳಿಕೆ ತಯಾರು ಮಾಡಿದ ಮೇಲೆ ಹೇಳುತ್ತೇನೆ ಎಂದು ಇಲ್ಲಿಗೆ ಬಂದಾಗ ತಾವೇನು ಹೇಳಿದಿರಿ? ಹೇಳಿಕೆ ಮಾಡುವುದು ಬೇಡ, ಬರೇ resolution ಬೇಕಾದರೆ ಮಾಡಿ ಅಂದಿರಿ 1972ರಲ್ಲಿ ಹಾಗೆ ಮಾಡಿತ್ತು. ಹಾಗೇ ಮಾಡಿ ಅಂದಿರಿ ನಿಮ್ಮ ಮಾತು ಕೇಳಿ ಅದು ಮಾಡಿದರೆ ಅದು ತಪ್ಪು ನಾನು ಹೇಳಿಕೆ ಕೊಡುತ್ತೇನೆ ಅಂದರೆ ಬೇಡ ಅನ್ನುವುದು, ಈಗ ಉತ್ತರ ಕೊಡುವಾಗ ಕೊಡಬೇಕಲ್ಲಾ.

ಅದಕ್ಕೇ ಸುಮ್ಮನೆ ರೇಗಬೇಡಿ ವಸ್ತುಸ್ಥಿತಿ ಒಪ್ಪಿಕೊಳ್ಳಿ, ರಾಜಕೀಯ ಒತ್ತಡವೋ ಅಥವಾ ಅವರ ಹೆಚ್ಚಿನ ಪ್ರಭಾವವೋ ಅಥವಾ ಬೇರೆ ಕಾರಣವೋ ನನಗೆ ಗೊತ್ತಿಲ್ಲ, ನಮಗಿಂತ ಹೆಚ್ಚಿನ ಅವಕಾಶ ಅವರಿಗೆ ಕೊಟ್ಟಿದ್ದಾರೆ. Even Tamilnadu ಗೂ ಕೂಡ ಕೊಟ್ಟಿದ್ದಾರೆ, ಅವರಿಗೂ 11 ಲಕ್ಷ, ತಮಗೆ ಗೊತ್ತಿದೆ ಗುಜರಾತಿನಲ್ಲಿ ಅಂತಹ ಭೀಕರ ಬರಗಾಲ ಪರಿಸ್ಥಿತಿ ಇರಲಿಲ್ಲ ಅವರಿಗೂ ಕೊಟ್ಟಿದ್ದಾರೆ. ಆ ಲೆಕ್ಕದಲ್ಲಿ ನಮ್ಮ ಅಕ್ಕಪಕ್ಕದ ರಾಜ್ಯಗಳನ್ನು ಹೇಗೆ ನೋಡಿ ನಮ್ಮನ್ನು ಯಾವ ರೀತಿ ನೋಡಿದ್ದಾರೆ ಎಂದು ಇದು ಅನ್ಯಾಯ ಎಂದು ಹೇಳಿದ್ದೆವೆಯೇ ವಿನಾಃ ಅವರನ್ನೇನೂ ನಾವು ಟೀಕೆ ಮಾಡುತ್ತಾ ಇಲ್ಲ. ನಮಗೆ ನ್ಯಾಯ ಕೊಡಿ ಎಂದು ಕೇಳುತ್ತಿದ್ದೇವೆ.

ಶ್ರೀ ಎಸ್.ಎಸ್. ಪಾಟೀಲ್:– ಅಧ್ಯಕ್ಷರೇ, ಇಬ್ಬರೂ ಎರಡು ಕಡೆಯಿಂದ ಗುದ್ದಾಡಿದಿರಿ, ಈ ರಾಜ್ಯದ ಜನತೆಗೋಸ್ಕರ ಹಿಂದೆ ಮಾನ್ಯ ದೇವೇಗೌಡರು ಈ ರಾಜ್ಯದ ಮುಖ್ಯಮಂತ್ರಿಯಾಗಿದ್ದಾಗ ಮೊದಲನೇ ಸಲ ನಾವು ಬಡ್ಡಿ ಮನ್ನಾ ಮಾಡಿದೆವು. ಅಲ್ಲಿ Sri P.V. Narasimha Rao ರವರ ಸರ್ಕಾರ ಇತ್ತು. ಬಡ್ಡಿ ಮನ್ನಾ ಮಾಡಿದರೆ ನಿಮಗೆ ಸಾಲ ಕೊಡುವುದಿಲ್ಲ ಎಂದು ತಡೆಹಿಡಿದಿದ್ದರು. ನಬಾರ್ಡಿನಿಂದ ನಮಗೆ ಸಾಲ ಕೊಡದಂತೆ ನಿಲ್ಲಿಸಿಬಿಟ್ಟರು. ಆಗ ಸ್ವತಃ ಮಾನ್ಯ ದೇವೇಗೌಡರು ಪತ್ರ ಬರೆದು ಒಂದು ವೇಳೆ ಇನ್ನು 8 ದಿವಸದಲ್ಲಿ ನೀವು ರಿಲೀಸ್ ಮಾಡದಿದ್ದರೆ ನಿಮ್ಮ ಮನೆ ಮುಂದೆ ಬಂದು ಉಪವಾಸ ಸತ್ಯಾಗ್ರಹ ಮಾಡುತ್ತೇನೆ ಎಂದು ಬರೆದರು. ಆ ರೀತಿ ನೀವು ತಯಾರಾಗಬೇಕಾಗುತ್ತದೆ. ಆಮೇಲೆ ನಿಮಗೂ ರಾಜ್ಯದ ಹಿತ ಹೆಚ್ಚಳವೂ? ಆಂಧ್ರಕ್ಕೆ 40 ಲಕ್ಷ ಟನ್ ಕೊಟ್ಟರೆ ಇಲ್ಲಿ ಯಾಕೆ ಸುಮ್ಮನೆ ಕೂತಿರಿ ಶೆಟ್ಟರೇ? ಇಬ್ಬರು ನಾಯಕರು ಪ್ರಧಾನಮಂತ್ರಿಗಳ ಮನೆ ಮುಂದೆ ಉಪವಾಸ ಕೂರಿ. ಅನ್ಯಾಯವಾಗಿದೆ ಎಂದು ಹೀಗೆ ಗುದ್ದಾಡುವುದು, ಎದ್ದು ಹೋಗುವುದು, ಇಬ್ಬರದ್ದೂ ತಪ್ಪಿದೆ, ಇಬ್ಬರೂ ಹೋಗಿ ಕೂತು ಏನಾದರೂ ಮಾಡಿ ತೆಗೆದುಕೊಂಡು ಬನ್ನಿ. ಸುಮ್ಮನೆ ಗುದ್ದಾಡುತ್ತೀರಿ. ಜನ ಅಲ್ಲಿ ಸಾಯುತ್ತಾ ಇದ್ದಾರೆ. ಕೆಲಸ ಚಾಲೂ ಇಲ್ಲ. ಇಬ್ಬರೂ ಹೋಗಿ ಉಪವಾಸ ಕೂರಿರಿ ಅಲ್ಲಿ, ಆಡಳಿತ ಪಕ್ಷದ ನಾಯಕರು, ವಿರೋಧ ಪಕ್ಷದ ನಾಯಕರು ಇಬ್ಬರು ಕೂಡಿ ಉಪವಾಸ ಕೂರಿ.

ಶ್ರೀ ಸಿ.ಆರ್. ಸಗೀರ್ ಅಹಮದ್ (ವಸತಿ ಸಚಿವರು):– ಅಧ್ಯಕ್ಷರೇ, ಮಾನ್ಯ ದೇವೇಗೌಡರು ಮಾಡುತ್ತಿರುವ ಸತ್ಯಾಗ್ರಹದ photo ಇವತ್ತು ಪೇಪರ್‌ನಲ್ಲಿ ಬಂದಿದೆಯಲ್ಲಾ.

ಶ್ರೀ ಆರಗ ಜ್ಞಾನೇಂದ್ರ:– ನಾವು ನಮ್ಮ ತಾಲ್ಲೂಕಿಗೆ 10 ಕೋಟಿ ರೂ. ಬೇಕು ಎಂದು ಕಳುಹಿಸಿದ್ದೇವೆ. ನೀವು ಕೊಟ್ಟಿದ್ದೀರಾ? ನೀವು ಕೊಟ್ಟಿದೆಷ್ಟು 5 ಲಕ್ಷ ರೂ. 10 ಲಕ್ಷ ರೂ ನಮ್ಮ ತಾಲ್ಲೂಕುಗಳಿಗೆ ಬೇಕಾದಷ್ಟು ನೀವು ಕೊಡಲಿಲ್ಲ.

ಶ್ರೀ ಎಸ್.ಎಸ್. ಪಾಟೀಲ್:– ಇಬ್ಬರೂ ಹೋಗಿ ಪ್ರಧಾನಮಂತ್ರಿಗಳ ಮನೆ ಮುಂದೆ ಕೂತು ತೆಗೆದುಕೊಂಡು ಬನ್ನಿ. ಕೈಲಿ ಆಗದಿದ್ದರೆ ಅಧಿಕಾರ ಬಿಟ್ಟು ಹೋಗಿ:–

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಗಳು):– ಮಾನ್ಯ ಉಪಾಧ್ಯಕ್ಷರೇ, ಈ ಸದನದ ಒಟ್ಟಾರೆ ಅಭಿಪ್ರಾಯ ಶ್ರೀ ಎಸ್.ಎಸ್. ಪಾಟೀಲರು ಹೇಳುವುದು ಆಗಿದ್ದರೆ ನಾನು ರೆಡಿ ಆಗಿದ್ದೇನೆ.

ಶ್ರೀ ಎಸ್.ಎಸ್. ಪಾಟೀಲ್:– ನಾನೂ ರೆಡಿ ಇದ್ದೇನೆ.

ಶ್ರೀ ಜಗದೀಶ ಶೆಟ್ಟರ್:– ಪಾಟೀಲರೇ, ಎಲ್ಲರೂ ಕೂಡ ಹೋಗಬೇಕಾಗುತ್ತದೆ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್:– ಮಾನ್ಯ ಅಧ್ಯಕ್ಷರೇ, ಎಲ್ಲರೂ ಕೂಡಿ ಹೋಗಿ ಬೇಕಾಗುತ್ತದೆ.

(ಗೊಂದಲ)

ಶ್ರೀ ಎಸ್.ಎಸ್. ಪಾಟೀಲ್:- ನಡೆಯಿರಿ ಹೋಗೋಣ. ನಾಳೇನೇ ಬನ್ನಿ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್:- ಕೇಂದ್ರದ ಮೇಲೆ ಏನು ಒತ್ತಡ ತಂದು ಇನ್ನೂ ಹೆಚ್ಚಿಗೆ ಕೇಳಬೇಕಾಗಿದ್ದರೆ ನಾವೂ ಕೇಳಿದ್ದೇವೆ.

ಶ್ರೀ ಆರಗ ಜ್ಞಾನೇಂದ್ರ:- ರಾಜ್ಯ ಸರ್ಕಾರ ಅದರ ಖಜಾನೆಯಿಂದ ಎಷ್ಟು ಬಿಡುಗಡೆಯಾಗಿದೆ ಎಂದು ಕೇಳೋಣ.

(ಗೊಂದಲ)

ಶ್ರೀ ಎಸ್.ಎಸ್. ಪಾಟೀಲ್:- ಜನರು ಸಾಯುತ್ತಿದ್ದಾರೆ. ಸುಮ್ಮನೆ ಇಲ್ಲಿ ಚರ್ಚೆ ಮಾಡಿದರೆ ಏನು ಬಂತು? ಅವರು ಟೀಕೆ ಮಾಡುವುದು, ಇವರೂ ಟೀಕೆ ಮಾಡುವುದು, ಜನರಿಗೆ ಅದರಿಂದ ಏನಾಯಿತು?

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:- ಮಾನ್ಯ ಅಧ್ಯಕ್ಷರೇ, ಬಹಳ ಮುಖ್ಯವಾದುದು ಕೇಂದ್ರ ಸರ್ಕಾರ ಕೊಡುವಂಥದ್ದನ್ನು ಕೊಟ್ಟಿದೆ. ರಾಜ್ಯ ಸರ್ಕಾರ ತನ್ನ ಖಜಾನೆಯಿಂದ ತಾನೇನು ಖರ್ಚು ಮಾಡಿದೆ ಎಂದು ಹೇಳಬೇಕಲ್ಲಾ. ಅದನ್ನು ಮುಚ್ಚಿಡುವುದು. ಅದನ್ನು ಮುಚ್ಚಿಟ್ಟು ತಾನೇನು ಮಾಡಿದೆ ಎಂದು ಹೇಳದೆ ಬೇರೆಯವರು ಕೊಡಲಿಲ್ಲ, ನಮಗೆ ನ್ಯಾಯ ಕೊಡಬೇಕು, ಆಗಾಗ್ಗೆ ಹೇಳುತ್ತಿದ್ದೇನೆ ಎಂದು ಕಾಲು ಕೆರೆದು ಪ್ರಯತ್ನ ಮಾಡಿದರೆ ಇನ್ನೇನಾಗುತ್ತದೆ? ರಾಜ್ಯ ಜನತೆಗೆ ನ್ಯಾಯ ಕೊಡುವುದು ರಾಜ್ಯ ಸರ್ಕಾರದ ಜವಾಬ್ದಾರಿ. ಅದಕ್ಕೆ ಅವರು ಕೊಟ್ಟಿದ್ದೇ ತೆಗೆದುಕೊಳ್ಳಲಿ. ಇನ್ನೂ ಬೇಕಾದ್ದರ ಬಗ್ಗೆ ಎಲ್ಲರೂ ಕೂಡಿ ಪ್ರಯತ್ನವನ್ನು ಮಾಡೋಣ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಗೃಹ ಸಚಿವರು):- ನಾವೇನು ಕೊಟ್ಟಿದ್ದೇವೆಂದು ಉತ್ತರ ಕೊಡುವಾಗ ಹೇಳುತ್ತೇವೆ. ಮಧ್ಯದಲ್ಲಿಯೇ ಹೇಳುವುದಕ್ಕಾಗುತ್ತದೆಯೇ?

ಶ್ರೀ ಆರಗ ಜ್ಞಾನೇಂದ್ರ:- ಇಲ್ಲಿ ಬರಗಾಲ ಬಂದಿತ್ತಲ್ಲಾ, ಎಷ್ಟು ಬಿಡುಗಡೆಯಾಗಿತ್ತು ಎನ್ನುವುದನ್ನು ಸದನದ ಎದುರುಗಡೆ ಹೇಳಲಿ.

(ಗೊಂದಲ)

ಶ್ರೀ ಕರಿಯಣ್ಣ:_ 1977ರದ್ದನ್ನು ಚರ್ಚೆ ಮಾಡುತ್ತೀರೋ ಇವತ್ತಿನದ್ದನ್ನು ಚರ್ಚೆ ಮಾಡುತ್ತೀರೋ ಎನ್ನುವುದನ್ನು ಹೇಳಿ.

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:- ಬರಗಾಲ ಪರಿಹಾರನಿಧಿಗೆಂದು ಶಾಸಕರ ನಿಧಿಯನ್ನು ತೆಗದುಕೊಳ್ಳುತ್ತಾರೆ. ಶಾಸಕರ ನಿಧಿಯದ್ದನ್ನು ನಾವು ಕೊಟ್ಟಿದ್ದೇವೆ. ಇವರ ಖಜಾನೆ ಖಾಲಿಯಾಗಿದೆ. ಸರ್ಕಾರ ದಿವಾಳಿ ಎದ್ದು ಹೋಗಿದೆ. ಬೋರ್ಡ್ ಒಂದು ತಿರುಗಿಸಿ ಹಾಕುವುದು ಬಾಕಿ ಇದೆ.

(ಗೊಂದಲ)

ಶ್ರೀ ಎಸ್.ಎಂ. ಕೃಷ್ಣ (ಮುಖ್ಯ ಮಂತ್ರಿಗಳು):- ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಎಸ್.ಎಸ್. ಪಾಟೀಲರೇನೊ ಬಹಳ ಗಂಭೀರವಾದ ವಿಚಾರ ಪ್ರಸ್ತಾಪ ಮಾಡುತ್ತಿದ್ದಾರೆ. ಅವರಿಗೆ ಅವಕಾಶ ಕೊಡಿ.

ಶ್ರೀ ಆರಗ ಜ್ಞಾನೇಂದ್ರ:– ಮಾನ್ಯ ಉಪಾಧ್ಯಕ್ಷರೇ, ಅವರ ಕಾಲದಲ್ಲಿ ಬಡ್ಡಿ ಮನ್ನಾ ಮಾಡಿ ನಮ್ಮ ಪ್ರೈಮರಿ ಸೊಸೈಟಿಗಳೆಲ್ಲಾ ಹರಾಜಾಗಿ ಹೋದವು. ಆಗ ಮುಂಡಮೋಚಿಕೊಂಡು ಹೋದವು. ಯಾವ ತರಹದ ಬಡ್ಡಿ ಮನ್ನಾ ಎಂಬುದು ನಮಗೆ ಗೊತ್ತಿಲ್ಲವೇನು ಸ್ವಾಮಿ?

ಶ್ರೀ ಎಸ್.ಎಸ್. ಪಾಟೀಲ್:– ನಮ್ಮ ಸರ್ಕಾರ ಇದ್ದಾಗ ಎರಡು ವರ್ಷ ಬರ ಬಂದರೂ ಕೂಡ ಕಾಂಗ್ರೆಸ್ ಸರ್ಕಾರವೂ ಇತ್ತು, ಇವರ ಸರ್ಕಾರವೂ ಇತ್ತು. ಮಾನ್ಯ ವಾಜಪೇಯಿಯವರಿಗೆ ಹೋಗಿ ನಾನೇ ಅರ್ಜಿಯನ್ನು ಕೊಟ್ಟೆ. ಆಗಿನ ಮುಖ್ಯಮಂತ್ರಿಗಳಾದ ಜೆ.ಹೆಚ್. ಪಟೇಲರು ಕೊಡಿಸಿದರು. 50 ಕೋಟಿ ರೂ. ಕೊಡಿ ಎಂದು ಕೇಳಿದೆವು. Mr. Patil ಎಂಬ ಪ್ರಶ್ನೆಯನ್ನು ಕೇಳಿದರು ನನಗೆ ವಾಜಪೇಯಿಯವರು. ಹಣವನ್ನು ಬಿಡುಗಡೆ ಏಕೆ ಮಾಡುತ್ತಿದ್ದಾರೆಂದರೆ ಈ ರಾಷ್ಟ್ರದ ರೈತ ದುಡಿದು 50 ವರ್ಷಕ್ರಾಂತಿ ಮಾಡಿ ಖಜಾನೆಯನ್ನು ತುಂಬಿದ್ದಾನೆ. ಗೋಡೌನ್‌ನಲ್ಲಿ ಇಡುವುದಕ್ಕೆ ಜಾಗ ಇಲ್ಲ, ಅದಕ್ಕೆ ಕೊಡುವುದಕ್ಕೆ ಹತ್ತಿದ್ದೀರಿ. ಕೊಡಿ ಅದನ್ನು ಏಕೆ ತಡೆಯುತ್ತೀರಿ?

(ಗೊಂದಲ)

ಶ್ರೀ ಮಲ್ಲಿಕಾರ್ಜುನ ಖರ್ಗೆ:– ನೀವು ನಾಲ್ಕೈದು ವರ್ಷಕ್ಕೇ ಡ್ಯಾಮ್ ಕಟ್ಟಿ ರೈತರಿಗೆ ನೀರು ಕೊಟ್ಟಿದ್ದು.

(ಗೊಂದಲ)

ಶ್ರೀ ಆರಗ ಜ್ಞಾನೇಂದ್ರ:– ಕೊಂಡುಕೊಂಡು ಗೋಡೌನನ್ನು ತುಂಬಿದರಲ್ಲಾ ಏಳು ವರ್ಷಕ್ಕಾಗುವಷ್ಟು. ಆ ತಾಕತ್ತನ್ನು ಹೇಳಿ. ಪ್ರಥಮ ಬಾರಿಗೆ ನಮ್ಮ ಸರ್ಕಾರ ಮಾಡಿದೆ.

(ಗೊಂದಲ)

ಶ್ರೀ ಪಿ.ಜಿ.ಆರ್. ಸಿಂಧ್ಯಾ:– ಮಾನ್ಯ ಉಪಾಧ್ಯಕ್ಷರೇ, ಸಭೆ ಮಧ್ಯಾಹ್ನ ಒಂದೂವರೆ ಗಂಟೆಗೆ ಊಟದ ವಿಶ್ರಾಂತಿಗೋಸ್ಕರವೆಂದು ಹೇಳಿ ಅಡ್ಜರ್ನ್ ಮಾಡಿದಿರಿ. ಎರಡೂವರೆ ಗಂಟೆಗೆ ಮತ್ತೆ ಸೇರುವುದು ಎಂದು ಹೇಳಿದಿರಿ. ನಾನು ಎರಡೂವರೆ ಗಂಟೆಗೆಂದು ಹೇಳಿ ಇಲ್ಲಿ ಬಂದು ಕುಳಿತುಕೊಂಡೆ. ಮೂರು ಗಂಟೆ ಐದು ನಿಮಿಷದವರೆಗೂ ಕೋರಂ ಇರಲಿಲ್ಲ. ಈಗ ನಾನು ಮಾತನಾಡುತ್ತಿದ್ದಾರ ಏನೂ ಎಸ್.ಎಸ್. ಪಾಟೀಲರು, ಹಿರಿಯ ಸದಸ್ಯರು, ಮಾತನಾಡಲಿ ಎಂದು ಸ್ವಲ್ಪ ಯೀಲ್ಡ್ ಆಗಿದ್ದೇನೆ. ದಯವಿಟ್ಟು ಈ ಬರಗಾಲದ ವಿಚಾರದಲ್ಲಿ ಮಾತನಾಡತಕ್ಕಂಥದ್ದು ಏನು ಗಾಂಭೀರ್ಯತೆ ಇರಬೇಕು, ಆ ಗಾಂಭೀರ್ಯತೆ ಸರ್ಕಾರಕ್ಕೆ ಇಲ್ಲ ಎನ್ನತಕ್ಕ ಮಾತನ್ನು ನಾನು ಹೇಳುತ್ತಿದ್ದೇನೆ. ದಯಮಾಡಿ ಇದು ಬಿಜೆಪಿ, ಕಾಂಗ್ರೆಸ್ ಜಗಳ ಆಗುವುದು ಬೇಕಾಗಿಲ್ಲ ಸ್ವಾಮಿ. ಇವರು ಕೂಗಾಡಿ ಬಿಟ್ಟರೆ ನಾನೇನೂ ಹೆದರುವುದಿಲ್ಲ. ನಾನು ನೇರವಾಗಿ ಮುಖ್ಯಮಂತ್ರಿಗಳು ಜವಾಬ್ದಾರಿಯಲ್ಲಿ ಎಲ್ಲಿ ಎಡವಿದ್ದಾರೆ, ಎಲ್ಲಿ ಇವರು ಸರಿಯಾದ ದಾರಿಗೆ ಹೋಗಬಹುದು, ಎನ್ನತಕ್ಕಂಥದ್ದನ್ನು ಸಲಹೆ ಮಾಡುವುದಕ್ಕೆ ಎದ್ದು ನಿಂತುಕೊಂಡಿದ್ದೇನೆ. ಈಗ ಅದೇ ಆಂಧ್ರದ ಮುಖ್ಯಮಂತ್ರಿಗಳು 'ಜನ್ಮಭೂಮಿ' ಎನ್ನತಕ್ಕ ಕಾರ್ಯಕ್ರಮವನ್ನು ತೆಗೆದುಕೊಂಡರು. ಇವತ್ತು ತಾವು ಇ–ಗೌರ್ನನೆನ್ಸ್ ಸರ್ಕಾರವನ್ನು ನಡೆಸತಕ್ಕಂಥವರು. ಮಾಧ್ಯಮಗಳಲ್ಲಿ ತಮ್ಮನ್ನೆಲ್ಲಾ ರಾಷ್ಟ್ರದ ನಂ. 1 ಮುಖ್ಯಮಂತ್ರಿ ಎಂದು ಹೇಳಿಬಿಟ್ಟು ಎಲ್ಲಾ ಕಡೆಗಳಲ್ಲೂ ಸಹಿತ ಹೇಳುತ್ತಾರೆ. ಕರ್ನಾಟಕದ ಹೊರಗಡೆ ಹೋದಾಗ ನಮಗೂ ಸ್ವಲ್ಪ ಜನ ಏನಪ್ಪ ನಿಮ್ಮವರು ನಂ. 1 ಮುಖ್ಯ ಮಂತ್ರಿ ಎಂದು ಹೇಳಿ ಹೇಳುತ್ತಾರೆ. ನಾವು ಇಲ್ಲ ಎಂದು ಅನ್ನುವ ಹಾಗಿಲ್ಲ ನೋಡಿ ಹೊರಗಡೆ ಹೋದಾಗ. ಆದ್ದರಿಂದ ನಾವೂ ಸಹಿತ ಹೌದು, ಹೌದು. ಎಸ್.ಎಂ. ಕೃಷ್ಣರವರ ಸರ್ಕಾರ ಎನ್ನುವ ಮಟ್ಟಕ್ಕೆ ಬಂದು ಬಿಟ್ಟಿದೆ. ಅಷ್ಟೊಂದು ಮಾಧ್ಯಮಗಳಲ್ಲಿ

ನಿಮ್ಮನ್ನು ಬಿಂಬಿಸಿದ್ದಾರೆ. ನಾವು ಯಾವಾಗ ಕರ್ನಾಟಕ ರಾಜ್ಯದ ಜನ ನಿಮ್ಮನ್ನು ಮುಖ್ಯಮಂತ್ರಿಗಳು ನಂ. 1 ಎಂದು ಹೇಳಬಹುದಾಗಿತ್ತೆಂದರೆ 'ಜನ್ಮಭೂಮಿ' ಕಾರ್ಯಕ್ರಮವನ್ನು ಆಂಧ್ರ ಪ್ರದೇಶದ ಮುಖ್ಯಮಂತ್ರಿಗಳು ತೆಗೆದುಕೊಂಡರು. ಕಳೆದ ಎರಡು ವರ್ಷಗಳಲ್ಲಿ ಆಂಧ್ರ ಪ್ರದೇಶದಲ್ಲಿ ಅಲ್ಲಿರತಕ್ಕ ಸರ್ಕಾರಿ ನೌಕರರು, ಅಲ್ಲಿರತಕ್ಕ ಸಂಘ–ಸಂಸ್ಥೆಗಳು, ಅವರನ್ನೆಲ್ಲಾ ಹೇಗೆ ಇನ್‌ವಾಲ್ವ್ ಮಾಡಿ ಕೆಲಸ ಮಾಡಿಸಿದ್ದಾರೆ ಎನ್ನತಕ್ಕಂಥದ್ದನ್ನು ನೀವು ಹೋಗಿ ನೋಡಿಕೊಂಡು ಬನ್ನಿ. ಇಲ್ಲದಿದ್ದರೆ ನಿಮ್ಮ ಅಧಿಕಾರಿಗಳನ್ನು ಕಳುಹಿಸಿ ಒಂದು ರಿಪೋರ್ಟನ್ನು ದಯಮಾಡಿ ತರಿಸಿಕೊಳ್ಳಿ. ತರಿಸಿಕೊಂಡಾಗ ಏನಾಗಿರುವುದು ಎಂದು ಹೇಳಿದರೆ ಈ ಏಳು ಲಕ್ಷ ಟನ್ ಆಹಾರಧಾನ್ಯ ಬಂದಿದೆಯಲ್ಲಾ, ಇದರ ಮೂರು ಪಟ್ಟು ಕೆಲಸಗಳನ್ನು, ಮೂರು ಪಟ್ಟಷ್ಟು ಹೆಚ್ಚಿಗೆ ಕೆಲಸಗಳನ್ನು ಮಾಡಿಸಬಹುದಾಗಿತ್ತು. ಈಗ ಕೆಲವು ಕ್ಷೇತ್ರಗಳಲ್ಲಿ ಎಂಎಲ್‌ಎಗಳನ್ನು ಟಾಸ್ಕ್‌ಫೋರ್ಸ್ ಛೇರ್ಮನ್‌ಗಳನ್ನಾಗಿ ಮಾಡಿ ಅದೊಂದು ಒಳ್ಳೆಯ ಕೆಲಸ ಮಾಡಿದ್ದೀರಿ ನೀವು. ನಾನು ಅದನ್ನು ಸ್ವಾಗತ ಮಾಡುತ್ತೇನೆ. ಏಕೆಂದರೆ ನಮ್ಮ ಮಾನ್ಯ ಬಚ್ಚೇಗೌಡರಿಗೆ ಅದು ಗೊತ್ತಿದೆ. ಮಾನ್ಯ ದೇವರಾಜ ಅರಸ್‌ರವರು ಮುಖ್ಯ ಮಂತ್ರಿಗಳಾಗಿದ್ದಾಗ ಲ್ಯಾಂಡ್ ಟ್ರಿಬ್ಯೂನಲ್‌ಗೆ ವಿರೋಧ ಪಕ್ಷದವರನ್ನು ಮೆಂಬರ್ಸ್ ಎಂದು ಮಾಡಿರಲಿಲ್ಲ. ಆ ಸರ್ಕಾರದಲ್ಲಿ ತಾವು ಮಂತ್ರಿಗಳಾಗಿದ್ದೀರಿ. ಇಲ್ಲಿ ಧರಣಿ ಮಾಡಿದರು ಮಾನ್ಯ ದೇವೇಗೌಡರಾದಿಯಾಗಿ, ಹೆಚ್.ಟಿ. ಕೃಷ್ಣಪ್ಪನವರಾದಿಯಾಗಿ. ನಮಗೆ ಲ್ಯಾಂಡ್ ಟ್ರಿಬ್ಯೂನಲ್ಸ್ ಮೆಂಬರ್‌ಷಿಪ್ ಕೊಡಿ ಎಂದು ಹೇಳಿ. ನೀವು ಬಹಳ ಬುದ್ಧಿವಂತಿಕೆಯಿಂದ ಟಾಸ್ಕ್‌ಫೋರ್ಸ್ ಛೇರ್ಮನ್ ಎಂದು ಹೇಳಿ ನಮ್ಮಗಳನ್ನು ಮಾಡಿದ್ದೀರಿ. ಎಲ್ಲಿ ನೀವು ಎಡವಿದ್ದೀರಿ ಎಂದರೆ as a Captain of the team, as a Chief Minister ನೀವು ಎಷ್ಟರ ಮಟ್ಟಿಗೆ ಇನ್‌ವಾಲ್ವ್ ಆಗಿದ್ದೀರಿ ಎನ್ನುವುದನ್ನು ನೀವೇ ಯೋಚನೆ ಮಾಡಿ. ಇಲ್ಲಿ ಇದನ್ನು ರೈಸ್ ಮಾಡಬೇಕಾಗಿತ್ತು, ಇಲ್ಲಿ ಪತ್ರಿಕೆಗಳಲ್ಲಿ ಇಲ್ಲ ಅಲ್ಲ ನೀವು ಹೇಳತಕ್ಕಂಥದ್ದು. ನ್ಯಾಷನಲ್ ಡೆವಲಪ್‌ಮೆಮಟ್ ಕೌನ್ಸಿಲ್ ಮೀಟಿಂಗನ್ನು ಮಾಡದಿದ್ದರೆ ಪ್ರೊಟೆಸ್ಟ್ ಮಾಡಬೇಕಾಗಿತ್ತು. ಏಕೆ ಕರೆದಿಲ್ಲವೆಂದು ಹೇಳಿ. ಆಂಧ್ರದವರಿಗೆ ಇಷ್ಟು ಕೊಟ್ಟಿದ್ದೀರಿ. ಸೆಂಟ್ರಲ್–ಸ್ಟೇಟ್ ರಿಲೇಷನ್‌ಷಿಪ್ ಬಗ್ಗೆ ನೀವು ಕ್ವೊಶ್ಚನ್ ಮಾಡಬೇಕು. ಆ ವಿಚಾರವನ್ನು ನಾನು ಹೇಳುವುದಕ್ಕೆ ಹೊರಟಿರತಕ್ಕಂಥದ್ದು. ಇಲ್ಲಿ ನಮಗೆ ಬಿಜೆಪಿ ಸರ್ಕಾರ ಅನ್ಯಾಯ ಮಾಡಿದ್ದರೆ ಅದನ್ನು ಪ್ರೊಟೆಸ್ಟ್ ಮಾಡುವುದಕ್ಕೆ ಒಂದು ಫೋರಂ ಇದೆ. ಆ ಫೋರಂನಲ್ಲಿ ನೀವು ಪ್ರೊಟೆಸ್ಟ್ ಮಾಡಬೇಕಾಗಿತ್ತು ಅಥವಾ ಸರ್ಕಾರದಿಂದಲೇ ನೀವು ಸುಪ್ರೀಂ ಕೋರ್ಟಿಗೆ ಹೋಗಬೇಕಾಗಿತ್ತು. ಈ ರೀತಿ ಕರ್ನಾಟಕ ರಾಜ್ಯಕ್ಕೆ ಅನ್ಯಾಯ ಮಾಡುತ್ತಿದ್ದಾರೆಂದು ಹೇಳಿ. "ಸರ್ಕಾರಿಯಾ ಕಮೀಷನ್"ನಲ್ಲಿ ಹೇಳಿರತಕ್ಕಂಥ ವಿಚಾರಗಳನ್ನು ಅನುಷ್ಠಾನಕ್ಕೆ ತರುತ್ತೇವೆಂದು ಹೇಳಿ ಇದೇ ಪ್ರಧಾನಿಗಳು ಅನೇಕ ಸಂದರ್ಭಗಳಲ್ಲಿ ಅವರು ವಿರೋಧ ಪಕ್ಷದಲ್ಲಿದ್ದಾಗ ಹೇಳಿದಂಥ ವಿಚಾರಗಳು ತಮಗೆ ಗೊತ್ತಿರುವಂಥ ವಿಚಾರವೇ. ಇದನ್ನು ನೀವು ದೊಡ್ಡ ಡಿಬೇಟ್‌ನ್ನಾಗಿ ಮಾಡಬಹುದಾಗಿತ್ತು ಇಡೀ ರಾಷ್ಟ್ರದಲ್ಲಿ. ಒಂದು ಕಡೆ ಏಳು ಲಕ್ಷ ಟನ್ ಆಹಾರ ಧಾನ್ಯಗಳನ್ನು ಉಪಯೋಗಿಸಿಕೊಂಡು ಹಳ್ಳಿಗಳಲ್ಲಿ ಸರಿಯಾದ ರೀತಿಯಲ್ಲಿ ಕೆಲಸಗಳನ್ನು ಮಾಡಿಸಿದ್ದಿದ್ದರೆ ಈ ರೀತಿಯಾಗುತ್ತಿರಲಿಲ್ಲ. ಈಗ 'ಕಾಯಕ ಕೆರೆ' ಎನ್ನತಕ್ಕ ಕಾರ್ಯಕ್ರಮ. ಅದು ಬಹಳ ಒಳ್ಳೆಯ ಕಾರ್ಯಕ್ರಮ. ಅದನ್ನು ನಾವು ಮೆಚ್ಚುತ್ತೇವೆ. ಆದರೆ ನಿಮ್ಮ ಹತ್ತಿರ ದುಡ್ಡಿಲ್ಲ ಅದನ್ನು ಮಾಡಿಸುವುದಕ್ಕೆ. 50 ಸಾವಿರ ಕೆರೆಗಳನ್ನು ಮಾಡಿಸುವುದಕ್ಕೆ ಹೋಗಿ 25 ಸಾವಿರ ಕೆರೆಗೆ ಇಳಿದು ಇದನ್ನು ಈಗ 175 ಕೆರೆಗಳನ್ನು ಮಾಡಿಸುವುದರಲ್ಲಿ ನೀವು ಇದ್ದೀರಿ. ಏಕೆಂದರೆ ನಿಮ್ಮ ಹತ್ತಿರ ಈಗ ದುಡ್ಡಿಲ್ಲ. ಜನಗಳನ್ನು ಇನ್‌ವಾಲ್ವ್ ಮಾಡಿಕೊಂಡು

ಮಾಡಿದ್ದಿದ್ದರೆ ಆಗ ನಾನು ನಿಮ್ಮನ್ನು ನಂ. 1 ಮುಖ್ಯಮಂತ್ರಿಗಳು ಎಂದು ಹೇಳಬಹುದಾಗಿತ್ತು. ನೀವು as a Chief Minister as the Head of the administration ಎಲ್ಲಿ ಫೇಲ್ ಆಗಿದ್ದೀರಿ ಎನ್ನತಕ್ಕಂಥದ್ದನ್ನು ಹೇಳತಕ್ಕಂಥದ್ದು ನನ್ನ ಕರ್ತವ್ಯ. ಅದಕ್ಕೋಸ್ಕರವೇ ಬಂದು ಬರಗಾಲಕ್ಕೆ ರಾಜ್ಯ ಸರ್ಕಾರದಿಂದ ರಿಸೋರ್ಸ್‌ನ್ನು ಮೊಬಿಲೈಜ್ ಮಾಡತಕ್ಕ ವಿಚಾರದಲ್ಲಿ ಫೇಲ್ ಆಗಿದ್ದೀರಿ ನೀವು. ಈಗೇನೋ ಆ ಸೆಕೆಂಡ್ಸ್‌ನ್ನು ನಿಲ್ಲಿಸುವುದಕ್ಕೆ ಸ್ವಲ್ಪ ಸರಿಯಾದ ದಾರಿಗೆ ಬರುತ್ತೀದ್ದೀರಿ. I appreciate that work ಸರಿಯಾದ ದಾರಿಗೆ ಬರುತ್ತಿದ್ದೀರಿ. ಅದು ಯಶಸ್ವಿಯಾಗಲಿ ಎಂಬುದು ನನ್ನ ಹಾರೈಕೆ. in the interest of the State Exchequer. ರಿಸೋರ್ಸ್ ಮೊಬಿಲೈಜ್ ಮಾಡತಕ್ಕ ವಿಚಾರದಲ್ಲಿ ತಾವು ಫೇಲ್ ಆಗಿದ್ದೀರಿ. ಇದರಿಂದಾಗಿ ಇವತ್ತು ನಮ್ಮ ಬರಗಾಲದ ಕೆಲಸಗಳಿಗೆ ತೊಂದರೆಯಾಗಿದೆ ಸ್ವಾಮಿ. ರಾಜ್ಯ ಸರ್ಕಾರ ಏನು ಪೋಸ್ಟ್ ಅಫೀಸಾ? ಡೆಲ್ಲಿಯಿಂದ ಅವರು ಕಳುಹಿಸುವುದು, ನೀವು ತೆಗೆದುಕೊಂಡು ಹೋಗಿ ಹಂಚುವುದು. ಪೋಸ್ಟ್ ಮ್ಯಾನ್ ಕೆಲಸ ಮಾಡಬೇಕಾ ನೀವು? ನಿಮ್ಮದೇನು ಇದರಲ್ಲಿ ಕಾಂಟ್ರಿಬ್ಯೂಷನ್ ಇದೆ? ಅದಕ್ಕೋಸ್ಕರವೇ ನಾನು ಕೇಳಿದ್ದು. ರಾಜ್ಯ ಸರ್ಕಾರ ಇದಕ್ಕೋಸ್ಕರ ಎಷ್ಟು ಹಣವನ್ನು ಖರ್ಚು ಮಾಡಿದ್ದೀರಿ ಎನ್ನುವುದನ್ನು ನಮಗೆ ದಯವಿಟ್ಟು ಹೇಳಿ. ಬೋರ್‌ವೆಲ್ ತೋಡಿಸುವುದಕ್ಕೆ ಕಾಳು ಕೊಡುತ್ತೇವೆಂದು ಹೇಳಿದರೆ ಬೋರ್‌ವೆಲ್‌ನ್ನು ತೋಡುವುದಕ್ಕೆ ಹಣ ಕೊಡಬೇಕು. ಕಾಳು ತೆಗೆದುಕೊಂಡು ಯಾರು ಮಾಡುವುದು? ಅದನ್ನು ಮತ್ತೆ ಮಾರುಕಟ್ಟೆಯಲ್ಲಿ ತೆಗೆದುಕೊಂಡು ಹೋಗಿ ಮಾರಬೇಕು. ಆರೂವರೆ ರೂಪಾಯಿಗೆ, ಐದು ರೂಪಾಯಿಗೋ ಅವರು ತೆಗೆದುಕೊಳ್ಳುತ್ತಾರೆ. ಅದರಿಂದ ಬೋರ್‌ವೆಲ್‌ನ್ನು ತೋಡಬೇಕು. ಇದು ನಾನು ರೇಸ್ ಮಾಡತಕ್ಕಂಥ ಪ್ರಶ್ನೆ ಏನೆಂದು ಹೇಳಿದರೆ ಇವತ್ತು ರಾಷ್ಟ್ರದಲ್ಲಿ ತಾವೊಬ್ಬ ಕಾಂಗ್ರೆಸ್‌ನ ಪಕ್ಷದಿಂದ ಮುಖ್ಯಮಂತ್ರಿಗಳಾಗಿರತಕ್ಕಂಥವರು, ಈ ಒಂದು ಪ್ರಶ್ನೆಯನ್ನು ಕೇಂದ್ರ ಸರ್ಕಾರಕ್ಕೆ ಎತ್ತಬೇಕಾಗಿತ್ತು. ಇಡೀ ರಾಷ್ಟ್ರದಲ್ಲಿ ಒಂದು ಚರ್ಚೆಗೆ ಅವಕಾಶವನ್ನು ಮಾಡಿಕೊಡಬೇಕಾಗಿತ್ತು. I Demand even now, ಈಗ ಮುಂಗಾರು ಮಳೆ ಸಂಪೂರ್ಣವಾಗಿ ವಿಫಲವಾಗಿದೆ. ಏಪ್ರಿಲ್, ಮೇ, ಜೂನ್ ತಿಂಗಳುಗಳಲ್ಲಿ ಮಳೆ ಆಗಿಲ್ಲ. ವಾಡಿಕೆ ಮಳೆಗಿಂತ ಶೇಕಡ 40ರಷ್ಟು ಸಹಿತ ಅನೇಕ ಕಡೆಗಳಲ್ಲಿ ಆಗಿಲ್ಲ. ಜುಲೈನಲ್ಲಿ ಈಗೇನೋ ಕೆಲವು ಕಡೆ ಆಶಾದಾಯಕವಾಗಿ ನಾವು ನೋಡುತ್ತಿದ್ದೇವೆ. ನಾವೂ ದೇವರಲ್ಲಿ ನಿಮ್ಮ ಜೊತೆ ಸೇರಿಕೊಂಡು ಪ್ರಾರ್ಥನೆ ಮಾಡುತ್ತೇವೆ ಮಳೆ ಬರಲಿ ಎಂದು ಹೇಳಿ ಪ್ರಾರ್ಥನೆ ಮಾಡುತ್ತೇವೆ. ಆದರೆ ಈ ಮೂರು ತಿಂಗಳಲ್ಲಿ ಮಳೆ ಬರದೇ ಇರುವುದಕ್ಕೆ ಆ ಮುಂಗಾರು ಮಳೆ ಬರುತ್ತದೆ ಎಂದು ಬಿತ್ತನೆ ಮಾಡಿದವರ ಗತಿ ಏನು? ಅವರಿಗೇನು ಪರಿಹಾರ? ಇದು ಒಂದಾದ ಮೇಲೆ ಇನ್ನು ಮುಂದೆ ಬರತಕ್ಕ ಬೆಳೆಗಳಿಗೆ ನಿಮ್ಮ ಕೃಷಿ ಇಲಾಖೆಯವರು ಮಾಡಿಕೊಂಡಿರತಕ್ಕ ತಯಾರಿ ‘ಅದರೂ’ ಏನು ಇದೆ? ಏನೇನೂ ತಯಾರಿ ಮಾಡಿಕೊಂಡಿಲ್ಲ– ಕೃಷಿ ಇಲಾಖೆಯವರು. ಈಗ ಯಾವ ರೀತಿ ಶಾರ್ಟ್ ಟರ್ಮ್ ಕ್ರಾಪನ್ನು ಹಾಕಬೇಕು? ಈಗಾಗಲೇ ರಾಗಿ ಬಿತ್ತತಕ್ಕದ್ದು ನಮ್ಮ ಕಡೆ ಎಲ್ಲಾ ಆಗಿ ಹೋಗಿ ಬಿಟ್ಟಿದೆ. ಬಿತ್ತನೆ ಬೀಜಗಳು ಶೇಂಗವನ್ನು ನಾವು ಏಪ್ರಿಲ್‌ನಲ್ಲೇ ಬಿತ್ತಬೇಕಾಗಿತ್ತು.. ಆ ಶೇಂಗಾ ಬೀಜಗಳು ಇವತ್ತು ಸಿಗುತ್ತಿಲ್ಲ. ಹಾಸನದಲ್ಲಿ ಆಲೂಗಡ್ಡೆ ಬೀಜಗೋಸ್ಕರ ಎಂದು ಹೇಳಿ ಬ್ಲಾಕ್ ಮಾರ್ಕೆಟ್‌ನಲ್ಲಿ 1300, 1400 ರೂಪಾಯಿ ತೆಗೆದುಕೊಂಡು ಹೋಗಿ ಅದಕ್ಕೋಸ್ಕರ ಪೋಲೀಸರನ್ನು ಉಪಯೋಗಿಸಿ ರೈತರನ್ನು ಕಂಟ್ರೋಲ್ ಮಾಡುವುದಕ್ಕೆ ಪ್ರಯತ್ನ ಮಾಡಿರತಕ್ಕದ್ದು ತಮಗೆ ಗೊತ್ತಿರತಕ್ಕಂಥಹ ವಿಚಾರ. So what is the Horticulture Department doing? What is the Agriculture Department doing? ಇವರು

ಮಾತು ಎತ್ತಿದರೆ ನಿಮ್ಮ ಇಲಾಖೆಯ ಮಂತ್ರಿಗಳು ಏನು ಹೇಳುತ್ತಾರೆ ಎಂದರೆ ಪಂಜಾಬಿಗೆ ಅಧಿಕಾರಿಗಳನ್ನು ಕಳುಹಿಸಿದ್ದೇವೆ ಎನ್ನುತ್ತಾರೆ. ಹರ್ಯಾಣಾಗೆ ಅಧಿಕಾರಿಗಳನ್ನು ಕಳುಹಿಸಿದ್ದೇನೆ ಎನ್ನುತ್ತಾರೆ. ಪಂಜಾಬಿನಲ್ಲಿ ಮೇವು ಸಿಗುತ್ತದೋ ಇಲ್ಲವೋ ನಮಗಂತೂ ಗೊತ್ತಿಲ್ಲ. ಹರ್ಯಾಣಾದಲ್ಲಿ ಮೇವು ಸಿಗುತ್ತದೋ ಇಲ್ಲವೋ ಗೊತ್ತಿಲ್ಲ. ಎರಡು ವರ್ಷದಿಂದ ಬರಗಾಲ ಇದ್ದುಕೊಂಡು ನೀವು ಮಾಡಿದ್ದಾದರೂ ಏನು? ಈಗ ನೀವು ಅಧಿಕಾರಿಗಳನ್ನು ಕಳುಹಿಸಬೇಕಾ? ಎರಡು ವರ್ಷದಿಂದ ಏನು ನಿಮ್ಮ ಇಲಾಖೆ ನಿದ್ರೆ ಮಾಡುತ್ತಿತ್ತಾ? ಮಾನ್ಯ ಉಪಾಧ್ಯಕ್ಷರೆ, ನಾನೇ ನಿಮ್ಮ ಜಾಗದಲ್ಲಿ ಇದ್ದಿದ್ದರೆ ಏನು ಮಾಡುತ್ತಿದ್ದೆ ಅಂದರೆ ಎಲ್ಲೆಲ್ಲಿ ಬೋರ್‌ವೆಲ್‌ಗಳಲ್ಲಿ ನೀರು ಇದೆ, ಎಲ್ಲೆಲ್ಲಿ ವಾಟರ್ ಅವೈಲಬಲಿಟಿ ಇದೆ, ಅಲ್ಲೆಲ್ಲಾ ಸಹಿತ ಮೇವುಗಳನ್ನು ಬೆಳೆಸಿ, ಬಿತ್ತನೆ ಬೀಜವನ್ನು ರೈತರಿಗೆ ಕೊಟ್ಟು ಮೇವನ್ನು ಬೆಳೆಸತಕ್ಕಂಥಹ ಕ್ರಮವನ್ನು ನಾನು ಮಾಡಿಸುತ್ತಾ ಇದ್ದೆ. ನಿಮ್ಮ ಸ್ಥಾನದಲ್ಲಿ ಇದ್ದಿದ್ದರೆ ಆ ಕೆಲಸ ಮಾಡಿಸುತ್ತಿದ್ದೆ. ಅದನ್ನು ನೀವು ಮಾಡಲಿಕ್ಕೆ ಹೋಗಲಿಲ್ಲ. ನಾನು ಒಬ್ಬನೇ ಸದಸ್ಯ ನಮ್ಮ ಪಾರ್ಟಿಯಲ್ಲಿ ಇದ್ದೇನೆ. ತಾವು ನನಗೆ ಕೊಡುವುದು ಕಡಿಮೆ ಸಮಯ, ನಾನು ಯೀಲ್ಡ್ ಆಗುವುದಕ್ಕೆ ಆಗುವುದಿಲ್ಲ. ಮತ್ತೆ ಅವರವರಿಗೆ ಜಗಳ ಹತ್ತಿಕೊಳ್ಳುತ್ತದೆ. ಅವರು ಉತ್ತರ ಕೊಡುವಾಗ ಮಾತನಾಡಲಿ. ನನ್ನದೇನೂ ತಕರಾರು ಇಲ್ಲ.

ಶ್ರೀ ಎಂ. ಮಹದೇವ್ (ಸಕ್ಕರೆ ಮತ್ತು ಪಶುಸಂಗೋಪನಾ ಸಚಿವರು):– ಈಗ ಪಂಜಾಬಿನಿಂದ ಮೇವು ಬಂದಿದೆ. ಕೋಲಾರಕ್ಕೆ ಕಳುಹಿಸಿಕೊಡುತ್ತಿದ್ದೇವೆ. ತುಮಕೂರಿಗೆ ಕಳುಹಿಸಿಕೊಡುತ್ತಿದ್ದೇವೆ. ಈಗಾಗಲೇ ಇನ್ನೂ ಕಡೆ ಕಳುಹಿಸಿಕೊಡುತ್ತಿದ್ದೇವೆ. ಕೊಪ್ಪಳಕ್ಕೆ ಕಳುಹಿಸಿಕೊಡುತ್ತೇವೆ. ನಾಲ್ಕು ಜಿಲ್ಲೆಗಳಿಗೆ ಕಳುಹಿಸುತ್ತಿದ್ದೇವೆ. ಮತ್ತೆ ಗ್ರೀನ್ ಫಾಡರ್ ಬರುತ್ತಿದೆ. ಡ್ರೈ ಫಾಡರ್ ಬಗ್ಗೆ ಸಾಕಷ್ಟು ಸಪ್ಲೈ ಆಗಿದೆ. ಯಾವ್ಯಾವ ಜಿಲ್ಲೆಗಳಲ್ಲಿ ತೊಂದರೆ ಇದೆ, ಅಲ್ಲೆಲ್ಲಾ ವ್ಯವಸ್ಥೆ ಮಾಡುತ್ತಿದ್ದೇವೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ:– ಸ್ವಾಮಿ ಮಲ್ಲಿಗೆ ಹಾರ ಇದ್ದಿದ್ದರೆ ತಂದು ಹಾಕಿ ಬಿಡುತ್ತಿದ್ದೆ. ಮಾರ್ಕೆಟ್‌ನಲ್ಲಿ ಮಲ್ಲಿಗೆ ಸಿಗುವುದಿಲ್ಲ. ತರಕಾರಿ, ಮಲ್ಲಿಗೆ ಎಲ್ಲಾ ಒಣಗಿ ಹೋಗಿ ಬಿಟ್ಟಿದೆ. ನಾನು ಇವರನ್ನು ಕೇಳುತ್ತಿದ್ದೇನೆ. ನೀವು ಇತ್ತೀಚೆಗೆ ದನಕರುಗಳಿಗೆ ಸಂಬಂಧಪಟ್ಟ ಹಾಗೆ ಮಂತ್ರಿಗಳು ಆಗಿರತಕ್ಕಂಥದ್ದು. ಮುಂಚೆ ತಾವು ಯಾವುದೋ ಬೇರೆ ಇಲಾಖೆಗೆ ಮಂತ್ರಿಗಳು ಆಗಿದ್ದೀರಿ. ನಿಮಗೆ ಕೇಳುತ್ತಿದ್ದೇನೆ. ಎರಡು ವರ್ಷದಿಂದ ಬರಗಾಲ ಇತ್ತಲ್ಲಾ. ಪಂಜಾಬಿಗೆ, ಹರ್ಯಾಣಾಗೆ ಹೋಗಿ ಎಂದು ನಾನು ಹೇಳುತ್ತಿಲ್ಲ ಮಹದೇವ್ ಅವರೇ. ನಾನೇನು ಹೇಳುತ್ತಿದ್ದೇನೆಂದರೆ ಎಲ್ಲಿ ಬೋರ್‌ವೆಲ್‌ಗಳು ಇವೆ, ಬೋರ್‌ವೆಲ್‌ಗಳಲ್ಲಿ ನೀರು ಇದೆ, ಎಲ್ಲಿ ನಿಮಗೆ ಓಪನ್ ವೆಲ್ಸ್‌ನಲ್ಲಿ ನೀರು ಸಿಗುತ್ತದೆ, ಅಲ್ಲಿ ರೈತರಿಗೆ ಬೀಜವನ್ನು ಕೊಟ್ಟು ಹುಲ್ಲನ್ನು ಬೆಳೆಸಬೇಕಾಗಿತ್ತು. ಆ ಕೆಲಸವನ್ನು ಮಾಡಿಲ್ಲ. ಬರಗಾಲ ಕರ್ನಾಟಕಕ್ಕೆ ಹೊಸದಲ್ಲ. 1988ರಲ್ಲಿ ಇತ್ತು. ಮಾನ್ಯ ಕೃಷ್ಣ ಅವರು ಆಗ ದೆಹಲಿಯಲ್ಲಿದ್ದರು. ನಾನು ಯೀಲ್ಡ್ ಆಗುತ್ತಿಲ್ಲ. ತದನಂತರ ಅವರು ಉತ್ತರ ಕೊಡಲಿ, ನನ್ನದೇನೂ ತಕರಾರು ಇಲ್ಲ. Why is the interfering like this? 1983ರಲ್ಲಿ ಮಾನ್ಯ ಹೆಗಡೆಯವರು ಮುಖ್ಯಮಂತ್ರಿಗಳಾಗಿದ್ದರು ಬರಗಾಲ ಬಂತು. 1984ರಲ್ಲಿ ಬರಗಾಲ ಬಂತು, 1985ರಲ್ಲಿ ಬರಗಾಲ ಬಂತು. ಆ ಸಂದರ್ಭದಲ್ಲಿ ನಿಮಗೆ ಜ್ಞಾಪಕ ಇದೆ ಎಂದು ಕಾಣುತ್ತದೆ. ಮಾನ್ಯ ಧರ್ಮಸಿಂಗ್ ಅವರು ಮತ್ತು ಮಾನ್ಯ ಖರ್ಗೆಯವರು ವಿರೋದ ಪಕ್ಷದಲ್ಲಿ ಇದ್ದರು. ಮಾನ್ಯ ತಿಮ್ಮಪ್ಪನವರೂ ಸಹ ಶಾಸನಸಭೆಯಲ್ಲಿ ಇದ್ದರು ಎಂದು ಕಾಣುತ್ತದೆ ಆಗ. ತಮಗೆ ಜ್ಞಾಪಕ ಇರಬಹುದು. 1983ರಲ್ಲಿ

ನೀವು ಇರಲಿಲ್ಲ. ತಿಮ್ಮಪ್ಪ ಹೆಗಡೆಯವರು ಇದ್ದರು ಎಂದು ಕಾಣುತ್ತದೆ. ಇವರು ಯಾವ ಮಟ್ಟಕ್ಕೆ ಹೋದರು ಎಂದರೆ ಜನತಾದವರು ಅಧಿಕಾರಕ್ಕೆ ಬಂದರೆ, ಶಾಶ್ವತವಾಗಿ ಬರ ಎಂದು ಹೇಳುತ್ತಿದ್ದರು ರಾಮಯ್ಯನವರೇ ಇದನ್ನು ಕೇಳಿಸಿಕೊಂಡಿದ್ದೀರಿ, ನೀವು ಆಗ ನಮ್ಮ ಕಡೆಗೆ ಇದ್ದಿರಿ. ಜ್ಞಾಪಕ ನಿಮಗಿರಬೇಕು. ಈಗೇನು ಹೇಳಬೇಕು? ಈಗ ಅದನ್ನು ನಾವು ಹೇಳುವುವಕ್ಕೆ ಹೋಗುವುದಿಲ್ಲ. ಏಕೆಂದರೆ ಕಾಂಗ್ರೆಸ್‌ಗೂ ಬರಕ್ಕೂ ಸಂಬಂಧ ಇಲ್ಲ. ಆಗ ಏಕೆ ನೀವು ಬಾಯಿ ಬಿಟ್ಟಿರಿ? ಈಗ ಏಕೆ ಬಾಯಿಗೆ ಬೀಗ ಹಾಕಿಕೊಂಡಿದ್ದೀರಿ? ಇದೇ ಪ್ರಶ್ನೆ ನಾನು ಕೇಳಬೇಕು ಎಂದರೂ ಆ ಪ್ರಶ್ನೆ ಕೇಳುವುದಿಲ್ಲ. ಮಾನ್ಯ ಉಪಾಧ್ಯಕ್ಷರೆ, ನಾನೇನು ಹೇಳುವುದಕ್ಕೆ ಹೊರಟಿದ್ದೇನೆಂದರೆ ಬರಗಾಲದ ತೀವ್ರತೆ ಬಗ್ಗೆ ಈ ಸರ್ಕಾರಕ್ಕೆ, ಯಾವ ತೀವ್ರತೆಯಿಂದ ತೆಗೆದುಕೊಳ್ಳಬೇಕೋ ಅದನ್ನು ನೀವು ತೆಗೆದುಕೊಂಡಿಲ್ಲ. 1983–84ರಲ್ಲಿ ನೀವೇನು ಮಾಡಿದ್ದೀರಿ ಎಂದು ನೀವು ಕೇಳಬಹುದು. ಉತ್ತರ ಕರ್ನಾಟಕದ ಎಲ್ಲಾ ಹೋಬಳಿಗಳಲ್ಲು ಸಹಿತ ಒಂದೊಂದು ಗೋಶಾಲೆಗಳನ್ನು ನಾವು ತೆರೆದಿದ್ದೆವು. ಗಂಜಿ ಕೇಂದ್ರಗಳನ್ನು ಪ್ರಾರಂಭ ಮಾಡಿದ್ದೆವು. ಪೇಜಾವರ ಸ್ವಾಮಿಗಳು ಎಲ್ಲಾ ಕಡೆ ಹೋಗಿದ್ದರು. ಅನೇಕ ವೀರಶೈವ ಮಠದ ಸ್ವಾಮಿಗಳು ಹೋಗಿ ಗಂಜಿ ಕೇಂದ್ರಗಳನ್ನು ಪ್ರಾರಂಭ ಮಾಡಿದ್ದು ಉಂಟು; ಸಹಾಯ ಮಾಡಿರತಕ್ಕದ್ದು ಉಂಟು. ಈಗ ಗಂಜಿ ಕೇಂದ್ರ ಬೇಡ. ದನಕರುಗಳಿಗೆ ಬೇಕಾಗಿರತಕ್ಕಂಥ ಎಷ್ಟು ಗೋಶಾಲೆಗಳನ್ನು ನೀವು ತೆರೆದಿದ್ದೀರಿ. ಪಾವಗಡದಲ್ಲಿ ಏನೋ ಒಂದು ಗಂಜಿ ಕೇಂದ್ರವನ್ನು ತೆರೆದಿದ್ದಾರೆ ಎಂದು ನಾನು ಕೇಳಪಟ್ಟೆ. ಮಾನ್ಯ ವೆಂಕಟರಮಣಪ್ಪನವರು ಹೇಳಿದರು. ನೀವು ಇನ್ನೂ 10–12 ಗಂಜಿ ಕೇಂದ್ರ ಮಾಡಿರಬಹುದು. ಇವತ್ತು ಯಾವ ಮಟ್ಟಕ್ಕೆ ತಂದಿದೆ ಎಂದರೆ ಮಾನ್ಯ ನಮ್ಮ ಎಸ್.ಎಸ್. ಪಾಟೀಲ್ ಅವರು ಬಹಳ ಚೆನ್ನಾಗಿ ಹೇಳಿದರು. ಅನೇಕ ಥಳಿಗಳ, ಎತ್ತುಗಳನ್ನು 20 ಸಾವಿರ, 25 ಸಾವಿರಕ್ಕೆ ತೆಗೆದುಕೊಂಡು ಬಂದು ರೈತರು ಅದನ್ನೆಲ್ಲಾ ಮಾರಿ ಕಸಾಯಖಾನೆಗೆ ಕಳುಹಿಸಿದ್ದಾರೆ. ಈ ವರ್ಷ ರೈತರು ಏನು ಮಾಡುವುದು? ಈ ಪರಿಸ್ಥಿತಿ ಇವತ್ತು ಬಂದಿದೆ. ಇದಾದ ಮೇಲೆ ತೋಟಗಾರಿಕಾ ಬೆಳಗಳಂತೂ ಸಂಪೂರ್ಣವಾಗಿ ನಾಶವಾಗಿದೆ. ತೆಂಗು ಸುಳಿ ಸಮೇತ ಸತ್ತು ಹೋಗಿದೆ, ಅಡಿಕೆ ಹೋಗಿದೆ. ವೀಳೆದಲೆ ಹೋಗಿದೆ. ಮೈಸೂರಿನ ವಿಳೆಯದೆಲೆ ಎಂದರೆ ಎಷ್ಟೊಂದು ವಿಖ್ಯಾತಿ. ಇವತ್ತು ವೀಳೆದೆಲೆ ಸಂಪೂರ್ಣವಾಗಿ ಸುಟ್ಟು ಹೋಗಿದೆ, ಸಪೋಟ ಹೋಗಿದೆ. ರೇಷ್ಮೆಯಂತೂ ಗೆಡ್ಡೆ ಸಮೇತ ನಮ್ಮ ಕಡೆ ಎಲ್ಲಾ ಒಣಗಿ ಹೋಗಿದೆ. ಇನ್ನು ಗೆಡ್ಡೆ ಸಹ ಉಳಿದಿಲ್ಲ. ಅಟ್‌ಲೀಸ್ಟ್ ಈಗ ಮಳೆ ಬಂದರೂ ಸಹಿತ ಕನಿಷ್ಟ ಪಕ್ಷ 7–7– ತಿಂಗಳು ಕಾಯಬೇಕು. ಇಂತಹ ಪರಿಸ್ಥಿತಿ ಬಂದಿದೆ. ಈ ಮಧ್ಯದಲ್ಲಿ ರೈತರ ಸಹಕಾರಕ್ಕೆ ನೀವೇನಾದರೂ ಬಂದಿದ್ದೀರೋ? ಅದರ ಹಿಂದಿನ ವರ್ಷ ಮಳೆ ಆಗಿತ್ತು ಎಂದು ಹೇಳಿ ಸ್ವಲ್ಪ ಕಬ್ಬಾಗಿತ್ತು ಕಳೆದ ವರ್ಷ. ಆ ಕಬ್ಬನ್ನು ಬೆಳೆದಂತಹ ರೈತರಿಗೆ 1400 ಕೋಟಿ ರೂಪಾಯಿ ಬಾಕಿ ಕೊಡುವುದು ಇದೆ. ಸಹಕಾರಿ ಸಕ್ಕರೆ ಕಾರ್ಖಾನೆಗಳು ಇರಬಹುದು. ಬೆಳಗಾವಿ ಇರಬಹುದು, ಧಾರವಾಡ ಇರಬಹುದು, ಬಿಜಾಪುರ ಇರಬಹುದು. ಯಾವುದೇ ಸಕ್ಕರೆ ಕಾರ್ಖಾನೆಗಳು ಇರಬಹುದು. ಉತ್ತರ ಕರ್ನಾಟಕದಲ್ಲಿರತಕ್ಕಂಥಹ ಸಕ್ಕರೆ ಕಣಜ. ಮಂಡ್ಯದಲ್ಲೂ ಅಷ್ಟೇನೇ ತಮ್ಮ ಜಿಲ್ಲೆಯಲ್ಲೇ ಇವತ್ತು ರೈತರು ಯಾರೂ ಕಬ್ಬನ್ನು ಕೊಟ್ಟಿದ್ದಾರೆ. ನೀವೇನು ಮಾಡಬಹುದಿತ್ತು? ನಿಮಗೆ ಏನು ಸಲಹೆ ಮಾಡುತ್ತೇನೆಂದರೆ ಕಳೆದ ಸಾರಿ ಸಹಿತ ನಾನು ವಿನಂತಿ ಮಾಡಿಕೊಂಡಿದ್ದೆ. 1400 ಕೋಟಿ ರೂಪಾಯಿ ಬಾಕಿ ಏನು ಇದೆ, ಅದನ್ನು ನೀವು ಸರ್ಕಾರದಿಂದ ಸಾಲ ತೆಗೆದುಕೊಳ್ಳಿ. ಸಾಲವನ್ನು ತೆಗೆದುಕೊಂಡು ಆ ಸಂಸ್ಥೆಗಳಿಗೆ ಸಾಲ ಕೊಡಿಸಿ ನೀವು. ಸಾಲ ಕೊಟ್ಟು 2 ಪರ್ಸೆಂಟ್‌ನಲ್ಲೂ 4

ಪರ್ಸೆಂಟ್‌ನಲ್ಲೂ ಕೊಡಿಸಿ. ನೀವು ಕೇಂದ್ರ ಸರ್ಕಾರದ ಜೊತೆ ಇದೇ ವಿಚಾರವಾಗಿ ಫೈಟ್ ಮಾಡಬೇಕಾಗಿರುವುದು. ನ್ಯಾಷನಲೈಸ್ಡ್ ಬ್ಯಾಂಕ್‌ಗಳಿಂದ ಅಥವಾ ಬೇರೆ ಬ್ಯಾಂಕುಗಳಿಂದ ಕೇಂದ್ರ ಸರ್ಕಾದವರು ನಿಮಗೆ ಇಂಟರೆಸ್ಟ್ ಇಲ್ಲದೇ ಇರತಕ್ಕಂಥಹ ಲೋನನ್ನು ನಿಮಗೆ ಕೊಡಲಿ. ಆ 1400 ಕೋಟಿ ರೂಪಾಯಿಯನ್ನು ನೀವೇನು ರೈತರಿಗೆ ಪುಕ್ಕಟೆಯಾಗಿ ಕೊಡುವುದಿಲ್ಲ. ರೈತರಿಗೆ ಅವರ ಬಾಕಿ ಕೊಡುವುದಕ್ಕೆ ನಿಮಗೇನು ತೊಂದರೆ ಏನು? ಅಟ್‌ಲೀಸ್ಟ್ 10–12 ಜಿಲ್ಲೆಗಳಲ್ಲಿ ದಯವಿಟ್ಟು ಈಗಲೂ ವಿಚಾರ ಮಾಡಿ. ಯಾರು ಕಬ್ಬು ಸಪ್ಲೈ ಮಾಡಿರತಕ್ಕ ರೈತರಿಗೆ ಬಾಕಿ ಇದೆ, ಅದನ್ನಾದರೂ ಸಹಿತ ಕೊಟ್ಟರೆ ನಿಮಗೆ ಪುಣ್ಯ ಬರುತ್ತದೆ ಎನ್ನತಕ್ಕ ಮಾತನ್ನು ಈ ಸಂದರ್ಭದಲ್ಲಿ ನಾನು ಹೇಳಲಿಕ್ಕೆ ಬಯಸುತ್ತೇನೆ. ಯಾವ ಸ್ಥಿತಿ ಬಂದಿದೆ ಎಂದರೆ ಪತ್ರಿಕೆಗಳಲ್ಲಿ ವರದಿ ಆಗಿತ್ತು. 200 ವರ್ಷದಲ್ಲಿ ತುಂಗಭದ್ರಾ ನದಿ ಒಣಗಿರಲಿಲ್ಲವಂತೆ. ವಿಶೇಷವಾಗಿ ತಮ್ಮ ಭಾಗದಲ್ಲಿ 20 ಜನ 30 ಜನ, 40 ಜನ ಜಮೀನು ಇಲ್ಲದೇ ಇರುವವರು ಗೋವಾಗೋ, ಪೂನಾಗೋ, ಬೊಂಬಾಯಿಗೋ ಮತ್ತೊಂದು ಕಡೆಗೋ ಕೆಲಸಕ್ಕೋಸ್ಕರ ಹೋಗುತ್ತಿದ್ದರು. ಈಗ ಊರೂರೇ ವಲಸೆ ಹೋಗಬೇಕಾದಂತಹ ಪರಿಸ್ಥಿತಿ ಇವತ್ತು ಬಂದಿದೆ. ಇಂತಹ ಸ್ಥಿತಿಯಲ್ಲಿ ಸರ್ಕಾರ ಯಾವ ತೀಕ್ಷ್ಣತೆಯಿಂದ ಇದನ್ನು ಮಾಡಬೇಕಾಗಿತ್ತೋ ಆ ಕ್ರಮ ಮಾಡಲಿಲ್ಲ. ಇದರ ಬದಲಾಗಿ ಸಾಲ ವಸೂಲಾತಿ ಮಾಡತಕ್ಕದ್ದೂ ಸಹ ನಡೆಯುತ್ತಲೇ ಇದೆ. ಮತ್ತೆ ಶಾಶ್ವತವಾದ ಪರಿಹಾರದ ಬಗ್ಗೆ ಇವರು ಯೋಚನೆ ಮಾಡಿಲ್ಲ. ವಿದ್ಯುಚ್ಛಕ್ತಿಯ ಸೌಕರ್ಯದ ಬಗ್ಗೆ ಮಾತನಾಡಬೇಕು ಎಂದರೆ ಮಾನ್ಯ ಮುಖ್ಯಮಂತ್ರಿಗಳು ಹಳ್ಳಿಗಳಿಂದ ವರದಿಗಳನ್ನು ತರಿಸಿಕೊಳ್ಳಬೇಕು. ಪೋಲೀಸ್ ಇಲಾಖೆಯಿಂದ ತರಿಸಿಕೊಳ್ಳಿ. ನಿಮಗೆ ಚೆನ್ನಾಗಿ ಪೋಲೀಸ್‌ನವರು ಹೇಳುತ್ತಾರೆ. ಎರಡು ಗಂಟೆ, ಮೂರು ಗಂಟೆ ವಿದ್ಯುಚ್ಛಕ್ತಿಯನ್ನು ಕೊಡುತ್ತಾರೆ. ಈಗ ಎಲ್ಲಾ ಹಳ್ಳಿಗಳಲ್ಲೂ ಪಂಚಾಯತಿಯವರು ಜನರೇಟರ್‌ಗಳನ್ನು ತರಿಸಿಕೊಂಡು ಅಲ್ಲಿರತಕ್ಕಂಥ ಮಿನಿ ವಾಟರ್ ಸಪ್ಲೈಗಳಲ್ಲಿ ನೀರು ಕುಡಿಯತಕ್ಕಂಥಹ ಸ್ಥಿತಿ ಬಂದಿದೆ. ಕನಿಷ್ಟ ಪಕ್ಷ ನಾಲ್ಕು ಗಂಟೆಗಳ ಕಾಲ ಅವಿರತ ವಿದ್ಯುಚ್ಛಕ್ತಿಯನ್ನು ಕೊಡದೇ ಹೋದರೆ ಹೇಗೆ? ಕುಡಿಯುವ ನೀರಿಗೆ ಇರುವ ಬೋರ್‌ವೆಲ್‌ಗಳಲ್ಲಿ ನೀರು ಸಿಗುತ್ತಿಲ್ಲ. ನಮಗೆ ಹೇಳುತ್ತಾರೆ, ನಮ್ಮ ಜಿಲ್ಲಾ ಮಂತ್ರಿಗಳು ಆಗಲೀ ಅಥವಾ ಬೇರೆ ಯಾರೇ ಮಂತ್ರಿಗಳು ಕೇಳಿದರೆ, ಏನು ಹೇಳುತ್ತಾರೆ ಎಂದರೆ ಸಾಕಷ್ಟು ದುಡ್ಡು ಡೆಪ್ಯುಟಿ ಕಮೀಷನರ್ ಹತ್ತಿರ ಇದೆ. ಬೋರ್‌ವೆಲ್ ಡೀಪನ್ ಮಾಡಿಸಿ ಎಂದು ಹೇಳುತ್ತಾರೆ. ಆ ಡೆಪ್ಯುಟಿ ಕಮೀಷನರ್‌ಗೆ ಹೇಳಿದರೆ ಅವರೇನು ಹೇಳುತ್ತಾರೆ ಎಂದರೆ ಡೀಪನ್ ಮಾಡಿಸುವುದಕ್ಕೆ ಹಣ ಇಲ್ಲ ಸಾರ್ ಎಂದು ಹೇಳುತ್ತಾರೆ. ಹಣ ಇದೆ ಎಂದು ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದಾರೆ, ಮಾನ್ಯ ಮಂತ್ರಿಗಳು ಹೇಳಿದ್ದಾರೆ ಎಂದರೆ ತಕ್ಷಣವೇ ಅವರು ರಿಗ್ ಬೋರ್ ಬರುವುದಿಲ್ಲ ಎಂದು ಹೇಳುತ್ತಾರೆ. ಇದು ಸುಲಭವಾದಂತಹ ಕಾರಣ. ಈ ಕಡೆ ಹೊಸ ಬೋರ್‌ವೆಲ್ ಹಾಕುವ ಹಾಗೆ ಇಲ್ಲ. ಡೀಪನ್ ಮಾಡಿಸುವ ಹಾಗೆ ಇಲ್ಲ. ವಿದ್ಯುಚ್ಛಕ್ತಿ ಇಲ್ಲವೇ ಇಲ್ಲ. ಜನ ಏನನ್ನು ಕುಡಿದು ಬದುಕಬೇಕು? ಇದು ನಮ್ಮ ಮುಂದೆ ಇರತಕ್ಕ ಪ್ರಶ್ನೆ. ಆದ್ದರಿಂದ ನಾನು ಮಾನ್ಯ ಮುಖ್ಯಮಂತ್ರಿಗಳನ್ನು ಮೊದಲನೆಯದಾಗಿ ಕೇಳತಕ್ಕದ್ದು ಕೇಂದ್ರ ಸರ್ಕಾರದವರು ಈ ಮೂರು ವರ್ಷದಲ್ಲಿ ಬರಗಾಲಕ್ಕೆ ಎಂದು ಹೇಳಿ ಎಷ್ಟು ಆಹಾರ ಧಾನ್ಯ ಕೊಟ್ಟಿದ್ದಾರೆ? ಎಷ್ಟು ಹಣ ಕೊಟ್ಟಿದ್ದಾರೆ? ರಾಜ್ಯ ಸರ್ಕಾರದಿಂದ ಎಷ್ಟು ಕೊಟ್ಟಿದ್ದೀರಿ ಎಂಬ ಬಗ್ಗೆ ವಿವರವನ್ನು ತಾವು ದಯವಿಟ್ಟು ಜನಗಳಿಗೆ ತಿಳಿಸಬೇಕು, ಈ ಸದನದ ಮೂಲಕ ಎಂದು ನಾನು ವಿನಂತಿ ಮಾಡಿಕೊಳ್ಳುತ್ತಿದ್ದೇನೆ. As a Chief Minister, that too, being a non-NDA Chief Minister, ನೀವು ಇದನ್ನು ಒಂದು ಆಲ್ ಇಂಡಿಯಾ

ಇಶ್ಯುವಾಗಿ ಮಾಡಬೇಕು. ಸೆಂಟರ್–ಸ್ಟೇಟ್–ರಿಲೇಷನ್‌ಶಿಪ್ ಅನ್ನು ಕ್ವೊಶ್ಚನ್ ಮಾಡತಕ್ಕಂಥದ್ದು ಇದು. ಸ್ಪಾಯಿಲ್ ಮಾಡತಕ್ಕಂಥ ವಿಚಾರ ಇದು. ಇದನ್ನು ನೀವು ಡಿಬೇಟ್ ಮಾಡಬೇಕು. ಹೆದರಿಕೊಳ್ಳುವ ಅವಶ್ಯಕತೆ ಇಲ್ಲ. ಅವರಿಗೆ 45 ಲಕ್ಷ ಟನ್ ಕೊಟ್ಟಿದ್ದರೆ, ನಮಗೆ 7 ಲಕ್ಷ ಟನ್ ಕೊಟ್ಟಿದ್ದರೆ, ಇದು ನಿಜಾಂಶ ಆಗುವುದಾದಲ್ಲಿ, ಇದು ಪರಮ ಅನ್ಯಾಯ ಕರ್ನಾಟಕಕ್ಕೆ ಮಾಡಿರತಕ್ಕಂಥದ್ದು ಎಂದು ಹೇಳುತಕ್ಕಂಥ ಧೈರ್ಯ ನೀವು ಆ ಸಭೆಯಲ್ಲಿ ತೆಗೆದುಕೊಳ್ಳಿ ಹೊರಗಡೆ ಹೋಗಿ ಆ ಸಭೆಯಿಂದ.

5.00 ಪಿಎಂ

ಕರ್ನಾಟಕದ ಜನರು ನಿಮ್ಮ ಹಿಂದೆ ಬರುತ್ತಾರೆ. ಇದು ತಾವು ಮಾಡಬೇಕಾಗಿರುವ ವಿಚಾರವಾಗಿದೆ. ನಾನು ಕೇಂದ್ರ ಸರ್ಕಾರದ ಮಂತ್ರಿಗಳಿಗೆ ಅನೇಕ ಪತ್ರಗಳನ್ನು ಬರೆದಿದ್ದೇನೆ. ಅದರಲ್ಲಿನ ಕೆಲವು ವಿಚಾರಗಳ ಬಗ್ಗೆ ನಾನು ಪ್ರಸ್ತಾಪ ಮಾಡಿದ್ದೇನೆ. ಅದನ್ನೂ ಸಹ ರಾಜ್ಯ ಸರ್ಕಾರದವರು ಮಾಡುವುದಕ್ಕೆ ಸಾಧ್ಯವಿದೆ. ಸುಮ್ಮನೆ ಭ್ರಷ್ಟಾಚಾರ ನಡೆದಿದೆಯೆಂದು, ಭ್ರಷ್ಟಾಚಾರ ಎಷ್ಟು ಕಡಿಮೆ ಮಾಡುತ್ತೇವೋ ಅಷ್ಟು ಕಡಿಮೆ ಮಾತನಾಡುವುದು ಒಳ್ಳೆಯದೆಂದು ನಾನು ತಿಳಿದಿದ್ದೇನೆ. ನನಗೆ ಏನನ್ನಿಸುತ್ತದೆಂದರೆ, ತಾವು ಅನೇಕ ವಿಚಾರಗಳನ್ನು ಈ ಸದನದಲ್ಲಿ ಮಂಡಿಸುವುದಕ್ಕಾಗುವುದಿಲ್ಲ. ಲೋಕಾಯುಕ್ತ ಸರ್ಕಾರಕ್ಕೆ ಸಲ್ಲಿಸಿರುವ ವರದಿಗಳ ಬಗ್ಗೆ ಇಲ್ಲ ಚರ್ಚಿಸುವುದಕ್ಕಾಗುವುದಿಲ್ಲವೆಂಬ ಅರಿವು ನನಗಿದೆ. ಅದೇ ರೀತಿ ಸಿಓಡಿ ಇಲಾಖೆಯವರು ಕೊಟ್ಟಿರುವ ವರದಿಗಳ ಬಗ್ಗೆಯೂ ಇಲ್ಲಿ ಚರ್ಚಿಸುವುದಕ್ಕಾಗುವುದಿಲ್ಲವೆನ್ನುವ ಅರಿವೂ ಸಹ ಇದೆ. ಆದರೆ, ನಿಮಗೆ ಆತ್ಮ ಇದೆ, ನಿಮ್ಮ ಆತ್ಮವನ್ನು ನೀವು ಪರೀಕ್ಷಿಸಿಕೊಳ್ಳಿ, ನಿಮ್ಮ ಆತ್ಮಸಾಕ್ಷಿಯಾಗಿ ಕರ್ನಾಟಕದಲ್ಲಿ ಬರ ಪರಿಹಾರ ಕಾಮಗಾರಿ ನಡೆದಿದೆಯೇ? ಇದನ್ನು ನೀವೇ ಪ್ರಶ್ನಿಸಿಕೊಳ್ಳಿ. ವರದಿ ತರಿಸಿಕೊಳ್ಳಿ, ಗೊತ್ತಾಗುತ್ತದೆ. ಎಲ್ಲೆಲ್ಲಿ ಕಾಮಗಾರಿ ನಡೆದಿದೆ? ಎಲ್ಲೆಲ್ಲೆ ನಡೆದಿಲ್ಲ ಎಂಬುದು ನಿಮಗೇ ಗೊತ್ತಾಗುತ್ತದೆ. ಅದನ್ನು ಸರಿಪಡಿಸುವುದಕ್ಕೆ ನೀವು ಪ್ರಯತ್ನಿಸಿದರೆ ಸಾಧ್ಯವಾಗುತ್ತದೆಂದು ತಿಳಿದುಕೊಂಡಿದ್ದೇನೆ. ಮಾನ್ಯ ಉಪಾಧ್ಯಕ್ಷರೆ, ಕೇಂದ್ರ ಸರ್ಕಾರದ ಮಾನ್ಯ ಮಂತ್ರಿಗಳಿಗೆ ಬರೆದಿರುವ ಪತ್ರಗಳಲ್ಲಿ ನಾನು ಕೆಲವು ಸಲಹೆಗಳನ್ನು ಕೊಟ್ಟಿದ್ದೇನೆ. ಅದರ ಬಗ್ಗೆ ಸರ್ಕಾರಕ್ಕೂ ಒತ್ತಾಯ ಮಾಡುತ್ತಿದ್ದೇನೆ. ಏನೆಂದರೆ, ಮೊದಲನೆಯದು, ಮೂರು ವರ್ಷಗಳ ಕಾಲ ರೈತರ ಸಾಲ ವಸೂಲಾತಿ ಹಾಗೂ ಸಾಲದ ಮೇಲಿನ ಬಡ್ಡಿಯನ್ನು ಸಂಪೂರ್ಣವಾಗಿ ನಿಲ್ಲಿಸಬೇಕು. ಖಂಡಿತವಾಗಿಯೂ ಈಗ ರೈತರ ಬಳಿ ದುಡ್ಡಿಲ್ಲ. ನೀವೇನೇ ಮಾಡಿದರೂ ಅವರ ಹತ್ತಿರ ಮಾಂಸ, ಮೂಳೆ ಸಿಗುತ್ತದೆಯೇ ಹೊರತು ಮತ್ತೇನೂ ಸಿಗುವುದಿಲ್ಲ. ನಾನು ಒಂದು ಕ್ಷೇತ್ರಕ್ಕೆ ಸುಮಾರು 23 ವರ್ಷಗಳಿಂದ ಶಾಸಕನಾಗಿದ್ದೇನೆ. ಬಹಳಷ್ಟು ವರ್ಷಗಳಿಂದ ನನ್ನ ಕ್ಷೇತ್ರದ ಜನರು ನನ್ನನ್ನು ಗೆಲ್ಲಿಸುತ್ತಾ ಬಂದಿದ್ದಾರೆ. ಬಡ ಪಾಪಿಗಳು! ಏನು ಮಾಡುವುದಕ್ಕಾಗುತ್ತದೆ? ನನಗೆ ನೋವಾಗುತ್ತದೆ. ಮೊನ್ನೆ ದಿವಸ ನನ್ನ ಕ್ಷೇತ್ರದಲ್ಲಿ ಮೆಡಿಕಲ್ ಕ್ಯಾಂಪ್ ಏರ್ಪಡಿಸಿದೆ. ಕ್ಯಾಂಪಿಗೆ ಬೆಂಗಳೂರಿನಿಂದ ಪ್ರಸಿದ್ಧ ವೈದ್ಯರುಗಳು ಬಂದಿದ್ದರು. ಕ್ಯಾಂಪ್ ಮುಗಿದ ಬಳಿಕ ಸಾಯಂಕಾಲ ವೈದ್ಯರಿಗೆ ಫೋನ್ ಮಾಡಿ ಮೆಡಿಕಲ್ ಕ್ಯಾಂಪ್ ಹೇಗಾಯಿತು? ಎಷ್ಟು ಜನ ಪೇಷೆಂಟ್ ಬಂದಿದ್ದರು ಎಂದು ಕೇಳಿದಾಗ ಕ್ಯಾಂಪ್‌ಗೆ ಬಂದವರೆಲ್ಲರೂ ಪೇಷೆಂಟ್‌ಗಳೇ ಎಂದರು. ನಮ್ಮ ದೇಶದ, ರಾಜ್ಯದ ಜನರ ಆರ್ಥಿಕ ಮಟ್ಟ ಈ ರೀತಿ ಇದೆ. ಇದು ಸುಧಾರಣೆಯಾಗ ಬೇಕಾದರೆ ಈಗ ಅವರ ಅವರ ಹತ್ತಿರ ಹಣವಿಲ್ಲ. ಇಂತಹ ಸಂದರ್ಭದಲ್ಲಿ ಸಾಲ ವಸೂಲಾತಿಯನ್ನು ಮೂರು ವರ್ಷಗಳ ಕಾಲ ನಿಲ್ಲಿಸಬೇಕು. ಬಡ್ಡಿಯನ್ನು ಸಂಪೂರ್ಣ ಮನ್ನಾ ಮಾಡಬೇಕೆಂದು

ತಮ್ಮಲ್ಲಿ ವಿನಂತಿಸಿಕೊಳ್ಳುತ್ತಿದ್ದೇನೆ. ಮಾನ್ಯ ಉಪಾಧ್ಯಕ್ಷರೆ, ಯಾರಿಗೆ 2–3 ಎಕರೆಗಳಷ್ಟು ಜಮೀನು ಇದೆಯೋ, ಹತ್ತು ಎಕರೆ ಜಮೀನು ಇರುವವರೂ ಸಹ ಇವೊತ್ತು ಕಾಳುಗಳನ್ನು ಇಟ್ಟುಕೊಂಡಿಲ್ಲ. ಕಳೆದ ವರ್ಷ ಕೆಲವು ಕಡೆಗಳಲ್ಲಿ ರಾಗಿ ಬೆಳೆದರು. ಮಾರ್ಕೆಟ್ ಇಂಟರ್‌ವಿವ್ ಆಗುವ ಮೂಲಕ ನೀವು ಪರ್ಚೇಸ್ ಮಾಡಿದಿರಿ. ಅದು ಒಳ್ಳೆಯ ಕೆಲಸ. ಈಗ ರೈತರು ಇದ್ದ ರಾಗಿಯನ್ನು ಮಾರಿಕೊಂಡಿದ್ದಾರೆ. ಕನಿಷ್ಠ ಪಕ್ಷ ಸಾಲದ ರೂಪದಲ್ಲಿಯಾದರೂ ಒಂದೊಂದು ರೈತ ಕುಟುಂಬಕ್ಕೆ ಐದು ಕ್ವಿಂಟಾಲ್‌ನಷ್ಟು ರೇಷನ್ ಒದಗಿಸಿಕೊಡಿ, ಬೆಳೆದ ನಂತರ ಅವರು ತಂದುಕೊಡುತ್ತಾರೆ. ನಿಮಗೇನೂ ತೊಂದರೆಯಾಗುವುದಿಲ್ಲ. ನಿಮ್ಮ ಹತ್ತಿರ ರಾಗಿ, ಅಕ್ಕಿ ಇದೆಯೆಂದು ಹೇಳುತ್ತಿದ್ದೀರಿ. ವಿಶೇಷವಾಗಿ ಬಯಲು ಸೀಮೆ ಪ್ರದೇಶದಲ್ಲಿ ಅದು ಉತ್ತರ ಕರ್ನಾಟಕ, ದಕ್ಷಿಣ ಕರ್ನಾಟಕವೆಂದಲ್ಲ. ಎಲ್ಲಾ ಭಾಗಗಳಲ್ಲೂ ಬಡವರಿದ್ದಾರೆ. ಬಡತನದ ಸ್ಥಿತಿ ಇದೆ. ಸಾಲದ ರೂಪದಲ್ಲಾದರೂ ನೀವು ರೇಷನ್ ಒದಗಿಸಿಕೊಟ್ಟರೆ ಬಹಳ ಉಪಯೋಗವಾಗುತ್ತದೆಂಬ ಮಾತನ್ನು ಈ ಸಂದರ್ಭದಲ್ಲಿ ಹೇಳ ಬಯಸುತ್ತೇನೆ. ಇನ್ನು ತೋಟಗಾರಿಕೆ ಬೆಳೆ ಕುರಿತು ಹೇಳುವುದಾದರೆ, ಈ ಬೆಳೆಗಳಿಗೆ ತಾವು ಪರಿಹಾರ ಕೊಡುವ ವಿಚಾರವನ್ನು ತೀವ್ರವಾಗಿ ಪರಿಶೀಲಿಸಬೇಕು. 1,500 ಕೋಟಿ ರೂಪಾಯಿಗಳಿಗೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರಕ್ಕೆ ತಾವು ಏನು ಮನವಿ ಸಲ್ಲಿಸಿದ್ದೀರಿ, ಮತ್ತೊಮ್ಮೆ ನಾವೆಲ್ಲರೂ ನಿಮ್ಮೊಂದಿಗೆ ಬರುತ್ತೇವೆ. ಐದು ಸಾವಿರ ಕೋಟಿ ರೂಪಾಯಿಗಳಷ್ಟು ಪರಿಹಾರ ಬೇಕಾಗುತ್ತದೆ. ಈ ದಿಸೆಯಲ್ಲಿ ಕೇಂದ್ರ ಸರ್ಕಾರಕ್ಕೆ ನಾವು ಒತ್ತಾಯ ಮಾಡೋಣ. ಕೃತಕ ಮಳೆ ಬರಿಸುವುದಾಗಿ ಕೆಲವು ಮಂತ್ರಿಗಳು ಹಾಸ್ಯಾಸ್ಪದವಾಗಿ ಹೇಳಿಕೆ ನೀಡುತ್ತಾರೆ. ಕೃತಕ ಮಳೆಯನ್ನು ಎಲ್ಲಿಂದ ಬರಿಸುವುದಕ್ಕಾಗುತ್ತದೆ? ಕೃತಕ ಮಳೆ ತರಿಸುವಂತಿದ್ದರೆ ಬರಗಾಲ ಏಕಿರುವುದು? ಸುಮ್ಮನೆ ಒಂದು ಹೇಳಿಕೆ ಕೊಟ್ಟು ಬಿಡುವುದು. ಪಾದಯಾತ್ರೆ ಮಾಡುವಾಗ ನಿಮಗೆ ಬಹಳ ಹಿಡಿಸಿತೆಂದು ಕಾಣುತ್ತದೆ. ಅದಕ್ಕಾಗಿ ಅವರಿಗೆಲ್ಲಾ ನೀವು ಶಹಭಾಷ್‌ಗಿರಿ ಕೊಟ್ಟಿರಬಹುದು. ನೀವು ಪಾದಯಾತ್ರೆ ಮಾಡಿದ್ದಿರಲ್ಲಾ. ಆ ಸಂದರ್ಭದಲ್ಲಿ ಕೃತಕ ಮಳೆ ಬರಿಸುತ್ತೇವೆಂದು ಕೆಲವು ಮಂತ್ರಿಗಳು ಹೇಳಿದ್ದರು. ಇದು ಸಾಧ್ಯವಾಗದಿರುವ ವಿಚಾರ. ಸರ್ಕಾರ ಗಂಭೀರವಾಗಿ ಬರಗಾಲದ ಪರಿಸ್ಥಿತಿಯನ್ನು ಎದುರಿಸಲು ಸಿದ್ಧತೆ ನಡೆಸಬೇಕು. ಮಳೆ ಬರುವ ಸೂಚನೆ ಇದೆ. ಮಳೆ ಬಂದರೆ ರೈತರು ಯಾರೂ ಕೂಡ ನಮ್ಮ–ನಿಮ್ಮ ಬಳಿ ಬರುವುದಿಲ್ಲ. ಅವರ ಪಾಡಿಗೆ ಅವರು ಕೆಲಸ ಮಾಡಿಕೊಂಡು ಹೊರಟು ಹೋಗುತ್ತಾರೆ. ಇವೊತ್ತು ಬಹಳ ಪ್ರಮುಖವಾಗಿ 2–3 ವಿಚಾರಗಳನ್ನು ಹೇಳಿದ್ದೇನೆ. ಸರ್ಕಾರ ಇದರ ಕಡೆ ಗಮನ ಕೊಡಬೇಕೆಂದು ಹೇಳುತ್ತಾ ಇಷ್ಟು ಹೊತ್ತು ನನಗೆ ಮಾತನಾಡಲು ಅವಕಾಶ ಕಲ್ಪಿಸಿಕೊಟ್ಟ ತಮಗೆ ಧನ್ಯವಾದಗಳನ್ನರ್ಪಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಪ್ರಕಾಶ್ ಖಂಡ್ರೆ (ಭಾಲ್ಕಿ):– ಮಾನ್ಯ ಉಪಾಧ್ಯಕ್ಷರೆ, ಬೀದರ್ ಜಿಲ್ಲೆ ಅತಿ ಹಿಂದುಳಿದ ಜಿಲ್ಲೆಯಾಗಿದ್ದು, ಬೆಂಗಳೂರಿನಿಂದ ಸುಮಾರು 800 ಕಿಲೋ ಮೀಟರ್‌ಗಳಷ್ಟು ದೂರವಿರುವ ಕಾರಣ ಸರ್ಕಾರ ವಿಶೇಷ ಗಮನಹರಿಸಬೇಕಾಗಿದೆ. ಕರ್ನಾಟಕ ರಾಜ್ಯದಲ್ಲಿ ಸತತವಾಗಿ ಮೂರು ವರ್ಷಗಳಿಂದ ಭೀಕರ ಬರಗಾಲ ಬರುತ್ತಿದೆ. ಇದರಿಂದಾಗಿ ರಾಜ್ಯದ ಜನತೆ ಕುಡಿಯುವ ನೀರಿನ ಸಮಸ್ಯೆ ಎದುರಿಸುತ್ತಿದ್ದು, ರೈತರು ಮಳೆ ಬಾರದೆ ಕಂಗಾಲಾಗಿದ್ದಾರೆ, ಸಾಲದ ಹೊರೆ ತಾಳಲಾರದೆ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ. ರೈತ ಕಾರ್ಮಿಕರು ಕೆಲಸವಿಲ್ಲದೆ ಹೊರ ರಾಜ್ಯಗಳಾದ ಗೋವಾ, ಆಂಧ್ರಪ್ರದೇಶ, ಮಹಾರಾಷ್ಟ್ರಗಳಿಗೆ ವಲಸೆ ಹೋಗುತ್ತಿದ್ದಾರೆ. ಬೀದರ್ ಜಿಲ್ಲೆ ಬೆಂಗಳೂರಿನಿಂದ ಸಾಕಷ್ಟು ದೂರದಲ್ಲಿದೆ, ಅಲ್ಲದೆ, ಆಂಧ್ರಪ್ರದೇಶ ಮತ್ತು ಮಹಾರಾಷ್ಟ್ರದ ಗಡಿ ಭಾಗಕ್ಕೆ ಹೊಂದಿಕೊಂಡಿದೆ.

ಈ ಭಾಗಲದಲ್ಲಿ ಭಾಲ್ಕಿ ಕ್ಷೇತ್ರವಿದ್ದು, ಈ ಕ್ಷೇತ್ರದಲ್ಲಿ ಕಳೆದ ವರ್ಷಕ್ಕಿಂತ ಈ ವರ್ಷ ಕಡಿಮೆ ಮಳೆಯಾಗುತ್ತಿದೆ. ಇಲ್ಲಿನ ರೈತರು ಭೀಕರ ಬರಗಾಲದ ಪರಿಣಾಮ ಬಹಳಷ್ಟು ಸಮಸ್ಯೆಗಳನ್ನು ಎದುರಿಸುತ್ತಿದ್ದು, ಶೇಕಡ 20ರಷ್ಟು ರೈತರು ಕೂಡ ಬೆಳೆಗಾಗಿ ಬಿತ್ತಿಲ್ಲ. ಕುಡಿಯುವ ನೀರಿನ ಸಮಸ್ಯೆ ಬಹಳಷ್ಟಿದೆ. ಬೆಳೆ ಇಲ್ಲದೆ, ಬೆಳೆ ವಿಮೆ ಇಲ್ಲದೆ ಹಾಗೂ ಸಕ್ಕರೆ ಕಾರ್ಖಾನೆಯವರೂ ಸಹ ಕಬ್ಬು ಹಣ ನೀಡದಿರುವುದರಿಂದ ರೈತರು ಚಿಂತಿತರಾಗಿದ್ದಾರೆ. ಇಂತಹ ಪರಿಸ್ಥಿತಿಯಲ್ಲಿ ಭಾಲ್ಕಿ ಕ್ಷೇತ್ರದ ಹಾಲಹಳ್ಳಿ ಗ್ರಾಮದಲ್ಲಿ ಒಬ್ಬ ರೈತ ಆತ್ಮಹತ್ಯೆ ಮಾಡಿಕೊಂಡಿದ್ದಾನೆ. ಭಾಲ್ಕಿ ಪಟ್ಟಣದಲ್ಲಿ ಕುಡಿಯುವ ನೀರಿನ ಭೀಕರ ಸಮಸ್ಯೆ ಇದೆ. ಪ್ರತಿ ವರ್ಷವೂ ಈ ಸಮಸ್ಯೆ ಇರುತ್ತದೆ. ಸಮಸ್ಯೆ ಈ ರೀತಿ ಇದ್ದರೂ ಸಹ ಇವೊತ್ತಿನವರೆಗೆ ರೈತರು, ಕಾರ್ಮಿಕರು, ಹೆಣ್ಣು ಮಕ್ಕಳು ನೀರಿನ ಸಲುವಾಗಿ ತುಂಬಾ ಶ್ರಮಪಡುತ್ತಿದ್ದು, ರಾಸ್ತಾ ರೋಖೋ ಮಾಡುತ್ತಿದ್ದಾರೆ. ಆದರೂ ನೀರಿನ ಸಮಸ್ಯೆ ಬಗೆ ಹರಿಸುತ್ತಿಲ್ಲ. ಬೋರ್ ಕೊರೆಯಲು ಹಾಗೂ ಪಂಪ್‌ಸೆಟ್ ಸಲುವಾಗಿ ಕೆಯುಡಬ್ಲ್ಯೂಎಸ್‌ಗೆ ಹಣ ಕೊಟ್ಟಿದ್ದೇವೆಂದು ಜಿಲ್ಲಾಧಿಕಾರಿಯವರು ಹೇಳಿದರೆ, ಕೆಯುಡಬ್ಲ್ಯೂಎಸ್‌ನರು ಜಿಲ್ಲಾಧಿಕಾರಿ ಮೇಲೆ ಹೇಳುತ್ತಾರೆ. ಇದರಿಂದ ಸಮಸ್ಯೆಯುಂಟಾಗುತ್ತಿದೆ. ಜಿಲ್ಲಾ ಉಸ್ತುವಾಗಿ ಸಚಿವರಾಗಿರುವ, ಇಂಧನ ಮಂತ್ರಿಗಳಾದ ಬಸವರಾಜ ಪಾಟೀಲ್ ಹುಮ್ನಾಬಾದ್‌ರವರ ಸಮ್ಮುಖದಲ್ಲಿಯೇ ಇಂತಹ ಘಟನೆಗಳು ಜರುಗಿವೆ. ಪರಿಸ್ಥಿತಿ ಹೀಗಿರುವಾಗ ಸರ್ಕಾರ ಕುಡಿಯುವ ನೀರಿನ ಸಲುವಾಗಿ ಬಹಳಷ್ಟು ಆದ್ಯತೆಯಿಂದ ಕೆಲಸ ಮಾಡಬೇಕಾಗಿದೆ. ಭಾಲ್ಕಿ ಪಟ್ಟಣಕ್ಕೆ ಎಂಟು ದಿವಸಗಳಿಗೊಮ್ಮೆಯೂ ನೀರು ಸಿಗುವುದಿಲ್ಲ. ಕಾರಂಜಾ ಡ್ಯಾಮ್ 1972ರಲ್ಲಿ ಪ್ರಾರಂಭಗೊಂಡಿದ್ದರೂ ಅಲ್ಲಿಂದ ಪಟ್ಟಣಕ್ಕೆ ಸ್ವಲ್ಪ ಕುಡಿಯುವ ನೀರು ಸಿಗುವಂಥ ಪರಿಸ್ಥಿತಿ ಇದ್ದರೂ, ಭಾಲ್ಕಿಗೆ ನೀರು ಒದಗಿಸಿಕೊಡುವ ಸಂಬಂಧವಾಗಿ ಆರೂವರೆ ಕೋಟಿ ರೂಪಾಯಿಗಳ ವಿಶೇಷ ಯೋಜನೆಯೊಂದನ್ನು ಮಾನ್ಯ ಮುಖ್ಯಮಂತ್ರಿಗಳು ಮಂಜೂರು ಮಾಡಿದ್ದಾರೆ. ಯೋಜನೆ ಕೈಗೆತ್ತಿಕೊಳ್ಳಲು ಇನ್ನೂ ಟೆಂಡರ್ ಕರೆದಿಲ್ಲ, ಕೆಲಸ ಪ್ರಾರಂಭವಾಗಿಲ್ಲ. ಭಾಲ್ಕಿ ಕ್ಷೇತ್ರದಲ್ಲಿ ಕಳೆದ ವರ್ಷಕ್ಕಿಂಥ ಈ ವರ್ಷ ಕಡಿಮೆ ಮಳೆ ಅಗಿರುವುದರಿಂದ ರೈತರು ಬಿತ್ತನೆ ಕಾರ್ಯ ಕೈಗೊಂಡಿಲ್ಲ. ಕುಡಿಯುವ ನೀರಿನ ಸಮಸ್ಯೆ ಜೊತೆಗೆ ದನ–ಕರುಗಳ ಮೇವಿನ ಸಮಸ್ಯೆಯೂ ಇದೆ. ಮೇವಿಲ್ಲದೆ ದನ–ಕರುಗಳನ್ನು ಕಸಾಯಿ ಖಾನೆಗಳಿಗೆ ಕಳುಹಿಸುವಂಥ ಸಂದರ್ಭ ಬಂದೊದಗಿದೆ. ಈ ನಿಟ್ಟಿನಲ್ಲಿ ರೈತ ಕಾರ್ಮಿಕರಿಗೆ ಕೈತುಂಬಾ ಕೆಲಸ ಕೊಟ್ಟು ಸಹಕಾರ ನೀಡಬೇಕಾಗುತ್ತದೆ. ಎರಡು ತಿಂಗಳ ಹಿಂದೆ ಬೀದರ್ ಜಿಲ್ಲೆಯ ಉಸ್ತುವಾರಿ ಸಚಿವರ ಅಧ್ಯಕ್ಷತೆಯಲ್ಲಿ ಜಿಲ್ಲಾ ಪಂಚಾಯತ್‌ನಲ್ಲಿ ಬರ ಪರಿಹಾರ ಕಾಮಗಾರಿ ಕುರಿತಂತೆ ಒಂದು ಸಭೆ ನಡೆಯಿತು. ಸಭೆಯಲ್ಲಿ ಜಿಲ್ಲೆಯಲ್ಲಿರುವ ಪ್ರತಿ ಶಾಸಕರ ಮತಕ್ಷೇತ್ರದ ವ್ಯಾಪ್ತಿಗೊಳಪಡುವ ಗ್ರಾಮಾಂತರ ಪ್ರದೇಶದಲ್ಲಿ 10–15 ಕೊಳವೆ ಬಾವಿಗಳನ್ನು ಕೊರೆಸುವ ಮೂಲಕ ರೈತರಿಗೆ ಕುಡಿಯುವ ನೀರಿನ ವ್ಯವಸ್ಥೆ ಕಲ್ಪಿಸಿಕೊಡಬೇಕೆಂದು ನಿರ್ಣಯವಾಯಿತು. ನಿರ್ಣಯ ಕೈಗೊಂಡು ಎರಡು ತಿಂಗಳುಗಳಾದರೂ ಎರಡು ಕೊಳವೆ ಬಾವಿಗಳನ್ನೂ ಸಹ ಕೊರೆಸಿರುವುದಿಲ್ಲ. ವಿಶೇಷವಾಗಿ 2–3 ಕೊಳವೆ ಬಾವಿಗಳನ್ನು ಕೊರೆಸಿರುವ ಕಡೆಗಳಲ್ಲಿ 3–4 ಇಂಚುಗಳಷ್ಟು ನೀರು ಬಂದರೂ ಪೈಪ್‌ಲೈನ್ ಹಾಕಿ ಮೋಟಾರ್ ಸ್ಥಾಪಿಸಿ ನೀರು ಒದಗಿಸಿಕೊಡುತ್ತಿಲ್ಲ. ಈ ತರಹ ಬಹಳಷ್ಟು ಉದಾಹರಣೆಗಳಿವೆ. ಆರು ತಿಂಗಳುಗಳಿಂದ ಆ ಊರಿನಲ್ಲಿ ನೀರಿಲ್ಲ. ಟ್ಯಾಂಕರ್‌ಗಳಿಂದ ನೀರು ಒದಗಿಸಿಕೊಡಲಾಗುತ್ತಿದೆ. ಶೌಚಕ್ಕೆ ನೀರು ಇಲ್ಲದಂತಾಗಿದೆ. ಇಂತಹ ಪರಿಸ್ಥಿತಿಯಲ್ಲಿ ಜನರು 8–9 ಕಿಲೋಮೀಟರ್‌ಗಳಷ್ಟು ದೂರದಿಂದ ನೀರು ತಂದು ಕುಡಿಯುತ್ತಿದ್ದಾರೆ. ಭೀಕರ ಬರಗಾಲ ಇರುವ ಹಿನ್ನೆಲೆಯಲ್ಲಿ ಸರ್ಕಾರ ಇದಕ್ಕೆ ಹೆಚ್ಚಿನ ಆದ್ಯತೆ ನೀಡುವ ಮೂಲಕ

ಬೀದರ್ ಜಿಲ್ಲೆಯ ಭಾಲ್ಕಿ ಕ್ಷೇತ್ರದಲ್ಲಿ ದನ–ಕರುಗಳಿಗೆ ಗೋಶಾಲೆಗಳನ್ನು ತೆರೆದು, ಮಏವಿನ ವ್ಯವಸ್ಥೆ ಕಲ್ಪಿಸಿಕೊಟ್ಟು ಸಮಸ್ಯೆ ಬಗೆಹರಿಸುತ್ತೀರೆಂದು ನಂಬಿದ್ದೇನೆ. ನಮ್ಮ ದೇಶಕ್ಕೆ ಸ್ವಾತಂತ್ರ್ಯ ಬಂದು ಐವತ್ತು ವರ್ಷ ಕಳೆದರೂ ಕೂಡ ಕುಡಿಯುವ ನೀರಿನ ಸಮಸ್ಯೆಯನ್ನು ಶಾಶ್ವತವಾಗಿ ಬಗೆಹರಿಸುತ್ತಿಲ್ಲ. ಬೀದರ್ ಜಿಲ್ಲೆಯಲ್ಲಿ ಕೊಳವೆ ಬಾವಿಗಳಲ್ಲಿನ ಅಂತರ್ಜಲ ಮಟ್ಟ 500 ರಿಂದ 700 ಅಡಿಗಳಷ್ಟು ಕೆಳಗಡೆ ಹೋಗಿದೆ. ನಾವು ಹೊಸ ಕೊಳವೆ ಬಾವಿಗಳನ್ನು ಕೊರೆಯುವುದಕ್ಕಿಂತ ಇದ್ದ ಬಾವಿಗಳಿಗೆ ಮತ್ತು ಕೊಳವೆ ಬಾವಿಗಳಿಗೆ ರೀಚಾರ್ಜ್ ಮಾಡುವ ವ್ಯವಸ್ಥೆ ಸರ್ಕಾರ ಮಾಡುವುದು ಅತೀ ಅವಶ್ಯಕವಾಗಿದೆ. ಹತ್ತು ಇಪ್ಪತ್ತು ಎಷ್ಟು ಬೋರನ್ನು ಹೊಡೆದರೂ ಅದರಿಂದ ಈಲ್ಡ್ ಕಡಿಮೆಯಾಗುತ್ತಿದೆ, ಆದ್ದರಿಂದ ಬೋರ್‌ವೆಲ್ ಮತ್ತು ಓಪನ್ ವೆಲ್‌ಗಳಿಗೆ ರೀಜಾರ್ಜ್ ಮಾಡುವುದು ಬಹಳ ಜರೂರು ಇದೆ. ಬೀದರ್ ಜಿಲ್ಲೆಯಲ್ಲಿ ವಿಶ್ವಬ್ಯಾಂಕ್‌ನ ಅಡಿಯಲ್ಲಿ ಎಷ್ಟು ಕೆಲಸಗಳನ್ನು ತೆಗೆಟುಕೊಂಡಿದ್ದಾರೆ, ಅದರಲ್ಲಿ ಪೈಪ್‌ಲೈನ್ ಮಾಡಿದ್ದಾರೆ, ಮೋಟಾರ್ ಕೂರಿಸಿದ್ದಾರೆ, ಟ್ಯಾಂಕ್‌ನ್ನು ಮಾಡಿದ್ದಾರೆ, ಈ ಬೋರ್‌ನ ಈಲ್ಡ್ ಒಂದು ವರ್ಷದಲ್ಲಿ ಏನಿದೆ, ನಾವು ಈ ಯೋಜನೆಯಲ್ಲೇನು ತೆಗೆದುಕೊಳ್ಳುತ್ತಿದ್ದೇವೆ, ಆ ಬೋರ್ ಫೆಲ್ಯೂರ್ ಅದರೆ ಇಡೀ ಯೋಜನೆಯೇ ಫೇಲಾಗುತ್ತಿದೆ. ಆದ್ದರಿಂದ ಇವತ್ತು ಶಾಶ್ವತವಾಗಿ ನದಿಗಳಿಂದ, ಕೆರೆಗಳಿಂದ ಕುಡಿಯುವ ನೀರಿನ ವ್ಯವಸ್ಥೆ ಮಾಡುವುದು ಜರೂರಾಗಿದೆ. ಇವತ್ತು ಸಬ್‌ಮಿಷನ್ ಪ್ರಾಜೆಕ್ಟ್‌ನ ಕೆಲಸ ಎಲ್ಲಾ ಕಡೆ ಮುಗಿಯುತ್ತಿದೆ. ಈ ವರ್ಷದಲ್ಲಿ ಸಬ್‌ಮಿಷನ್ ಪ್ರಾಜೆಕ್ಟ್‌ನ ಪೀರಿಯೇಡ್ ಮುಗಿಯುತ್ತಿದೆ. ಆದರೆ ನಮ್ಮ ಬೀದರ್ ಜಿಲ್ಲೆಯಲ್ಲಿ ಈ ಸಬ್‌ಮಿಷನ್ ಪ್ರಾಜೆಕ್ಟ್‌ನ್ನು ಈಗ ಇನ್ನೂ ಎಸ್ಟಿಮೇಟನ್ನು ಮಾಡಿ ಇಟ್ಟುಕೊಂಡಿದ್ದಾರೆ, ಅದು ಯಾವುದೂ ಇವತ್ತು ನಮ್ಮಲ್ಲಿ ಕೆಲಸ ಪ್ರಾರಂಭವಾಗಿಲ್ಲ. ಇದನ್ನು ಮಾಡಬೇಕೆಂದು ಮಾನ್ಯ ಮುಖ್ಯಮಂತ್ರಿಯವರಲ್ಲಿ ಕಳಕಳಿಯಿಂದ ಕೇಳಿಕೊಳ್ಳುತ್ತೇನೆ. ನಮ್ಮ ಬೀದರ್ ಜಿಲ್ಲೆ ಕಾರಂಜಾ ಪ್ರಾಜೆಕ್ಟ್ 1972ರಲ್ಲಿ ಪ್ರಾರಂಭವಾಗಿ, ಈ ಯೋಜನೆಯಲ್ಲಿ ಕಾರಂಜಾ ಡ್ಯಾಂ ನಿರ್ಮಿಸಿದ ಕಾರಣ ಇವತ್ತು ಭಾಲ್ಕಿ ಪಟ್ಟಣಕ್ಕೆ ಮತ್ತು ಬೀದರ್ ನಗರಕ್ಕೆ ಕುಡಿಯುವ ನೀರು ಸರಬರಾಜು ಮಾಡಲಾಗುತ್ತಿದೆ. ಈ ಡ್ಯಾಂ ಇಲ್ಲದಿದ್ದರೆ ಕುಡಿಯುವ ನೀರಿನ ಸಮಸ್ಯೆಯಾಗುತ್ತಿತ್ತು, ದನಕರುಗಳಿಗೆ ಹಾಗೂ ಬೀದರ್ ಜಿಲ್ಲೆಯ ಜನರಿಗೆ ಸಮಸ್ಯೆಯಿಂದ ತೊಂದರೆ ಅನುಭವಿಸುತ್ತಿದ್ದರು. ಆದರೆ ನಾವು ಸ್ವಾತಂತ್ರ್ಯ ಹೊಂದಿ 55 ವರ್ಷಗಳಾದರೂ ಕೂಡ ನಾರಂಜಾ ಮತ್ತು ಮಾಂಜ್ರಾ ನದಿಗೆ ಬಚಾವತ್ ಅವಾರ್ಡ್ ಪ್ರಕಾರ ನೀರನ್ನು ಉಪಯೋಗಿಸಿಲ್ಲ. ಇವತ್ತು ಮಾನ್ಯ ಮುಖ್ಯಮಂತ್ರಿಗಳು ಗಮನಹರಿಸಿ, ಬ್ಯಾರೇಜ್ ಆಗಲಿ, ಅಣೆಕಟ್ಟುಗಳಾಗಲಿ, ಪಿಕಪ್ ಡ್ಯಾಂ ಮತ್ತು ಬಂದರುಗಳನ್ನು ನಿರ್ಮಾಣ ಮಾಡದ ಕಾರಣ ಆಂಧ್ರ ಪ್ರದೇಶದವರು ದೊಡ್ಡ ದೊಡ್ಡ ಡ್ಯಾಂಗಳನ್ನು ಮಾಡಿ ನೀರನ್ನು ಉಪಯೋಗಿಸುತ್ತಿದ್ದಾರೆ. ಇವತ್ತು ಕರ್ನಾಟಕದ ನೀರನ್ನು ತೆಗೆದುಕೊಳ್ಳುತ್ತಿದ್ದಾರೆ. ನಮ್ಮ ರಾಜ್ಯದ ಪಾಲಿನ ನೀರನ್ನು ಆಂಧ್ರದವರು ಉಪಯೋಗಿಸುತ್ತಿದ್ದಾರೆ. ಈ ಎರಡೂ ನದಿಗಳಿಗೆ ಬ್ಯಾರೇಜ್, ಅಣೆಕಟ್ಟು, ಪಿಕಪ್ ಡ್ಯಾಂಗಳನ್ನು ಮಾಡಿದರೆ ಹುಮನಾಬಾದ್, ಹುಲಸೂರ್, ಬಾಲ್ಕಿ, ಔರಾದ್ ಮತ್ತು ಬೀದರ್ ಕ್ಷೇತ್ರಕ್ಕೆ ಕುಡಿಯುವ ನೀರಿನ ಸಮಸ್ಯೆ, ರೈತರಿಗೆ ಹೊಲಗಳಿಗೆ ನೀರಿನ ಸಮಸ್ಯೆ ಮತ್ತು ದನಕರುಗಳಿಗೆ ಮೇವು, ಕುಡಿಯುವ ನೀರಿನ ಸಮಸ್ಯೆ ಬಗೆಹರಿಯುತ್ತದೆ. ಜೊತೆಗೆ ಅಂತರ್ಜಲಮಟ್ಟ ನಮ್ಮ ಎಲ್ಲಾ ತಾಲ್ಲೂಕುಗಳಲ್ಲಿ ಹೆಚ್ಚಾಗುತ್ತದೆ, ಏಕೆಂದರೆ, ಈ ಡ್ಯಾಂಗಳಿಂದ ಕೆನಾಲು, ಸಬ್‌ಕೆನಾಲು, ಡಿಸ್ಟ್ರಿಬ್ಯೂಟರಿಗಳು ಆಗಿ ಎಲ್ಲಾ ಏರಿಯಾದಲ್ಲಿ ಈ ನದಿಯ ನೀರನ್ನು ಉಪಯೋಗ ಮಾಡಿಕೊಂಡರೆ ನಮ್ಮ ಜನರಿಗೆ ಬಹಳಷ್ಟು ಸಮಸ್ಯೆ ಕಡಿಮೆಯಾಗುತ್ತದೆ. ಇವತ್ತು ಆಂಧ್ರದವರು ತಮ್ಮದೇ ಆದಂಥ ಸಂಘ ಸಂಸ್ಥೆಗಳನ್ನು

ಮಾಡಿ, ನಮ್ಮ ಕರ್ನಾಟಕದ ಬೀದರ್ ಜಿಲ್ಲೆಯಿಂದ ಹಾಗು ಹೋಗುವಂಥ ಮಾಂಜ್ರಾ ಮತ್ತು ನಾರಂಜಾ ನದಿಯ ನೀರಿಗೆ ನಾವು ಬ್ಯಾರೇಜ್ ಮಾಡುತ್ತಿರುವಾಗ ಇದನ್ನು ಮಾಡಬಾರದೆಂದು ಅವರು ರಸ್ತೆ ತಡೆ ಮತ್ತು ಸರ್ಕಾರದ ಮೇಲೆ ಒತ್ತಡವನ್ನು ಸಹ ತರುತ್ತಿದ್ದಾರೆ. ಆಂಧ್ರ ಸರ್ಕಾರದವರು ನಾವು ಬ್ಯಾರೇಜ್ ಕಟ್ಟಬಾರದು, ಬೀದರ್ ಜಿಲ್ಲೆಯವರು ಈ ನೀರನ್ನು ಉಪಯೋಗಿಸಿಕೊಳ್ಳಬಾರದೆಂದು ಬಹಳಷ್ಟು ಯೋಜನೆ ಮಾಡುತ್ತಿದ್ದಾರೆ, ಅವರು ಸರ್ಕಾರದ ಮೇಲೆ ಒತ್ತಡವನ್ನು ತಂದು ನಮ್ಮ ನೀರನ್ನು ಅವರು ತೆಗೆದುಕೊಳ್ಳಬೇಕೆಂದು ವಿಚಾರ ಮಾಡುತ್ತಿದ್ದಾರೆ, ಇದು ಪತ್ರಿಕೆಯಲ್ಲೂ ಬಂದಿದೆ. ಮಾನ್ಯ ಮುಖ್ಯಮಂತ್ರಿಯವರು ಕಾಳಜಿ ವಹಿಸಿ, ಮಾಂಜ್ರಾ ನದಿಯ 22 ಟಿ.ಎಂ.ಸಿ. ನೀರೇನು ನಮಗೆ ಸಿಗುತ್ತದೆ ಅದನ್ನು ಉಪಯೋಗಿಸಲು ಏನಾದರೂ ಡ್ಯಾಂಗಳು ಮತ್ತು ಬ್ಯಾರೇಜ್‌ಗಳನ್ನು ಮಾಡಿಕೊಟ್ಟರೆ ನಮ್ಮ ಬೀದರ್ ಜಿಲ್ಲೆಯಲ್ಲಿರುವ ನೀರಿನ ಸಮಸ್ಯೆ ಕಡಿಮೆಯಾಗುತ್ತದೆ, ಮತ್ತು ಇಂಥ ಬರಗಾಲದ ಸಮಸ್ಯೆ ಬಂದರೂ ಸಹ ಎದುರಿಸುವಂಥ ಶಕ್ತಿ ನಮಗೆ ಇರುತ್ತದೆ. ಅದೇ ರೀತಿ, ಸ್ವಾತಂತ್ರ್ಯ ಬಂದು 55 ವರ್ಷವಾದರೂ ಈ ಬ್ಯಾರೇಜ್‌ಗಳು ಮತ್ತು ಬ್ರಿಜ್‌ಕಂಬ್ಯಾರೇಜ್, ಡ್ಯಾಂ ಇವೆಲ್ಲವನ್ನು ಕಟ್ಟದಿದ್ದರಿಂದ ಬಂದಂಥ ಬರ ಪರಿಸ್ಥಿತಿಯಿಂದ ಜನರಿಗೆ ಬಹಳಷ್ಟು ತೊಂದರೆಯಾಗುತ್ತಿದೆ, ನಾವು ಬರವನ್ನು ಎದುರಿಸುವಂಥ ಶಕ್ತಿ ಇಲ್ಲ. ನಮ್ಮ ಗಡಿ ಭಾಗದಲ್ಲಿ ಮಹಾರಾಷ್ಟ್ರದವರು ದೊಡ್ಡ ಪ್ರಮಾಣದಲ್ಲಿ ವಾಟರ್‌ಶೆಡ್ ಕಾರ್ಯಕ್ರಮದಲ್ಲಿ ಕ್ರಾಂತಿ ಮಾಡುತ್ತಿದ್ದಾರೆ. ನಮ್ಮ ಕರ್ನಾಟಕದಲ್ಲಿ ಪ್ರತಿ ಹಳ್ಳಕೊಳ್ಳ ಮತ್ತು ನದಿಗಳಿಗೆ ವಾಟರ್‌ಶೆಡ್ ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕಾಗಿದೆ, ಹೊಸ ಕೆರೆಗಳು, ಕೆರೆಗಳ ಜೀರ್ಣೋದ್ಧಾರ ಮತ್ತು ಕೆರೆಗಳ ಪುನರ್ಜೀವನ ಕೆರೆಗಳ ಆಧುನೀಕರಣ, ರೈತ ಕಾಯಕ ಕೆರೆಗಳು ಇವೆಲ್ಲಾ ಯೋಜನೆಗಳನ್ನು ಹಮ್ಮಿಕೊಂಡು ಮಳೆಯ ನೀರು ಹೆಚ್ಚಿನ ಪ್ರಮಾಣದಲ್ಲಿ ಹರಿದು ಹೋಗದಂತೆ ಅಲ್ಲಿಂದಲ್ಲೇ ನೀರನ್ನು ಹಿಡಿದು ಅಂತರ್ಜಲವನ್ನು ಹೆಚ್ಚು ಮಾಡುವಂಥ ಕೆಲಸವನ್ನು ಮಾಡಬೇಕಾಗಿದೆ. ನೆರೆ ರಾಜ್ಯವಾದ ಮಹಾರಾಷ್ಟ್ರದಲ್ಲಿ ಹೋಗಿ ಪ್ರತಿಯೊಂದು ಊರನ್ನು ನೋಡಿದರೆ ಅಲ್ಲಿ ವಾಟರ್‌ಶೆಡ್ ಕಾರ್ಯಕ್ರಮವನ್ನು ತೆಗೆದುಕೊಂಡಿದ್ದಾರೆ, ಮಳೆಯಿಂದ ಬಿದ್ದಂಥ ನೀರನ್ನು ಸಂಪೂರ್ಣವಾಗಿ ಉಪಯೋಗಿಸುತ್ತಿದ್ದಾರೆ, ನಾವೂ ಆ ರೀತಿ ಮಾಡಿದರೆ ಬರಗಾಲ ಬಂದರೂ, ರಾಜ್ಯದಲ್ಲಿ ವಿಶೇಷವಾಗಿ ಬೀದರ್ ಜಿಲ್ಲೆಯಲ್ಲಿ ನದಿಗಳೂ ಇದೆ, ಒಳ್ಳೆಯ ಫರ್ಟೈಲ್ ಲ್ಯಾಂಡ್ ಸಹ ಇದೆ, ಆದರೆ ಇವತ್ತಿನವರೆಗೆ ಇದನ್ನು ನಾವು ಉಪಯೋಗ ಮಾಡುತ್ತಿಲ್ಲ. ವಿಶೇಷವಾಗಿ ಮಾಂಜ್ರಾದ 90 ಪರ್‌ಸೆಂಟ್ ನೀರನ್ನು ಆಂಧ್ರಕ್ಕೆ ಬಿಡುತ್ತಿದ್ದೇವೆ. ಆಂಧ್ರದವರು ನಮಗೆ ತೊಂದರೆ ಕೊಡದಂತೆ ನಾವು ಅಡ್ವಾನ್ಸ್ ಆಗಿ ನಮ್ಮಲ್ಲಿರುವ ನೀರನ್ನು ಉಪಯೋಗಿಸಬೇಕು ಮತ್ತು ಬ್ಯಾರೇಜ್ ಕಟ್ಟಬೇಕೆಂದು ಸರ್ಕಾರಕ್ಕೆ ನನ್ನ ಕಳಕಳಿಯ ವಿನಂತಿ ಬೀದರ್ ಜಿಲ್ಲೆಯಲ್ಲಿ 1972–73 ಕಾರಂಜಾ ಪ್ರಾಜೆಕ್ಟ್ ಪ್ರಾರಂಭವಾಗಿ ಇವತ್ತು ಡ್ಯಾಂ ಕಂಪ್ಲೀಟ್ ಆಗಿದೆ. ಬಹಳಷ್ಟು ರೈಟ್ ಬ್ಯಾಂಕ್ ಮತ್ತು ಲೆಫ್ಟ್ ಬ್ಯಾಂಕ್ ಕೆನಾಲ್ ಕೆಲಸವಾಗಿದೆ, ಈ ಪ್ರಾಜೆಕ್ಟ್‌ನ್ನು ಬೇಗನೆ ಮುಗಿಸಿದರೆ ಬೀದರ್ ಜಿಲ್ಲೆಯಲ್ಲಿ ಹುಮನಬಾದ್, ಬಾಲ್ಕಿ, ಹುಲಸೂರ್, ಬೀದರ್ ಇವೆಲ್ಲಾ ಪಟ್ಟಣಗಳ ಕುಡಿಯುವ ನೀರಿನ ಸಮಸ್ಯೆ ರೈತರ ಹೊಲಗಳ ನೀರಿನ ಸಮಸ್ಯೆ ದನಕರುಗಳ ಕುಡಿಯುವ ನೀರಿನ ಸಮಸ್ಯೆ ಹೋಗುತ್ತದೆ, ಆದ್ದರಿಂದ ಈ ಡ್ಯಾಂನಿಂದ, ಕೆನಾಲ್‌ನಿಂದ ಮತ್ತು ಡಿಸ್ಟ್ರಿಬ್ಯೂಟರಿ ಮತ್ತು ಫೀಲ್ಡ್ ಚಾನಲ್‌ನಿಂದ ನೀರು ಏನು ಹರಿದು ಹೋಗುತ್ತದೆ ಆ ಏರಿಯಾದಲ್ಲಿ ಅಂತರ್ಜಲದ ಮಟ್ಟ ಹೆಚ್ಚಾಗುತ್ತದೆ, ಇವತ್ತು ಬಾಲ್ಕಿ ಮತ್ತು ಹುಲಸೂರು ಕ್ಷೇತ್ರದಲ್ಲಿ ಎಲ್ಲೆಲ್ಲಿ ಕೆನಾಲ್‌ಗಳು ಇದೆ ಅಲ್ಲಿಂದ ಐದು ಹತ್ತು ಕಿ.ಮೀ. ವರೆಗೆ ಅಂತರ್ಜಲದ ಮಟ್ಟ ಹೆಚ್ಚಾಗಿ ಅಲ್ಲಿ ಯಾರು ಬೋರ್

ಹಾಕುತ್ತಾರೆ ಯಾರು ಓಪನ್ ವೆಲ್ ಮಾಡುತ್ತಾರೆ ಅವರಿಗೆಲ್ಲಾ ನೀರು ಸಿಗುತ್ತಿದೆ. ಇಂಥ ಪ್ರಾಜೆಕ್ಟ್ ನಮ್ಮಲ್ಲಿ ನೀರು ಇದ್ದರೂ ಉಪಯೋಗಿಸುತ್ತಿಲ್ಲ. ಇದಕ್ಕೆ ಬಹಳಷ್ಟು ಆದ್ಯತೆಯನ್ನು ಕೊಟ್ಟು ನೀರನ್ನು ಉಪಯೋಗ ಮಾಡಿಕೊಂಡರೆ ಬರಗಾಲ ಬಂದರೂ ನಾವು ಅದನ್ನು ಎದುರಿಸುವ ಶಕ್ತಿ ಬೀದರ್ ಜಿಲ್ಲೆಗೆ ಇದ್ದರೂ ನಾವು ಅದನ್ನು ಉಪಯೋಗಿಸುತ್ತಿಲ್ಲ. ಇದಕ್ಕೆ ನಮ್ಮ ರಾಜ್ಯ ಸರ್ಕಾರದಿಂದ ಒಳ್ಳೆಯ ಯೋಜನೆಯನ್ನು ಹಾಕಿ. ಮಾನ್ಯ ಮುಖ್ಯಮಂತ್ರಿಯವರು ಎರಡು ವರ್ಷದ ಹಿಂದೆ ಬೀದರ್‌ಗೆ ಬಂದಿದ್ದಾಗ ನೂರು ಕೋಟಿ ರೂಪಾಯಿಗಳ ವಿಶೇಷವಾದ ಯೋಜನೆಯನ್ನು ನಮಗೆ ಕೊಡುತ್ತೇವೆಂದು ಹೇಳಿದ್ದರು, ಆ ರೀತಿ ವಿಶೇಷ ಯೋಜನೆಯನ್ನು ಕೊಟ್ಟು ನಮ್ಮ ಬೀದರ್ ಜಿಲ್ಲೆಯಲ್ಲಿರುವ ನದಿ ನೀರನ್ನು ಮತ್ತು ಮಳೆಯಿಂದ ಬಿದ್ದಂಥ ನೀರನ್ನು ಉಪಯೋಗ ಮಾಡಿಕೊಂಡರೆ ಈ ರೀತಿ ಭೀಕರ ಬರಗಾಲವನ್ನೇನು ನಾವು ಎದುರಿಸುತ್ತಿದ್ದೇವೆ ಇದು ನಮಗೆ ಸಮಸ್ಯೆ ಯಾಗುವುದಿಲ್ಲವೆಂದು ಹೇಳಿ, ಇವತ್ತು ಫುಡ್ ಮತ್ತು ಫಾಡರ್ ಕಾರ್ಯಕ್ರಮದಲ್ಲಿ ಮತ್ತು ಬರಗಾಲದ ಕೆಲಸದಲ್ಲಿ ನಮ್ಮ ಜಿಲ್ಲೆಯಲ್ಲಿ ಕೆಲಸಗಳು ನಡೆಯುತ್ತಿದ್ದರೂ ಎಷ್ಟು ಪ್ರಮಾಣದಲ್ಲಿ ನಡೆಯಬೇಕೋ ನಮಗೆ ಎಷ್ಟು ಸಿಗಬೇಕೋ ಅಷ್ಟು ಸಿಗುತ್ತಿಲ್ಲ. ಇವತ್ತು ರೈತ ಕಾರ್ಮಿಕರಿಗೆ ಬಹಳಷ್ಟು ಕಡಿಮೆ ಪ್ರಮಾಣದಲ್ಲಿ ಕೆಲಸ ಕೊಡುತ್ತಿದ್ದೇವೆ, ಹಣವನ್ನೇನು ಕೊಟ್ಟಿದ್ದಾರೆ ಅದರಲ್ಲಿ ಅಧಿಕಾರಿಗಳಾಗಲಿ ಜಿಲ್ಲಾಧಿಕಾರಿಗಳಾಗಲಿ ಕುಡಿಯುವ ನೀರಿಗೆ ಆದ್ಯತೆಯನ್ನು ಕೊಟ್ಟು ಕೆಲಸ ಮಾಡುತ್ತಿಲ್ಲ. ಇದು ಉಸ್ತುವಾರಿ ಮಂತ್ರಿಗಳಿಗೂ ಗೊತ್ತಿದೆ. ಅಧಿಕಾರಿಗಳು ಇವತ್ತು ಹಣ ಇದೆಯೆಂದು ಹೇಳುತ್ತಾರೆ. ಆದರೆ ಮಾರನೆ ದಿನ ಹೋಗಿ ಕೇಳಿದರೆ ಹಣವನ್ನು ಕೊಡುವುದಿಲ್ಲ. ಈ ರೀತಿ ಬೋರ್ ಹಾಕಿಯೂ ಪಂಪ್‌ನ್ನು ಪೈಪನ್ನು ಹಾಕದೆಯೇ ಇದೇ ರೀತಿ ಎರಡೆರಡು ತಿಂಗಳು ಇದ್ದರೆ ಹೊಡೆದಂಥ ಬೋರ್‌ಗೆ ನೀರು ಬಂದರೂ ಹೋಗುವಂಥ ಸಂಭವವಿದೆ. ಬೋರ್ ಹೊಡೆದು ಬಹಳಷ್ಟು ದಿವಸ ಬಿಟ್ಟರೆ ನೀರು ಹೋಗುತ್ತದೆಂದು ಬಹಳಷ್ಟು ಜನರು ಹೇಳುತ್ತಾರೆ. ಇಂಥ ಅವ್ಯವಸ್ಥೆ ನಡೆಯುತ್ತಿದೆ. ಇದು ಸರಿಯಾದ ವ್ಯವಸ್ಥೆಯಾಗಬೇಕು. ಮತ್ತು ಭೀಕರ ಬರಗಾಲದಲ್ಲಿ ಜನರ ಸಹಕಾರಕ್ಕೆ ಬರಬೇಕೆಂದು ಹೇಳಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಕರಡಿಸಂಗಣ್ಣ ಅಮರಪ್ಪ (ಕೊಪ್ಪಳ):– ಮಾನ್ಯ ಅಧ್ಯಕ್ಷರೆ, ಇವತ್ತು ಬರದ ಬಗ್ಗೆ ಮಾತನಾಡಲು ಅವಕಾಶ ಮಾಡಿಕೊಟ್ಟಿದ್ದಕ್ಕೆ ಮೊದಲನೆಯದಾಗಿ ತಮಗೆ ಅಭಿನಂದನೆಗಳನ್ನು ಹೇಳುತ್ತೇನೆ. ಇವತ್ತು ನಮ್ಮ ರಾಜ್ಯದಲ್ಲಿ ಮತ್ತು ದೇಶದ 14 ರಾಜ್ಯಗಳಲ್ಲಿ ಬರದ ಛಾಯೆಯನ್ನು ನಾವು ಕಾಣುತ್ತಿದ್ದೇವೆ. ವಿಶೇಷವಾಗಿ ಕರ್ನಾಟಕ ರಾಜ್ಯದಲ್ಲಿ ಸುಮಾರು 154 ತಾಲ್ಲೂಕುಗಳಲ್ಲಿ ಅತ್ಯಂತ ಭೀಕರವಾದಂಥ ಬರಗಾಲವನ್ನು ಎದುರಿಸುತ್ತಿದೆ. ರಾಜ್ಯ ಸರ್ಕಾರ ರಾಜ್ಯದ ಜನತೆಯ ಜೀವ ಮತ್ತು ಜಾನುವಾರುಗಳ ರಕ್ಷಣೆಯನ್ನು ಮಾಡುವುದರಲ್ಲಿ ಬಹಳ ಪಾಲು ಎಡವಿದೆಯೆಂದು ನಾನು ಹೇಳಬಯಸುತ್ತೇನೆ. ಏಕೆಂದರೆ, 2001–02ನೇ ಇಸವಿಯಲ್ಲಿ ಸತತವಾಗಿ ಮೂರು ವರ್ಷದ ಬರಗಾಲವನ್ನು ಎದುರಿಸಲು ಪರ್ಯಾಯವಾದ ಯೋಜನೆಯನ್ನು ರೂಪಿಸತಕ್ಕಂಥ ಪರ್ಯಾಯ ಯೋಜನೆಯನ್ನು ಕಲ್ಪಿಸಿಕೊಡಂಥ ಸಂದರ್ಭದಲ್ಲಿ ಕೇಂದ್ರ ಸರ್ಕಾರಕ್ಕೆ 1500 ಕೋಟಿ ಹಣ ಬೇಕು ಎಂದು ಕೇಳಿದ್ದಾರೆ. ಹಾಗೆಯೇ 12 ಲಕ್ಷ ಮೆಟ್ರಿಕ್ ಟನ್ ಆಹಾರ ಬೇಕು ಎಂದು ಮನವಿಯನ್ನು ಸಲ್ಲಿಸಿದ್ದಾರೆ. ಅದರಲ್ಲಿ ಕೇಂದ್ರ ಸರ್ಕಾರ 7 ಲಕ್ಷ ಮೆಟ್ರಿಕ್ ಟನ್ ಆಹಾರಧಾನ್ಯವನ್ನು ಬಿಡುಗಡೆ ಮಾಡಿದೆ. ಮಾನ್ಯ ಖರ್ಗೆಯವರು ಮಾತನಾಡುವ ಸಂದರ್ಭದಲ್ಲಿ 200 ಕೋಟಿ ಹಣವನ್ನು ಬಿಡುಗಡೆ ಮಾಡಿದ್ದಾರೆಂದು ಹೇಳಿದ್ದಾರೆ, ಅದರ ಜೊತೆ ಜೊತೆಯಾಗಿ ಈಗ ಬಂದಿರತಕ್ಕಂಥ 7 ಲಕ್ಷ

ಟನ್ ಆಹಾರಧಾನ್ಯ ಮತ್ತು ಸಿ.ಆರ್.ಎಫ್. ನಿಂದ ಬಂದಿರತಕ್ಕಂಥ 200 ಕೋಟಿ ರೂ. ಹಣ, ಈಗ ಏನು 154 ತಾಲ್ಲೂಕುಗಳಲ್ಲಿ ಬರದ ಕಾಮಗಾರಿಗಳನ್ನು ನಾವು ಕೈಗೆತ್ತಿಕೊಂಡಿದ್ದೇವೆ. ಬರದ ಕಾಮಗಾರಿಯಲ್ಲಿ ಅನೇಕ ಅವ್ಯವಹಾರವಾಗಿದೆ ಎನ್ನುವುದನ್ನು ಕೆಲವರು ಮಾತನಾಡಿದ್ದಾರೆ. ಆದರೆ ನಮ್ಮ ಜಿಲ್ಲೆಯಲ್ಲಿ ಅವ್ಯವಹಾರದ ಬಗ್ಗೆ ಮಾತನಾಡಲು ನಾನು ಬಯಸುವುದಿಲ್ಲ, ಶಾಸಕರೂ ಕೂಡ ಕೆಲಸ ಕಾರ್ಯಗಳಲ್ಲಿ ಗಮನವನ್ನು ಹರಿಸಿದಂಥದರಲ್ಲಿ ಬಹಳಷ್ಟು ಕಡಿಮೆಯಾಗಿದೆ ಎನ್ನುವಂಥ ಮಾತನ್ನು ಕೂಡ ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಮಾನ್ಯ ಖರ್ಗೆಯವರೂ ಈ ಭೀಕರ ಬರಗಾಲದ ಸಂಕಷ್ಟವನ್ನು ಗಮನಿಸಿದ್ದಾರೆಂದು ನಾನು ಭಾವಿಸಿಕೊಂಡಿದ್ದೇನೆ. ಅವರು ಒಂದು ಕಡೆ ಸ್ಟೇಟ್‌ಮೆಂಟ್ ಮಾಡಿ ಅನ್ಯ ಯೋಜನೆಗಳನ್ನು ಅಂದರೆ ಕರ್ನಾಟಕ ರಾಜ್ಯದಲ್ಲಿ ತೆಗೆದುಕೊಂಡಿರತಕ್ಕಂಥ ಅಭಿವೃದ್ಧಿ ಕಾಮಗಾರಿಗಳನ್ನು ನಿಲ್ಲಿಸಿದರೂ ಚಿಂತೆ ಇಲ್ಲ, ಇವತ್ತು ನಾವು ಜನರಿಗೆ ಉದ್ಯೋಗವನ್ನು ಕೊಡುವುದರಲ್ಲಿ ಮುಂದೆ ಬರಬೇಕು ಎನ್ನುವ ಮಾತನ್ನು ಹೇಳಿದ್ದಾರೆ. ನಾವು ಅದನ್ನು ಸ್ವಾಗತಿಸುತ್ತೇವೆ. ಅವರೂ ಸೇರಿದಂತೆ 4–5 ಜನ ನಮ್ಮ ರಾಜ್ಯದ ಹಿರಿಯ ಮಂತ್ರಿಗಳು ಬರ ಪೀಡಿತ ಪ್ರದೇಶಗಳಲ್ಲಿ ಪ್ರವಾಸವನ್ನು ಮಾಡಿದರು. ಬರ ಪರಿಹಾರ ಉಸ್ತುವಾರಿ ಉಪ ಸಮಿತಿಯ ಅಧ್ಯಕ್ಷರಾದಂತಹ ಮಾನ್ಯ ಖರ್ಗೆಯವರು, ಮಾನ್ಯ ಶ್ರೀಕಂಠಯ್ಯನವರು, ಮಾನ್ಯ ಶಿವಕುಮಾರ್‌ರವರು, ಹೀಗೆ 4–5 ಜನ ರಾಜ್ಯದ ಹಿರಿಯ ಮಂತ್ರಿಗಳು ಅನೇಕ ಜಿಲ್ಲೆಗಳಲ್ಲಿ ಪ್ರವಾಸವನ್ನು ಮಾಡಿದರು. ನಾವು ಬಹಳ ಆಸೆಯನ್ನು ಇಟ್ಟುಕೊಂಡಿದ್ದೆವು. ನಮ್ಮ ರಾಜ್ಯದ ಹಿರಿಯ ಮಂತ್ರಿಗಳು ಬರುತ್ತಿದ್ದಾರೆ, ಅವರು ನಮ್ಮ ಜನರಿಗೆ ಇವತ್ತು ಉದ್ಯೋಗವನ್ನು ಕೊಡತ್ತಾರೆ ಮತ್ತು ಅವರು ನಮ್ಮ ಜಾನುವಾರಗಳ ರಕ್ಷಣೆ ಮಾಡುತ್ತಾರೆಂದು ನಾವು ಬಹಳ ಕನಸನ್ನು ಇಟ್ಟುಕೊಂಡಿದ್ದೆವು. ಆದರೆ ಅವರು ಬಂದ ತಕ್ಷಣ ಏನು ಮಾಡಿದರು ಎಂದರೆ, ರಿವ್ಯೂ ಮಾಡಿದರು. ಇವತ್ತು ಎಸ್.ಜೆ.ಆರ್.ವೈ. ನಲ್ಲಿ ಇರತಕ್ಕಂಥ ಅನುದಾನ ಇರಬಹುದು, ತಾಲ್ಲೂಕು ಪಂಚಾಯಿತಿಯ ಅನುದಾನ ಇರಬಹುದು, ಜಿಲ್ಲಾ ಪಂಚಾಯಿತಿಯ ಅನುದಾನ ಇರಬಹುದು, ಅದರ ಬಗ್ಗೆ ಅವರುಗಳು ರಿವ್ಯೂ ಮಾಡಿದರು. ಇಷ್ಟೊಂದು ಹಣ ನಿಮ್ಮ ಹತ್ತಿರ ಇದೆ, ನೀವು ಕೆಲಸ ಪ್ರಾರಂಭ ಮಾಡಿ ಎಂಬ ಒಂದು ಆದೇಶವನ್ನೂ ಕೂಡ ಅವರು ಅಲ್ಲಿ ಕೊಟ್ಟರು. ಆದರೆ ಈಗಾಗಲೇ ಅವರಿಗೆ ಗೊತ್ತಿರುವಂತೆ, ಗ್ರಾಮ ಪಂಚಾಯಿತಿ ಲೆವೆಲ್‌ನಲ್ಲೂ ಕೂಡ ಇವತ್ತು ಯಾವ food grains ಕೂಡ ಉಳಿದುಕೊಂಡಿಲ್ಲ. ಆ ಮಟ್ಟದಲ್ಲಿ ಇವತ್ತು ಅಲ್ಲಿ ಕೆಲಸ ಕಾರ್ಯಗಳನ್ನು ಮಾಡಿದ್ದಾರೆ. ಬರದ ಗಂಭೀರತೆಯನ್ನು ಇವತ್ತು ನಾವು ಗಮನಿಸಿದಾಗ ಕೊಟ್ಟಿರುವ ಹಣ ಸಾಲದು. ಮೊನ್ನೆ ಕೂಡ sixth phase ನಲ್ಲಿ ಸರ್ಕಾರ ನಮಗೆ ಇಂಥಿಂಥ ಕೆಲಸ ಕಾರ್ಯಗಳನ್ನು ತೆಗೆದುಕೊಳ್ಳಿ ಎಂದು 15 ಲಕ್ಷ ರೂಪಾಯಿಗಳ ಕ್ಯಾಷ್ ಕೊಟ್ಟಿದ್ದಾರೆ ಮತ್ತು ಅದಕ್ಕೆ ಕಾಂಪೊನೆಂಟಾಗಿ ಇವತ್ತು 30 ಲಕ್ಷ ರೂಪಾಯಿಗಳ food grains ಕೊಟ್ಟಿದ್ದಾರೆ, ಅಂದರೆ 45–50 ಲಕ್ಷ ರೂಪಾಯಿಗಳ ವೆಚ್ಚದಲ್ಲಿ ನಾವು ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಿಕ್ಕೆ ನಾವು ಕ್ರಿಯಾ ಯೋಜನೆಗಳನ್ನು ಕೂಡ ಈಗಾಗಲೇ ಮಾಡಿದ್ದೇವೆ. ಅದಕ್ಕೆ ಇನ್ನೂ food grains ಕೂಡ ರಿಲೀಸ್ ಆಗಬೇಕಾಗಿದೆ. ಬರದ ಗಂಭೀರತೆಯನ್ನು ನೋಡಿದರೆ, ರಿಲೀಸ್ ಆಗಿರುವ ಹಣ ಕಡಿಮೆಯಾಗಿದೆ. ಒಂದು ಪಂಚಾಯಿತಿಯ ಒಂದು ಹಳ್ಳಿಯಲ್ಲಿ ನಾವು 1 ಲಕ್ಷ ರೂಪಾಯಿಗಳ ಮೌಲ್ಯದ ಕಾಮಗಾರಿಗಳನ್ನು ಮಾತ್ರ ತೆಗೆದುಕೊಳ್ಳಲಿಕ್ಕೆ ಸಾಧ್ಯ ಇದೆ. ಅನೇಕ ಪಂಚಾಯಿತಿಗಳಲ್ಲಿ ಇವತ್ತು 4–6 ಗ್ರಾಮಗಳು ಸೇರಿರತಕ್ಕದ್ದನ್ನು ನಾವು ಕಾಣುತ್ತಿದ್ದೇವೆ. 1 ಲಕ್ಷ ರೂಪಾಯಿಗಳ ಮೌಲ್ಯದ ಕಾಮಗಾರಿಗಳನ್ನು ನಾವು ಇವತ್ತು ಪ್ರಾರಂಭ

ಮಾಡಿದರೆ ಸುಮಾರು 500–600 ಜನ ಸಾವಿರಾರು ಗುದ್ದಲಿಗಳೊಂದಿಗೆ ಕೆಲಸಕ್ಕೆ ಬರಲಿಕ್ಕೆ ತಯಾರಿದ್ದಾರೆ. ಅಂದರೆ ಒಂದು ಹೊತ್ತಿನ ಊಟ ಕೂಡ ಸಿಗಲಾರದಂತಹ ಸಂದಿಗ್ಧ ಪರಿಸ್ಥಿತಿಯಲ್ಲಿ ಇವತ್ತು ಗ್ರಾಮೀಣ ಜನತೆ ಇರುವುದರಿಂದ ಅಷ್ಟೊಂದು ಸಂಖ್ಯೆಯಲ್ಲಿ ಜನ ಕೆಲಸಕ್ಕೆ ಬರುತ್ತಿದ್ದಾರೆ. ಹೀಗಾಗಿರುವುದರಿಂದ ಇವತ್ತು 1 ಲಕ್ಷ ರೂಪಾಯಿಗಳಷ್ಟು ಮೌಲ್ಯದ ಕಾಮಗಾರಿಗಳು ಒಂದೆರೆಡು ದಿವಸಗಳಲ್ಲೇ ಮುಗಿದು ಹೋಗುತ್ತಿದೆ. ಇದರಿಂದಾಗಿ ಉಳಿದ ಗ್ರಾಮದಲ್ಲಿ ನಾವು ಕೆಲಸವನ್ನು ಕೊಡಲಾರದಂತಹ ಸಂದರ್ಭಗಳು ಒದಗಿ ಬರುತ್ತಿವೆ. ಗ್ರಾಮೀಣ ಪ್ರದೇಶದಿಂದ 500–600 ಹೆಣ್ಣು ಮಕ್ಕಳು ಡಿ.ಸಿ. ಕಛೇರಿಗೆ ಇವತ್ತು ನಮಗೆ ಕೆಲಸ ಕೊಡಿ ಎಂದು ಬರುತ್ತಿದ್ದಾರೆ. ಈ ಬಗ್ಗೆ ನಾನು ನಮ್ಮ ಜಿಲ್ಲಾ ಮಂತ್ರಿಗಳಾದ ಮಾನ್ಯ ಮಲ್ಲಿಕಾರ್ಜುನ ನಾಗಪ್ಪ ರವರ ಗಮನಕ್ಕೂ ಕೂಡ ತಂದಿದ್ದೇನೆ. ಇವತ್ತು ರಾಜ್ಯದಲ್ಲಿ ಹಸಿವಿನಿಂದ ಸಾಯುವಂತಹ ವಾತಾವರಣ ನಿರ್ಮಾಣವಾಗಿದೆ. ಬಳ್ಳಾರಿಯ ಅರಗಿನ ದೋಣಿಯಲ್ಲಿ ಒಬ್ಬ ವೃದ್ಧ ಹಸಿವಿನಿಂದ ಸತ್ತಿದ್ದಾನೆ ಎಂದು ಇವತ್ತು ವರದಿಯಾಗಿದೆ. ಆದರೆ ಸರ್ಕಾರದವರು ಅದನ್ನು ನಿರಾಕರಿಸುತ್ತಿದ್ದೀರಿ. ಆದರೆ ಪತ್ರಿಕೆಯನ್ನು ನೋಡಿದಾಗ, ಅದು ನಿಜ ಎಂಬುದನ್ನು ನಾವು ಒಪ್ಪಬೇಕಾಗುತ್ತದೆ. ನಾವು ಇನ್ನೂ ಹೀಗೇ ಮುಂದುವರೆದರೆ, ಮತ್ತೆ ಮಳೆ ಸಂಪೂರ್ಣವಾಗಿ ಬೀಳದಿದ್ದರೆ, ಇನ್ನು ಸ್ವಲ್ಪ ದಿನಗಳಲ್ಲಿಯೇ ಹಸಿವಿನಿಂದ ಸಾಯುವವರನ್ನು ನಾವು ನೋಡಬಹುದಾಗಿದೆ. ಆ ಕಾರಣಕ್ಕಾಗಿ ನಾನು ಸರ್ಕಾರದ ಗಮನವನ್ನು ಸೆಳೆಯಲಿಕ್ಕೆ ಬಯಸುತ್ತೇನೆ. ಬೇರೆ ಅಭಿವೃದ್ಧಿ ಕೆಲಸಗಳನ್ನು ಕೈಗೆತ್ತಿಕೊಳ್ಳುವುದನ್ನು ಇವತ್ತು ಬಿಡಬೇಕೆಂದು ನಾವು ಸರ್ಕಾರವನ್ನು ಒತ್ತಾಯಿಸುತ್ತೇನೆ. ಇವತ್ತು ಸರ್ಕಾರ ಈ ನಾಡಿನ ಜನರನ್ನು ಬದುಕಿಸಬೇಕಾಗುತ್ತದೆ. ಇಲ್ಲದಿದ್ದರೆ ಯಾವ ಜನ ಪ್ರತಿನಿಧಿಗಳೂ ಕೂಡ ಇವತ್ತು ಅವರ ಕ್ಷೇತ್ರದಲ್ಲಿ ಓಡಾಡಲಿಕ್ಕೆ ಸಾಧ್ಯವಾಗುವುದಿಲ್ಲ. ನಾವು ಎಲ್ಲಿ ಹೋದರೂ ಕೂಡ ಜನ ನಮಗೆ ಕೆಲಸ ಕೊಡಿ, ಇವತ್ತು ನಾವು ಬದುಕಬೇಕಾಗಿದೆ, ಒಂದು ಹೊತ್ತಿನ ಊಟ ಕೂಡ ನಮಗೆ ಸಿಗುತ್ತಿಲ್ಲ ಎಂದು ಒತ್ತಾಯಿಸುತ್ತಿರುವುದನ್ನು ನೋಡಿದರೆ ಸರ್ಕಾರ ಇದರ ಬಗ್ಗೆ ಕಾಳಜಿಯನ್ನು ತೋರಿಸದೇ ಅಲಕ್ಷ್ಯತನ ವಹಿಸಿರುವುದನ್ನು ನಾವು ಕಾಣಬಹುದಾಗಿದೆ.

ಶ್ರೀ ಕಾಗೋಡು ತಿಮ್ಮಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):- ಮೊನ್ನೆ ಪ್ರತಿಯೊಂದು ತಾಲ್ಲೂಕಿಗೂ ಕೂಡ ಹಣವನ್ನು ಬಿಡುಗಡೆ ಮಾಡಿದೆ ಮತ್ತು ಅಕ್ಕಿಯನ್ನೂ ಸಹ ಬಿಡುಗಡೆ ಮಾಡಲಾಗಿದೆ. ಈಗ ತಾನೇ ಟಾಸ್ಕ್ ಫೋರ್ಸ್‌ನ ಅಧ್ಯಕ್ಷರಾಗಿದ್ದೀರಿ. ಆ ಕಾರ್ಯಕ್ರಮ ರೂಪಿಸತಕ್ಕಂಥ ಅಧಿಕಾರ, ನಮ್ಮ ತಾಲ್ಲೂಕಿನಲ್ಲಿದ್ದಂತೆ ನಿಮ್ಮ ತಾಲ್ಲೂಕಿನಲ್ಲೂ ಕೂಡ ಇದೆ. ನಮ್ಮಲ್ಲಿರುವಂತೆ ನಿಮ್ಮಲ್ಲೂ ಕೂಡ ಬರ ಇದೆ. ನಿಮಗೆ ಕೊಟ್ಟಿರತಕ್ಕಂಥ ಅಕ್ಕಿ ಮತ್ತು ಹಣದಿಂದ ನಿಮ್ಮ ತಾಲ್ಲೂಕಿನಲ್ಲಿ ಕಾಮಗಾರಿಗಳನ್ನು ನೀರು ಪ್ರಾರಂಭಿಸಿ, ಜನರೇನು ಕೆಲಸ ಕೇಳಿಕೊಂಡು ಬರುತ್ತಿದ್ದಾರೆ ಎಂದು ಹೇಳುತ್ತೀರಲ್ಲಾ, ಅವರಿಗೆ ಕೊಡಿ. ಮೊದಲು ನೀವು ಕೆಲಸಗಳನ್ನು ಪ್ರಾರಂಭ ಮಾಡಿ, ಅದು ಎಂಟು ದಿವಸಕ್ಕಾದರೂ ಅಗಲಿ ಅಥವಾ ಹತ್ತು ದಿವಸಕ್ಕಾದರೂ ಆಗಲಿ. ನಿಮಗೆ ಈಗ ಕೊಟ್ಟಿರತಕ್ಕಂಥ ಅಕ್ಕಿಯನ್ನು ಜುಲೈ ಅಂತ್ಯದೊಳಗಾಗಿ ಖರ್ಚು ಮಾಡಬೇಕೆಂದು ಆದೇಶ ನೀಡಲಾಗಿದೆ. ನಮಗೂ ಅದೇ ರೀತಿಯ ಆದೇಶ ಬಂದಿದೆ, ನಿಮಗೂ ಅದೇ ರೀತಿಯ ಆದೇಶ ಹೋಗಿದೆ. ಆ ಕೆಲಸಗಳನ್ನು ನೀವು ಇವತ್ತು ಆ ಜನರಿಗೆ ಕೊಟ್ಟಿದ್ದರೆ ಅನುಕೂಲವಾಗುತ್ತಿತ್ತು. ಕೆಲಸಗಳು ಕೊಟ್ಟಿರುವುದು ಸಾಕಾಗುವುದಿಲ್ಲ, ಇನ್ನೂ ಜಾಸ್ತಿ ಜನರಿಗೆ ಕೊಡಬೇಕೆಂದಿದ್ದರೆ, ಇನ್ನೂ ಎಷ್ಟು ಜನಕ್ಕೆ ಕೊಡಬೇಕು? ಯಾವ್ಯಾವ ಪಂಚಾಯಿತಿಗಳ ವ್ಯಾಪ್ತಿಯಲ್ಲಿ ಕೊಡಬೇಕು ಎಂಬುದನ್ನು

ಹೇಳಿ. ಆದರೆ ಕೊಟ್ಟಿರತಕ್ಕಂಥ ಹಣ ಮತ್ತು ಅಕ್ಕಿಯಿಂದ ನೀವು ಎಷ್ಟು ಜನರಿಗೆ ಕೆಲಸ ಕೊಟ್ಟಿದ್ದೀರಿ? ಅಲ್ಲಿ ಯಾವ ತರಹದ ವ್ಯವಸ್ಥೆಯಾಗಿದೆ ಎಂಬುದನ್ನಾದರೂ ತಾವು ಹೇಳಿ.

ಶ್ರೀ ಕರಡಿ ಸಂಗಣ್ಣ ಅಮರಪ್ಪ:-- ಸಾರ್, ಕೊಟ್ಟಿರುವುದನ್ನು ನಾವು ಒಪ್ಪಿಕೊಳ್ಳುತ್ತೇವೆ. ಈಗ ಕೊಟ್ಟಿರತಕ್ಕಂಥ ಹಣಕಾಸಿನ ನೆರವಿನಿಂದ ಗ್ರಾಮ ಪಂಚಾಯಿತಿ ಲೆವೆಲ್‌ನಲ್ಲಿ ಒಂದೊಂದು ಗ್ರಾಮದಲ್ಲಿ ಒಂದೊಂದು ಲಕ್ಷ ರೂಪಾಯಿಗಳ ಹಣಕಾಸಿನ ನೆರವು ಕೊಟ್ಟು ಅಲ್ಲಿ ಉದ್ಯೋಗವನ್ನು ನಾವು ಪ್ರಾರಂಭಿಸಿದಾಗ, ಒಂದೇ ದಿವಸದಲ್ಲೇ ಆ ಕೆಲಸ ಮುಗಿದು ಹೋಗುತ್ತದೆ. ಈಗ ಅವರಿಗೆ ನಿರಂತರವಾಗಿ ಉದ್ಯೋಗ ಕೊಡಬೇಕಾಗಿದೆ. ಇವತ್ತಿನ ವಾಸ್ತವಾಂಶವನ್ನು ಮಾನ್ಯ ಹಿರಿಯ ಮಂತ್ರಿಗಳಾದ ನೀವು ಇವತ್ತು ಗಮನಿಸಬೇಕಾಗಿದೆ. ವಾಸ್ತವಾಂಶವನ್ನು ನೋಡಿದರೆ ಒಂದು ಹೊತ್ತಿನ ಊಟ ಕೂಡ ಇವತ್ತು ಗ್ರಾಮೀಣ ಪ್ರದೇಶದ ಜನರಿಗೆ ಸಿಗುತ್ತಿಲ್ಲ. ಅವರು ನಮಗೆ ಉದ್ಯೋಗ ಕೊಡಿ ಎಂದು ಕೇಳುತ್ತಿದ್ದಾರೆ. ಅದಕ್ಕಾಗಿ ನೀವು ಇವತ್ತು ನಮಗೆ ಹೆಚ್ಚಿನ ಪ್ರಮಾಣದಲ್ಲಿ ಹಣಕಾಸಿನ ನೆರವನ್ನು ಮತ್ತು ಆಹಾರ ಧಾನ್ಯಗಳನ್ನು ಕೊಡಬೇಕಾಗಿದೆ. ಇಲ್ಲದಿದ್ದರೆ ನಾವು ಇವತ್ತು ಅಲ್ಲಿ ಬದುಕಲಿಕ್ಕೆ ಸಾಧ್ಯವಿಲ್ಲ ಎನ್ನುವಂತಹ ವಾತಾವರಣ ನಿರ್ಮಾಣವಾಗಿದೆ. ನಮ್ಮ ಜಿಲ್ಲಾ ಮಂತ್ರಿಗಳು ಇಲ್ಲೇ ಇದ್ದಾರೆ. ಅವರು ದಯವಿಟ್ಟು ಆ ಬಗ್ಗೆ ಹೇಳಲಿ. ನಮ್ಮ ಜಿಲ್ಲೆಯಲ್ಲಿ ಇದುವರೆಗೆ ಒಂದು ಹನಿ ಕೂಡಾ ಮಳೆ ಬಂದಿಲ್ಲ. ಇವತ್ತು ನಾವು ಕುಡಿಯುವ ನೀರಿನ ಸಮಸ್ಯೆಯನ್ನು ಎದುರಿಸುತ್ತಿದ್ದೇವೆ. ಆದರೆ ಕುಡಿಯುವ ನೀರನ್ನು ಟ್ರಾನ್ಸ್‌ಪೋರ್ಟ್ ಮಾಡುವುದರ ಮುಖಾಂತರ ಜನರಿಗೆ ಕೊಡಬಹುದು. ಆದರೆ ಜನರಿಗೆ ಆಹಾರ ಅಥವಾ ಊಟವೇ ಇಲ್ಲವೆಂದರೆ ಅವರು ಹೇಗೆ ಬದುಕಲಿಕ್ಕೆ ಸಾಧ್ಯವಿದೆ ಎಂಬುದನ್ನು ತಾವು ಹೇಳಿ ನೋಡೋಣ. ನೀವು ಕೊಟ್ಟಿರತಕ್ಕದ್ದು ನಮಗೆ ಸಾಕಾಗುತ್ತಿಲ್ಲ. ಆದ್ದರಿಂದ ಇದರ ಬಗ್ಗೆ ನಿಮ್ಮ ಪರ್ಯಾಯ ಯೋಜನೆ ಏನಿದೆ ಎಂಬುದನ್ನಾದರೂ ಮಾನ್ಯ ಮಂತ್ರಿಗಳು ಹೇಳಲಿ. ಮಾನ್ಯ ಖರ್ಗೆಯವರು ನಾವು ಇತರೆ ಎಲ್ಲಾ ಕೆಲಸಗಳನ್ನೂ ಕೂಡ ನಿಲ್ಲಿಸುತ್ತೇವೆ, ಎಲ್ಲಾ ಗ್ರಾಮಗಳಲ್ಲೂ ಕೂಡ ಉದ್ಯೋಗವನ್ನು ಕೊಡುತ್ತೇವೆ ಎನ್ನತಕ್ಕಂಥ ಮಾತನ್ನು ಹೇಳಿದ್ದಾರೆ.

ಶ್ರೀ ಕಾಗೋಡು ತಿಮ್ಮಪ್ಪ:- ಈಗ ನಿಜ ಸ್ಥಿತಿ ಏನಿದೆ ಎಂಬುದನ್ನು ತಿಳಿದುಕೊಳ್ಳೋಣ. ಇದರಲ್ಲಿ ಮುಚ್ಚುಮರೆ ಮಾಡತಕ್ಕಂಥ ಪ್ರಶ್ನೆ ಏನಿಲ್ಲ. ಈಗ ನಿಮ್ಮ ಕೈಯ್ಯಲ್ಲಿ ಕಾರ್ಯಕ್ರಮವನ್ನು ರೂಪಿಸಲು ನಾವು ಹಣ ಮತ್ತು ಅಕ್ಕಿಯನ್ನು ಕೊಟ್ಟಿದ್ದೇವೆ. ಇದನ್ನು 15 ದಿವಸದೊಳಗಾಗಿ ಖರ್ಚು ಮಾಡಬೇಕು. ಈ ಹಣದಲ್ಲಿ ಎಷ್ಟು ಗ್ರಾಮ ಪಂಚಾಯಿತಿಗಳಲ್ಲಿ ಈಗಾಗಲೇ ಕಾರ್ಯಕ್ರಮಗಳನ್ನು ಪ್ರಾರಂಭ ಮಾಡಿದ್ದೀರಿ? 1 ಲಕ್ಷಕ್ಕಿಂತ ಕಡಿಮೆ ಕೆಲಸಗಳನ್ನು ತೆಗೆದುಕೊಳ್ಳಬಾರದು ಎಂದೂ ಸಹ ಷರತ್ತು ಇದೆ. ಆದ್ದರಿಂದ ಈ ಕೆಲಸವನ್ನು ಎಷ್ಟು ಗ್ರಾಮ ಪಂಚಾಯಿತಿಗಳಲ್ಲಿ ಮಾಡಿದ್ದೀರಿ? ಈಗ ಎಷ್ಟು ಜನರು ಇದರಲ್ಲಿ ಕೆಲಸ ಮಾಡುತ್ತಿದ್ದಾರೆ? ಇದಲ್ಲದೆ ಯಾವ್ಯಾವ ಪಂಚಾಯಿತಿಗಳಲ್ಲಿ ಎಷ್ಟೆಷ್ಟು ಜನರಿಗೆ ಇನ್ನೂ ಕೆಲಸ ಒದಗಿಸಬೇಕಾಗಿದೆ ಎಂಬುದನ್ನು ಮಾನ್ಯ ಸದಸ್ಯರು ಸದನದ ಮುಂದೆ ಹೇಳಲಿ. ಆಗ ನಾವು ಹೆಚ್ಚುವರಿ ಪ್ರಮಾಣವನ್ನು ಕೊಡುವ ಬಗ್ಗೆ ಪ್ರಯತ್ನ ಮಾಡೋಣ.

ಶ್ರೀ ಕರಡಿ ಸಂಗಣ್ಣ ಅಮರಪ್ಪ:- ಸಾರ್, ಒಂದೊಂದು ಲಕ್ಷ ರೂಪಾಯಿಗಳ ಹಣವನ್ನು ಒಂದೊಂದು ಗ್ರಾಮಗಳಲ್ಲಿ ಈಗಾಗಲೇ ಕೊಟ್ಟಿದ್ದೇವೆ. ಆದರೆ ಇನ್ನೂ ಹೆಚ್ಚುವರಿಯಾಗಿ ಆ ಗ್ರಾಮಕ್ಕೆ ಬೇಕಾಗಿದೆ. ಒಂದು ಪಂಚಾಯಿತಿಯಲ್ಲಿ 4–5 ಗ್ರಾಮಗಳು ಅಥವಾ ತಾಂಡಾಗಳು ಇರುತ್ತವೆ. ಅಲ್ಲಿ ಒಂದು ದಿವಸಕ್ಕೆ ಆ ಕೆಲಸವೇ ಮುಗಿದು ಹೋಗಿ ಬಿಡುತ್ತದೆ. ಅದಕ್ಕಾಗಿ ನಿರಂತರವಾಗಿ ಉದ್ಯೋಗವನ್ನು ಕೊಡುವುದಕ್ಕೆ ಇವತ್ತು ಸರ್ಕಾರ. ಮುಂದೆ ಬರಬೇಕಾಗಿದೆ. ಆ ಕೆಲಸವನ್ನು ಸರ್ಕಾರ ಮಾಡಲಿ ಎಂದು ನಾನು ಈಗ ಒತ್ತಾಯಿಸುತ್ತಿದ್ದೇನೆ.

ಶ್ರೀ ಕಾಗೋಡು ತಿಮ್ಮಪ್ಪ:– ಇದರ ಜೊತೆಗೆ ಈಗಾಗಲೇ ಎಸ್.ಜೆ.ಆರ್.ವೈ. ನಲ್ಲಿ ಕೂಡ ಅಕ್ಕಿ ಬಿಡುಗಡೆಯಾಗಿದೆ. ನಮ್ಮ ಜಿಲ್ಲೆಯಲ್ಲಿ ಮೂರು ಸಾವಿರ ಟನ್ ಎಸ್.ಜೆ.ಆರ್.ವೈ. ನಲ್ಲಿ ಬಿಡುಗಡೆಯಾಗಿದೆ. ಸ್ಕೇರ್‌ಸಿಟಿನಲ್ಲಿ 2500 ಟನ್ ಬಿಡುಗಡೆಯಾಗಿದೆ. ಆ ಪ್ರಕಾರ ನಿಮ್ಮಲ್ಲೂ ಕೂಡ ಬಿಡುಗಡೆಯಾಗಿದೆ.

ಶ್ರೀ ಎಸ್.ಎಸ್. ಪಾಟೀಲ್:– ನೀವು ಜನರಿಗೆ ಎಷ್ಟು ದಿವಸ ಅಥವಾ ತಿಂಗಳು ಕೆಲಸ ಕೊಡುತ್ತೀರಿ ಎಂಬುದನ್ನು ಹೇಳಿ ನೋಡೋಣ. ಸುಮ್ಮನೆ ಬಿಡುಗಡೆ ಮಾಡಿದ್ದೇವೆ ಎಂದು ಹೇಳಿದರೆ ಹೇಗೆ?

ಶ್ರೀ ಕಾಗೋಡು ತಿಮ್ಮಪ್ಪ:– ನಾನು ನಮ್ಮ ಜಿಲ್ಲೆಯಲ್ಲಿ ಮೊನ್ನೆ ರಿವ್ಯೂ ಮಾಡಿ ಬಂದಿದ್ದೇನೆ. ನಮ್ಮಲ್ಲಿ 2500 ಮೆಟ್ರಿಕ್ ಟನ್ ಅಕ್ಕಿಯನ್ನು ಸ್ಕೇರ್‌ಸಿಟಿನಲ್ಲಿ ಕೊಟ್ಟಿದ್ದಾರೆ. 3000 ಮೆಟ್ರಿಕ್ ಟನ್ ಅಕ್ಕಿಯನ್ನು ಎಸ್.ಜೆ.ಆರ್.ವೈ. ನಲ್ಲಿ ನಾವು ಕೊಟ್ಟಿದ್ದೇವೆ. 5500 ಮೆಟ್ರಿಕ್ ಟನ್‌ನಷ್ಟು ಅಕ್ಕಿ ಮತ್ತು ಅದಕ್ಕೆ ಸಮಾನವಾದಂತಹ ಹಣ ಇವತ್ತು ಇದೆ. ಇದರಲ್ಲಿ ಎಷ್ಟು ಜನರಿಗೆ ಕೆಲಸ ಕೊಡಬೇಕೆಂಬುದನ್ನು ತಾವು ಬೇಕಾದರೆ ಲೆಕ್ಕ ಹಾಕಿ.

ಶ್ರೀ ಎಸ್.ಎಸ್. ಪಾಟೀಲ್:– ನಿಮ್ಮ ಕಡೆಯಲ್ಲಿ ಕೂಲಿಕಾರರು ಇಲ್ಲ. ನಮ್ಮ ಕಡೆಗೆ ಬಂದು ನೋಡಿದರೆ ನಿಮಗೆ ತಿಳಿಯುತ್ತದೆ. ಈ ಕಡೆಗೆ ಕೂಲಿಕಾರರೇ ಬರುವುದಿಲ್ಲ ಎಂದು ನಾವು ಕೇಳಿದ್ದೇವೆ. ನಮ್ಮ ಕಡೆಗೆ ಬಂದರೆ ನಿಮಗೆ 4–5 ಸಾವಿರದಷ್ಟು ಜನ ಗುದ್ದಲಿ ಹಿಡಿದುಕೊಂಡು ಕೆಲಸಕ್ಕೆ ಕಾಯುತ್ತಿರುವುದನ್ನು ನೋಡಬಹುದಾಗಿದೆ. ಬೇಕಾದರೆ ತಾವು ಈ ಬಗ್ಗೆ ನಮ್ಮ ಜಿಲ್ಲಾ ಮಂತ್ರಿಗಳನ್ನು ಕೇಳಿ.

ಶ್ರೀ ಕಾಗೋಡು ತಿಮ್ಮಪ್ಪ:– ಜನ ಹೊಟ್ಟೆಗಿಲ್ಲದೆ ಬಳಲುತ್ತಿದ್ದಾರೆ ಎಂದು ಹೇಳುತ್ತಿದ್ದೀರಿ. ಆದ್ದರಿಂದ ಈಗ ಕೊಟ್ಟಿರತಕ್ಕಂಥದ್ದನ್ನು ಎಷ್ಟು ಜನರಿಗೆ ನೀವು ಕೆಲಸ ಕೊಡಲಿಕ್ಕೆ ಸಾಧ್ಯವಾಗುತ್ತದೆ ಎನ್ನುವಂತಹ ಚಿತ್ರಣವನ್ನು ಈ ಸದನದ ಮುಂದೆ ಇಟ್ಟರೆ, ನಾವ್ಯಾದರೂ ಆ ಬಗ್ಗೆ ತಿಳಿದುಕೊಳ್ಳಲಿಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಎಂ. ಮಲ್ಲಿಕಾರ್ಜುನ ನಾಗಪ್ಪ (ಕಂದಾಯ ರಾಜ್ಯ ಸಚಿವರು):– ನಮ್ಮ ಜಿಲ್ಲೆಗೆ ರಿವ್ಯೂಯಾದ ಮೇಲೆ ಮೊನ್ನೆ ಬಂದಂತಹ 55 ಸಾವಿರ ಟನ್ ಅಕ್ಕಿಯಲ್ಲಿ 4 ಸಾವಿರ ಟನ್ ಅಕ್ಕಿಯನ್ನು ಕೊಡಲಾಗಿದೆ. 6ನೇ ಫೇಸಿನ ಕಾಮಗಾರಿಗಳಿಗೆ ಈಗಾಗಲೇ ಡಿಸ್ಟ್ರಿಕ್ಟ್ ಆಡಳಿತ ಅನುಮೋದನೆ ಕೊಟ್ಟಿದೆ. ಈಗ ಎಲ್ಲಾ ಕಾಮಗಾರಿಗಳೂ ಪ್ರಾರಂಭವಾಗಿವೆ. ಪುನಃ ನಮ್ಮ ಹತ್ತಿರ ಕೊಡಲಿಕ್ಕೆ ಹಣ ಇದೆ ಮತ್ತು ಅಕ್ಕಿ ಕೂಡ ಇದೆ. 6ನೇ ಫೇಸ್‌ನ ಕಾರ್ಯಕ್ರಮಗಳು ಮುಗಿದ ಮೇಲೆ 7ನೇ ಹಂತದ ಕಾಮಗಾರಿಗಳು ಪ್ರಾರಂಭ ಮಾಡಲಿಕ್ಕೆ ಸರ್ಕಾರ ಹಿಂಜರಿಯುವುದಿಲ್ಲ. ನಮ್ಮ ಜಿಲ್ಲೆಯಲ್ಲಿ ಅಕ್ಕಿ ಮತ್ತು ಹಣ ಇದೆ. ನಾವು ಕೆಲಸವನ್ನು ಚಾಲೂ ಮಾಡುತ್ತೇವೆ.

ಶ್ರೀ ಕರಡಿ ಸಂಗಣ್ಣ ಅಮರಪ್ಪ:– ನೀವು ಅದರ ಬಗ್ಗೆ ಕಾಮೆಂಟ್ ಮಾಡುತ್ತಿಲ್ಲ. ನೀವು ಕೊಟ್ಟಿರತಕ್ಕಂಥ ಹಣ ಮತ್ತು ಆಹಾರ ಧಾನ್ಯಗಳು ಸಾಕಾಗುತ್ತಿಲ್ಲ ಎಂಬುದನ್ನು ತಾವು ಗಮನಿಸಬೇಕು. ವಾಸ್ತವಾಂಶ ಏನು ಎಂಬುದು ತಮಗೇ ಗೊತ್ತಿದೆ. ಅದನ್ಯಾಕ್ಕೆ ಮುಚ್ಚಿಟ್ಟುಕೊಳ್ಳುತ್ತೀರಿ? ನಾಳೆ ಹಸಿವಿನಿಂದ ಯಾರಾದರೂ ಸತ್ತರೆ, ರಾಜ್ಯದಲ್ಲಿ ಇವತ್ತು ಅಧಿಕಾರ ಮಾಡತಕ್ಕಂಥವರು ಅದರ ಜವಾಬ್ದಾರಿಯನ್ನು ಹೊರದಿದ್ದರೆ ಹೇಗೆ? ಈಗಾಗಲೇ ಕೆಲಸ ಪ್ರಾರಂಭ ಮಾಡಿರುವ ಬಗ್ಗೆ ನೀವಾದರೂ ಹೇಳಿ. ಸರ್ಕಾರ ಈಗಾಗಲೇ ಕೊಟ್ಟಿರತಕ್ಕಂಥ ನೆರವಿನ ಬಗ್ಗೆ ನಾವು ಕಾಮೆಂಟ್ ಮಾಡುತ್ತಿಲ್ಲ. ನೀವು

ಇದುವರೆಗೂ ನೀಡಿರುವಂತಹ ನೆರವಿನ ಕೆಲಸವನ್ನು ನಾವು ಸ್ವಾಗತ ಮಾಡುತ್ತೇವೆ. ಮುಂದಿನ ಗಂಭೀರ ಪರಿಸ್ಥಿತಿಯನ್ನು ತಾವು ಯಾವ ರೀತಿಯಾಗಿ ಎದುರಿಸುತ್ತೀರಿ ಎಂಬುದನ್ನು ಹೇಳಿ.

ಶ್ರೀ ಎಂ. ಮಲ್ಲಿಕಾರ್ಜುನ ನಾಗಪ್ಪ:– ನಾನು ಅದನ್ನೇ ಹೇಳುತ್ತಿದ್ದೇನೆ. ಈಗ 4 ಸಾವಿರ ಟನ್ ಅಕ್ಕಿ ನಮ್ಮ ಜಿಲ್ಲೆಗೆ ಬಂದಿದೆ. 6ನೇ ಹಂತದ ಕಾಮಗಾರಿ ಮುಗಿಯುತ್ತಾ ಬಂದಿದೆ. ಟಾಸ್ಕ್ ಫೋರ್ಸ್ ಸಮಿತಿ ಅಧ್ಯಕ್ಷರಾದ ತಾವೇ ಅದರ ಬಗ್ಗೆ ನಿರ್ಣಯ ಮಾಡಿದ್ದೀರಿ. ಅವೆಲ್ಲಾ ಕೆಲಸಗಳು ಈಗಾಗಲೇ ನಡೆದಿವೆ. 7ನೇ ಹಂತದ ಕಾಮಗಾರಿಗಳನ್ನು ಪ್ರಾರಂಭ ಮಾಡಲಿಕ್ಕೆ ನಮ್ಮ ಹತ್ತಿರ ಹಣ ಮತ್ತು ಅಕ್ಕಿ ಇದೆ. ಇದು ಮುಗಿದ ಮೇಲೆ, ತಆವೇ ಟಾಸ್ಕ್ ಫೋರ್ಸ್ ಸಮಿತಿಯ ಅಧ್ಯಕ್ಷರಾಗಿರುವುದರಿಂದ, ಅದರ ಬಗ್ಗೆ ನೀವು ನಿರ್ಣಯ ಮಾಡಿದ ಮೇಲೆ, ಅದನ್ನು ಡಿಸ್ಟ್ರಿಕ್ಟ್ ಆಫೀಸಿನಿಂದ ಅಪ್ರೂವ್ ಮಾಡುತ್ತೇವೆ, within one weekನಲ್ಲಿ ವರ್ಕ್ ಸ್ಟಾರ್ಟ್ ಮಾಡಲಿಕ್ಕೆ ಸಾಧ್ಯತೆ ಇದೆ. ಅದರಲ್ಲೇನೂ ತೊಂದರೆ ಇಲ್ಲ. ನಮ್ಮ ಜಿಲ್ಲೆಯಲ್ಲಿ ಮಾನ್ಯ ಸದಸ್ಯರು ಹೇಳಿದ ಪ್ರಕಾರವೇ ಶಾಸಕರುಗಳೆಲ್ಲಾ ಸಾಕಷ್ಟು ಕೆಲಸಗಳನ್ನು ಮಾಡಿಸಿದ್ದಾರೆ. ಒಳ್ಳೆಯ ಕೆಲಸಕ್ಕೆ ಅವರೂ ಕೂಡ ಸಹಕಾರವನ್ನು ಕೊಟ್ಟಿದ್ದಾರೆ.

5.30 ಪಿಎಂ

ಶ್ರೀ ಕರಡಿ ಸಂಗಣ್ಣ ಅಮರಪ್ಪ:– ಇದು ಸಾಕಾಗುತ್ತಿಲ್ಲ ಇನ್ನು ಹೆಚ್ಚು ಬೇಕೆಂದು ನಮ್ಮ ಡಿಮಾಂಡ್. ವಿಜಯ ಕರ್ನಾಟಕ ಪತ್ರಿಕೆಯಲ್ಲಿ ಒಂದು ವರದಿಯಾಗಿದೆ. ಸಿಂಧನೂರು ಪಟ್ಟಣದಲ್ಲಿ ಗುಲ್ಬರ್ಗದಿಂದ ರಾಥೋರ್ಡ್ ಜನಾಂಗದವರು ತಮ್ಮ ಮಕ್ಕಳನ್ನು ಮಾರುತ್ತಿದ್ದಾರೆ. ಅವರ ಬೇಡಿಕೆ ಏನೆಂದರೆ, ನಮ್ಮ ಮಕ್ಕಳಿಗೆ ತೆಗೆದುಕೊಳ್ಳಿ, ನಮಗೆ ಆಹಾರ ಕೊಡಿ, ನಮಗೆ ದೇವರು ಕಣ್ಣು ತೆರೆದರೆ, ಮಳೆ ಬಂದರೆ, ಮತ್ತೆ ನಾವು ನಮ್ಮ ಮಕ್ಕಳನ್ನು ವಾಪಸ್ ಪಡಿಸಿಕೊಂಡು ಹೋಗುತ್ತೇವೆಂದು ಹೇಳುತ್ತಿದ್ದಾರೆ. ಅಂತಹ ಭಯಾನಕ ವಾತಾವರಣ ನಮ್ಮ ಭಾಗದಲ್ಲಿದೆ. ಮತ್ತೆ ನಾವೂ ಏನಾದರೂ ಬೆಳೆ ಬೆಳೆದರೆ ನಮಗೆ ಕೊಟ್ಟಿರುವ ಆಹಾರ ಧಾನ್ಯವನ್ನು ಕೊಟ್ಟು ನಮ್ಮ ಮಕ್ಕಳನ್ನು ಪುನಃ ವಾಪಸ್ ಒಯ್ಯುತ್ತೇವೆಂದು ಹೇಳಿದ್ದಾರೆ. ಅಂತಹ ಭಯಾನಕ ವಾತಾವರಣ ನಮ್ಮ ಉತ್ತರ ಕರ್ನಾಟಕ ಭಾಗದಲ್ಲಿ ಇದೆ. ನೀವು ಕೊಟ್ಟಿರುವುದು ಯಾವುದಕ್ಕೂ ಸಾಕಾಗುವುದಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ:– ವಸ್ತು ಸ್ಥಿತಿಯನ್ನು ಹೇಳಿ. ಯಾವ ಊರಿನ ಜನ ಸಿಂಧನೂರಿಗೆ ಬಂದು ಮಕ್ಕಳಿಗೆ ಬಿಟ್ಟು ಹೋಗುತ್ತಿದ್ದಾರೆ, ನಮಗೆ ಅನ್ನ ಕೊಟ್ಟರೆ ಸಾಕು ಎಂದು ಹೇಳಿರುವ ಬಗ್ಗೆ ಎನ್‌ಕ್ವೈರಿ ಮಾಡೋಣ. ಆ ಪರಿಸ್ಥಿತಿ ಯಾವ ಗ್ರಾಮದಲ್ಲಿ ಬಂದಿದೆ ಎಂದರೆ, ಇವತ್ತೇ ನಮ್ಮ ಜಿಲ್ಲಾ ಮಂತ್ರಿಗಳೂ ಇದ್ದಾರೆ, ಅಲ್ಲಿಗೆ ಹೋಗಿ ಅವರಿಗೆ ಆಹಾರ ಕೊಡೋಣ. ಉದ್ಯೋಗ ಕೋಡೋಣ, ಮತ್ತು ರಕ್ಷಣೆ ಕೊಡೋಣ. ಅದರಲ್ಲಿ ಏನೂ ಹಿಂದು ಮುಂದೆ ನೋಡುವ ಪ್ರಶ್ನೆಯೇ ಇಲ್ಲ.

ಶ್ರೀ ಎಸ್.ಎಸ್. ಪಾಟೀಲ್:– ನಾಳೆಯಿಂದ ನಮ್ಮ ಉತ್ತರ ಕರ್ನಾಟಕ ಜಿಲ್ಲೆಗೆ ಟೂರ್ ಹಾಕಿ. ದಯವಿಟ್ಟು ತಾವು ಎಂದು ಬರುತ್ತೀರಿ ಹೇಳಿ. ಪ್ರವಾಸ ಹಾಕೋಣ. ನಾಳೆ ಹೋಗೋಣ. ಮೊನ್ನೆ ಐದು ಜನ ಬಂದಿದ್ದರು ಸಹ ಏನಾಯಿತು ಎಂದು ಕೇಳಿ.

ಶ್ರೀ ಡಿ.ಕೆ. ಶಿವಕುಮಾರ್:– ನಾವು 10 ಜಿಲ್ಲೆಗಳಿಗೆ ಬಂದಿದ್ದು ಎಲ್ಲಾ ಕಡೆಯ ಶಾಸಕರೂ ಇದ್ದಾರೆ. ಎಸ್.ಪಿ. ಹಾಗೂ ಇದ್ದರು ಎಲ್ಲರೂ ಇದ್ದರು. ಸ್ಥಳೀಯ ಸಮಸ್ಯೆಗಳನ್ನು ಬಗೆಹರಿಸಲಿಕ್ಕೆ ಬೇಕಾದಷ್ಟು ಆದೇಶಗಳನ್ನು ಕೊಟ್ಟು ಬಂದಿದ್ದೇವೆ. ಕೆಪಿಟಿಸಿಎಲ್ ಇರಬಹುದು, ಮತ್ತೊಂದು

ಇರಬಹುದು, ನೀರು ಇರಬಹುದು, ಗೋಶಾಲೆ ಇರಬಹುದು ಮಾಡಿದ್ದೇವೆ. ನಾವು ದುಡ್ಡು ಕೊಡುತ್ತೇವೆಂದು ಬಂದಿರಲಿಲ್ಲ. ಅಕ್ಕಿ ಕಾಳು ಕೊಡುತ್ತೇವೆಂದು ಬಂದಿರಲಿಲ್ಲ. ನೀರಿನ ಸಮಸ್ಯೆ ಇದ್ದ ಸಂದರ್ಭದಲ್ಲಿ ಏನೇನು ಇದೆ ಅದನ್ನು ಬಗೆಹರಿಸುವುದು ಮತ್ತು ಏನು ಆಗಬೇಕೆಂದು ಯೋಜನೆ ತಯಾರು ಮಾಡುವುದು ಮತ್ತು ಅವರಿಗೆ ಬೇರೆ ಯಾವುದೇ ತರಹದ ತೊಡಕುಗಳಿದ್ದರೆ ನಿವಾರಣೆ ಮಾಡಬೇಕೆಂದು ಬಂದಿದ್ದೆವು. ಬಂದಾಗ ನಿಮಗೆಲ್ಲಾ ನಾವು ಕೇಳಿದೆವು ನಿಮ್ಮ ಸಮಸ್ಯೆಗಳನ್ನು ನೀವು ಹೇಳಿದ್ದೀರಿ ಇಲ್ಲವೆಂದು ಅಲ್ಲ, ಆದರೆ ಲೋಪದೋಷಗಳ ಬಗ್ಗೆ ಯಾರೂ ಕೂಡ ಎಲ್ಲಿಯೂ ಹೇಳಲಿಲ್ಲ.

ಶ್ರೀ ಎಸ್.ಎಸ್. ಪಾಟೀಲ್:- ಕೆಲಸ ಪ್ರಾರಂಭವೇ ಆಗಿಲ್ಲ, ಇದನ್ನು ಹೇಳುತ್ತಿದ್ದೇವೆ.

ಶ್ರೀ ಡಿ.ಕೆ. ಶಿವಕುಮಾರ್:- ಕೆಲಸ ಚಾಲು ಮಾಡುವುದಕ್ಕೆ ನೀವೇ ಅಧ್ಯಕ್ಷರು. ಏನು ಬಂದಿದೆ ಅದನ್ನು ನಾವು ಕೊಟ್ಟಿದ್ದೇವೆ. ಎಲ್ಲಾ ಕಡೆ ಕೆಲಸ ನಡೆಯುತ್ತಿದೆ. ದುಡ್ಡು ಇಲ್ಲದೆ ಕೆಲಸ ನಡೆಯುತ್ತಿದೆಯಾ? ದುಡ್ಡು, ಅಕ್ಕಿ ಏನು ಬೇಕು ಅದನ್ನು ಕೊಟ್ಟಿದ್ದೇವೆ. ಯಾವುದು ನಿಲ್ಲಿಸಿದ್ದೇವೆ ಅದನ್ನು ಹೇಳಿ?

ಶ್ರೀ ಎಸ್.ಎಸ್. ಪಾಟೀಲ್:- ಕೂಲಿಕಾರರ ಲೆಕ್ಕ ತೆಗೆಯಿರಿ ಒಂದು ದಿವಸಕ್ಕೆ ಎಷ್ಟು ಬೇಕು ಹೇಳಿ ನೋಡೋಣ.

ಶ್ರೀ ಡಿ.ಕೆ. ಶಿವಕುಮಾರ್:- ಪಾಟೀಲ್ ಸಾಹೇಬರೇ, ಬಹಳ ದಿನಗಳಿಂದ ನೀವು ರಾಜಕಾರಣದಲ್ಲಿ ಇದ್ದೀರಿ. ಯಾವಾಗ ಎಂತಂತಹ ಬರಗಾಲ ಬಂದಿದೆ ನಾವಂತೂ ನೋಡಿಲ್ಲ. ನಾವು ಕೇಳಿದ ಮಟ್ಟಿಗೆ ಸ್ವಾತಂತ್ರ್ಯ ಬಂದಾಗಿನಿಂದ ಇಲ್ಲಿಯವರೆಗೆ ಇಷ್ಟು ದೊಡ್ಡ ಕೆಲಸ ಬರಗಾಲ ಬಂದಂತಹ ಸಂದರ್ಭದಲ್ಲಿ ಯಾವ ಸರ್ಕಾರವೂ ಮಾಡಿಲ್ಲ ಏನೇ ಸಮಸ್ಯೆ, ಯಾವ ಸಮಸ್ಯೆ ಬಂದರೂ ಕೂಡ, ನೀರಿನ ಸಮಸ್ಯೆ ಇರಬಹುದು ಕೂಲಿ ಕೊಡುವಂತಹ ಸಮಸ್ಯೆ ಇರಬಹುದು, ಪ್ರತಿಯೊಂದು 33,000 ಕೆಲಸಗಳು ಏನಿವೆ ಎಲ್ಲಾ ಕೂಡ ದೊಡ್ಡ ಪ್ಲಾನ್ ಮಾಡಲಿಕ್ಕೆ, ಫೋಟೋಗಳನ್ನು ಹೊಡೆಸಿ ತಮ್ಮ ಮುಂದೆ ಇಡುವುದಕ್ಕೆ ಯೋಚನೆ ಮಾಡಿದ್ದೇವೆ. ಜನ ಮೆಚ್ಚಿದ್ದಾರೆ. ನಿಮಗೂ ಮೆಚ್ಚಿಗೆ ಇದೆ. ಆದರೆ ವಿರೋಧ ಪಕ್ಷದಿಂದ ನೀವು ಮಾತನಾಡಬೇಕು ತಾವು ಮಾತನಾಡುತ್ತಿದ್ದೀರಿ.

ಶ್ರೀ ಎಸ್.ಎಸ್. ಪಾಟೀಲ್:- ಈಗ ನೀವು ಕೊಟ್ಟಿರುವ ಹಣ ಒಂದು ದುಡ್ಡೂ ನೀವು ಕೊಟ್ಟಿಲ್ಲ. ಎಲ್ಲಾ ಕೇಂದ್ರದ ಹಣ. ನಾವು ಅವರಿಗೆ ಏಕೆ ಬೈಯುತ್ತೇವೆಂದರೆ, ಇನ್ನೂ ಹೆಚ್ಚಿಗೆ ತರುವುದಕ್ಕಾಗಿ ಬಯ್ಯುತ್ತೇವೆ. 300 ಕೋಟಿ ರೂಪಾಯಿ ಬಿಡುಗಡೆ ಮಾಡಿದ್ದೀರಿ ಅದು ಕೇಂದ್ರದಿಂದ ಬಂದಿದೆ.

ಡಾ: ವೈ. ನಾಗಪ್ಪ:- ಕೇಂದ್ರ ಅಮೇರಿಕಾದಲ್ಲಿದೆಯಾ? ಸಾಕಷ್ಟು ನಾವು ಮಾಡಿದ್ದೇವೆ. ಆದರೆ ನಿಮಗೆ ತೃಪ್ತಿ ಇಲ್ಲ.

ಶ್ರೀ ಎಸ್.ಪಿ. ಮುದ್ದಹನುಮೇಗೌಡ:- ಕೇಂದ್ರ ಸರ್ಕಾರ ಅಂದರೆ ಪಾಕಿಸ್ಥಾನದಲ್ಲಿ ಇದೆ. ಅಮೇರಿಕಾದಲ್ಲಿ ಇಲ್ಲ ಅದು ಪಾಕಿಸ್ಥಾನದಲ್ಲಿ ಇಲ್ಲ. ನಮ್ಮ ಹಣ ನಾವು ಕೊಡುತ್ತಿದ್ದೇವೆ. ಕೇಂದ್ರ ಸರ್ಕಾರಕ್ಕೆ ನಾವು ತೆರಿಗೆ ಕೊಡುತ್ತಿದ್ದೇವೆ.

ಡಾ: ವೈ. ನಾಗಪ್ಪ:- ವಿರೋಧ ಪಕ್ಷದಲ್ಲಿದ್ದು ಟೀಕೆ ಮಾಡಬೇಕೆಂದು ಟೀಕೆ ಮಾಡುತ್ತೀರಿ. ಅಷ್ಟೇ ಬಾಕಿ ಏನೂ ಕೆಲಸ? ಎಷ್ಟು ಮಾಡಿದರೂ ತೊಂದರೆ ಇರುತ್ತದೆ.

ಶ್ರೀ ಕರಡಿ ಸಂಗಣ್ಣ ಅಮರಪ್ಪ:- ಯಾರೂ ಮಾಡದೇ ಇರುವ ಕೆಲಸಗಳನ್ನು ಈ ಸರ್ಕಾರ ಮಾಡಿದೆ ಎಂದು ಮಾನ್ಯ ಮಂತ್ರಿಗಳು ಹೇಳುತ್ತಾರೆ, ಅದರೆ ಅವರು ವಾಸ್ತವಾಂಶ ತಿಳಿದುಕೊಳ್ಳುವುದಕ್ಕೆ ಪ್ರಯತ್ನ ಮಾಡಲಿಲ್ಲ. ಯಾವುದೇ ಇತಿಹಾಸಲ್ಲಿ ತುಂಗಭದ್ರಾ ನದಿ ನೀರು ಫ್ಲೋ ಕಟ್ ಆಗಿರುವುದು ನಾವು ನೋಡಿಯೇ ಇಲ್ಲವೆಂದು ಪತ್ರಿಕೆಗಳು ವರದಿ ಇವೆ. ಅಷ್ಟು ಗಂಭೀರ ಪರಿಸ್ಥಿತಿ ಇದೆ. ಅದನ್ನು ವಾಸ್ತವಾಂಶ ತಿಳಿದುಕೊಳ್ಳಿ ಎಂಬುದು ನಮ್ಮ ಒತ್ತಾಯ. ನಾವು ಬಹಳಷ್ಟು ಕೆಲಸ ಮಾಡಿದ್ದೇವೆಂದು ಹೇಳಿಕೊಳ್ಳುತ್ತಾರೆ. ಕೆಲಸ ಆಗಿದೆ ನಾವೂ ಕೂಡ ಒಪ್ಪುತ್ತೇವೆ. ಆದರೆ ಇಷ್ಟೊಂದು ಬರಗಾಲದ ತೀವ್ರತೆಗೆ ಇನ್ನು ಹೆಚ್ಚು ಆಗಬೇಕಾಗಿದೆ. ನೀವು ಬರೀ ಅಷ್ಟೇ ಮಾಡಿ ಕೂತರೆ ಆಗುವುದಿಲ್ಲ, ತೀವ್ರತೆಯನ್ನು ನೀವು ಗಮನಿಸಬೇಕಾಗುತ್ತದೆ. ಇಷ್ಟೊಂದು ಬರ ಇದೆ, ಕುಡಿಯುವ ನೀರಿನ ಸಮಸ್ಯೆ ಇರಬಹುದು, ವಿದ್ಯುಚ್ಛಕ್ತಿ ಸಮಸ್ಯೆ ಇರಬಹುದು, ವಿದ್ಯುಚ್ಛಕ್ತಿ ಸಮಸ್ಯೆ ಬಗ್ಗೆ ನಾವು ಮಾತನಾಡಲಿಕ್ಕೆ ಹೊರಟರೆ ಎಲ್ಲಿ ಎಂಟು ಗಂಟೆ ಕೊಡುತ್ತೇವೆಂದು ಹೇಳಿದರು, ನಾಲ್ಕು ತಾಸು ಏನಾದರೂ ಎಲ್ಲಿ ಕಂಟಿನ್ಯೂಯಿಟಿ ಪವರ್ ಕೊಡುವುದಕ್ಕೆ ಸಾಧ್ಯವಾಗುತ್ತಿಲ್ಲ. ರೈತ ಇವತ್ತು ಹೇಗೆ ಫೇಲ್ ಆಗುತ್ತಾರೆ ಎಂದರೆ ಒಂದು ಕ್ರಾಪ್ ಮಾಡಿದ ಮೇಲೆ ರೈತ ಎಂಟು ತಾಸು ನನಗೆ ಪವರ್ ಇದೆ, ಎರಡು ಎಕರೆ ಮೂರು ಎಕರೆ ಬಿತ್ತನೆ ಮಾಡುತ್ತಾನೆ. ಬಿತ್ತನೆ ಮಾಡಿ ಒಂದು ತಿಂಗಳು ಗೊಬ್ಬರಕ್ಕೆ ಮತ್ತು ಬೀಜಕ್ಕೆ ಇನ್‌ವೆಸ್ಟ್ ಮಾಡಿರುತ್ತಾನೆ. ರಟ್ಟೆ ಕುಂಟೆ ಹೊಡೆದು ಸಾಗುವಳಿ ಮಾಡಿ ಬಿತ್ತನೆ ಮಾಡುವ ರೈತ ಒಂದು ತಿಂಗಳ ಬೆಳೆ ಆದ ನಂತರ ನಮ್ಮ ಸರ್ಕಾರ ಏನು ಆದೇಶ ಹೊರಡಿಸಿದೆ ಎಂದರೆ, ಮೂರು ಗಂಟೆ ಲೋಡ್ ಶೆಡ್ ಮಾಡುತ್ತಾರೆ, ಮೂರು ಗಂಟೆ ಕೊಡುತ್ತೇವೆಂದು ಹೇಳುತ್ತಾರೆ. ಎಂಟು ತಾಸು ಬೆಳೆ ಹಾಕಲಿಕ್ಕೆ ಏನು ಯೋಚನೆ ಮಾಡಿಕೊಂಡಿರುತ್ತಾನೆ, ಆ ಬೆಳೆಯ ಬೆಳವಣಿಗೆ ಕುಂಠಿತವಾಗುತ್ತದೆ. ಅದು ಕುಂಠಿತವಾದಾಗ ಇಳುವರಿ ಫೇಲಾಗುತ್ತದೆ. ಇಳುವರಿಯಲ್ಲಿ ಫೇಲಾದಾಗ ರೈತ ಇನ್‌ವೆಸ್ಟ್‌ಮೆಂಟ್ ಮಾಡಿದ್ದೂ ಕೂಡ ಹಾಳಾಗುತ್ತದೆ. ಇಂತಹ ಪರಿಸ್ಥಿತಿಯಲ್ಲಿ ಅತನ ಮುಂದಿನ ಭವಿಷ್ಯವನ್ನು ರೂಪಿಸಿಕೊಳ್ಳುವುದಕ್ಕೆ ಹೇಗೆ ಸಾಧ್ಯ ಇದೆ? ಆ ಕಾರಣದಿಂದ ರೈತರು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ. 300ಕ್ಕಿಂತ ಹೆಚ್ಚು ರೈತರು ಇವತ್ತು ರಾಜ್ಯದಲ್ಲಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಒಂದು ಪೈಸೆ ಕೂಡ ಸಹಾಯಧನ ಘೋಷಣೆ ಮಾಡಲಿಲ್ಲ. ವಿಧಾನಸೌಧದಲ್ಲಿ ಚರ್ಚೆಯಾಯಿತು, ಇವತ್ತು ಎನ್ ಕ್ವಾಯರಿ ಮಾಡಬೇಕು, ನಿಜವಾಗಿ ರೈತ ಸಂಕಷ್ಟದಿಂದ ಅಥವಾ ಸಾಲದಿಂದ ಸತ್ತಿದ್ದಾನೆ ಅವನಿಗೆ ಸಹಾಯಧನ ಕೊಡುವುದರ ಬಗ್ಗೆ ತೀರ್ಮಾನ ಮಾಡಬೇಕೆಂದು ನಿರ್ಣಯ ಅಯಿತು, ಅದರ ಬಗ್ಗೆ ಇದುವರೆಗೆ ಸರ್ಕಾರ ಚಕಾರ ಎತ್ತುತ್ತಿಲ್ಲ. ನೀವು ಯಾರಿಗೆ ಕೊಡುತ್ತೀರಿ ಹೇಳಿ. ಸತ್ತಂತಹ ರೈತರಿಗೆ ಎಲ್ಲಿ ಪರಿಹಾರ ಕೊಟ್ಟಿದ್ದೀರಿ ಹೇಳಿ?

ಶ್ರೀ ಕಾಗೋಡು ತಿಮ್ಮಪ್ಪ:- ಶ್ರೀಮಾನ್ ಸಿಂಧ್ಯರವರು ಒಂದು ಸಲಹೆ ನೀಡಿದರು. ಮಾನ್ಯ ಮುಖ್ಯ ಮಂತ್ರಿಗಳು ಇಲ್ಲಿಯೇ ಇದ್ದರು. ಈ ಪ್ರಕರಣಗಳನ್ನು ತನಿಖೆಗೆ ಒಳಪಡಿಸಿ ಯಾವುದು ಖಚಿತ ಪಡುತ್ತದೆ ಅಂತಹವರಿಗೆ ಕೊಡಬೇಕೆಂದು ಆ ಪ್ರೊಸೀಜರನ್ನು ಈಗ ಮಾಡುತ್ತಿದ್ದೇವೆ. ಎಲ್ಲೆಲ್ಲಿ ಇಂತಹ ಪ್ರಕರಣ ಬಂದಿದೆ ಅಲ್ಲಿ ಅಸಿಸ್ಟೆಂಟ್ ಕಮಿಷನರ್ ಇನ್‌ವೆಸ್ಟಿಗೇಷನ್ ಮಾಡುತ್ತಾರೆ. ಆ ರೀತಿ ಆಗಿದೆ ಎಂದು ಹೇಳಿದರೆ ಒಂದು ಲಕ್ಷ ರೂಪಾಯಿ ಕೊಡುವುದಕ್ಕೆ ಅವಕಾಶ ಇದೆ. ಅಸಿಸ್ಟೆಂಟ್ ಕಮಿಷನ್‌ರವರಿಗೆ ಎನ್‌ಕ್ವಾರಿ ಆಫೀಸರ್ ಎಂದು ಮಾಡಿದ್ದೇವೆ. ಅವರ ರಿಪೋರ್ಟ್ ಆಧಾರದ ಮೇಲೆ ಆ ರೀತಿ ಯಾರಿಗೆ ಕೊಟ್ಟಿಲ್ಲ ಎನ್ನುವ ಪ್ರಕರಣ ನಿಮ್ಮ ಗಮನಕ್ಕೆ ಬಂದಿದ್ದರೆ ಹೇಳಿ ಕೊಡುತ್ತೇವೆ.

ಶ್ರೀ ಎಸ್.ಎಸ್. ಪಾಟೀಲ್:– ಒಬ್ಬ ರೈತನಿಗೆ ಕೊಟ್ಟಿದ್ದು ಹೇಳಿರಿ.

ಶ್ರೀ ಕಾಗೋಡು ತಿಮ್ಮಪ್ಪ:– ಇಂತಹ ಪ್ರಕರಣ ಬೆಳಕಿಗೆ ಬಂದು ಅಸಿಸ್ಟೆಂಟ್ ಕಮಿಷನರ್ ಮುಖಾಂತರ ತನಿಖೆ ನಡೆದು ಇದು ಆತ್ಮಹತ್ಯೆ ಹೌದು ಎಂದು ಕನ್‌ಸಿಡರ್ ಮಾಡತಕ್ಕಂತಹ ಪ್ರಕರಣ ಇದ್ದರೆ ಆ ಪ್ರಕರಣದಲ್ಲಿ ಸರ್ಕಾರ ಪರಿಹಾರ ಕೊಡದೆ ಇದ್ದರೆ ಹೇಳಿ.

ಶ್ರೀ ಜಗದೀಶ್ ಶೆಟ್ಟರ್ (ವಿರೋಧ ಪಕ್ಷದ ನಾಯಕರು):– ಗೋಕಾಕ್ ತಾಲ್ಲೂಕಿನಲ್ಲಿ ಒಂದು ಕುಟುಂಬದ ಐದು ಜನರು ಆತ್ಮಹತ್ಯೆ ಮಾಡಿಕೊಂಡರು. ಅದರ ಬಗ್ಗೆ ಎನ್‌ಕ್ವಾರಿ ಅಯಿತು, ಕೌಜಲಗಿಯವರ ಕ್ಷೇತ್ರದಲ್ಲಿ ನಡೆದಿದೆ ಅವರೇ 10,000 ರೂಪಾಯಿ ಪರಿಹಾರ ಧನ ಕೊಟ್ಟು ಬಂದಿದ್ದಾರೆ. ಬಜೆಟ್ ಬಾಷಣದಲ್ಲಿ ಮುಖ್ಯ ಮಂತ್ರಿಗಳು ಹೇಳಿದರು ಮೂರು ತಿಂಗಳಲ್ಲಿ ಅಸಿಸ್ಟೆಂಟ್ ಕಮಿಷನರ್ ಕಡೆಯಿಂದ ಎನ್‌ಕ್ವೈರಿ ಮಾಡಿಸಿ ಇದು ಆತ್ಮಹತ್ಯೆಯ ಸಾವೋ ಅಥವಾ ವೈಯಕ್ತಿಕ ಸಾವೋ ಎನ್ನುವುದನ್ನು ವಿಚಾರ ಮಾಡುತ್ತೇವೆಂದು ಹೇಳಿದ್ದರು. ಇದುವರೆಗೂ ಒಂದು ಕೇಸ್‌ನಲ್ಲಿಯೂ ಎನ್‌ಕ್ವ್ಯಾರಿ ಆಗಲಿಲ್ಲ. ಸುಮ್ಮನೆ ಭರವಸೆ ಕೊಡುತ್ತಾ ಬಂದಿದ್ದಾರೆ. ತಾವು ಒಂದು ನಿರ್ಣಯ ತೆಗೆದುಕೊಳ್ಳಿ. ಯಾರೇ ರೈತ ಆತ್ಮಹತ್ಯೆ ಮಾಡಿಕೊಂಡರೂ ಅದಕ್ಕೆ ಪರಿಹಾರ ಕೊಡುವುದಿಲ್ಲ ಎಂದು ಪಾಲಿಸಿ ಡಿಸಿಷನ್ ತೆಗೆದುಕೊಳ್ಳಿ. ಪರಿಹಾರ ಕೊಡುವುದಕ್ಕೆ ನಿಮಗೆ ಆದರೆ ಕೊಡುತ್ತೇವೆ ಎಂಧು ಹೇಳಿ. ಇಲ್ಲದಿದ್ದರೆ ಕೊಡುವುದಕ್ಕೆ ಆಗುವುದಿಲ್ಲ ಎಂದು ಹೇಳಿಬಿಡಿ. ಗೋಕಾಕ್‌ನಲ್ಲಿ ಹಿಂದೆ ಐದು ಜನರು ಮೃತಪಟ್ಟರು.

ಶ್ರೀ ಕಾಗೋಡು ತಿಮ್ಮಪ್ಪ:– ಎಲ್ಲಿ ಆ ರೀತಿ ಆಗಿದ್ದು ಸ್ಪಷ್ಟವಾಗಿ ಹೇಳಿ.

ಶ್ರೀ ಜಗದೀಶ್ ಶೆಟ್ಟರ್:– ಎಲ್ಲಿ ಆಗಿದೆ; ಏನಾಗಿದೆ ಎಂಬುದೇ ಗೊತ್ತಿಲ್ಲ ಎಂದರೆ ಹೇಗೆ? ಮೊನ್ನೆ ಗೋಕಾಕ್‌ನಲ್ಲಿ. ಗೋಕಾಕ್‌ನಲ್ಲಿ ಮಾನ್ಯ ಕೌಜಲಗಿಯವರು ಹೋಗಿ ಬಂದರು.

ಶ್ರೀ ಕಾಗೋಡು ತಿಮ್ಮಪ್ಪ:– ಇದರಲ್ಲಿ ಎರಡ್ಮೂರು ತರಹ ಇರುತ್ತದೆ. ನಮ್ಮಲ್ಲಿ ಕೆಲವು ಸಾರಿ ಸತ್ತಾಗ ಎ.ಪಿ.ಎಂ.ಸಿ. ಯಿಂದ ಹತ್ತು ಸಾವಿರ ರೂಪಾಯಿ ಕೊಡುವುದಕ್ಕೆ ಅವಕಾಶವಿದೆ. ಅದನ್ನು ಕೊಡಿಸುವುದಕ್ಕೆ ಕೆಲಸ ನಡೆದಿರಬೇಕು.

ಶ್ರೀ ಜಗದೀಶ್ ಶೆಟ್ಟರ್:– ಇಲ್ಲ, ಇಲ್ಲ, ಅವರು ವೈಯಕ್ತಿಕವಾಗಿ ಹಣವನ್ನು ಕೊಟ್ಟು ಬಂದರು.

ಶ್ರೀ ಕಾಗೋಡು ತಿಮ್ಮಪ್ಪ:– ಅದಕ್ಕೇನು ಕಾರಣ ಎನ್ನುತ್ತಿದ್ದೀರಾ?

ಶ್ರೀ ಜಗದೀಶ್ ಶೆಟ್ಟರ್:– ಹಾಗಲ್ಲ, ನಾನು ಹೇಳುತ್ತೇನೆ. ಅಲ್ಲಿ ಪಂಚನಾಮೆ ಆಮೇಲೆ ಆಗಲಿ ಎಂದು ಸರ್ಕಾರಕ್ಕೆ ತಹಶೀಲ್ದಾರ್‌ರವರು ರಿಪೋರ್ಟ್ ಮಾಡಿದ್ದಾರೆ. ಅಲ್ಲಿದ್ದಂಥ ಡಿ.ಸಿ. ಯವರು ರಿಪೋರ್ಟ್ ಮಾಡಿದ್ದಾರೆ. ಈ ಕುಟುಂಬದ ಐದು ಜನರು ಸಾಲದ ಬಾಧೆಯಿಂದ ಆತ್ಮಹತ್ಯೆ ಮಾಡಿಕೊಂಡಿದ್ದಾರೆಂದು ರಿಪೋರ್ಟ್ ಮಾಡಿದ್ದಾರೆ.

ಶ್ರೀ ಕಾಗೋಡು ತಿಮ್ಮಪ್ಪ:– ಈಗ ಒಂದು ನಿಮಿಷ ತಾವು ಈಲ್ಡ್ ಆಗಿ. ತಾವೇ ಇಲ್ಲಿದ್ದಿರಿ, ಮಾನ್ಯ ಮುಖ್ಯಮಂತ್ರಿಗಳು ಹೇಳಿದರು, ಅದರ ಪ್ರಕಾರ ಸರ್ಕಾರದಿಂದ ಆದೇಶ ಹೋಗಿದೆ. ಎಲ್ಲಿ ಆತ್ಮಹತ್ಯೆ ಪ್ರಕರಣಗಳು ಬೆಳಕಿಗೆ ಬಂದಿದೆ ಅದನ್ನು ತನಿಖೆಗೆ ಒಳಪಡಿಸುತ್ತೇವೆ. ಆ ತನಿಖೆಯಿಂದ ಸಾಲದ ಹೊರೆಯಿಂದಲೇ ಆತ್ಮಹತ್ಯೆ ಮಾಡಿಕೊಂಡಿರುವುದು ನಿಜ ಎಂದು ವರದಿ ಬಂದು ಕೂಡ ಆ ಆಧಾರದ ಮೇಲೆ ಪರಿಹಾರ ಕೊಡದೇ ಇರುವ ಪ್ರಕರಣಗಳು ಯಾವುದಾದರೂ ಇದ್ದರೆ ದಯವಿಟ್ಟು ತಿಳಿಸಿರಿ.

ಶ್ರೀ ಜಗದೀಶ್ ಶೆಟ್ಟರ್:- ಈಗಾಗಲೇ 300 ಕ್ಕೂ ಹೆಚ್ಚು ಆತ್ಮಹತ್ಯೆ ಪ್ರಕರಣಗಳು ಆಗಿವೆ.

ಶ್ರೀ ಕಾಗೋಡು ತಿಮ್ಮಪ್ಪ:- ನಾವೇ ಅವೊತ್ತು ಸದನ ಸಮಿತಿಯಾಗಿದ್ದಾಗ ಅಲ್ಲಿಗೆ ಹೋಗಿ ಬಂದಿದ್ದೇವೆ. ಬೀದರ್, ಗುಲ್ಬಗಾ ಜಿಲ್ಲೆಗೆಲ್ಲಾ ಹೋಗಿ ಬಂದಿದ್ದೇವೆ. ಏನಾಗಿಡೆ ಎಂಬುದು ನಮಗೆ ಗೊತ್ತಿದೆ.

ಶ್ರೀ ಜಗದೀಶ್ ಶೆಟ್ಟರ್:- ಅದು ಆಯಿತು. ಹಿಂದಿನ ಸರ್ಕಾರ ಇದ್ದಾಗ ತಾವುಗಳೆಲ್ಲಾ ಆತ್ಮಹತ್ಯೆ ಪ್ರಕರಣಗಳಾಗಿವೆ, ಪರಿಹಾರ ಕೊಡಿ ಎಂದು ನೀವೂ ಮತ್ತು ನಾವೂ ಧರಣೆಯನ್ನು ಕುಳಿತಿದ್ದೆವಲ್ಲಾ, ಆಗ ಕೆಲವು ಕುಟುಂಬದ ಸದಸ್ಯರಿಗೆ ಪರಿಹಾರವನ್ನು ಕೊಟ್ಟಿದ್ದೇವೆ. ಸದನ ಸಮಿತಿಯಲ್ಲಿ ಶಿಫಾರಸ್ಸನ್ನು ಮಾಡಿದ್ದೇವೆ. ಅದರಲ್ಲಿ ಯಾವ ಆತ್ಮಹತ್ಯೆ ಪ್ರಕರಣಗಳು ಜೆನ್ಯುನ್ ಇತ್ತೋ ಅಂಥವುಗಳಿಗೆ ನಾವು ರೆಕಮೆಂಡ್ ಮಾಡಿದೆವು. ಈಗ 300 ಕೇಸ್‌ಗಳು ರಿಪೋರ್ಟ್ ಆಗಿವೆ. ಅದರಲ್ಲಿ ಒಂದು ಕೇಸ್ ಬಗ್ಗೆಯಾದರೂ ಎನ್‌ಕ್ವೈರಿ ಮಾಡಿದ್ದೀರಾ? ಬಜೆಟ್ ಭಾಷಣದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಆತ್ಮಹತ್ಯೆ ಮಾಡಿಕೊಂಡಂತೆ ರೈತ ಕುಟುಂಬದವರಿಗೆ ಪರಿಹಾರ ಧನ ಕೊಡುವ ಬಗ್ಗೆ ನಾವು ಇನ್‌ವೆಸ್ಟಿಗೇಶನ್, ವಿಚಾರಣೆಯನ್ನು ಮಾಡುತ್ತೇವೆ. ಈ ವಿಚಾರಣೆಯನ್ನು ಅಸಿಸ್ಟೆಂಟ್ ಕಮಿಶನರ್‌ರವರ ಕಡೆಯಿಂದ, ಮ್ಯಾಜಿಸ್ಟ್ರೇಟ್ ಕಡೆಯಿಂದ ಮಾಡುತ್ತೆವೆ, ಮೂರು ತಿಂಗಳ ಕಾಲಾವಕಾಶದಲ್ಲಿ ವಿಚಾರಣೆ ಮಾಡಿ ಅದರ ಬಗ್ಗೆ ಒಂದು ರಿಪೋರ್ಟ್ ತೆಗೆದುಕೊಂಡು ಅದರಲ್ಲಿ ಜೆನ್ಯುನಿಟಿ ಇದ್ದರೆ ನಾವು ಪರಿಹಾರ ಕೊಡುತ್ತೇವೆ ಎಂದು ಘೋಷಣೆಯನ್ನು ಮಾಡಿದರು. ಆದರೆ ಇದುವರೆಗೆ ಎಷ್ಟು ಕೇಸ್‌ಗಳಲ್ಲಿ ಎನ್‌ಕ್ವೈರಿ ಆಗಿದೆ. ಸರ್ಕಾರದ ಗಮನಕ್ಕೆ ಈ ಬಗ್ಗೆ ಏನೂ ಬಂದಿಲ್ಲ. ಪತ್ರಿಕೆಯಲ್ಲಿ ಬರುತ್ತವೆ. ಅದರ ಬಗ್ಗೆ ಏನೂ ಆನ್ ದಿ ಸ್ಪಾಟ್ ನೀವು ಗಮನಕ್ಕೆ ತೆಗೆದುಕೊಳ್ಳುವುದಿಲ್ಲವೇ? ಇದರ ಬಗ್ಗೆ ನೀವು ಹೇಳಬೇಕಲ್ಲವೆ?

ಶ್ರೀ ಕಾಗೋಡು ತಿಮ್ಮಪ್ಪ:- ಎಷ್ಟು ಕೇಸ್‌ಗಳು ಎನ್‌ಕ್ವೈರಿ ಆಗಿದೆ ಎಂದು ಮಾಹಿತಿ ಕೇಳಿದ್ದೀರಿ ತಾನೇ? ಕೊಡಿಸೋಣ ಬಿಡಿ.

ಶ್ರೀ ಜಗದೀಶ್ ಶೆಟ್ಟರ್:- ನಮ್ಮ ಮಾಹಿತಿ ಪ್ರಕಾರ 300ಕ್ಕೂ ಹೆಚ್ಚು ಆತ್ಮಹತ್ಯೆ ಪ್ರಕರಣಗಳಾಗಿವೆ. ಸರ್ಕಾರದ ದಾಖಲೆ ಪ್ರಕಾರ ಎಷ್ಟು ಆತ್ಮಹತ್ಯೆ ಪ್ರಕರಣಗಳಾಗಿವೆ? ಎಷ್ಟು ಎನ್‌ಕ್ವೈರಿ ಆಗಿದೆ ಎಂಬ ಬಗ್ಗೆ ಏನಾದರೂ ಮಾಹಿತಿ ತಮ್ಮ ಕಡೆಯಿಂದ ಬರಬೇಕಲ್ಲವೇ?

ಶ್ರೀ ಕಾಗೋಡು ತಿಮ್ಮಪ್ಪ:- ಕೊಡಿಸೋಣ. ಈಗ ಕೇಳ್ತಾ ಇದ್ದೀರಿ. ಕೊಡಿಸೋಣ.

ಶ್ರೀ ಜಗದೀಶ್ ಶೆಟ್ಟರ್:- ಹೀಗೇ ಆಗುತ್ತದೆ. ಕಡೆಗೆ ಚರ್ಚೆಯಾಗಿ ಸದನ ಮುಗಿದು ಹೋಗುತ್ತದೆ. ಚರ್ಚೆ ಇಲ್ಲಿಗೇ ಮುಗಿದು ಹೋಗುತ್ತದೆ.

ಶ್ರೀ ಕಾಗೋಡು ತಿಮ್ಮಪ್ಪ:- ನಿಮಗೆ ಉತ್ತರ ಬರುವುದಕ್ಕಿಂತ ಮುಂಚೆಯೇ ಮಾಹಿತಿ ಕೊಡಿಸೋಣ.

ಶ್ರೀ ಕರಡಿ ಸಂಗಣ್ಣ ಅಮರಪ್ಪ:- ಮಾನ್ಯ ಉಪಾಧ್ಯಕ್ಷರೆ, ಆತ್ಮಹತ್ಯೆ ಪ್ರಕರಣದ ಬಗ್ಗೆ ಪರ್ಟಿಕ್ಯುಲರ್ಲಿ ಯಾವುದಾದರೂ ಕೇಸ್‌ಗಳು ನಿಮಗೆ ಗೊತ್ತಿದ್ದರೆ ಹೇಳಿ ಎಂದು ಮಾನ್ಯ ಕಾಗೋಡು ತಿಮ್ಮಪ್ಪನವರು ಹೇಳಿದರು. 300 ರೈತರು ಸತ್ತಿದ್ದಾರೆ. ಅದರಲ್ಲಿ ನಿಮ್ಮ ಎನ್‌ಕ್ವೈರಿ ಆದಾಗ ಎಷ್ಟು ಜನರು ಸಾಲದ ಹೊರೆಯಿಂದಲೇ ಸತ್ತಿದ್ದಾರೆ ಎಂಬ ಬಗ್ಗೆ ನಿಮ್ಮ ವರದಿಯಲ್ಲಿ ಏನು ಇದೆ ಅದರ ಬಗ್ಗೆ ಸದನದಲ್ಲಿ ಈಗ ಹೇಳಿ. ಅದರ ಬಗ್ಗೆ ತಾವು ಬಹಿರಂಗಪಡಿಸಿ. ನಾವು ಪರಿಹಾರ ಕೊಡುವುದಕ್ಕೆ ಆಗುವುದಿಲ್ಲ, ರೈತ ಸಾಲದ ಹೊರೆಯಿಂದ ಸತ್ತಿಲ್ಲ ಎಂದು ತಾವು ಹೇಳಿ.

ಶ್ರೀ ಕಾಗೋಡು ತಿಮ್ಮಪ್ಪ:- ಸರ್ಕಾರ ಈಗಾಗಲೇ ಏನು ಘೋಷಣೆ ಮಾಡಿದೆ ಅದಕ್ಕೆ ನಾವು ಬದ್ಧನಾಗಿದ್ದೇವೆ. ಯಾವ ಪ್ರಕರಣಗಳಲ್ಲಿ ಆತ್ಮಹತ್ಯೆ ಸಾಲದ ಹೊರೆಯಿಂದಲೇ ಆಗಿದೆ ಎಂದು ಖಚಿತವಾದರೆ ಅಂಥ ಕುಟುಂಬಗಳಿಗೆ ಪರಿಹಾರ ಕೊಡುವುದಕ್ಕೆ ಸರ್ಕಾರ ಬದ್ಧವಾಗಿದೆ. ಆಂಥ ಪ್ರಕರಣಗಳಲ್ಲಿ ಪರಿಹಾರ ಎಲ್ಲಾದರೂ ಕೊಡದೇ ಇರುವುದು ಕಂಡುಬಂದಿದ್ದರೆ ಅಂಥವುಗಳ ಬಗ್ಗೆ ನೀವು ಹೇಳಿ. ಇದಕ್ಕೆ ಯಾವು ಅಧಿಕಾರಿ ಕಾರಣ ಇರುತ್ತಾರೋ ಅವರ ಮೇಲೆ ಕ್ರಮ ತೆಗೆದುಕೊಳ್ಳೋಣ.

ಶ್ರೀ ಎಸ್.ಎಸ್. ಪಾಟೀಲ್:- ನನ್ನ ಕ್ಷೇತ್ರದಲ್ಲಿಯೇ ಪರಿಹಾರ ಕೊಟ್ಟಿಲ್ಲ. ಇತಿಹಾಸದಲ್ಲಿಯೇ ನನ್ನ ಕ್ಷೇತ್ರದಲ್ಲಿ ರೈತರು ಸತ್ತಿರಲಿಲ್ಲ. ಅಷ್ಟು ಕಷ್ಟ ಬಂದಿತ್ತು ರೈತರಿಗೆ. ಒಬ್ಬ ಉರುಲಾ ಹಾಕಿಕೊಂಡು ಸತ್ತ.

ಶ್ರೀ ಕಾಗೋಡು ತಿಮ್ಮಪ್ಪ:- ಈಗ ನೆನಪಾಯ್ತು. ಮಂಡ್ಯದ ಜಿ.ಬಿ. ಶಿವಕುಮಾರ್ ರವರ ಅಧ್ಯಕ್ಷತೆಯಲ್ಲಿ ನಾವೆಲ್ಲರೂ ತನಿಖೆ ಮಾಡಲು ಗುಲ್ಬರ್ಗಾ, ಬೀದರ್ ಕಡೆಯಲ್ಲೆಲ್ಲಾ ಹೋಗಿ ತನಿಖೆ ಮಾಡಿಕೊಂಡು ನಾವು ಬಂದಿದ್ದೇವೆ. ಅವರ ವರದಿಯನ್ನು ತಾವು ದಯವಿಟ್ಟು ಓದಿ. ಆ ವರದಿಯಲ್ಲಿ ಏನಿದೆ ಎಂಬುದು ತಮಗೇ ಬೆಳಕಿಗೆ ಬರುತ್ತದೆ.

ಶ್ರೀ ಶಿವಾನಂದ ಎಸ್. ಪಾಟೀಲ್:- ಆ ಸಮಿತಿಯಲ್ಲಿ ನಾನು ಒಬ್ಬ ಸದಸ್ಯನಾಗಿದ್ದೆ. ನನಗೂ ಗೊತ್ತಿರುವ ವಿಚಾರವನ್ನು ನಾನೂ ಕೂಡ ಸ್ವಲ್ಪ ಹೇಳಬಯಸುತ್ತೇನೆ. ಆ ವರದಿ ಏನಿತ್ತು ಎಂಬುದು ನಿಮಗೂ ಗೊತ್ತಿದೆ. ಬೀದರ್‌ನಲ್ಲಿ ಕೆಲವು ಬೇರೆ ಬೇರೆ ರೀತಿ ಪ್ರಕರಣಗಳು ಆದವು. ಒಂದು ಹಿನ್ನೆಲೆಯಲ್ಲಿ ನಾವು ಸದನ ಸಮಿತಿಯನ್ನು ಮಾಡಿದ್ದೆವು. ಆದು ಆದನಂತರ ಏನಾಯಿತು ಎಂದರೆ ಆ ವರದಿ ಹಿನ್ನೆಲೆಯಲ್ಲಿ ಕೆಲವು ಪ್ರಕರಣಗಳು ನಮ್ಮ ನೋಟಿಸಿಗೆ ಬಂತು ಎಂದು ಹೇಳಿ ಪರಿಹಾರ ಕೊಡುವುದನ್ನು ನಾವು ಬಂದ್ ಮಾಡಿದೆವು. ಒಂದು ಆದೇಶ ಹೋಯಿತು, ಸಿಂಧ್ಯಾರವರು ರೈಸ್ ಮಾಡಿದ್ದರು, ನೀವೂ ರೈಸ್ ಮಾಡಿದ್ದಿರಿ, ನಾವೂ ರೈಸ್ ಮಾಡಿದ್ದೆವು. ಆದರೆ ಕೆಲವು ನಿಜವಾದಂಥ ಪ್ರಕರಣಗಳೂ ಕೂಡ ಆ ವರದಿ ಬಂದ ಮೇಲೆ ಮತ್ತು ನೀವೇನು ಒಂದು ಶಂಕೆಯನ್ನು ಎತ್ತಿದ್ದೀರಲ್ಲಾ ಆ ಹಿನ್ನೆಲೆಯ ನಡುವಿನಲ್ಲಿ ಆಗಿವೆ. ಅಂಥ ನೂರಾರು ಪ್ರಕರಣಗಳು ಏನಾಗಿವೆ ಆ ಪ್ರಕರಣಗಳಿಗೆ ಇದುವರೆಗೆ ಪರಿಹಾರ ಸಿಕ್ಕಿಲ್ಲ. ಆ ವರದಿ ಮತ್ತು ಈಗೇನೋ ನಿಮ್ಮ ಸರ್ಕಾರದ ಕಡೆಯಿಂದ ಅಸಿಸ್ಟೆಂಟ್ ಕಮಿಷನರ್ ಕಡೆಯಿಂದ ಎನ್‌ಕ್ವೈರಿ ಮಾಡಿಸಲು ಹೋಗಿದೆಯಲ್ಲಾ ಆ ನಡುವಿನ ಮಧ್ಯದಲ್ಲಿ ಎನಾಗಿದೆ ಅದಕ್ಕೆ ಪರಿಹಾರ ಸಿಕ್ಕಿಲ್ಲ. ಅದನ್ನು ನೀವು ಬೇಕಾದರೆ ಎನ್‌ಕ್ವೈರಿ ಮಾಡಿಸಿ.

ಶ್ರೀ ಎ. ರಾಮದಾಸ್:- ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಕಾಗೋಡು ತಿಮ್ಮಪ್ಪನವರು ಇಲ್ಲಿದ್ದಾಗ ಆ ಒಂದು ಸಮಿತಿಯನ್ನು ಹಿಂದಿನ ಸರ್ಕಾರ ರಚನೆ ಮಾಡಿದ್ದರಲ್ಲಿ ಕಾಗೋಡು ತಿಮ್ಮಪ್ಪನವರು ಮತ್ತು ನಾವು, ಎಲ್ಲರೂ ಕೂಡ ಇದ್ದೆವು. ಆಗ ಬೀದರ್, ಗುಲ್ಬರ್ಗಾ ಸೇರಿದಂತೆ ಐದು ಜಿಲ್ಲೆಗಳಲ್ಲಿ ಎಲ್ಲಾ ಮನೆಗಳಿಗೂ ಹೋಗಿ ಬಂದಂಥ ಸಂದರ್ಭದಲ್ಲಿ ನಾಲ್ಕು ಪ್ರಕರಣ ಬಿಟ್ಟು ಉಳಿದ ಎಲ್ಲಾ ಪ್ರಕರಣಗಳಲ್ಲೂ ಕೂಡ ವರದಿ ಕೊಟ್ಟಂಥ ಒಂದು ತಿಂಗಳೊಳಗೆ ಅವರ ಮನೆಗೆ ಚೆಕ್ ಮುಟ್ಟಿಸುವಂಥ ಕೆಲಸವನ್ನು ಕಾಗೋಡು ತಿಮ್ಮಪ್ಪನವರು ಸಮರ್ಥವಾಗಿ ನಿಂತುಕೊಂಡು ಈ ಕಡೆ ನಿಂತುಕೊಂಡು ಕೆಲಸವನ್ನು ಮಾಡಿದರು. ಇವೊತ್ತು ಅಧಿಕಾರದಲ್ಲಿ ತಾವೇ ಅಲ್ಲಿ ಇದ್ದೀರಿ. ಈ ಸಂದರ್ಭದಲ್ಲಿ ಹಿಂದೆ ಇಲ್ಲಿ ನಿಂತು ಏನು ಹೇಳಿದ್ದಿರಿ, ಹಾಗೆಯೇ ಆಡಳಿತದಲ್ಲೂ ಕೂಡ ಅದೇ

ರೀತಿ ಬರಬೇಕು ಎಂದು ನಾವು ಎಕ್ಸ್‌ಪೆಕ್ಟ್ ಮಾಡುವುದು ತಪ್ಪೇ?

ಶ್ರೀ ಕಾಗೋಡು ತಿಮ್ಮಪ್ಪ:– ಎನ್ನೂ ತಪ್ಪೇನಿಲ್ಲ. ಅವೊತ್ತು ನಾವು ಆಡಳಿತದಲ್ಲಿ ವಿರೋಧ ಪಕ್ಷದವರು ಎನ್ನುವ ದೃಷ್ಟಿಯಿಂದ ನಾವು ಸಾಮೂಹಿಕವಾಗಿ ಸರ್ವಾನುಮತದಿಂದ ತೀರ್ಮಾನ ಮಾಡಿದ್ದೇವೆ. ವಿಶೇಷವಾಗಿ ಇಲ್ಲಿಯೇ ಎಲ್ಲರೂ ಇರುವ ಕಾರಣದಿಂದ.

ಶ್ರೀ ಕರಡಿ ಸಂಗಣ್ಣ ಅಮರಪ್ಪ:– ಮಾನ್ಯ ಉಪಾಧ್ಯಕ್ಷರೆ, ಕೆ.ಪಿ.ಟಿ.ಸಿ.ಎಲ್. ನಿಂದ ಆಗಿರುವ ವಿದ್ಯುತ್ ಸಮಸ್ಯೆ ಬಗ್ಗೆ ನಾನು ಹೇಳಿದ್ದೇನೆ. ಇವೊತ್ತು ರೈತರಿಗೆ ವಿದ್ಯುತ್ ಪೂರೈಕೆ ಸರಿ ಇಲ್ಲದ್ದರಿಂದ ಆತ ಕರೆಂಟ್ ಉಪಯೋಗ ಮಾಡುವಲ್ಲಿ ಹೇಗೆ ಫೇಲ್ಯೂರ್ ಆಗಿದ್ದಾನೆ ಎಂಬ ಬಗ್ಗೆ ಹೇಳಿದ್ದೇನೆ. ಮೊದಲು ಎಂಟು ತಾಸುಗಳ ಕಾಲ ವಿದ್ಯುತ್ ಕೊಡುತ್ತೇವೆ ಎಂದು ಹೇಳಿ ಆಮೇಲೆ ರೆಡ್ಯೂಸ್ ಮಾಡಿ ನಾಲ್ಕು ತಾಸು, ಎರಡು ತಾಸು ಎಂದು ಹೇಳಿ ಕಡೆಗೆ ಒಂದು ತಾಸು ಕೂಡ ಇವೊತ್ತು ಗ್ರಾಮಾಂತರ ಪ್ರದೇಶದಲ್ಲಿ ವಿದ್ಯುತ್ ಪೂರೈಕೆ ಸರಿಯಾಗಿ ಆಗುತ್ತಿಲ್ಲದಿರುವುದನ್ನು ನಾವು ನೊಡಿದ್ದೇವೆ. ಈ ರೀತಿಯಾದರೆ ಸರ್ಕಾರ ರೈತರ ನೆರವಿಗೆ ಯಾವ ರೀತಿಯಲ್ಲಿ ಸಹಾಯ ಮಾಡುವುದಕ್ಕೆ ಶ್ರಮವಹಿಸಿದೆ, ರೈತರಿಗೆ ಏನು ಸಹಾಯ ಮಾಡಿದೆ ಎಂಬುದನ್ನು ನೀವು ನಮಗೆ ಹೇಳಬೇಕಲ್ಲವೇ? ಇವೊತ್ತು ಸರ್ಕಾರ ಈ ವಿಚಾರದಲ್ಲಿ ಎಡವಿದೆ. ರೈತನಿಗೆ ಇವೊತ್ತು ಏನೂ ಸಹಾಯವಾಗುತ್ತಿಲ್ಲ. ಇವೊತ್ತು ನಾವು ಕುಡಿಯುವ ನೀರಿನಿಂದ ತೆಗೆದುಕೊಂಡರೆ, ಇವೊತ್ತು ಅನೇಕ ದೊಡ್ಡ ದೊಡ್ಡ ಗ್ರಾಮಗಳಲ್ಲೂ ಕೂಡ ಕುಡಿಯುವ ನೀರಿನ ಪೂರೈಕೆಗೆ ವಿದ್ಯುತ್ ಪೂರೈಕೆ ಸಿಗುತ್ತಿಲ್ಲ. ಇವೊತ್ತು ಜಾನುವಾರುಗಳಿಗೆ ಕುಡಿಯಲು ನೀರು ತುಂಬಿಸಬೇಕು ಎಂದರೆ ಬೋರ್‌ವೆಲ್‌ಗಳನ್ನು ಹಾಕಿ ಹ್ಯಾಂಡ್‌ಪಂಪ್ ಹೊಡೆದರೆ ಮಾತ್ರ ನೀರು ತುಂಬಿಸತಕ್ಕಂಥ ವ್ಯವಸ್ಥೆಗೆ ನಾವು ಹೋಗಿದ್ದೇವೆ. ಇವೊತ್ತು ಜಾನುವಾರುಗಳನ್ನು ರಕ್ಷಣೆ ಮಾಡಬೇಕು ಅದನ್ನು ಕಟುಕರಿಗೆ ಕೊಡಬಾರದು. ಏಕೆಂದರೆ ರೈತನ ಜೊತೆ ಜೀವನದ ಸಂಬಂಧದಲ್ಲಿ ಆತ್ಮೀಯ ಸಂಬಂಧ ಜಾನುವಾರುಗಳ ಜೊತೆ ಏನಿದೆ, ಇವುಗಳು ಎತ್ತು ಇರಬಹುದು, ಎಮ್ಮೆಯೇ ಆಗಿರಬಹುದು, ಆಕಳು ಇರಬಹುದು, ಇವೆಲ್ಲವೂ ಕೂಡ ಇಂದು ಶೇಕಡ 60ರಷ್ಟು ಕಟುಕರ ಮನೆಗೆ ಹೋಗತಕ್ಕಂಥ ವಾತಾವರಣವನ್ನು ನಾವು ನೋಡಿದ್ದೇವೆ. ಆದರೆ ನಮ್ಮ ಜಿಲ್ಲೆಯಲ್ಲಿ ಗೋಶಾಲೆಯನ್ನು ತೆರೆಯಲಾಗಿದೆ. ಇವೊತ್ತು ನಮ್ಮ ಜಿಲ್ಲಾ ಮಂತ್ರಿಗಳನ್ನು ನಾವು ಅಪ್ರೀಶಿಯೇಟ್ ಮಾಡುತ್ತೇವೆ. ಇವೊತ್ತು ಕೊಪ್ಪಳ ಜಿಲ್ಲೆಯ ಇರಕಲಗಡ ಹೋಬಳಿಯಲ್ಲಿ ಆರು ಸಾವಿರ ಜಾನುವಾರುಗಳಿಗೆ ಮತ್ತು ಯಲಬುರ್ಗಾದಲ್ಲಿ ಮತ್ತು ಕುಷ್ಟಗಿಯಲ್ಲಿ ಆರು ಸಾವಿರ ಜಾನುವಾರುಗಳಿಗೆ, ಒಟ್ಟು ಹನ್ನೆರಡು ಸಾವಿರ ಜಾನುವಾರುಗಳಿಗೆ ರಕ್ಷಣೆ ಮಾಡತಕ್ಕಂಥ ಕೆಲಸ ಈ ಗೋಶಾಲೆಗಳಿಂದ ಸರ್ಕಾರದ ಕಡೆಯಿಂದ ಆಗಿದೆ. ಆದರೆ ಪ್ರಶ್ನೆ ಏನು ಎಂದರೆ, ಇವೊತ್ತು ಸುಮಾರು ಒಂದು ಲಕ್ಷಕ್ಕಿಂತ ಹೆಚ್ಚು ಜಾನುವಾರುಗಳ ಸಂಖ್ಯೆ ಇದೆ ಈ ಐದು ತಾಲ್ಲೂಕುಗಳಲ್ಲಿ. ಹೀಗಾಗಿ ಒಂದು ಲಕ್ಷಕ್ಕಿಂತ ಹೆಚ್ಚು ಜಾನುವಾರುಗಳ ಸಂಖ್ಯೆ ಏನಿವೆಯೋ ಇದರಲ್ಲಿ ಹನ್ನೆರಡು ಸಾವಿರ ಬಿಟ್ಟರೆ ಉಳಿದ ಜಾನುವಾರುಗಳ ರಕ್ಷಣೆಗೆ ಸರ್ಕಾರ ಮುಂದೆ ಬರುತ್ತಿಲ್ಲ. ನಾವೇನು ಒತ್ತಾಯ ಮಾಡುತ್ತೇವೆ ಎಂದರೆ ಕಡೇ ಪಕ್ಷ ಉಳಿದ ಜಾನುವಾರುಗಳಿಗೆ ಮೇವನ್ನು ಸಾಗಾಣಿಕೆ ಮಾಡಿಕೊಳ್ಳಲು ಡೀಸೆಲ್‌ನ್ನು ಫ್ರೀಯಾಗಿ ಕೊಡಲು ವ್ಯವಸ್ಥೆ ಮಾಡಬೇಕಾಗುತ್ತದೆ. ಆದು ಆಗದಿದ್ದರೆ ಫ್ರೀಯಾಗಿ ವೆಹಿಕಲ್‌ಗಳನ್ನು ಕೊಡತಕ್ಕಂಥ ವ್ಯವಸ್ಥೆ ಮಾಡಬೇಕಾಗುತ್ತದೆ. ಕನಿಷ್ಟ ಪಕ್ಷ ವೆಹಿಕಲ್ ಅರೇಂಜ್‌ಮೆಂಟ್ ಆದರೂ ಮಾಡಿ ಎಂದರೆ ಸರ್ಕಾರ ಅದನ್ನೂ ಕೂಡ ಮಾಡುತ್ತಿಲ್ಲ. ಆ ಕಾರಣಕ್ಕಾಗಿ ಇವೊತ್ತು ಸರ್ಕಾರದಿಂದ ರೈತ ಪರವಾಗಿರುವ ಯಾವ ನಿಲುವೂ ಕೂಡ ಬರುತ್ತಿಲ್ಲ.

ಆದ್ದರಿಂದ ಈ ಸರ್ಕಾರಕ್ಕೆ ರೈತ ವಿರೋಧಿ ಸರ್ಕಾರ ಎಂದು ಹೇಳಬೇಕಾಗುತ್ತದೆ. ನಮ್ಮ ಕ್ಷೇತ್ರದ ಬದನಾಳುವಿನಲ್ಲಿ ಒಂದು ಘಟನೆ ನಡೆಯಿತು. ವಿರೋಧ ಪಕ್ಷದ ನಾಯಕರು ಮಾತನಾಡುವಾಗ ಅದನ್ನು ಹೇಳಿದರು. ಹಿರೇಬದನಾಳು ಎಂದು ಸ್ಥಳ. ಅಲ್ಲಿ ಕೆ.ಪಿ.ಟಿ.ಸಿ.ಎಲ್. ಹಾಕಿದ್ದ ಮೀಟರ್‌ಗಳನ್ನು ರೈತರು ಕಿತ್ತು ಹಾಕಿದರು. ಅದಕ್ಕೆ ಕಾರಣ ಏನು ಎಂಬುದನ್ನು ಹೇಳುತ್ತೇನೆ. ಮಾನ್ಯ ಮುಖ್ಯಮಂತ್ರಿಗಳು ಈಗ ಇಲ್ಲೆ ಇದ್ದಾರೆ. ಅದನ್ನು ತಾವು ಗಮನಿಸಬೇಕು. ಆ ಘಟನೆಯಲ್ಲಿ ಸುಮಾರು 60, 65ಜನ ರೈತರು ಅರೆಸ್ಟ್ ಅದರು. ಅಲ್ಲಿ ಲಾ ಅಂಡ್ ಆರ್ಡರ್ ಪ್ರಾಬ್ಲಮ್ ಆಗಿ ಲಾಠಿಛಾರ್ಜ್ ಆಗಿ ಅನೇಕ ಅಮಾಯಕ ಜನರಿಗೆ ಹೊಡೆತ ಬಿದ್ದಿದೆ. ಆದರೆ ಇದಕ್ಕೆ ಕಾರಣ ಏನು ಎಂದರೆ ಕೆ.ಪಿ.ಟಿ.ಸಿ.ಎಲ್. ನಿಂದ ಅಲ್ಲಿ ಏನು ಅವ್ಯವಸ್ಥೆ ಆಗಿದೆಯೆಂದರೆ ನಮ್ಮ ಕಡೆ ಜೆಸ್ಕಾಮ್ ಎಂದು ಏನು ವಿದ್ಯುತ್ ಕಂಪನಿ ಆಗಿದೆ, ಅಲ್ಲಿ ಇವೊತ್ತು ಒಂದು ಕಡೆ ಒಂದು ಟ್ರಾನ್ಸ್‌ಫಾರ್ಮರ್ ಫೇಲ್ಯೂರ್ ಆದರೆ ಒಂದು ತಿಂಗಳು ಕಾಲವಾದರೂ ಟ್ರಾನ್ಸ್‌ಫಾರ್ಮ್‌ರ್‌ನ್ನು ರಿಪ್ಲೇಸ್ ಮಾಡುವುದಕ್ಕೆ ಅವರಿಂದ ಆಗಿಲ್ಲ. ಹೇಗೆ ರೈತ ಸುಮ್ಮನೆ ಇರುತ್ತಾನೆ ಹೇಳಿ? ಇವೊತ್ತು ರೈತ ತನ್ನ ಬೆಳೆ ಉಳಿಸಿಕೊಳ್ಳಬೇಕಾಗಿದೆ. ಒಂದು ಕಡೆ ಮಳೆ ಇಲ್ಲ. ಸಕಾಲಕ್ಕೆ ಮಳೆ ಇಲ್ಲ. ಇವೊತ್ತು ಆ ಮರು ಭೂಮಿಯಲ್ಲಿ ಏನಾದರೂ ಬಿತ್ತನೆ ಮಾಡಿ ಬೆಳೆಯಬೇಕು ಎಂದರೆ ಆಗುತ್ತಿಲ್ಲ. ಅಲ್ಲಿ ಜೆಸ್ಕಾಮ್ ಎಂ.ಡಿ. ಏನಿದ್ದಾರೆ ಅವರು ಇವೊತ್ತು ಸ್ಟೇಟ್‌ಮೆಂಟ್ ಏನು ಮಾಡುತ್ತಾರೆಂದರೆ ನಮಗೆ 7 ಅರ್ನಿಂಗ್ ಬರುತ್ತಿಲ್ಲ, 11 ಕೋಟಿ ರೂ. ಇವೊತ್ತು ಎವೆರಿ ಮಂಥ್ ನಮಗೆ ಶಾರ್ಟ್‌ಫಾಲ್ ಬರುತ್ತಿದೆ. ಸರ್ಕಾರ ಇದಕ್ಕೆ ಇಂಟರ್‌ವೀನ್ ಆಗಿ ಫೈನಾನ್ಸ್ ಮಾಡಬೇಕು. ಹಾಗಾದರೆ ಮಾತ್ರ ಮೆಟೀರಿಯಲ್ಸ್ ಸಪ್ಲೈ ಮಾಡುತ್ತೇವೆ ಎಂದು ಅವರು ಸ್ಟೇಟ್‌ಮೆಂಟ್ ಮಾಡುತ್ತಾರೆ. ಆದರೆ ಸರ್ಕಾರ ಇವೊತ್ತು ಅದರ ಬಗ್ಗೆ ಲಕ್ಷ್ಯ ವಹಿಸುತ್ತಿಲ್ಲ. ಹೀಗಾಗಿ ಅಲ್ಲಿ ರೈತ ಸಂಘದವರೆಲ್ಲಾ ರೊಚ್ಚಿಗೆದ್ದು ಯಾವುದೋ ಒಂದು ಮೂಮೆಂಟ್‌ನಲ್ಲಿ ಮೀಟರ್‌ನ್ನು ಕಿತ್ತು ಹಾಕಿದರು. ಅಲ್ಲಿ ನಾವೆಲ್ಲಾ ಅವರನ್ನು ಕರೆದು ಮಾತನಾಡಿ ಮೀಟರ್ ಕಿತ್ತು ಹಾಕುವುದು ಸರಿಯಾದ ಕ್ರಮವಲ್ಲ, ಪಂಪ್‌ಸೆಟ್‌ಗೆ ಮೀಟರ್ ಬಗ್ಗೆ ನಾವು ವಿರೋಧ ಮಾಡೋಣ, ಆದರೆ ಮನೆಗೆ ಹಾಕಿರುವ ಮೀಟರ್ ಕಿತ್ತು ಹಾಕಬೇಡಿ ಎಂದು ಹೇಳಿ ಅವರನ್ನು ಕನ್‌ವಿನ್ಸ್ ಮಾಡಿದರೂ ಕೂಡ ರೈತರು ಅಲ್ಲಿ ರೊಚ್ಚಿಗೆದ್ದು ಲಾ ಅಂಡ್ ಆರ್ಡರ್ ಪ್ರಾಬ್ಲಮ್ ಆಗಿ ಅಮಾಯಕ ಜನರಿಗೆ ತೊಂದರೆಯಾಗಿದೆ. ಅಲ್ಲೇನು ಅಮಾಯಕ ಜನರ ಮೇಲೆ ಕೇಸ್ ಹಾಕಲಾಗಿದೆ ಸರ್ಕಾರ ಅದನ್ನು ವಾಪಸ್ಸು ತೆಗೆದುಕೊಳ್ಳಬೇಕೆಂದು ನಾನು ಈ ಸಂದರ್ಭದಲ್ಲಿ ಒತ್ತಾಯ ಮಾಡುತ್ತೇನೆ. ಇನ್ನು ಉದ್ಯೋಗದ ಬಗ್ಗೆ ನಾನು ಮತ್ತೊಮ್ಮೆ ಮಾನ್ಯ ಉಪಾಧ್ಯಕ್ಷರ ಮೂಲಕ ಮನವಿ ಮಾಡಿಕೊಳ್ಳುವುದೇನೆಂದರೆ ಉದ್ಯೋಗದ ಬಗ್ಗೆ ಸರ್ಕಾರ ಹೆಚ್ಚು ಒತ್ತನ್ನು ಕೊಡುವ ಕೆಲಸ ಆಗಬೇಕಾಗಿದೆ. ಏಕೆಂದರೆ ಇವೊತ್ತು ಜನರನ್ನು ನಾವು ಬದುಕಿಸಬೇಕಾಗಿದೆ. ಈ ರಾಜ್ಯದ ಜನ ಜೀವನ ಏನಿದೆ ಆ ಜೀವನವನ್ನು ಉಳಿಸಿಕೊಳ್ಳಬೇಕಾದ ಕೆಲಸ ನಾಗರೀಕ ಸರ್ಕಾರದ ಜವಾಬ್ದಾರಿಯಾಗಿ ಇರಬೇಕಾಗುತ್ತದೆ. ಆ ಕಾರಣಕ್ಕಾಗಿ ಈ ಕೆಲಸವನ್ನು ಮಾಡಬೇಕೆಂದು ಹೇಳುತ್ತೇನೆ. ಇನ್ನೂ ಹಲವಾರು ವಿಚಾರಗಳನ್ನು ಹೇಳಬೇಕಾಗಿತ್ತು. ಅಧ್ಯಕ್ಷರೆ, ಇನ್ನೂ ಸ್ವಲ್ಪ ಮಾತನಾಡಲು ನನಗೆ ಅವಕಾಶ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಕರಡಿ ಸಂಗಣ್ಣ ಅಮರಪ್ಪ:- ತಾವು ಅವಕಾಶ ಕೊಟ್ಟರೆ ಆಗುತ್ತದೆ.

ಉಪಾಧ್ಯಕ್ಷರು:- ತಮಗೆ ಅರ್ಧ ಗಂಟೆ ಕೊಟ್ಟಿದ್ದೇನೆ.

ಶ್ರೀ ಕರಡಿ ಸಂಗಣ್ಣ ಅಮರಪ್ಪ:- ಹಾರ್ಟಿಕಲ್ಚರ್ ಕ್ರಾಪ್ಸ್ ಬಗ್ಗೆ ಒಂದೆರಡು ಮಾತು ಹೇಳುವುದಕ್ಕೆ ಬಯಸುತ್ತೇನೆ. ಹಾರ್ಟಿಕಲ್ಚರ್ ಏನಾಗಿದೆ ಎಂದರೆ ವರದಿಯನ್ನು ಗಮನಿಸಿದಾಗ

ಬಿಜಾಪುರ ಜಿಲ್ಲೆಯ ವರದಿಯನ್ನು ಒಂದು ಪತ್ರಿಕೆಯಲ್ಲಿ ನೋಡಿದ್ದೇನೆ. ಅಲ್ಲಿ 500 ಕೋಟಿ ರೂಪಾಯಿ ಉತ್ಪನ್ನವಾಗುವಂಥದ್ದು ಇವತ್ತು 200 ಕೋಟಿ ರೂಪಾಯಿ ಲಾಸ್ ಆಗಿದೆ ಎನ್ನುವ ವರದಿಯನ್ನು ನಾವು ಗಮನಿಸಿದ್ದೇವೆ. ಇನ್ನು ರಾಜ್ಯವಾರು ಆಳತೆಗೋಲನ್ನು ನೋಡಿದರೆ ಎಷ್ಟು ಪ್ರಮಾಣದಲ್ಲಿ ಇವತ್ತು ಹಾರ್ಟಿಕಲ್ಚರ್ ಬೆಳೆ ಹಾನಿಯಾಗಿದೆ ಎನ್ನುವುದನ್ನು ಗಮನಿಸಬೇಕಾಗಿದೆ. ಈ ಕಾರಣಕ್ಕೆ ಮಾನ್ಯ ಮುಖ್ಯಮಂತ್ರಿಗಳು ಇದನ್ನು ಮೊನ್ನೆ ಚರ್ಚೆ ಸಂದರ್ಭದಲ್ಲಿ ಒಪ್ಪಿಕೊಂಡಿದ್ದಾರೆ ಎಂದು ಭಾವಿಸಿದ್ದೇನೆ. ಇರುವಂತಹ ಕಡಿಮೆ ನೀರಿನ ಉಪಯೋಗವನ್ನು ಮಾಡಿ ಅಲ್ಲಿ ರೈತ ಬದುಕಬೇಕಾಗಿದೆ. ಮತ್ತು ಲಾಂಗ್ ಟರ್ಮ್ ಕ್ರಾಪ್ಸ್‌ಗಳಾದಂತಹ ಮಾವಿನ ಗಿಡಗಳು ನಮ್ಮ ತೋಟದಲ್ಲಿ ಒಣಗುತ್ತಿವೆ. ಸುಮಾರು ಮೂರು ವರ್ಷದಿಂದ ನಿರಂತರವಾಗಿ ಮಳೆ ಇಲ್ಲ. ಅದುದರಿಂದ ಇದರ ಬಗ್ಗೆ ಏನಾದರೂ ಪರ್ಯಾಯವಾಗಿ ಆಲೋಚನೆಯನ್ನು ಮಾಡಬೇಕಾಗಿದೆ. ಈ ರಾಜ್ಯದ ಜವಾಬ್ದಾರಿಯನ್ನು ಹೊತ್ತಿರತಕ್ಕಂಥ ಮಾನ್ಯ ಮುಖ್ಯಮಂತ್ರಿಗಳು ಅನೇಕ ಯೋಜನೆಗಳನ್ನು ಮಾಡಿದ್ದಾರೆ. ಅದನ್ನು ನಾವು ಸ್ವಾಗತ ಮಾಡುತ್ತೇವೆ. ಸ್ತ್ರೀಶಕ್ತಿ, ರೈತ ಕಾಯಕ ಕೆರೆ, ಜಲ ಸಂವರ್ಧನೆ ಇದೆಲ್ಲಾ ಯೋಜನೆಗಳನ್ನು ಮಾಡಿದ್ದಾರೆ. ಆದರೆ ಹಣಕಾಸಿನ ಮುಗ್ಗಟ್ಟಿನಿಂದ ಅದಾವುದೂ ಸಕ್ಸಸ್ ಆಗುತ್ತಿಲ್ಲ. ಆದರೆ ಮುಂದೆಯಾದರೂ ಕೂಡ ಏನಾದರೂ ಮಾಡಿ ಮುಂದಿನ ಭವಿಷ್ಯವನ್ನು ರೂಪಿಸತಕ್ಕಂಥ ದೂರಗಾಮಿ ಯೋಜನೆಯನ್ನು ಹಾಕಿಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ. ಇವತ್ತು ಹಾರ್ಟಿಕಲ್ಚರ್ ಕ್ರಾಪ್ಸ್ ಬೆಳೆಯತಕ್ಕಂಥ ಪ್ರದೇಶದಲ್ಲಿ ನೂರಕ್ಕೆ ನೂರರಷ್ಟು ಸಬ್ಸಿಡಿಯನ್ನು ಘೋಷಿಸಬೇಕೆಂದು ನಾನು ಒತ್ತಾಯ ಮಾಡುತ್ತೇನೆ. ಅದರ ಜೊತೆ ಹಾರ್ಟಿಕಲ್ಚರ್ ಕ್ರಾಪ್ ಕಳೆದುಕೊಂಡಂತಹ, ತೆಂಗು, ಮಾವು ಹಾಗೂ ದಾಳಿಂಬೆ ಅವುಗಳನ್ನು ರೀಪ್ಲಾಂಟ್ ಮಾಡುವುದಕ್ಕೆ ಸರ್ಕಾರ ಸಹಾಯ ಮಾಡಬೇಕಾಗುತ್ತದೆ. ನಬಾರ್ಡ್ ಮುಖಾಂತರ ಸಾಲವನ್ನು ಕೊಡುವುದರ ಮೂಲಕ ಆ ಒಂದು ವ್ಯವಸ್ಥೆಯನ್ನು ರೂಪಿಸಿದರೆ ಬಹಳ ಒಳ್ಳೆಯದಾಗುತ್ತದೆ, ರೈತ ಈ ಸರ್ಕಾರವನ್ನು ಮತ್ತೆ ಸ್ಮರಿಸಿಕೊಳ್ಳತಕ್ಕಂಥ ಕೆಲಸವಾಗಬೇಕಾದರೆ ಆ ದಿಕ್ಕಿನಲ್ಲಿ ಕೆಲಸವನ್ನು ಮಾಡಬೇಕೆಂದು ಮಾನ್ಯ ಮುಖ್ಯಮಂತ್ರಿಗಳಲ್ಲಿ ನಾನು ಒತ್ತಾಯ ಮಾಡುತ್ತಾ, ಸಿಂಗಟಾಲೂರು ಯೋಜನೆ ಬರದ ವಿಚಾರದಲ್ಲಿ ಸಂಬಂಧಪಡುತ್ತದೆ ಎಂದು ಭಾವಿಸಿದ್ದೇನೆ. ಅಲ್ಲಿಗೆ ಒತ್ತು ಕೊಡತಕ್ಕಂಥ ಕೆಲಸವಾಗಬೇಕು. ಅಲ್ಲಿ ನಮ್ಮ ಒಣ ಪ್ರದೇಶ ಎನಿದೆ ಅಲ್ಲಿ ಆ ಯೋಜನೆ ಆದರೆ ಕೊನೆ ಪಕ್ಷ ಹಡಗಲಿ, ಗದಗ ಮುಂಡರಿಗಿ, ಕೊಪ್ಪಳ ಆ ಭಾಗದ ಜನರಿಗೆ, ರೈತರ ಜಮೀನಿಗೆ ನೀರು ಸಿಕ್ಕರೆ, ಒಂದು ಕ್ರಾಪ್ ಅನ್ನಾದರೂ ಆ ನೀರಾವರಿಯಲ್ಲಿ ಬೆಳದುಕೊಂಡರೆ ಅವನ ಜೀವನಕ್ಕೆ ನಾಂದಿಯಾಗುತ್ತದೆಂದು ಹೇಳುತ್ತಾ, ಮಾನ್ಯ ಮುಖ್ಯಮಂತ್ರಿಗಳು ಸಿಂಗಟಾಲೂರು ಯೋಜನೆಗೆ ಚಾಲನೆ ಹಾಗೂ ಒತ್ತು ಕೊಡತಕ್ಕಂಥಾದ್ದು ಆಗಬೇಕು. ಇನ್ನು ವಾಟರ್ ಅಲೋಕೇಷನ್‌ನಲ್ಲಿ ಅಲ್ಲಿ ಕೊಪ್ಪಳದವರು 50 ಸಾವಿರ ಎಕರೆ ತ್ಯಾಗ ಮಾಡಿದಂತಹ ಕ್ಷೇತ್ರ ಏನಿದೆ ತುಂಗಭದ್ರಾ ಅಣೆಕಟ್ಟೆಗೆ ಅವರಿಗೆ ಅನ್ಯಾಯವಾಗಿದೆ. ಆ ಅನ್ಯಾಯವನ್ನು ತುಂಬಿಕೊಡತಕ್ಕಂಥ ಕೆಲಸ ಸರ್ಕಾರದಿಂದ ಆಗಬೇಕೆಂದು ಹೇಳುತ್ತಾ ನನ್ನ ಮಾತನ್ನು ಮುಗಿಸುತ್ತೇನೆ. ಅವಕಾಶ ಕೊಟ್ಟಿದ್ದಕ್ಕಾಗಿ ಮಾನ್ಯ ಉಪಾಧ್ಯಕ್ಷರಿಗೆ ವಂದನೆಗಳನ್ನು ಸಲ್ಲಿಸುತ್ತೇನೆ.

+ಶ್ರೀ ಎ.ಎಸ್. ಗುರುಸ್ವಾಮಿ (ಚಾಮುಂಡೇಶ್ವರಿ):- ಮಾನ್ಯ ಉಪಾಧ್ಯಕ್ಷರೆ, ಈ ಬರಗಾಲದ ಬಗ್ಗೆ ಚರ್ಚೆಗೆ ಭಾಗವಹಿಸುವುದಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ವಂದನೆಗಳು. ನಾನು ನಿನ್ನೆಯಿಂದ ಬರಗಾಲದ ಚರ್ಚೆಯಲ್ಲಿ ಭಾಗವಹಿಸಬೇಕೆಂದು ಆಸೆಯನ್ನು ಇಟ್ಟುಕೊಂಡಿದ್ದವನು. ಆದರೆ ಕೊನೆಯಲ್ಲಿ ಅವಕಾಶ ಸಿಕ್ಕಿತು, ಅದಕ್ಕೆ ಧನ್ಯವಾದಗಳು. ಕಳೆದ ಮೂರು ದಿನದಿಂದ ಸತತವಾಗಿ

(+ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲವೆಂದು ಸೂಚಿಸುತ್ತದೆ)

ಬರಗಾಲದ ಬಗ್ಗೆ ನಾವು ಚರ್ಚೆ ಮಾಡಿದ್ದು, ಅನೇಕ ಉಪಯುಕ್ತ ಸಲಹೆಗಳನ್ನು ಹಾಗೂ ಟೀಕೆಗಳನ್ನು ಮಾಡಿದ್ದಾರೆ. ನನ್ನ ಮಾನ್ಯ ಮಿತ್ರರು ಇನ್ನೂ ಉಪಯುಕ್ತವಾದಂತಹ ಅನೇಕ ಸಲಹೆಗಳನ್ನು ಕೊಡಬಹುದಾಗಿತ್ತು. ಏಕೋ ಅವರು ಕೊಟ್ಟಿಲ್ಲ. ಆದರೆ ಬರ ಚರ್ಚೆ ಮಾಡಿ ಮಾಡಿ ನಮ್ಮ ತಲೆಯೊಳಗೆ ಬರವೇ ಸೇರಿಕೊಂಡುಬಿಟ್ಟಿದೆ. ಕನಸಿನಲ್ಲೂ ಬರವೇ, ಬೆಳಿಗ್ಗೆ ಎದ್ದಾಗಲೂ ಬರದ ಹೆಸರು ಹೇಳಿಕೊಂಡು ಏಳುವ ಪರಿಸ್ಥಿತಿಗೆ ಬಂದು ಬಿಟ್ಟಿದ್ದೇವೆ. ಬರದ ಚರ್ಚೆ ಆಗುವಂತಹ ಸಂದರ್ಭದಲ್ಲಿ ನಾನು ಎರಡು ಘಟನೆಗಳನ್ನು ಈ ಸಭೆಯ ಮುಂದೆ ಇಡುವುದು ಬಹಳ ಸೂಕ್ತ ಅನಿಸುತ್ತದೆ. ಅದೇನೆಂದರೆ ನಾವು ಈ ಬರದ ಚರ್ಚೆ ಬಗ್ಗೆ 13ನೇ ತಾರೀಖು ಅಸೆಂಬ್ಲಿಯಲ್ಲಿ ಸೇರಿದ್ದು, ಆ ಸಂದರ್ಭದಲ್ಲಿ ಎರಡು ದಿನಗಳವರೆಗೆ ಸಭೆ ನಡೆಯಲಿಲ್ಲ. ಏಕೆಂದರೆ ರೂಲ್ 60, 69 ಅಥವಾ 159ರಲ್ಲಿ ತೆಗೆದುಕೊಳ್ಳಬೇಕೋ ಎನ್ನುವ ವಿಚಾರ ಬಂದು ಅದು ಸಮಸ್ಯೆಯಾಗಿ ಚರ್ಚೆಯಾಗಲಿಲ್ಲ. ಚರ್ಚೆಯಾಗಲಿಲ್ಲವೆಂದಾಗ ಸಭೆಯನ್ನು ಅಡ್ಜರ್ನ್ ಮಾಡಿದರು. ನಂತರ ನಾವು ಎಲ್.ಹೆಚ್.ಗೆ ನಡೆದು ಹೋಗಬೇಕಾದಂತಹ ಸಂದರ್ಭದಲ್ಲಿ ಅಲ್ಲಿ ದಾರಿಯಲ್ಲಿ ಕುಳಿತಿರತಕ್ಕಂಥ ರೈತರು, ಜನಸಾಮಾನ್ಯರು ನಮ್ಮನ್ನು, ಏನು ಗುರುಸ್ವಾಮಿಯವರೇ, ಇಷ್ಟು ಬೇಗ ಮುಗಿದು ಹೋಯಿತಾ ಸಭೆ ಎಂದು ಕೇಳಿದರು. ಅದಕ್ಕೆ ನಾನು ಇಲ್ಲ ಅದಕ್ಕೆ ಚರ್ಚೆ ನಡೆಯಲಿಲ್ಲ, ರೂಲ್ ಬಗ್ಗೆ ತಕರಾರು ಹತ್ತಿಕೊಂಡು ಕೂತಿದೆ, ರೂಲ್ ನಮಗೆ ತಲೆ ಕೆಡಿಸಿಬಿಟ್ಟಿದೆ, ಇವತ್ತು ನಾವು ರೂಲ್‌ನೊಳಗೆ ಮುಳುಗಿಬಿಟ್ಟಿದ್ದೀರಿ ಆ ರೂಲ್ ಬಗ್ಗೆ ಯಾವಾಗ ತೀರ್ಮಾನವಾಗುತ್ತದೋ, ಅದರ ಬಗ್ಗೆ ಚರ್ಚೆಯಾಗಿಲ್ಲವೆಂದು ಹೇಳಿದೆ. ಅವರು ಏನು ಸ್ವಾಮಿ ದೇಶದಲ್ಲೆಲ್ಲಾ ಬರಗಾಲ ಹತ್ತಿಕೊಂಡು ಉರಿಯುತ್ತಿದೆ, ನೀವು ರೂಲ್ ಇಟ್ಟುಕೊಂಡು ಕೂತಿದ್ದೀರಲ್ಲಾ ನೀವು, ನಮಗೆ ಏನಾದರೂ ಒಳ್ಳೆಯದು ಅಗುತ್ತದೆಯೋ? ಇದರಿಂದ ನಮಗೆ ಬೇಕಾಗಿರುವುದು ರಿಲೀಫ್, ನಮಗೆ ಸಹಾಯ ಬೇಕು ಬರ ಪರಿಹಾರಗಳಿಗೆ ಹೆಚ್ಚಿನ ರೀತಿಯಲ್ಲಿ ಯೋಜನೆ ಮಾಡಿ ನಮಗೆ ಜಾರಿಗೆ ಕೊಡಬೇಕು. ಈ ರೂಲ್ ಹಿಡಿದುಕೊಂಡು ಕುಳಿತಿದ್ದಾರೆ, ಎಲ್ಲರ ಹತ್ತಿರ ಜಗಳ ಆಡಿಕೊಂಡು ಇದ್ದೀರಿ. ನೀವು ಇದೇನು ನ್ಯಾಯವೇ ಎಂದು ಹೇಳಿದರು. ನನಗೆ ಅದಕ್ಕೆ ಮಾರ್ಮಿಕವಾಗಿ ಉತ್ತರ ಹೇಳುವುದಕ್ಕೆ ಬರಲಿಲ್ಲ. ನಾವು ಒಂದು ಕಾಲದಲ್ಲಿ ಲಾಯರ್ ಆಗಿ ಕೆಲಸ ಮಾಡಿದವರಲ್ಲಾ, "Law is an ass." ಎಂದು ನಮ್ಮ ಮೇಷ್ಟ್ರು ಹೇಳುತ್ತಿದ್ದರು. Jurisprudence ಪಾಠ ಹೇಳುತ್ತಿದ್ದಂತಹ ಮಾಸ್ಟರು "Law is an ass" ಎಂದು ಹೇಳುತ್ತಿದ್ರು. ಲಾ ಓದಿಕೊಂಡು ಬಹಳ ಜನ ದೊಡ್ಡ ದೊಡ್ಡ ಜಡ್ಜ್ ಆಗಿದ್ದಾರೆ, ಅಡ್ವೊಕೇಟ್ ಆಗಿದ್ದಾರೆ. ಅಡ್ವೊಕೇಟ್ ಜನರಲ್ ಆಗಿದ್ದಾರೆ ass ಎಂದು ಹೇಳುತ್ತಾರಲ್ಲ ಎಂದು, ನಾವು ಇನ್ನು young ಇದ್ದೆವು, ನಮಗೆ ವಿಚಾರ ಗೊತ್ತಿರಲಿಲ್ಲ. Law is an ass ಎಂದಾಗ ಲಾ ಮುಂದೆಯಾದರೂ ಒಡೆಯುತ್ತದೆ, ಹಿಂದೆಯಾದರೂ ಒದೆಯುತ್ತದೆ ಅದೇ ಪರಿಸ್ಥಿತಿ ಈ ದಿನ ಬಂದು ನನ್ನ ಮನಸ್ಸಿಗೆ ಫ್ಲಾಷ್ ಆಯಿತು. ಕೊನೆಯ ನಿಯಮ 60, 69 ಹಾಗೂ 159 ಎಂದು ಹೇಳಿ ಕೊನೆಯಲ್ಲಿ 159ಕ್ಕೆ ಸೆಟ್ಲ್ ಆಯಿತು. ಅಂತೂ ಇಂತೂ ಚರ್ಚೆ ಪ್ರಾರಂಭವಾಯಿತು. ಮೂರು ದಿನದಿಂದ ಸತತವಾಗಿ ನಮ್ಮ ಸ್ನೇಹಿತರು, ಹಿರೀಕರು ಬಹಳಷ್ಟು ಜನ ನಮಗಿಂತ ಹೆಚ್ಚಿನ ಟರ್ಮ್‌ನಲ್ಲಿ ಗೆದ್ದು ಬದಂಥ ನನ್ನ ಸೀನಿಯರ್ಸ್ ಮಾತನಾಡಿದ್ದಾರೆ. ನಾವು ಬಿಡಿ ಜೂನಿಯರ್ಸ್ ಈ ಮೂಲೆಯಲ್ಲಿ ಕುಳಿತಿದ್ದೇವೆ. ಅವರಿಗಿಂತ ಬಹಳಷ್ಟು ನಾನು ನಿರೀಕ್ಷೆ ಇಟ್ಟುಕೊಂಡಿದ್ದೆ. ಅವರು ಟೀಕೆ ಮಾಡುವುದರ ಬಗ್ಗೆ ನನಗೆ ಏನು ವಿರೋಧ ಇಲ್ಲ. ಏಕೆಂದರೆ ಈ ಕಡೆ ಇರುವವರು ಒಂದು ಕಾಲದಲ್ಲಿ ಅಲ್ಲಿ

ಇದ್ದಾಗ ಅದೇ ಕೆಲಸವನ್ನು ಅಲ್ಲಿ ಮಾಡಿದವರು. ಆದರೆ Criticism should be constructive. In all democratic countries ಅಪೋಸಿಷನ್‌ನಲ್ಲಿ ಇರತಕ್ಕ ಜನ they condemn the government with an constructive idea, constructive suggestion and constructive way and means. ಅದನ್ನು ಮಾಡಬೇಕೇ ಹೊರತು ನೀವು ಕೆಲಸವನ್ನು ಕಾಂಗ್ರೆಸ್‌ನವರು ಏನೇನೂ ಮಾಡಲಿಲ್ಲವೆಂದರೆ ಏನು ಅರ್ಥ? ಮೂರ್ನಾಲ್ಕು ವರ್ಷದಿಂದ ನಾವು ಕಡಲಿಪುರಿ ಹಾಗೂ ಬಾಳೆಹಣ್ಣು ತಿಂದುಕೊಂಡು ಕುಳಿತ್ತಿದ್ದೇವಾ? ಕೆಲಸ ಮಾಡಿದ್ದೇವೆ, ಬಹುಶಃ ಈ ಸರ್ಕಾರ ಈ ಬರ ಪರಿಹಾರದಲ್ಲಿ ತನಗೆ ಇರತಕ್ಕಂಥ ಹಣಕಾಸಿನ ಸೌಲಭ್ಯದ ಮಧ್ಯದಲ್ಲಿ ಎಷ್ಟು ಮಾಡಬೇಕೋ ಅಷ್ಟು ಮ್ಯಾಗ್ಸಿಮಂ ಮಾಡಿದೆ ಎಂದು ನಾವು ಎದೆ ತಟ್ಟಿ ಹೇಳಬೇಕಾಗುತ್ತದೆ. ಇಷ್ಟೊಂದು ಕೆರೆ ಕಟ್ಟೆ ಯಾವ ಕಾಲದಲ್ಲಿ ಆಯಿತು? 1964ರಲ್ಲಿ ಕರ್ನಾಟಕದಲ್ಲಿ ಬರಗಾಲವಿತ್ತು. Kindly remember those people. ಆಗ ನಾನು ತಾಲ್ಲೂಕು ಬೋರ್ಡ್ ಅಧ್ಯಕ್ಷನಾಗಿದ್ದಂತಹ ಒಂದೆರಡು ವರ್ಷ ಮುಂದೆ ಅದು. ಆಗ ವಿಪರೀತ ಬರಗಾಲ, ಅಂತಹ ಬರಗಾಲದಲ್ಲಿ ಕೂಡ ಇಷ್ಟು ಕೆಲಸ ಮಾಡಿಲ್ಲ. You look to the records. ನೀವು ಡಿಬೇಟ್ಸ್ ಓದಿ, ಇಲ್ಲಿ ನಾನು ಡಿಬೇಟ್ಸ್ ಅನ್ನು ತಂದು ಇಟ್ಟುಕೊಂಡಿದ್ದೇನೆ. 1964ರಲ್ಲಿ ಕೂಡ ಇಷ್ಟು ಕೆಲಸ ಮಾಡಿಲ್ಲ. ಕುಡಿಯುವ ನೀರಿನ ಬಗ್ಗೆ ಆಗಿರಲಿ ಕೆರೆ ಕಟ್ಟೆ ಹೊಳೆ ಇರಲಿ ರಸ್ತೆ ಇರಲಿ. ಗ್ರಾಮ ಪಂಚಾಯತ್ ರಸ್ತೆ ಇವತ್ತು ಎಲ್ಲಾ ಶಿಸ್ತಾಗಿದ್ದಾವೆ; ಜಿಲ್ಲಾ ಪಂಚಾಯತ್‌ನಲ್ಲಿ ದುಡ್ಡಿಲ್ಲ ಎಂದು ರಾಜಕೀಯ ಮಾಡಿಕೊಂಡು ಇದು ಕಾಂಗ್ರೆಸ್ಸ್‌ನವರ ಊರು, ಬಿಜೆಪಿಯವರ ಊರು, ಇದು ದಳದ ಊರು ಎಂದು ಮಾಡಿಲ್ಲ, ಇವತ್ತು ಅಂತಹ ಕಡೆ ಬರಗಾಲದ ಕೆಲಸವಾಗಿದೆ. ನೀವೆಲ್ಲಾ ಫೋಟೋ ತೆಗೆಸಿಕೊಂಡಿಲ್ಲವೆ? ಅನೇಕ ಜನ ನಮ್ಮ ಮಿತ್ರರು ಯಾರು ಟಾಸ್ಕ್‌ಫೋರ್ಸ್ ಕಮಿಟಿ ಅಧ್ಯಕ್ಷರಾಗಿದ್ದೀರಿ ನೀವು ಫೋಟೋ ಹಾಕಿಕೊಂಡಿಲ್ಲವೇ? ಅದು ಪತ್ರಿಕೆಯಲ್ಲಿ ಬಂದಿಲ್ಲವೆ? ಏನು ಹೇಳುತ್ತೀರಿ ಇದಕ್ಕೆ. ನಿಮ್ಮ ಕೆಲಸ ಅಲ್ಲ, ಅದು ಬೇರೆಯವರ ಕೆಲಸ ಎಂದು ಹೇಳುತ್ತೀರಾ? ಸರ್ಕಾರ ನಡೆಯುವ ವೈಖರಿ ಎಲ್ಲಾ ರೀತಿ ಒಂದೇನೆ ನಮ್ಮ ಮಾನ್ಯ ಎಸ್.ಎಸ್. ಪಾಟೀಲ್ ಒಂದು ಮಾತು ಹೇಳುತ್ತಿದ್ದರು. ಯಾವ ಸರ್ಕಾರ ಬಂದರೂ ಕೆಲವು ಗೋಟಾಲ್‌ನಲ್ಲಿ ಸಿಕ್ಕಿ ಹಾಕಿಕೊಳ್ಳುತ್ತೇವೆ ಎಂದು. ಯಾವುದೋ ಒಂದು ಲಾಟಿಯೊಳಗೆ ಬಂದು ಬಿಡುತ್ತೇವೆ ಎಂದು ಹೇಳುತ್ತಿದ್ದರು. ನಿಜ ಅದು. ನಾವು ಇಲ್ಲೇ ಇರಲಿ, ನೀವು ಅಲ್ಲೇ ಇರಲಿ, system of working is same. The body is same. Only the cap is changed. ಜನರಲ್ ಕಾರ್ಯಪ್ಪನವರು ಒಂದು ಮಾತು ಹೇಳುತ್ತಿದ್ದರು, ಅದು ನೆನಪಿನಲ್ಲಿ ಇದೆ. ಈ ದೇಶದಲ್ಲಿ ಸರ್ಕಾರಗಳು ಚೇಂಜ್ ಆಗುತ್ತದೆ, ಆದರೆ ಬಾಡಿ ಮಾತ್ರ ಹಾಗೆ ಇರುತ್ತದೆ. Only the hat is changed. ಮನುಷ್ಯ ಎಲ್ಲಾ ಅದೇ ಗುಣ, ಮಾನ್ಯ ವಿರೋಧ ಪಕ್ಷದಲ್ಲಿ ಇದ್ದಂತಹ ಅನೇಕ ಮಿತ್ರರು ನಾನು ಅವರ ಹೆಸರು ಹೇಳುವುದಕ್ಕೆ ಹೋಗುವುದಿಲ್ಲ. ಅವರು ವಿರೋಧ ಪಕ್ಷದಲ್ಲಿ ಇದ್ದಾಗ ಏನು ಮಾಡಿದರು? ಅವರು ಅಧಿಕಾರದಲ್ಲಿ ಬಂದಾಗ ಏನು ಮಾಡಿದ್ದಾರೆ? ಏನೂ ಮಾಡುವುದಕ್ಕೆ ಆಗಿಲ್ಲ. ಇಲ್ಲಿ ಇದ್ದವರು ಅಲ್ಲಿ ಹೋಗಿ ಏನಾಯಿತು? ಓದಿ ನೋಡಿ ಗೊತ್ತಾಗುತ್ತದೆ. So, talking for talking sell is not useful. It should be a constructive one and suggestive one. ಆಗಲೇ ಸರ್ಕಾರ ನಡೆಯುವುದು. ನಾನು ಎಲ್ಲೋ ಒಂದು ಕಡೆ ಮ್ಯಾಗಜೈನ್‌ನಲ್ಲಿ ಓದಿದಂತಹ ಸನ್ನಿವೇಶ ಈಗಲೂ ನೆನಪಿದೆ ಅದನ್ನು ಹೇಳುತ್ತೇನೆ. 1930ರಲ್ಲಿ ಬೆಂಗಾಲ್‌ನಲ್ಲಿ ಅತಿ ತೀವ್ರವಾದಂತಹ ಬರ ಬೆಂಗಾಲ್ ಫೇಮಿನ್ ಎಂದು

ಫೇಮಸ್ ಆಗಿತ್ತು. Kindly recall your memory. Bengal famine was the worst in the Indian history, ಜನ ಅನ್ನ, ನೀರು ಇಲ್ಲದೆ ಕುಳಿತುಕೊಂಡ ಕಡೆ ಸತ್ತುಹೋದರು. ಯುದ್ಧವಾದರೆ ಯಾವ ರೀತಿ ಹೆಣಗಳು ಬೀಳುತ್ತವೆ ಆ ರೀತಿ ಹೆಣಗಳು ಬಿದ್ದು ಹೋಗಿವೆ. ಅದರ ಬಗ್ಗೆ ಒಂದು ಬುಕ್ ಇದೆ, ಅದನ್ನು ಓದಿ ನೋಡಿ.

6.00 ಪಿ.ಎಂ.

ಅದನ್ನು ನೋಡಿದರೆ ನೇಚರ್ ಎಷ್ಟೊಂದು ಕಡೋರವಾಗಿ ವರ್ತಿಸುತ್ತದೆ, ಯಾವಾಗ ನಮ್ಮ ಮೇಲೆ ಯಾವ ರೀತಿಯಾಗಿ ಇದು ನಮ್ಮ ಮೇಲೆ ಪ್ರಯೋಗ ಮಾಡುತ್ತದೆಂಬುದನ್ನು ಹೇಳುವುದಕ್ಕೆ ಬರುವುದಿಲ್ಲ, ಇದನ್ನು ಹೇಗೆ ಟ್ಯಾಕಲ್ ಮಾಡಿದರು, ಎಂಬುದರ ಬಗ್ಗೆ ಒಂದು ಅಸ್ಪೆಕ್ಟ್ ಅನ್ನು ಓದಿದೆ, ಪೂಜ್ಯ ಮಹಾತ್ಮ ಗಾಂಧೀಜಿಯವರು ಒಂದು ಕಾಲ್ ಅನ್ನು ಕೊಟ್ಟರು, ಆಗ ಬ್ರಿಟಿಷ್ ಸರ್ಕಾರವಿತ್ತು, ಆಗ ಡೆಮಾಕ್ರಸಿ ಇರಲಿಲ್ಲ, ಈಗಿನ ಹಾಗೆ ನಾವು ರೂಲ್ಸ್‌ಗಳನ್ನು ಇಟ್ಟುಕೊಂಡು ಜಗ್ಗಾಟ ಮಾಡುವಂಥಕ್ಕೆ ಅವಕಾಶವಿರಲಿಲ್ಲ, if you do it, do it. If you don't do it, get our. ಇದು ಬ್ರಿಟಿಷ್ ಗೌವರ್ನಮೆಂಟ್ ಪಾಲಿಸಿಯಾಗಿತ್ತು. ಈ ಪಾಲಿಸಿ ಆಗ ಇತ್ತು, ಈಗ ಇರುವಂತೆ ರೂಲ್‌ಗಳು ಇಟ್ಟುಕೊಂಡು ನಾವು ಯಾರೂ ನರಳುವುದಕ್ಕೆ ರೆಡಿಯಾಗಿ ಆಗ ಇರಲಿಲ್ಲ; ಆಗ ಪರಿಸ್ಥಿತಿ ಏನು ಅಯಿತು, ಆಗ ನಮ್ಮ ರಾಷ್ಟ್ರಪತಿ ಮಹಾತ್ಮ ಗಾಂಧೀಜಿಯವರು ಒಂದು ಕಾಲ್ ಕೊಟ್ಟರು, ಅದು ಏನೆಂದರೆ ಊಟ ಒಂದು ಹೊತ್ತು ಎಲ್ಲರೂ ಬಿಡಬೇಕೆಂದು ಕಾಲ್ ಕೊಟ್ಟರು. ಆಗ ಎಲ್ಲರ ಮನೆಗಳಿಂದಲೂ ಇಷ್ಟು ಅಕ್ಕಿ, ಇಷ್ಟು ಜೋಳ ಮಿಕ್ಕಿತು, ಎಂದು ಹೇಳಿ ತಂದು ತಂದು ಗಂಜಿ ಕೇಂದ್ರಕ್ಕೆ ಸುರಿಯುತ್ತಿದ್ದರಂತೆ, ಜನರು ಗಂಜಿಯನ್ನು ಊಟ ಮಾಡಲಿ, ಇಲ್ಲದಿದ್ದರೆ ಸತ್ತು ಹೋಗುತ್ತಾರೆ ಜನ ಎಂದು ಹೇಳಿ ಇವತ್ತು ಆ ಸ್ಯಾಕ್ರಿಫೈಸ್ ಇದೆಯೇ? ಇವತ್ತು ನಮ್ಮ ಕರ್ನಾಟಕ ರಾಜ್ಯಕ್ಕೆ ಕಳೆದ ಮೂರು ವರ್ಷಗಳಿಂದ ಬರಗಾಲ ಬಂದಿದೆ, ನಾವು ಬರ ಬೇಕೆಂದು ಹಾಕಿಕೊಂಡಿದ್ದೆವೆಯೇ? ನಾವು ಏನು ಅದನ್ನು ಬಾ ಎಂದು ಬರಮಾಡಿಕೊಂಡಿದ್ದೆವೆಯಾ? ಇದು ಪ್ರಕೃತಿಯಿಂದ ಬಂದಿರುವಂಥಾದ್ದು, it is a natural declaration of emergency; nature decalred emergency. Constitution declaration of emergency. ಏನು ಇತ್ತು, ಅದಕ್ಕೆ ಎಷ್ಟು ಸಿರೀಯಸ್‌ನೆಸ್ ಇತ್ತೋ, ಅಷ್ಟೇ ಸಿರೀಯಸ್‌ನೆಸ್ ಈ nature declared emergency ಕೂಡ ಇದೆ. We are in emergency now. ನಾವು ಎಮರ್ಜೆನ್ಸಿ ಇದ್ದಾಗ ಯಾವ ರೀತಿಯಾಗಿ ಇರಬೇಕು? ನಮ್ಮಿಂದ ಎಷ್ಟು ಸೇವಿಂಗ್ಸ್ ಆಗುತ್ತದೆಯೋ, ಅದನ್ನು ಉಳಿಸಬೇಕು, ನಮ್ಮಿಂದ ಏನು ತ್ಯಾಗ ಮಾಡಲು ಆಗುತ್ತದೆ, ಅದನ್ನು ನಾವು ಕೊಡಬೇಕಾಗುತ್ತದೆ, ನಮ್ಮಿಂದ ಏನು ಮಾಡುವುದಕ್ಕೆ ಆಗುತ್ತದೆ, ಅದನ್ನು ಮಾಡಬೇಕಾಗುತ್ತದೆ, in the interest of the State and in the interest of the Nation. ಈ ತ್ಯಾಗವನ್ನು ನಾವು ಎಷ್ಟರಮಟ್ಟಿಗೆ ಮಾಡಿದ್ದೇವೆ? ಇವತ್ತು ನಾವೆಲ್ಲರೂ ಈ ಬರಗಾಲದ ಬಗ್ಗೆ ಚರ್ಚೆ ಮಾಡಿದ್ದೇವೆ, ಹೊರಗಡೆ ಬರ ಇದೆ, ಆದರೆ ನಮ್ಮ ಸದನದಲ್ಲಿ ಬರವಿಲ್ಲ, ಇಲ್ಲಿ ಮಾತಿಗೆ ಎನೂ ಬರಲಿಲ್ಲ, ಟೀಕೆ ಮಾಡುವುದಕ್ಕೆ ಬರವಿಲ್ಲ. ತಿವಿಯುವುದರಲ್ಲಿ ಏನೂ ಬರಲಿಲ್ಲ, ಯಾವುದರಲ್ಲಿ ಏನೂ ಬರವಿಲ್ಲ, ಆದರೆ ಬರವಿರುವಂಥಾದ್ದು ಏನೆಂದರೆ constructive suggestions ತಮ್ಮಿಂದ ಬರಲಿಲ್ಲವೆನ್ನುವಂತಹ ವ್ಯಥೆ ನನ್ನನ್ನು ಕಾಡುತ್ತಿರುವಂಥಾದ್ದು, ಇದು ಹೇಗೆ ಎಂಬ ಪ್ರಶ್ನೆ ಕೇಳಬಹುದು, ಯಾವ ರೀತಿ constructive suggestion ಕೊಡುವುದಕ್ಕೆ ಇಲ್ಲಿ ಬರುತ್ತದೆಂದು ಕೇಳಬಹುದು. ನೀವು ಏನೂ

ಬರದ ಬಗ್ಗೆ ಏನು ಕೆಲಸ ಮಾಡಿಲ್ಲವೆಂದು ಹೇಳಬಹುದು, ಎಲ್ಲರೂ ಫೋಟೋ ತೆಗೆದುಕೊಂಡಿದ್ದಾರೆ, ಅದು ನನಗೆ ಗೊತ್ತು. Is it not a good work? Can you not accept it as a positive one? ನಮ್ಮ ಬಜೆಟ್‌ನಲ್ಲಿ ನಾವೂ ನೀವೆಲ್ಲಾ ಒಂದು ವಿಚಾರದಲ್ಲಿ ಸಹಮತ ಇದ್ದೇವೆ, ಯಾರೂ ಇದನ್ನು ಮರೆಯಬಾರದು, ಯಾರು ನಮ್ಮ ಬಗ್ಗೆ ಭಿನ್ನಮತ ಇರುತ್ತಾರೆ, ಆದರೆ ಒಂದರಲ್ಲಿ ಮಾತ್ರ ಸಹಮತದಲ್ಲಿದ್ದೇವೆ, ಅದು ಈ ಬರದಲ್ಲಿ; ಇದನ್ನು ಯಾರೂ ಸಮರ್ಥಿಸುವುದಕ್ಕೆ ಹೋಗಿಲ್ಲ, ನೀವೂ ಸಮರ್ಥಿಸಿಲ್ಲ; ನಾವಂತೂ ಸಮರ್ಥಿಸುವುದಕ್ಕೆ ಬರುವ ಹಾಗೆ ಇಲ್ಲ, ನೀವು ಸಹ ವಿರೋಧ ಮಾಡುವುದಕ್ಕೆ ಬರುವ ಹಾಗೆ ಇಲ್ಲ, ಇಲ್ಲಿ ನೀವು ವಿರೋಧ ಮಾಡಿದರೆ ಉಳಿದುಕೊಳ್ಳುವುದಕ್ಕೆ ಆಗುವುದಿಲ್ಲ, ನಾವು ಸಮರ್ಥ ಮಾಡುವುದಕ್ಕೆ ಹೋದರೆ, ನಾವು ಇಲ್ಲಿ ಇರುವ ಹಾಗೆ ಇಲ್ಲ, ಅದರಲ್ಲಿ ಮಾತ್ರ ನಾವು ಸಹಮತದಲ್ಲಿದ್ದೇವೆ. ಆದರೆ ಯಾವ ರೀತಿಯಾಗಿ ಟ್ಯಾಕಲ್ ಮಾಡಬೇಕೆನ್ನುವ ಬಗ್ಗೆ, ವಿಭಿನ್ನವಾದ ದಾರಿಗಳನ್ನು ಹುಡುಕಿಕೊಂಡಿದ್ದೇವೆ, ಅಲ್ಲೇ ಪ್ರಾಬ್ಲಂ ಇರುವಂಥಾದ್ದು ಅದು ಏನೆಂಬುದರ ಬಗ್ಗೆ ನಾವು ಯೋಚನೆ ಮಾಡಬೇಕಾದಾಗ, ನಮ್ಮ ಬೆನ್ನನ್ನು ನಾವೇ ನೋಡಿಕೊಳ್ಳುವಂಥಾದ್ದು ಬಹಳ ಒಳ್ಳೆಯದು, ನಾವೆಲ್ಲಾ ಸದಸ್ಯರುಗಳು ಏನಿದ್ದೇವೆ, ನಾವೆಲ್ಲರೂ ಬರ ಹೋಗುವುದಕ್ಕೆ ಕಾಂಟ್ರಿಬ್ಯೂಟ್ ಮಾಡಿದ್ದೇವೆ, ನಮ್ಮಿಂದ ಏನೂ ಕೊಟ್ಟಿಲ್ಲ, ಏನು ಆಗಿಲ್ಲವೆಂಬುದನ್ನು ಹೇಳಿ, each one, each MLA has sacrified Rs. 40 lakhs from MLA's grant. ಅದರಲ್ಲಿ 10 ಲಕ್ಷ ರೂಪಾಯಿಗಳನ್ನು ಅಷ್ಟೇ ಕೊಟ್ಟಿರುವಂಥಾದ್ದು, ಬೇರೆಯವರಿಗೆ ನಮಗೆ ಜಾಸ್ತಿ ಕೊಟ್ಟಿದ್ದಾರೋ ಗೊತ್ತಿಲ್ಲ, ಜೋರಾಗಿ ಮಾತನಾಡುವವರು ಜಾಸ್ತಿ ತೆಗೆದುಕೊಂಡಿದ್ದಾರೋ, ಅದು ನಮಗೆ ಗೊತ್ತಿಲ್ಲ. But we are given only Rs. 10 lakhs, not beyond that.

ಶ್ರೀ ಎಸ್.ಎಸ್. ಪಾಟೀಲ್:– ನಮಗೆ ಆ 10 ಲಕ್ಷ ರೂ. ಯನ್ನು ಕೊಟ್ಟಿಲ್ಲ.

ಶ್ರೀ ಎ.ಎಸ್. ಗುರುಸ್ವಾಮಿ:– ಕೊಟ್ಟಿದ್ದಾರೆ, ನಮಗೆ 10 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆ, ಅಯಿತು ನಮ್ಮ ಚೀಫ್ ಮಿನಿಸ್ಟರ್‌ರವರಿಗೆ ಹೇಳೋಣ, ಇದರಲ್ಲಿ ತಾರತಮ್ಯ ಮಾಡಬೇಡಿ ಎಂದು ಹೇಳೋಣ, ಬಡತನವೆಂದರೆ ಅದು ಬಡತನವೇ, ಈಗ ನಮ್ಮ ಊರಲೆಲ್ಲಾ ಬರ ಸುತ್ತಿಕೊಂಡಿದೆ, ನೀರಿಲ್ಲ, ರಾಯಚೂರು ಎಲ್ಲಾ ಚೂರು ಚೂರು ಆಗಿ ಹೋಯಿತು, ಎಂದು ಹೇಳಿದ್ದೀರಿ, ಕುಡಿಯುವುದಕ್ಕೆ ನೀರಿಲ್ಲ, ಹುಲ್ಲು ಇಲ್ಲ, ಬಿಸಿ ಊಟದಲ್ಲಿ ವಿಷ ಹಾಕಿದರು, ಎಂದು. ಇದು ಎಲ್ಲಾ ಊರುಗಳಲ್ಲೂ ಇದೆ, We are Indians. Indians as such we have got different character. ನಾವು ಭಾರತೀಯರು, ನಮ್ಮದೇ ಆದಂತಹ ವಿಶೇಷವಾದಂತಹ ಗುಣಗಳು ಇವೆ, ನಮ್ಮದೇ ಆದಂತಹ shortcomings ಬೇರೆ, We are not like Americans, not like British people. ನಾವು ನೋಡುವಂತಹ ದೃಷ್ಟಿಕೋನವೇ ಬೇರೆ, ಚರ್ಚಿಲ್‌ರವರು ಎರಡನೆಯ ಮಹಾಯುದ್ಧದ ಸಂದರ್ಭದಲ್ಲಿ, ಒಂದು ಡಿಕ್ಲರೇಷನ್ ಕೊಟ್ಟರು, ಅದು ಏನೆಂದರೆ, "My nation is in jeopardy. My nation's economy is in turmoil ಎಂದು ಹೇಳಿದರು, I request everybody to work two hours more”ಎಂದು ಹೇಳಿ, ನೀವು ಎಲ್ಲೆಲ್ಲಿ ಕೆಲಸ ಮಾಡುತ್ತಿದ್ದೀರಿ, ಅಲ್ಲಿ ಎರಡೆರಡು ಗಂಟೆಗಳು ಹೆಚ್ಚಿಗೆ ಕೆಲಸವನ್ನು ಮಾಡಿ ಎಂದು ಹೇಳಿದ, ಆ ಎರಡು ಗಂಟೆಗಳ ದುಡ್ಡು ಕೇಳಬೇಡಿ, ಎಂದು ಹೇಳಿದರು. What a beautiful call? How the people responded. ನಾವು ಏನು ರೆಸ್‌ಪಾಂಡ್ ಮಾಡಿದೇವೆ? What is our contribution to our drought not much more of Criticism, ಡಬ್ಲ್ಯೂಟಿಸಿ ಯಲ್ಲಿ ಮೊನ್ನೆ ಅಮೇರಿಕಾದಲ್ಲಿ ಒಂದು ಕಡೆ ಆಯಿತು, ಬ್ಲಡ್ ಕೊಡಿ, ಎಂದು ಪ್ರೆಸಿಡೆಂಟ್ ಒಂದು ಕಾಲ್ ಕೊಟ್ಟರು. ನಮ್ಮ ಸ್ನೇಹಿತರು ಹೇಳುತ್ತಿದ್ದಾರೆ, ಮಾನ್ಯ ಎಸ್.ಎಸ್. ಪಾಟೀಲ್‌ರವರು ಬಹಳ ಜೋರಾಗಿ ಮಾತನಾಡುತ್ತಿದ್ದಾರೆ, ಅವರ ಊರಲ್ಲಿ ಬರವಿಲ್ಲವೆಂದು ಕಾಣುತ್ತದೆ, ನೀವು ಅವರನ್ನು ಕೇಳಿ ಎಂದು ಹೇಳುತ್ತಿದ್ದಾರೆ, ಮಾನ್ಯ ಪಾಟೀಲ್‌ರವರು ಬಹಳ ಗಟ್ಟಿಯಾಗಿ ಮಾತನಾಡುತ್ತಾರೆ, ಸಾಮಾನ್ಯವಾಗಿ ತೊಂದರೆಯಲ್ಲಿರುವವರು ಮೆತ್ತಗೆ ಮಾತನಾಡಬೇಕು. ಇವರು ಒಬ್ಬರು ಮಾತ್ರ ಜೋರಾಗಿ ಮಾತನಾಡುತ್ತಾರೆ, ಇವರ ತಾಲ್ಲೂಕಿನಲ್ಲಿ ಕಡಿಮೆ ಬರ ಇದೆಯೆಂದು ಕಾಣುತ್ತಿದೆ, ಎಂದು ನಾನು ತಿಳಿದುಕೊಂಡಿದ್ದೇನೆ, ನಾನು ಇಲ್ಲಿ ಈ ಘಟನೆಯನ್ನು ಏಕೆ ಹೇಳಿದೆ, ಎಂದರೆ unless you sacrifice something you cannot reconstruct. ಅದು ಎಲ್ಲಿದೆ? ಬರೀ ಮೂರು ದಿವಸಗಳಿಂದಲೂ ಹೇಳಿದ್ದೆ, ಹೇಳಿದ್ದು ಆಯಿತು, ಇಲ್ಲಿ ಏನು ಮಾಡಬಹುದಾಗಿತ್ತು, ಎಂಬ ಬಗ್ಗೆಯೂ ಸಹ ನಾನು ಸಲಹೆಗಳನ್ನು ಕೊಡಲು ಇಚ್ಛೆಪಡುತ್ತೇನೆ, ನಮ್ಮ ಸ್ನೇಹಿತರು ಒಬ್ಬರು ಹೇಳಿದರು. ಮಾನ್ಯ ಹಿರಿಯ ಮಿತ್ರರು ಎಲ್ಲರೂ 6–7 ಸಲ ವಿಧಾನ ಸಭೆಗೆ ಆರಿಸಿ ಬಂದಂಥ ನನ್ನ ಮಿತ್ರರು ಮಾತನಾಡಿದರು, ಎಲ್ಲರೂ ಏನು ಹೇಳುತ್ತಿದ್ದೀರಿ, ಏನ್ರಿ ಗುರುಸ್ವಾಮಿಯವರೇ, ನಮಗೆ ಹಣವನ್ನೇ ಕೊಟ್ಟಿಲ್ಲ, ಕೆಲಸವನ್ನೇ ಮಾಡಿಲ್ಲ, ಏನು ಏನೋ, ಆಗಿ ಹೋಗಿದೆ, ಎಂದೆಲ್ಲಾ ಹೇಳುತ್ತಿದ್ದಾರೆ, ಎಲ್ಲಾ ಕಡೆಗಳಲ್ಲೂ ಇದೇ ಆಗಿರುವಂಥಾದ್ದು, ಎಲ್ಲರ ಮನೆಯ ದೋಸೆಯೂ ತೂತೇ ಇರುವುದು, ದೋಸೆ ತೂತು ಇರುವುದು, ಇದು ಇಲ್ಲದೇ ಇರುವಂಥಾದ್ದು ತಿಂದಿರುವವರು ಯಾರಾದರೂ ಒಬ್ಬರು ಈ ಸಭೆಯಲ್ಲಿ ಇದ್ದಾರೆ. ಕೈ ಎತ್ತಿ ಹೇಳಿ, ನೋಡೋಣ, ಇದು ಸಾಧ್ಯವಿಲ್ಲ. We are Indians first and the last. ನಮ್ಮ ಹಣೆಬರವೇ ಇಷ್ಟು, ನಾವೆಲ್ಲಾ crab ಇದ್ದ ಹಾಗೆ, ಅವು ಹೋಗುವ ಹಾಗೆ ಇಲ್ಲ, ಇವೂ ಹೋಗುವ ಹಾಗಿಲ್ಲ, ಎಳೆದಾಡಿಕೊಂಡು ಅಲ್ಲೇ ಕುಳಿತುಕೊಂಡಿರುತ್ತೇವೆ. That habit should be stopped for ever. ಇದು ಒಂದು ಕಡೆ ಇರಲಿ. ಇಲ್ಲಿ ಒಂದು ವಿಚಾರ ಬಂದಿದೆ, ದೋಸೆ ತಿನ್ನುವವರಿಗೆ, ತೂತು ಎಂದು ಗೊತ್ತಾದರೆ, ಯಾರೂ ಮಾತನಾಡುವ ಹಾಗೆ ಇಲ್ಲ, ರೊಟ್ಟಿ ತಿನ್ನುವವರಿಗೆ, ತೂತು ಎನ್ನುವುದು ಗೊತ್ತಾಗುವುದಿಲ್ಲ, ಎನ್ನುವಂತಹ ವಿಚಾರ ಬಂದಿದೆ.

ಶ್ರೀ ಎಸ್.ಎಸ್. ಪಾಟೀಲ್:– ಮಾನ್ಯ ಸಗೀರ್ ಅಹಮದ್‌ರವರೇ, ಮಾನ್ಯ ಗುರುಸ್ವಾಮಿಯವರು, ಅವರು ಹೇಳಿದ್ದು ಏನೆಂದರೆ ನಿಮಗೆ ಕೊಕ್ಕೆ ಬಂದಿಲ್ಲವೆಂದು ತಿಳಿದುಕೊಳ್ಳಬೇಡಿ, ನಮಗೂ ಬಂದಿಲ್ಲ ಹೇಳಿದನ್ನು ತಾವು ಅರ್ಥ ಮಾಡಿಕೊಂಡಿಲ್ಲ. ಅದಕ್ಕೆ ಅವರು ಎಲ್ಲರ ಮನೆ ದೋಸೆ ತೂತು ಎಂದು ಹೇಳಿದರು, ನೀವು ಅದಕ್ಕೆ ಬೇರೆ ಅರ್ಥವನ್ನು ಮಾಡಿಕೊಳ್ಳುತ್ತೀರಿ. ಅವರಿಗೂ ದುಡ್ಡು ಬಂದಿಲ್ಲ.

ಶ್ರೀ ಎ.ಎಸ್. ಗುರುಸ್ವಾಮಿ:– ಮಾನ್ಯ ಎಸ್.ಎಸ್. ಪಾಟೀಲ್‌ರವರು ನನ್ನನ್ನು ಬೇರೆ ಕಡೆಗೆ ಡೈವರ್ಟ್ ಮಾಡುತ್ತಿದ್ದಾರೆ, ನೀವು ಏನಾದರೂ ಬೇರೆ ಹೇಳಿಬಿಟ್ಟರೆ ಟ್ರೈನ್ ಬೇರೆ ಕಡೆಗೆ ಹೋಗುತ್ತದೆ. ಆದುದರಿಂದ ದಯವಿಟ್ಟು ತಾವು ಕೊನೆಯಲ್ಲಿ ಹೇಳಿ, ತಾವು ದಾರಿ ತಪ್ಪಿಸುವಂತಹ ಕೆಲಸವನ್ನು ಮಾಡಬೇಡಿ, ದಾರಿ ತೋರಿಸುವಂತಹ ಕೆಲಸವನ್ನು ಮಾಡಿ. That is what this nation wants it ನಾನಂತೂ ದಾರಿಯನ್ನು ತಪ್ಪಿಲ್ಲ, ಅದೇ ಟ್ರ್ಯಾಕ್ ಇದ್ದೇನೆ, ನಾನು ಇನ್ನು ಸ್ವಲ್ಪ ಅವರಿಗೆ ಮಾತನಾಡುವುದಕ್ಕೆ ಅವಕಾಶವನ್ನು ಕೊಟ್ಟರೆ, ಅವರು ನನನ್ನು ಟ್ರಾಕ್ ತಪ್ಪಿಸಿ ಬಿಡುತ್ತಾರೆ.

ಶ್ರೀ ಎಸ್.ಎಸ್. ಪಾಟೀಲ್:– ಮಾನ್ಯ ಗುರುಸ್ವಾಮಿಯವರೇ, ಬೆಂಗಳೂರು ಸಿಟಿಯಲ್ಲಿ ಆರಿಸಿ ಬಂದಿರುವವರಿಗೆ, ಮೈಸೂರಿನಲ್ಲಿ ಆರಿಸಿ ಬಂದಿರುವಂತಹ ಸದಸ್ಯರಿಗೆ ಬರಗಾಲ ಎಂಬುದೇ ಗೊತ್ತಿಲ್ಲ, ಇವರು ಹಡಗಲಿಗೆ ಬರಲಿ ಅಲ್ಲಿ ನೋಡಿ ಬನ್ನಿ, ಉಳಿದವು ಏನೂ ಬೇಡ. ನಿಮಗೆ ಬರಗಾಲ ಗೊತ್ತಿಲ್ಲ.

ಶ್ರೀ ಎ.ಎಸ್. ಗುರುಸ್ವಾಮಿ:– ಈ ಬರಗಾಲ ಎಂದರೆ ಬರೀ ಕೆಲವು ಊರುಗಳಿಗೆ ಮಾತ್ರ ಬರುತ್ತದೆ ಎಂದಲ್ಲ ಇದು ಇಡೀ ದೇಶಕ್ಕೆ ಬಂದಿದೆ, ಬರೀ ಸಿಟಿ, ಹಳ್ಳಿ ಎಂದು ಎಲ್ಲಿ ಇದೆ,

ಶ್ರೀ ಎಸ್. ಸುರೇಶ್‌ಕುಮಾರು:– ಮಾನ್ಯ ಕಾಗೋಡು ತಿಮ್ಮಪ್ಪನವರಿಗೆ ನಾನು ಒಂದು ಸಜೆಷನ್ ಕೊಡುವುದೇನೆಂದರೆ, ಎಂಥಂಥ ಟ್ಯಾಲೆಂಟ್‌ಗಳನ್ನು ಕ್ಯಾಬಿನೆಟ್‌ನಿಂದ ಆಚೆಗೆ ಇಟ್ಟು ಬಿಟ್ಟಿದ್ದೀರಿ, first timer ಅನ್ನು ದಯಮಾಡಿ ಮಿನಿಸ್ಟರ್ ಮಾಡಿ, ಬರಬೇಕು, ಸಾರ್ ನೀವು, ನೀವು ಕ್ಯಾಬಿನೆಟ್‌ನಲ್ಲಿರಬೇಕು. ಸ್ಟ್ರಾಂಗ್ ಆಗುತ್ತದೆ.

ಶ್ರೀ ಕಾಗೋಡು ತಿಮ್ಮಪ್ಪ:– ಅದು ಬರುವ ಕಾಲಕ್ಕೆ, ನಿಮ್ಮನ್ನು ಬೆನ್ನು ಹತ್ತಿಕೊಂಡು ಬರುತ್ತೆ, ಬರದೇ ಇರುವಾಗ ಅದನ್ನು ಹುಡುಕಿದರೂ ಬರೋಲ್ಲ.

ಶ್ರೀ ಆರಗ ಜ್ಞಾನೇಂದ್ರ:– ಅದಕ್ಕೆ ಅವರಿಗೆ ಬೇಜಾರು ಆಗಿ, ಎಲ್ಲರ ಮನೆಯ ದೋಸೆಯೂ ತೂತು, ಎಂದು ಹೇಳಿದ್ದಾರೆ, ಅವರಿಗೆ ಜಿಗುಪ್ಸೆ ಬಂದು ಬಿಟ್ಟಿದೆ.

ಶ್ರೀ ಶಿವಾನಂದ ಎಸ್. ಪಾಟೀಲ್:– ಹಾಗಲ್ಲ, ಅವರಿಗೆ ಎಲ್ಲಿ ತೂತು ಬರುತ್ತದೆಂಬುದು ಗೊತ್ತಾಗುವುದಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ:– ಎಲ್ಲರ ಮನೆ ದೋಸೆ ತೂತು ಎನ್ನುವುದಕ್ಕೆ ಶ್ರೀ ಅನಂತಕುಮಾರ್ ರವರನ್ನು ನೋಡಿದರೆ ಗೊತ್ತಾಗುತ್ತದೆ.

ಶ್ರೀ ಆರಗ ಜ್ಞಾನೇಂದ್ರ:– ಕಾಂಗ್ರೆಸ್ ಪಕ್ಷದ ಕಾವಲಿನೇ ತೂತು.

ಶ್ರೀ ಶಿವಾನಂದ ಎಸ್. ಪಾಟೀಲ್:– ಮಾನ್ಯ ಗುರುಸ್ವಾಮಿಯವರೇ, ಇವರು ನಿಮಗೆ ಎಲ್ಲಿ ತೂತು ಹೊಡೆದಿದ್ದಾರೆಂಬುದು ಗೊತ್ತಾಗಿಲ್ಲ.

ಶ್ರೀ ಎ.ಎಸ್. ಗುರುಸ್ವಾಮಿ:– ಈಗ ಇಲ್ಲಿ ಬರಗಾಲದ ಬಗ್ಗೆ ಮಾತನಾಡುತ್ತಿದ್ದೇವೆ, ಮೊದಲು ಬರಗಾಲ ತೊಲಗಲಿ, ಆನಂತರ ಮುಂದಿನ ವಿಚಾರ, ದೇವರು ಬರಗಾಲದ ಬರೆ ಹಾಕಿದ್ದಾನೆ, ಇದರ ಬಗ್ಗೆ ನಾವೆಲ್ಲಾ ದೇವರನ್ನು ಯೂನಾನಿಮಸ್ ಆಗಿ ಪ್ರಾರ್ಥನೆ ಮಾಡಬೇಕು. ನಾವು political resolution ಮಾಡಿದರೆ ದೇವರು ಯೀಲ್ಡ್ ಆಗುವುದಿಲ್ಲ, ಭಕ್ತಿಯಿಂದ ಪ್ರಾರ್ಥನೆ ಮಾಡಿ, ಇನ್ನು ಯಾವ ಕಾಲಕ್ಕೂ ಈ ಅನಿಷ್ಟವನ್ನು ಕೊಡಬೇಡಿ ಎಂದು.

ಶ್ರೀ ಎಂ.ಡಿ. ಲಕ್ಷ್ಮಿನಾರಾಯಣ:– ರಾಮನನ್ನು ನಂಬಬಾರದು ಎಂದು ಹೇಳಿದರು, ನೀವು ದೇವರನ್ನು ನಂಬೋಣ ಎಂದು ಹೇಳುತ್ತೀರಿ ಇಲ್ಲೆ ವಿಚಿತ್ರವಾಗಿದೆಯಲ್ಲಾ, ನಮಗೇನೂ ಇದು ಅರ್ಥವಾಗುವುದಿಲ್ಲ.

ಶ್ರೀ ಎಸ್. ಸಂಪಂಗಿ:– ನೀವು ದೇವರನ್ನು ಇಟ್ಟುಕೊಂಡು ರಾಜಕೀಯ ಮಾಡುವುದಕ್ಕೆ ಹೋಗುತ್ತೀರಿ.

ಶ್ರೀ ಎಂ.ಡಿ. ಲಕ್ಷ್ಮಿನಾರಾಯಣ:– ನಾವು ಮಾಡೇ ಮಾಡುತ್ತೇವೆ, ನೂರಕ್ಕೆ ನೂರು ಭಾಗ ರಾಮಮಂದಿರವನ್ನು ಕಟ್ಟೇಕಟ್ಟುತ್ತೇವೆ ಎಂದು ಹೇಳುತ್ತೇವೆ.

ಶ್ರೀ ಎ.ಎಸ್. ಗುರುಸ್ವಾಮಿ:– ದೇವರಿಲ್ಲವೆಂದರೆ ನೀವ್ಯಾರೂ ಇಲ್ಲಿ ಒಳಗೆ ಬರುವುದಕ್ಕೆ ಆಗುತ್ತಿರಲಿಲ್ಲ, ನಾವು ನೀವು ಇಲ್ಲಿಗೆ ಬಂದಿರುವುದಕ್ಕೆ ಸಾಕ್ಷಿ ಏನೆಂದರೆ ದೇವರ ಶಕ್ತಿ ಇರುವುದಕ್ಕೆ ಬಂದಿರುವುದು.

ಶ್ರೀ ಎಂ.ಡಿ. ಲಕ್ಷ್ಮಿನಾರಾಯಣ:– ದೇವರನ್ನು ನಂಬುವುದೇ ಇಲ್ಲವೆಂದು ಹೇಳಿದರಲ್ಲಾ.

ಶ್ರೀ ಎ.ಎಸ್. ಗುರುಸ್ವಾಮಿ:– ಅದು ಅವರ ವೈಯಕ್ತಿಕ ಅಭಿಪ್ರಾಯವಿರಬಹುದು.

ಶ್ರೀ ಪಿ.ಜಿ.ಆರ್. ಸಿಂಧ್ಯಾ:– ಮಾನ್ಯ ಉಪಾಧ್ಯಕ್ಷರೆ, ಇಲ್ಲಿ ಕನ್‌ಫ್ಯೂಸ್ ಮಾಡಿಕೊಂಡಿದ್ದಾರೆ, ದೇವರಿಗೂ ರಾಮನಿಗೂ ಏನು ಸಂಬಂಧ? I would like to know what is the relationship between God and Rama ಅವರು ಈಗ ದೇವರಲ್ಲಿ ನಂಬಿಕೆ ಇಡಿ ಎಂದು ಹೇಳಿದರು, ದೇವರೆಂದು ಹೇಳಿದ ತಕ್ಷಣ ಮುಸಲ್ಮಾನರಿಗೂ ದೇವರಿರುತ್ತಾರೆ, ಹಿಂದುಗಳಿಗೂ ದೇವರಿರುತ್ತಾರೆ, ಕ್ರಿಶ್ಚಯನ್‌ರಿಗೂ ದೇವರಿರುತ್ತಾರೆ, ಎಲ್ಲರಿಗೂ ದೇವರಿರುತ್ತಾರೆ, ದೇವರೆಂದ ತಕ್ಷಣ ರಾಜಕೀಯ ಲಾಭ ತೆಗೆದುಕೊಳ್ಳುವುದಕ್ಕೆ ಇವರು ನಾವು ರಾಮಮಂದಿರ ಕಟ್ಟುತ್ತೇವೆಂದು ಹೇಳುತ್ತಾರೆ, ದೇವರಿಗೂ ರಾಮನಿಗೂ ಏನು ಸಂಬಂಧ? ದಯವಿಟ್ಟು ನೀವು ಹೇಳಿ.

ಶ್ರೀ ಎಂ.ಡಿ. ಲಕ್ಷ್ಮಿನಾರಾಯಣ:– ಯಾವುದೇ ಕಾರಣಕ್ಕೂ ಸದನವನ್ನು ದಾರಿ ತಪ್ಪಿಸುವುದಕ್ಕೆ ನಾನು ಬಿಡುವುದಿಲ್ಲ, ನಾನು ಹೇಳುವಂತಹ ವಿಚಾರವೇನೆಂದರೆ, ಸನ್ಮಾನ್ಯ ಸದಸ್ಯರಾದ ವೈ.ಕೆ. ರಾಮಯ್ಯ ನವರು ಮೊನ್ನೆ ದೇವರ ಬಗ್ಗೆ ನಂಬಿಕೆ ಇಲ್ಲವೆಂದು ಹೇಳಿದಾಗ ತಾವು ದೇವರನ್ನು ನಂಬೋಣ ಎಂದು ಹೇಳಿದಿರಿ, ನಮಗೂ ಕೂಡ ದೇವರ ಬಗ್ಗೆ ಅಪಾರವಾದ ನಂಬಿಕೆ ಇದೆ. ಆ ಒಂದು ವಿಚಾರದಲ್ಲಿ ಮಾನ್ಯ ಸದಸ್ಯರಾದ ಸಂಪಂಗಿಯವರು ಇವರನ್ನು ರಾಮಮಂದಿರವನ್ನು ಕಟ್ಟುವುದಕ್ಕೆ ಹೊರಟಿದ್ದಾರೆಂದರು, ಅದಕ್ಕೋಸ್ಕರ ನಾವು ಕಡ್ಡಾಯವಾಗಿ ಕಟ್ಟುವುದಕ್ಕೆ ಹೊರಟಿದ್ದೇವೆನ್ನುವ ಮಾತನ್ನು ಹೇಳಬೇಕಾಯಿತು.

ಶ್ರೀ ಎನ್. ಸಂಪಗಿ:– ನಾನು ನೀವು ದೇವರನ್ನು ಇಟ್ಟುಕೊಂಡು ರಾಜಕೀಯ ಮಾಡುತ್ತೀರೆಂದು ಹೇಳಿದೆ ಅಷ್ಟೆ.

ಶ್ರೀ ವಿಶ್ವೇಶ್ವರ ಹೆಗ್ಡೆ ಕಾಗೇರಿ:– ಮಾನ್ಯ ಉಪಾಧ್ಯಕ್ಷರೆ, ಹಿಂದುಗಳಾದವರು ರಾಮಮಂದಿರವಲ್ಲದೆ ಮತ್ತೇನು ಕಟ್ಟಬೇಕು? ಹಿಂದುಗಳಾದವರೂ ರಾಮಮಂದಿರವನ್ನು ಕಟ್ಟೇ ಕಟ್ಟುತ್ತಾರೆ; ರಾಮಮಂದಿರವನ್ನು ನಾವು ಅಲ್ಲೇ ಕಟ್ಟುತ್ತೇವೆಂದು ಹೇಳುವುದರಲ್ಲಿ ತಪ್ಪೇನಿದೆ?

ಶ್ರೀ ಪಿ.ಜಿ.ಆರ್. ಸಿಂಧ್ಯಾ:– ರಾಮರಾಜ್ಯವೆಂದರೆ, ರಾಮ ಧರ್ಮದಿಂದ ರಾಜ್ಯವನ್ನು ಆಳಿದ ಅಷ್ಟೆ, ಅದು ಬಿಟ್ಟು ಅವನನ್ನು ನೀವು ಗುಡಿಯಲ್ಲಿ ಏತಕ್ಕೆ ಇಡುವುದಕ್ಕೆ ಹೋಗುತ್ತೀರಿ?

ಶ್ರೀ ಎಂ.ಡಿ. ಲಕ್ಷ್ಮಿನಾರಾಯಣ:– ನಮಗೆ ಅದರಲ್ಲಿ ಅಪಾರವಾದ ನಂಬಿಕೆ ಇದೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:– ರಾಮಾಯಣದ ಬಗ್ಗೆ ಒಂದು ದಿವಸ ಚರ್ಚೆ ಇಟ್ಟು ಕೊಳ್ಳೋಣ, ರಾಮ ತನ್ನ ವ್ಯಕ್ತಿತ್ವದ ಎಲ್ಲಾ ಹಿನ್ನೆಲೆಯಲ್ಲಿ ಹೇಗೆ ದೇವರು ಎನ್ನುವುದನ್ನು ನಾವು ಹೇಳುತ್ತೇವೆ.

ಒಬ್ಬ ಮಾನ್ಯ ಸದಸ್ಯರು:– ರಾಮ ಮಹಾಮಾನವ ದೇವರಲ್ಲ; ಆದರೆ ದೇವರೆಂದು ಹೇಳುವುದಕ್ಕಾಗುವುದಿಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯಾ:– ತಮಿಳುನಾಡಿನಲ್ಲಿ ಕೆಲವು ದೇವಸ್ಥಾನಗಳನ್ನು ಎಂಜಿಆರ್ ಹೆಸರಿನಲ್ಲಿ ಮಾಡಿದ್ದಾರೆ, ಅದೇ ರೀತಿ ಇನ್ನೊಂದು ಐವತ್ತು ವರ್ಷವಾದ ಮೇಲೆ, ನೀವು ಒಳ್ಳೆಯ ಕೆಲಸ ಮಾಡಿದ್ದೀರೆಂದು ನಿಮ್ಮ ಕ್ಷೇತ್ರವಾದ ಅಂಕೋಲ ಅಲ್ಲಿ ನಿಮ್ಮ ಗುಡಿ ಮಾಡಿದರೆ ನಿಮ್ಮನ್ನು ದೇವರೆಂದು ಕರೆಯಲಾಗುತ್ತದೆಯೇ? Rama was a Ruler. He gave a good rule. Why do you claim that you are the only people who want' Ramaraj? We also want 'Ramaraj'. Not your Rama.

ಶ್ರೀ ಎ. ರಾಮದಾಸ್:- ರಾಮನನ್ನು ನೀವು ಸ್ವಾಗತ ಮಾಡಿದರಲ್ಲಾ ಅದಕ್ಕೆ ಸಂತೋಷಪಡುತ್ತೇವೆ.

ಶ್ರೀ ಎಸ್.ಎಸ್. ಪಾಟೀಲ್:- ಹಿಂದುಗಳೆಲ್ಲಾ ರಾಮದೇವರು. ಅದಕ್ಕಾಗಿ ರಾಮಮಂದಿರವನ್ನು ಕಟ್ಟುತ್ತೇವೆಂದು ಹೇಳಿದರು, ಅವರು (ವಿರೋಧ ಪಕ್ಷದ ನಾಯಕರು) ಶಿವನ ಆರಾಧಕರು, ರಾಮನ ಆರಾಧಕರಲ್ಲ, ಕೊರಳಲ್ಲಿ ಲಿಂಗವನ್ನು ಕಟ್ಟಿದ್ದಾರೆ.

ಶ್ರೀ ಜಗದೀಶ್ ಶೆಟ್ಟರ್:- ಎಸ್.ಎಸ್. ಪಾಟೀಲರೆ, ನಾವು ರಾಮರಾಜ್ಯವನ್ನು ಕಟ್ಟುವವರೆ, ನಾವು ಕೂಡ ರಾಮಮಂದಿರವನ್ನು ಕಟ್ಟುವವರೇ.

ಗೊಂದಲ

ಶ್ರೀ ವಿಶ್ವೇಶ್ವರ ಹೆಗ್ಡೆ ಕಾಗೇರಿ:- ಹಿಂದು ಸಮಾಜಕ್ಕೆ ರಾಮನೇ ದೇವರು. ಆದುದರಿಂದ ರಾಮಮಂದಿರವನ್ನು ಕಟ್ಟೇ ಕಟ್ಟುತ್ತೇವೆ.

ಶ್ರೀ ಎಸ್.ಎಸ್. ಪಾಟೀಲ್:- ಅವರು ಬಸವನ ಆರಾಧಕರು, ಇನ್ನೊಂದು ದೇವರಿಗೆ ಕೈಎತ್ತಿ ಕೂಡ ಮುಗಿಯುವುದಿಲ್ಲ, ಅವರು ಬಸವತತ್ವ ಆರಾಧಕರು.

ಶ್ರೀ ಎ. ರಾಮದಾಸ್:- ಎಸ್.ಎಸ್. ಪಾಟೀಲರೆ, ಅದಕ್ಕೇನೆ ಕಾಶಿ ವಿಶ್ವನಾಥನನ್ನು ಕೂಡ ಹೇಳುತ್ತಿರುವುದು ಅದೇ ಒಂದು ವಿಚಾರ ಇದೆ ಮತ್ತೆ, ಆಯೋಧ್ಯೆ ವಿಚಾರದ ಜೊತೆಗೆ ಕಾಶಿಯೂ ಮುಖ್ಯವಾದ ವಿಚಾರವಾಗಿ ಇಟ್ಟು ಕೊಂಡಿರುವುದು.

ಉಪಾಧ್ಯಕ್ಷರು:- ಮಾನ್ಯ ಗುರುಸ್ವಾಮಿರವರೇ, ನೀವು ಮಾತನಾಡುತ್ತೀರೋ; ಬಂದ್ ಮಾಡಲೋ?

ಶ್ರೀ ಎ.ಎಸ್. ಗುರುಸ್ವಾಮಿ:- ಮಾತನಾಡುತ್ತೇನೆ. I stand on the relevant facts. Fact is a fact. That is a law of our life. ಈಗ ನಾವು ಬರಬಿಟ್ಟು ದೇವರನ್ನು ಹಿಡಿದುಕೊಂಡು ಕುಳಿತಿದ್ದೇವೆ ಒಳ್ಳೆಯದು, ದೇವರಲ್ಲಿ ಪ್ರಾರ್ಥನೆ ಮಾಡೋಣ, ನಾವು ಭಕ್ತಿಯಿಂದ ಸ್ಮರಣೆ ಮಾಡಿ, ಯಾವ ಕಾಲಕ್ಕೂ ಈ ಅನಿಷ್ಟ ಬರದ ಬರೆ ನಮ್ಮ ಮೇಲೆ ಹಾಕಬೇಡಪ್ಪವೆಂದು ಒಮ್ಮತದಿಂದ ಕೇಳೋಣ, ಈ ಬಗ್ಗೆ ಯಾರದು ಭಿನ್ನಾಭಿಪ್ರಾಯವಿಲ್ಲ. ದೇವರ ಕುರಿತು ನಾನೊಂದು ವಿಚಾರ ಹೇಳುತ್ತೇನೆ, ದೇವರಲ್ಲಿ ನಂಬಿಕೆ ಇಲ್ಲ ಸುಡುಗಾಡಿಲ್ಲವೆಂದು ಹೇಳುತ್ತಾರೆ, ಆದರೆ ಅವರು ನಡೆಯತಕ್ಕಂಥ ರೀತಿಗಳನ್ನು ನೋಡಿದರೆ, ಪ್ರಧಾನಿಯಾದವರು, ರಾಷ್ಟ್ರಪತಿಯಾಗಿದ್ದವರು, ಇಲ್ಲಿ ಮುಖ್ಯಮಂತ್ರಿಗಳಾಗಿ ಏನೇನೋ ಆಗಿದ್ದವರು ಏನು ಮಾಡಿದರೆಂಬುದನ್ನು ನಾವು ನೋಡಿಲ್ಲವೇ? ಏನು ಮಾಡುತ್ತಾರೆಂದರೆ, they are conditioned by various external facts. ರಾಹುಕಾಲ, ಗುಳಿಕಾಲ ಎಲ್ಲಾ ಕಾಲಗಳನ್ನು ನೋಡಿಕೊಂಡೇ ಎಲ್ಲಾ ಮಾಡುವುದು ನಡೆಯುವುದು; ಎಲ್ಲರೂ ಮಾಡುವುದು ಇದನ್ನೇ, yet, we say, we don't believe in God. This is the dubious way of Indian life. This should be given up, I tell you. ಇದಕ್ಕೋಸ್ಕರವೇ ನಮ್ಮ ಕನಕದಾಸರು ಒಂದು ಮಾತನ್ನು ಹೇಳಿದ್ದಾರೆ, ದೇವನೊಬ್ಬ ನಾವು ಹಲವು ಎಂದು ಹೇಳುತ್ತಾನೆ, ಆತ ತಂಬೂರಿ ಗಿರಾಕಿ; ಆತನೇನೂ ವಿದ್ಯಾವಂತನಲ್ಲ. ಒಬ್ಬ ಸ್ನೇಹಿತರು ಹೇಳಿದರಲ್ಲಾ; ಇಲ್ಲಿ ಯಾರಾದರೂ ದೇವರನ್ನು ನೋಡಿಕೊಂಡು ಬಂದಿರುವವರು ಕೈ ಎತ್ತಿ, ಈಗ ಹೋಗಿರುವವರು ಯಾರಾದರೂ ಮೇಸೇಜ್ ಕೊಟ್ಟಿದ್ದಾರಾ ಕೇಳಿ, ಯಾರೂ ಕೊಟ್ಟಿಲ್ಲವಲ್ಲಾ An ultimate force is there. ನಮ್ಮೆಲ್ಲರ ಮೇಲೂ ಒಂದು ಶಕ್ತಿ ಕಂಟ್ರೋಲ್ ಮಾಡುತ್ತದೆ,

ಯಾವಾಗ ನಾವು ಹುಟ್ಟಿದೆವು ನಮಗೆ ಗೊತ್ತಿಲ್ಲ, arrival is also not known. ಯಾವಾಗ ನಮ್ಮ ಡಿಪಾರ್ಚರ್ ನಮಗೆ ಗೊತ್ತಿಲ್ಲ, ಏರ್‌ಪೋರ್ಟ್ ಹಾಗೂ ರೈಲ್ವೆ ಸ್ಟೇಷನ್‌ಗೆ ಹೋದರೆ ಅರೈವಲ್ ಮತ್ತು ಡಿಪಾರ್ಚರ್ ಟೈಂ ಇದೆ, ನೀವು ದೇವರಿಲ್ಲವೆಂದು ಹೇಳುತ್ತೀರಲ್ಲಾ, ಮನುಷ್ಯನಿಗೆ ಯಾವಾಗ ಇದೆ ತೋರಿಸಿ, It cannot be, I tell you. We have to stand on relevant facts. There is an ultimate force. Let us respect it.

ಶ್ರೀ ಶಿವಾನಂದ ಎಸ್. ಪಾಟೀಲ್:- ನೀವು ಮಲೆಮಹದೇಶ್ವರ ದೇವಸ್ಥಾನಕ್ಕೆ ಹೋಗಿ ನಿಮಗೂ ದೇವರು ಒಲಿಯುತ್ತಾನೆ.

ಶ್ರೀ ಎ.ಎಸ್. ಗುರುಸ್ವಾಮಿ:- ನನಗೆ ಪ್ರಯತ್ನದ ದೇವರನ್ನು ಬಿಟ್ಟರೆ, ಹೆಸರನ್ನು ಹಿಡಿದುಕೊಂಡು ಮಾಡುವುದಕ್ಕೆ ಹೋಗುವವನಲ್ಲ, ದೇವರೊಬ್ಬನೇ ಕಂಡಿಲ್ಲ, ಕೇಳಿಲ್ಲ, ಒಳೆಯದನ್ನು ಮಾಡು, ಒಳ್ಳೆಯದನ್ನು ಹರಸು ಎಂದು ಕೇಳಿಕೊಳ್ಳುತ್ತೇನೆ. That is all there is one force, I pay to it. That is all ನೀವೆಲ್ಲಾ ದೇವಸ್ಥಾನಗಳಿಗೆ ಹೋಗಿ ಪೂಜೆ ಮಾಡುತ್ತೀರಿ, ನಾವೆಲ್ಲಾ ಹಗಲೆಲ್ಲಾ ಪೂಜೆ ಮಾಡುತ್ತಲೇ ಇರುತ್ತೇವೆ, ಏನು ನಮ್ಮನ್ನೇಲ್ಲಾ ಸ್ವರ್ಗಕ್ಕೆ ತೆಗೆದುಕೊಂಡು ಹೋಗುತ್ತಾರಾ? ಏನೂ ಇಲ್ಲವಲ್ಲಾ.

ಶ್ರೀ ಬಿ. ಸೋಮಶೇಖರ್:- ದೇವರೆಂದರೆ ಕಾಯಕವೇ ದೇವರು, ಯಾರು ತಮ್ಮ ಆತ್ಮ ತೃಪ್ತಿಯಿಂದ ಕೆಲಸ ಮಾಡುತ್ತಾರೆ ಅದನ್ನೇ ದೇವರೆಂದು ತಿಳಿದುಕೊಳ್ಳಬೇಕು; ಇಲ್ಲದಿದ್ದರೆ ದೇವರ್ಯಾವುದೂ ಇಲ್ಲ.

ಶ್ರೀ ಎ.ಎಸ್. ಗುರುಸ್ವಾಮಿ:- ಮಾನ್ಯ ಉಪಾಧ್ಯಕ್ಷರೆ, ನಾನು ಕರ್ನಾಟಕ ಚುಟುಕ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ, ಚುಟುಕ ಸಾಹಿತ್ಯವೆಂದರೇನು? ಹಾಸ್ಯವಾಗಿ ಮಾತನಾಡುವಂತಹ ಕವನ ಬರೆಯುವಂತಹ ಒಂದು ಪದ್ಧತಿ, ಚಿಕ್ಕಮಗಳೂರಿನ ಬಾಳೆಹೊನ್ನೂರಿನಲ್ಲೂ ಮಾಡಿದ್ದೇವೆ, ಮಾನ್ಯ ಚಂದ್ರೇಗೌಡರು ಇದ್ದಿದ್ದರೆ ಒಂದು ಜೋಕ್ ಮಾಡುತ್ತಿದ್ದೆ, ಇವತ್ತು ಬಂದಿಲ್ಲ. ಬೇರೆ ಸದನಕ್ಕೆ ಹೋಗಿದ್ದಾರೆಂದು ಕಾಣುತ್ತದೆ.

ಉಪಾಧ್ಯಕ್ಷರು:- ಗುರುಸ್ವಾಮಿಯವರೇ, ನೀವು ಮಾತನಾಡುತ್ತಿರುವುದನ್ನು ನೋಡಿದರೆ ಬರದಿಂದ ದೂರ ಸರಿದಂತೆ ಕಾಣುತ್ತದೆ.

ಶ್ರೀ ಎ.ಎಸ್. ಗುರುಸ್ವಾಮಿ:- ಸಾಧ್ಯವೇ ಇಲ್ಲ, ನಾವು ಬರದಲ್ಲೇ ಇರುವುದು, ರಾತ್ರಿ ಹೊತ್ತು ಕನಸು ಬರುವುದು ಬರವೇ. ಬರದ ಬಗ್ಗೆ ಮಾತನಾಡಿ ಸಾಕಾಗಿದೆ ಸ್ವಲ್ಪ ಇದರ ಬಗ್ಗೆಯೂ ಕೇಳೋಣ.

ಉಪಾಧ್ಯಕ್ಷರು:- ದೇವರ ಬಗ್ಗೆ ಮಾತನಾಡುತ್ತಿದ್ದೀರಿ, ಸಾಹಿತ್ಯದ ಬಗ್ಗೆ ಮಾತನಾಡುತ್ತಿದ್ದೀರಿ ಆದರೆ ನಿಮ್ಮನ್ನು ನಮ್ಮನ್ನು ಇಲ್ಲಿಗೆ ಆಯ್ಕೆ ಮಾಡಿ ಕಳುಹಿಸಿದ ದೇವರ ಬಗ್ಗೆಯೂ ಸ್ವಲ್ಪ ಚಿಂತನೆ ಮಾಡಿ ಎಂದು ಹೇಳುತ್ತಿದ್ದೇನೆ.

ಶ್ರೀ ಎ.ಎಸ್. ಗುರುಸ್ವಾಮಿ:- ಆಯಿತು, ಸರ್, I totally agree with you. ಈಗ ಚಿಂತನ ಚುಟಕದ್ದು ಸ್ವಲ್ಪ ಹೇಳುತ್ತೇನೆ, "ಬರ ಬಂತು ಬರ ದೇಶಕ್ಕೆ ಬರ ಬಂತು ಬರ, ಬರ ಬಂತು ಅನಾವೃಷ್ಟಿ ನೀರಿಗೆ ಬಂತು ಬರ, ಮೇವಿಗೆ ಬಂತು ಬರ, ರಾಜಕಾರಣಿಗೆ ಬಂತು ಮಾತಿನ ಚಲಪ". ಬರದ ಪಾಡಿಗೆ ಬರ ಬಂದರೆ ನಮಗೆ ಬಂತು ಮಾತಿನ ಚಪಲ ಎಂದು ಹೇಳುತ್ತಾನೆ" ಇದೇನು ಸತ್ಯವಿದೆ, We want to make capital out of it, Capital out of 'bara'.

Everybody. ನಾನು ಯಾರನ್ನೂ ಪಿನ್‌ಪಾಯಿಂಟ್ ಮಾಡುವುದಕ್ಕೆ ಹೋಗುವುದಿಲ್ಲ, ಇದು ವಸ್ತುಸ್ಥಿತಿ; ಅದೊಂದು ಕಡೆ ಇರಲಿ. ಈಗ ಏನು ಬರವೆಂದು ಹೇಳುತ್ತಿದ್ದೇವೆ ಅದು, ನೇಚರ್ ಡಿಕ್ಲೇರ್ಡ್ ಎಮರ್ಜೆನ್ಸಿ, ಇದರಲ್ಲಿ ನಮ್ಮೆಲ್ಲರ ಕಾಣಿಕೆ ಇದೆ, ಹೇಗೆಂದು ನೀವು ಕೇಳಬಹುದು, ಉದಾಹರಣೆಗೆ ಹೇಳುತ್ತೇನೆ, ನಾವೆಲ್ಲರೂ ವೈಯಕ್ತಿಕವಾಗಿ ಕೊಡುಗೆ ನೀಡಿದ್ದೇವೆ, ಇಲ್ಲಿ ಅಲ್ಲಿರತಕ್ಕಂಥ ಎಂಎಲ್‌ಎ ಗಳು ಸೇರಿದಂತೆ ಇಲ್ಲಿ ಪಕ್ಷದ ಪ್ರಶ್ನೆಯಲ್ಲ ಎಂಎಲ್‌ಎ ಗ್ರಾಂಟ್‌ನಲ್ಲಿ ಬರತಕ್ಕಂಥ 40 ಲಕ್ಷ ರೂಪಾಯಿಗಳನ್ನು ನಾವೆಲ್ಲರೂ ತ್ಯಾಗ ಮಾಡಿದ್ದೇವೆ.

ನಮ್ಮ ಎಂಎಲ್‌ಎ ಗ್ರ್ಯಾಂಟನ್ನು ಸರ್ಕಾರಕ್ಕೆ ಕೊಟ್ಟಿದ್ದೇವೆ. ಅದನ್ನು ಬರ ಕಾರ್ಯಕ್ರಮಕ್ಕೆ ಉಪಯೋಗಿಸುತ್ತೇವೆ ಎನ್ನತಕ್ಕಂಥಾದ್ದನ್ನು ನಮ್ಮ ನೆಚ್ಚಿನ ಮುಖ್ಯಮಂತ್ರಿಗಳು ಹೇಳಿದ್ದಾರೆ. ಅದಕ್ಕೆ ನಾವು ಒಪ್ಪಿದ್ದೇವೆ. ಇದೇ ರೀತಿ ಏಕೆ ನೀವು ಎಂಪಿ ಗಳನ್ನೂ ಕೇಳಬಾರದು? ಅವರು ಎರಡು ಕೋಟಿ ರೂಪಾಯಿಗಳನ್ನು ತೆಗೆದುಕೊಂಡಿದಾರಲ್ಲಾ, ಅವರನ್ನೂ ಕೊಡಿ ಎಂದು ಕೇಳಿ. ಅವರನ್ನು ಎಲೆಕ್ಟ್ ಮಾಡಿದವರು ಇಲ್ಲಿಯವರೇ ಅಲ್ಲವೇನು? ಅವರಿಗೆ ನಾವೆಲ್ಲಾ ಕ್ಯಾನ್‌ವಾಸ್ ಮಾಡಿಲ್ಲವೇನು? Why don't they contribute the money to us? That we have to ask them, Let us pass a resolution today. M.P. ಗಳಿಗೆ ಯುನಾನಿಮಸ್ ಆಗಿ ಒಂದು ರೆಸೊಲ್ಯೂಷನ್ ಮಾಡಿ ಇವತ್ತು. That we also request you to contribute to the Government for tackling this ಬರ ಕಾರ್ಯಕ್ರಮ ಎಂದು ರೆಸೊಲ್ಯೂಷನ್ ಮಾಡ್ರಿ.

ಶ್ರೀ ಎಸ್.ಎಸ್. ಪಾಟೀಲ್:– ಇಲ್ಲ, ಇಲ್ಲ, ಸುಳ್ಳು ಅದು.

ಶ್ರೀ ಸಿ.ಆರ್. ಸಗೀರ್ ಅಹಮದ್ (ವಸತಿ ಸಚಿವರು):– ಶ್ರೀ ಗುರುಸ್ವಾಮಿಯವರೆ, ನೀವು ಆಂಗ್ಲ ಭಾಷೆಯಲ್ಲಿ ಮಾತನಾಡಿ ಎಸ್.ಎಸ್. ಪಾಟೀಲರಿಗೆ ದಿಕ್ಕು ತಪ್ಪಿಸುತ್ತೀರಿ. ಎಲ್ಲಿ, ಯಾರ ಹತ್ತಿರ ಕೇಳುವುದು ಎಂದು ಅವರು ಕೇಳುತ್ತಿದ್ದಾರೆ. ಕನ್ನಡದಲ್ಲಿ ಹೇಳಿದರೆ ಅವರಿಗೂ ಅರ್ಥವಾಗುತ್ತದೆ, ನನಗೂ ಅರ್ಥವಾಗುತ್ತದೆ, ನೀವು ಇಂಗ್ಲೀಷಿನಲ್ಲಿ ಹೇಳಿದರೆ ಅವರಿಗೂ ಅರ್ಥವಾಗುವುದಿಲ್ಲ, ನನಗೂ ಅರ್ಥವಾಗುವುದಿಲ್ಲ.

ಶ್ರೀ ಎ.ಎಸ್. ಗುರುಸ್ವಾಮಿ:– ಸರ್ಕಾರದ ವತಿಯಿಂದ ಬೇಕಾದಷ್ಟು ಕೆಲಸವಾಗಿದೆ ಎಂದು ಮೊದಲನೇ ನಾನು ಹೇಳಿದ್ದೇನೆ. The Government has done its best. ಅದರಲ್ಲಿ ಎರಡು ಮಾತಿಲ್ಲ. ನಡೆಯುವಂಥ ಮನುಷ್ಯ ಎಡವುತ್ತಾನೆ ಎಂಬ ಒಂದು ಗಾದೆ ಇದೆ. ಆ ರೀತಿ, ಕೆಲಸ ಮಾಡುವಾಗ ತಪ್ಪುಗಳಾಗಿರುತ್ತವೆ. ಅಫಿಷಿಯಲ್ಸ್ ತಪ್ಪು ಮಾಡಿದ್ದಾರೆಂದರೆ, ಅವರ ಗವರ್ನಮೆಂಟ್ ಇದ್ದಾಗ ಅದೇ ಅಫಿಷಿಯಲ್ಸ್ ಇರಲಿಲ್ಲವೇ? ಅದೇ ಭೂಪತಿಗಳು ಈಗ ಇಲ್ಲಿರುವುದು. ಅವರು ಮಂತ್ರಿಗಳಾಗಿದ್ದಾಗ ಅವರಿಗೆ ಯಾರ್‍ಯಾರು ಪಿಎ ಗಳಾಗಿದ್ದರು, ಅವರು ಈಗ ಇಲ್ಲಿದ್ದಾರೆ ಅಷ್ಟೇ. ಮೆಥೆಡ್, ಸ್ಟೈಲ್, ಫಂಕ್ಷನ್ ಎಲ್ಲವೂ ಒಂದೇ. ನೀವು ಅದನ್ನು ಮರೆಯಬಾರದು. Let us accept the fact also. ಅದನ್ನು ಬಿಟ್ಟು ನೀವು, ಸರ್ಕಾರ ಏನೂ ಮಾಡಿಲ್ಲವೆಂದರೆ ಹೇಗೆ? ಸರ್ಕಾರ ಏನೂ ಮಾಡಿಯೇ ಇಲ್ಲವೇನು? ಉದಾಹರಣೆಗಾಗಿ ಹೇಳುತ್ತೇನೆ, ಕರೆಂಟ್ ಬಂದಿಲ್ಲ ಎಂದರೆ ಜನರೇಟರ್ ಕೊಟ್ಟಿದ್ದೇವೆ. ನೀವು ಮೂವತ್ತು ಪರ್ಸೆಂಟ್ ಕೊಟ್ಟರೆ, ನಾವು ಎಪ್ಪತ್ತು ಪರ್ಸೆಂಟ್ ಕೊಡುತ್ತೇವೆ, ಅದರ ಮೂಲಕ ನೀವು ಎಲೆಕ್ಟ್ರಿಸಿಟಿಯನ್ನು ಉಪಯೋಗಿಸಿಕೊಂಡು ಕುಡಿಯುವ ನೀರನ್ನು ಉಪಯೋಗಿಸಿಕೊಳ್ಳಿ ಎನ್ನತಕ್ಕಂಥಾದ್ದನ್ನು ನಾವು ಮಾಡಿಲ್ಲವೇನು? ನೋಡಿ, ಸೆವೆಂಟರ ಸಿಕ್ಸ್–ನಾಟೌಟ್ ಆಗಿರುವ ನಮ್ಮ ರೆವಿನ್ಯೂ ಮಂತ್ರಿಗಳು ಬರುತ್ತಿದ್ದಾರೆ ಅವರು ಡೆಪ್ಯುಟಿ

ಕಮೀಷನರುಗಳಿಗೆ ಡೈರೆಕ್ಷನ್ ಕೊಟ್ಟಿದ್ದಾರೆ, ಯಾವ ದುಡ್ಡಾದರೂ ಸರಿ, ಬರಕ್ಕೆ ಖರ್ಚು ಮಾಡಿ ಎನ್ನುವ ಮಾತನ್ನು ಹೇಳುವ ಮೂಲಕ ಅವರು ದೊಡ್ಡತನವನ್ನು ಬೀಗಿದ್ದಾರೆ. I must be grateful to him. ನಮ್ಮ ರೆವಿನ್ಯೂ ಮಂತ್ರಿಗಳಿಗೆ ಆ ವಿಚಾರದಲ್ಲಿ ಬಹಳ ದೊಡ್ಡತನವಿದೆ. I have got evidence here. He has given direction to all Deputy Commissioners ಯಾವ ದುಡ್ಡೇ ಆಗಿರಲಿ, ಬರ ಕಾರ್ಯಕ್ರಮಕ್ಕೆ ಟಾಪ್ ಪ್ರೈಯಾರಿಟಿಯಲ್ಲಿ ಖರ್ಚು ಮಾಡಿ, ಕುಡಿಯುವ ನೀರಿಗಾಗಲೀ, ಮತ್ತೊಂದಕ್ಕಾಗಲೀ ಹಣ ಕೊಡಿ ಎಂದು ಮ್ಯಾಗ್ನಾನಿಮಸ್ ಆಗಿ ಹೇಳಿದ್ದಾರೆ. We are all grateful to him also. Keep it up for ever till the 'Bara' goes out. ಇನ್ನು ರೀಚಾರ್ಜಿಂಗ್ ಆಫ್ ಬೋರ್‌ವೆಲ್ಸ್. ಎಂಥ ಕೆಲಸವಿದು? ದುಡ್ಡಿದೆ ಎಂದು ನಾವು ಏನು ಬೇಕಾದರೂ ಮಾಡಬಹುದು ಎಂದು ಮಾಡಲು ಹೊರಟರೆ ಮೇಲೆ ದೈವಚಿತ್ತ ಎಂದು ಇಲ್ಲವೇನೂ? There is one proverb ದೈವಚಿತ್ತಕ್ಕೂ, ಮಾನವ ಚಿತ್ತಕ್ಕೂ ಫೈಟ್ ಆದಾಗ ಗೆಲ್ಲುವುದು ದೈವಚಿತ್ತವೇ ಹೊರತು not ಮಾನವ ಚಿತ್ತ. God's power always rules. ಅಂದರೆ, ನಮ್ಮ ಹತ್ತಿರ ದುಡ್ಡು ಇರಬಹುದು. ದುಡ್ಡು ಇದೆ ಎಂದು ಎಲ್ಲರೂ ಬೋರ್ ತೆಗೆದಿದ್ದೇ ತೆಗೆದಿದ್ದು. ಕೊನೆಗೆ ಏನಾಯಿತು? ಭೂಮಿಯಲ್ಲಿ ನೀರೇ ಇಲ್ಲ. ನೀರು ಬರುವುದಕ್ಕಾಗಿ ಈಗ ನಾವು ಏನು ಮಾಡಿದೆವು? ರೀಚಾರ್ಜ್ ಮಾಡುವುದಕ್ಕೋಸ್ಕರವಾಗಿ ಕೆರೆ ಕಟ್ಟೆಗಳು, ಅವು, ಇವು ಎಂದು ಬೇಕಾದಷ್ಟು ಮಾಡಿದ್ದೇವೆ. ಹೈಡ್ರೋಫ್ಯಾಕ್ಚರ್‌ನಿಂದ ಒಂದು ಸ್ಕೀಂ ಮಾಡಿದ್ದೇವೆ. ಇದನ್ನೆಲ್ಲಾ ಏಕೆ ಮಾಡಿದ್ದೇವೆ? ನಾವು ಮಾಡಿದ ತಪ್ಪನ್ನು ಸರಿಪಡಿಸಿಕೊಳ್ಳುವುದಕ್ಕೋಸ್ಕರವಾಗಿ ಮತ್ತು ಇನ್ನು ಮುಂದೆ ಇಂಥಾದ್ದನ್ನು ಮಾಡಬಾರದು ಎನ್ನುವ ಇಚ್ಛೆಯಿಂದಾಗಿ ನಾವು ಇದನ್ನು ಮಾಡಿದ್ದೇವೆ. ಇದು ಒಳ್ಳೆಯ ಕೆಲಸ ಅಲ್ಲವೇನು? ಹೇಗೆ ನೀವು ಕೆಲಸವಾಗಿಲ್ಲ ಎಂದು ಹೇಳುತ್ತೀರಿ? ಚೆಕ್ ಡ್ಯಾಂಗಳನ್ನು ಕಟ್ಟಿದ್ದೇವೆ. ಏತಕ್ಕಾಗಿ ಕಟ್ಟಿದ್ದೇವೆ ಎಂದರೆ ನೀರು ಇಂಗಲಿ ಎಂದು. ಅಲ್ಲಿ ನಾವು ನೀವು ನೀರು ಕುಡಿಯಲು ಹೋಗುತ್ತೇವೇನು? ನೀರು ಇಂಗಲಿ ಎಂದು ಇದನ್ನೆಲ್ಲಾ ಮಾಡುತ್ತಾರೆ. ನಮ್ಮ ಜಲಾನಯನ ಕಾರ್ಯಕ್ರಮ ಒಂದು ಅದ್ಭುತವಾದಂಥ ಕೆಲಸ. ಇಷ್ಟು ಕೆರೆಕಟ್ಟೆ, ಗೋಕಟ್ಟೆಗಳನ್ನು ಯಾವ ಕಾಲದಲ್ಲಿ ಮಾಡಿದ್ದರು? ಎಲ್ಲಿ ನೋಡಿದರೂ ಈಗ ಕರೆಕಟ್ಟೆಗಳಾಗಿವೆ. ಮಾಡಿರುವ ಮೆಥೆಡ್‌ನಲ್ಲಿ ಡಿಫರೆನ್ಸ್ ಇರಬಹುದು. ಅದರ ಬಗ್ಗೆ ನಾನು ಮಾತನಾಡುತ್ತಿಲ್ಲ. ಎಲ್ಲಿ ಆಳುಗಳು ಬಂದಿಲ್ಲ ಅಂಥ ಕಡೆ ಮತ್ತೊಂದು ಆಗಿರಬಹುದು. ಆದರೆ ಕೆಲಸವಂತೂ ಆಗಿದೆಯಲ್ಲವೇ? ನೀವೆಲ್ಲಾ ಫೋಟೋ ತೆಗೆಸಿಕೊಂಡಿದ್ದೀರಲ್ಲವೇ? ಅದೆಲ್ಲಾ ಪೇಪರ್‌ನಲ್ಲಿ ಬಂದಿದೆಯಲ್ಲವೇ? ನಿಮ್ಮ ಬಗ್ಗೆ ಪೇಪರ್‌ನಲ್ಲಿ ಒಳ್ಳೆಯ ಮಾತನ್ನು ಹೇಳಿಲ್ಲವೇ? ಇಷ್ಟಾಗಿದ್ದರೂ ಆದಾಗಿಲ್ಲ, ಇದಾಗಿಲ್ಲ ಎಂದು ಒಕ್ಕಣೆ ಹೇಳುವುದರಲ್ಲಿ ಸ್ವಲ್ಪವೂ ಅರ್ಥವಿಲ್ಲ ಎನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಲು ಇಚ್ಛೆಪಡುತ್ತೇನೆ. ಇನ್ನು, ಕೂಲಿಗಾಗಿ ಕಾಳು ಯೋಜನೆ. ಇಲ್ಲಿ ನಾನು ನನ್ನ ವಿರೋಧಿ ಮಿತ್ರರನ್ನು ಒಂದು ಪ್ರಶ್ನೆ ಕೇಳಬೇಕಾಗುತ್ತದೆ. ಕೇಂದ್ರ ಸರ್ಕಾರಕ್ಕೆ ನಾವು ನಮ್ಮ ಕರ್ನಾಟಕ ರಾಜ್ಯದಿಂದ ಟ್ಯಾಕ್ಸ್ ಕಾಂಟ್ರಿಬ್ಯೂಷನ್ ಕೊಡುವುದಿಲ್ಲವೇ? ಎಕ್ಸೈಸ್, ಅವು, ಇವು ಎಂದು ಬೇಕಾದಷ್ಟು ಕೊಡುತ್ತೇವೆ. ಕರ್ನಾಟಕದಲ್ಲಿ ಬರ ಇದೆ, ಆದ್ದರಿಂದ ಅವರ ಟ್ಯಾಕ್ಸ್ ಕಾಂಟ್ರಿಬ್ಯೂಷನ್‌ನಲ್ಲಿ ಒಂದಷ್ಟು ಪರ್ಸೆಂಟ್ ಅವರಿಗೆ ವಾಪಸ್ಸು ಕೊಡೋಣ ಎಂದು ಏಕೆ ಕೊಡಲಿಲ್ಲ? ನ್ಯಾಚುರಲ್ ಕೆಲಾಮಿಟಿ ಫಂಡ್‌ನಲ್ಲಿ ಏಕೆ ದುಡ್ಡನ್ನು ಕೊಡಲಿಲ್ಲ? ಏಕೆ ನೀವು ತಾರತಮ್ಯ ಮಾಡಿದಿರಿ? ಯಾವ ಕಾರಣಕ್ಕಾಗಿ ಇಷ್ಟೆಲ್ಲಾ ತಾರತಮ್ಯ ಮಾಡಿದ್ದಿರಿ? ಈ ರೀತಿ ಮಾಡಿಬಿಟ್ಟರೆ ಇದರಿಂದ ಓಟು

ಬರುತ್ತದೆ ಎನ್ನುವ ಯೋಚನೆ ನಿಮಗಿದ್ದರೆ ಅಥವಾ ನಮಗೆ ಆ ರೀತಿ ಯೋಚನೆಯಿದ್ದರೆ ಅದಕ್ಕಿಂತ ಮೂರ್ಖತನ ತೀರ್ಮಾನ ಮತ್ತೊಂದಿಲ್ಲ ಎಂದು ಹೇಳಬೇಕಾಗುತ್ತದೆ. ಸೆಂಟ್ರಲ್ ಗವರ್ನಮೆಂಟ್ ನಮಗೆ ಹಿರಿಯಣ್ಣ ಇದ್ದ ಹಾಗೆ. ಸ್ಟೇಟ್ ಗವರ್ನಮೆಂಟ್‌ಗಳವರು ಕಿರಿಯಣ್ಣಗಳು. ಸ್ಟೇಟ್ ಗವರ್ನಮೆಂಟ್‌ಗಳನ್ನು ಹಿರಿಯಣ್ಣ ಸರಿಯಾಗಿ ನೋಡುವುದಿಲ್ಲವೆಂದರೆ ಅಂಥ ಅಣ್ಣನನ್ನು ಏನೆಂದು ಹೇಳುತ್ತಾರೆ, Why don't you do it? Why do you consider everything on political considerations? ಅಲ್ಲಿ ಯಾರೋ 40 ಜನ ಸಪೋರ್ಟ್ ಮಾಡುತ್ತಾರೆ ಎಂದು ಅವರಿಗೇ ಸಹಾಯ ಮಾಡುವುದಾದರೆ, ಅವರು ಮಾತ್ರ ಚೆನ್ನಾಗಿರಬೇಕು, ನಾವು ಚೆನ್ನಾಗಿರಬಾರದೇನು? After all, it is Union. Union of States ರಲ್ಲಿ ಎಲ್ಲಾ ಸ್ಟೇಟ್‌ಗಳು ಆರೋಗ್ಯವಾಗಿದ್ದರೆ ಮಾತ್ರ ಆ ದೇಶ ಉಳಿಯುವುದು, ಇಲ್ಲದಿದ್ದರೆ ಛಿದ್ರವಾಗುತ್ತದೆ. What happened to Czeckoslovalkia? Czeckoslovalkia split into three-four pieces. What happened to Russia uneven developments, uneven economic growths, disparities, the whole nation was split into pieces ಈ ರೀತಿಯಾಗಲೂ ನಾವು ಅವಕಾಶ ಕೊಡಬಾರದು. ನಾವು ಈ ರೀತಿಯ ಏನಾದರೂ ವಿಚಾರಗಳನ್ನು ಹೇಳಿದರೆ, ಇಲ್ಲಿರುವ ನನ್ನ ಮಿತ್ರರೆಲ್ಲಾ ಧಡಕ್ಕೆಂದು ಎದ್ದು ಬಿಡುತ್ತಾರೆ, ಏನು ನೀವು ಹೇಗೆಲ್ಲಾ ಹೇಳುತ್ತೀರಿ ಎಂದು ಕೇಳುತ್ತಾರೆ. ಪರಿಸ್ಥಿತಿ ಇರುವುದು ಆ ರೀತಿಯಲ್ಲ. Look to the facts disparities ಆಗಿ ಇವೊತ್ತು ಏನಾಗಿದೆ ಗೊತ್ತಿದೆಯೇ? ನಮಗೆ ಒಂದು ಕೈಯಲ್ಲಿ ಸ್ವಲ್ಪ ನೋವಾದರೂ ನಾವು ಒದ್ದಾಡುತ್ತೇವೆ, ಇಡೀ ದೇಹವೇ ಔಟ್-ಆಫ್-ಆರ್ಡರ್ ಆಗುತ್ತದೆ. ಇದೂ ಸಹ ಆ ರೀತಿಯೇ. ನಾವು ಕರ್ನಾಟಕಕ್ಕೆ ಕೊಡುವುದಿಲ್ಲ, ಬೇರೆ ರಾಜ್ಯಕ್ಕೆ ಕೊಡುತ್ತೇವೆ ಎಂದರೆ, you are creating disabled another part of the body. It is not going to help you. ಇದನ್ನು ಬಿಟ್ಟು, ಸುಮ್ಮನೆ ನಮ್ಮ ಮಾನ್ಯ ಮುಖ್ಯಮಂತ್ರಿಗಳು ಏನೂ ಮಾಡಿಲ್ಲ, ಅವರೇನೂ ಮಾಡಿಲ್ಲ, ಇವರೇನೂ ಮಾಡಿಲ್ಲ ಎಂದು ಹೇಳುವುದು ಸರಿಯೇ? ನಾವೆಲ್ಲಾ ದೆಹಲಿಗೆ ಸುಮ್ಮಸುಮ್ಮನೆ ಹೋಗುತ್ತೇವೆಯೇ? ಇದನ್ನೆಲ್ಲಾ ರೆಪ್ರೆಸೆಂಟ್ ಮಾಡಿ ಹೇಳಲೇ ನಾನು ಹೋಗುವುದು. They have done it also. ಆ ಮ್ಯಾಗ್ನಾನಿಮಿಟಿ ದೊಡ್ಡಣ್ಣನ ಕೈಯಲ್ಲಿ ಇರಬೇಕು. ದೊಡ್ಡಣ್ಣನಲ್ಲಿ ಆ ಮ್ಯಾಗ್ನಾನಿಮಿಟಿ ಇಲ್ಲದೇ ಇರುವುದರಿಂದ ನಮಗೆ ಸಂಕಟಕ್ಕೆ ಬಂದಿದೆ. ನಿಮಗೆಲ್ಲಾ ಗೊತ್ತಿದೆ, ಅದರೂ ಒಂದು ವಿಚಾರವನ್ನು ನಾನು ಬಿಚ್ಚಿ ಹೇಳುತ್ತೇನೆ. ಎಲ್ಲಾ ಡೆಪ್ಯೂಟಿ ಕಮೀಷನರುಗಳ ಹತ್ತಿರ 15 ಲಕ್ಷ ರೂ. 20 ಲಕ್ಷ ರೂ. 30 ಲಕ್ಷ ರೂ. ಹೀಗೆ ದುಡ್ಡು ಇದೆ. ಆದರೆ ಆಹಾರ ಇಲ್ಲ. ಇದಕ್ಕೆ ನೀವೇನು ಹೇಳುತ್ತೀರಿ? ಮೊನ್ನೆ ಒಬ್ಬರು, ಏನಪ್ಪಾ ಗುರುಸ್ವಾಮಿ, ನಿಮ್ಮ ಚೀಫ್ ಮಿನಿಸ್ಟರ್ ಸೇಲ್ಸ್ ಟ್ಯಾಕ್ಸ್‌ನ್ನು ವಸೂಲು ಮಾಡಿಲ್ಲ ಎಂದು ಹೇಳುತ್ತಿದ್ದರು. ಚೀಫ್ ಮಿನಿಸ್ಟರ್ ಅದನ್ನು ವಸೂಲು ಮಾಡಬೇಡಿ ಎಂದು ಹೇಳಿರುವರೇನು? ಸಿಸ್ಟಂಗಳೊಳಗೆ ಅದು ಸಿಕ್ಕಿ ಹಾಕಿಕೊಂಡು ಕುಳಿತಿದೆ. ಅದನ್ನು ವಸೂಲು ಮಾಡಬೇಕು ಎಂದು ಅವರು ಡೈರೆಕ್ಷನ್ ಕೊಟ್ಟಿದ್ದಾರೆ. He has taken that seriously also. ದುಡ್ಡಿದ್ದರೂ ಸಹ ಬರ ಕಾರ್ಯಕ್ರಮಕ್ಕೆ ಅದನ್ನು ಡೈವರ್ಟ್ ಮಾಡಲು ಆಗುತ್ತಿಲ್ಲ. because lack of grains, lack of food grains allotment. Whose fault is it? Is it the fault of my Chief Minister or the fault of our Home Minister? ಇವರು ಅವರನ್ನು ಗೋಗರೆದಿಲ್ಲವೇನು? ಎಷ್ಟು ಸಲ ಅವರು ಎಲ್ಲಾ

ವಿಚಾರವನ್ನು ಹೇಳಿದ್ದಾರೆ. ಆದರೂ ಕೂಡ ಕೇಂದ್ರದವರು ಕೊಡಲಿಲ್ಲವೆಂದರೆ why you want to give ill-treatment to the younger brother? I call Karnataka State as younger brother. ಮುಂದಿನ ಎಲೆಕ್ಷನ್‌ನಲ್ಲಿ ಯಾವ ಸ್ಟೇಟ್ ಯಾವ ಪಕ್ಷಕ್ಕೆ ಹೋಗುತ್ತದೋ ಎನ್ನುವುದು ಮುಂದಿನ ವಿಚಾರ. ಆದರೆ ಇವತ್ತು ನಮಗಾಗಿರುವ ನೋವಿಗೆ ನೀವು ಸ್ಪಂದಿಸುವುದಿಲ್ಲ ಎಂದರೆ ಅವರನ್ನು ನಾವು ಏನೆಂದು ಕರೆಯಬೇಕು? ಅವರನ್ನು ಮನುಷ್ಯವಾದಿಗಳೆಂದು ಹೇಳೋಣವೋ ಅಥವಾ ಅಮಾನುಷವಾದಿಗಳು ಎಂದು ಕರೆಯೋಣವೋ? ಇಲ್ಲಿ Our thinking should be on the right way. ಇನ್ನು, ಶಾರ್ಟ್ ಟರ್ಮ್‌ನಲ್ಲಿ ಸರ್ಕಾರ ಸಾಕಷ್ಟು ಕೆಲಸ ಮಾಡಿದೆ. ಅವರು ಕಂದಾಯವನ್ನು ಮನ್ನಾ ಮಾಡಿಲ್ಲವೇ? ಬಡ್ಡಿ ಮನ್ನಾ ಮಾಡಬೇಕು ಎನ್ನುವ ವಿಚಾರವನ್ನು ನೀವು ಇಲ್ಲಿ ಹೇಳಿದ್ದೀರಿ. ಈಗ ಇಲ್ಲಿ ಬಡ್ಡಿಯನ್ನು ಮನ್ನಾ ಮಾಡಿದರೆ, ಮುಂದೆ ಅವರಿಗೆ ಬೇರೆ ಬ್ಯಾಂಕುಗಳವರು ಸಾಲ ಕೊಡುವುದಿಲ್ಲ. ಯಾವ ಬ್ಯಾಂಕುಗಳವರೂ ಇವತ್ತು ಹರಾಜು ಮಾಡಲು ಹೊರಟಿಲ್ಲ. ವಸೂಲಿ ಮಾಡುವಲ್ಲಿ ಸ್ಲೋ ಆಗಿರಬೇಕು, ಮಳೆಬೆಳೆ ಆದಾಗ ಇದು ವಸೂಲಿಯಾಗಬೇಕು ಎಂದು ಇನ್‌ಡೈರೆಕ್ಟ್ ಆಗಿ ಹೇಳಿರುವ ವಿಚಾರ ನನಗೆ ಚೆನ್ನಾಗಿ ಗೊತ್ತು. ಯಾವ ಡಿ.ಸಿ.ಸಿ ಬ್ಯಾಂಕ್ ಆಗಲಿ ಅಥವಾ ಮತ್ತೊಂದು ಬ್ಯಾಂಕ್ ಆಗಲಿ ಇವತ್ತು ಹರಾಜು ಮಾಡುತ್ತಿಲ್ಲ. They have given consideration to the suffering of our people. ಎಲ್ಲರೂ ರೈತ, ರೈತ, ರೈತ ಎಂದು ಹೇಳಿಕೊಂಡು, ಆ ರೈತರಿಗೆ ಎಷ್ಟು ಜನ ಯಜಮಾನರು? ಅವರಿಗೆ ಎಲ್ಲಾ ಪಕ್ಷದವರೂ ಯಜಮಾನರೇ, ಆದರೂ ಏಕೆ ಇನ್ನೂ ಅವರ ಸಮಸ್ಯೆಗಳು ಬಗೆಹರಿದಿಲ್ಲ. We have not treated Agriculture as an industry. You treat the Agriculture as Industry. ನಮ್ಮಲ್ಲಿ ಒಬ್ಬರಿದ್ದಾರೆ, ಮಣ್ಣಿನ ಮಗ ಎಂದು ಹೇಳಿಕೊಂಡು, ರೈತನನ್ನೇ ಕೊಂಡುಕೊಂಡ ಹಾಗೆ ಮಾತನಾಡುತ್ತಾರೆ ಅವರು. ಒಬ್ಬರು ನಾಯಕರು ಅವರು. ಅವರು ಪ್ರಧಾನ ಮಂತ್ರಿಗಳಾಗಿದ್ದಿರಲ್ಲಾ, He could have made Agricultre as an Industry. ಇಂಡಸ್ಟ್ರೀ ಎಂದು ಮಾಡಿ ಇಂಡಸ್ಟ್ರೀಗಳಿಗೆ ಏನು ಸೌಲಭ್ಯಗಳು ಸಿಗುತ್ತಿವೆಯೋ ಅವುಗಳನ್ನೆಲ್ಲಾ ಇವರಿಗೂ ಕೊಡಿಸಬಹುದಾಗಿತ್ತಲ್ಲ. ಪ್ಲಾಂಟೇಷನ್‌ನವರಿಗೆ ಎಲ್ಲಾ ಸೌಲಭ್ಯವೂ ಸಿಗುತ್ತದೆ, ಅದೇ ಸೌಲಭ್ಯವನ್ನು ಆಗ್ರಿಕಲ್ಚರಿಸ್ಟ್‌ಗೂ ಕೊಡಿ. ಕರ್ನಾಟಕ ರಾಜ್ಯದಲ್ಲಿ ನಮ್ಮ ಮಾನ್ಯ ಮುಖ್ಯಮಂತ್ರಿಗಳು ಇನ್‌ಷೂರೆನ್ಸ್ ಕವರ್ ಮಾಡಿದ್ದಾರೆ. ಇದರ ಉದ್ದೇಶ ಏನೆಂದರೆ, ಇಂಥ ಕೆಲಾಮಿಟಿಗಳು ಬಂದಾಗ ಅವರಿಗೆ ಸಹಾಯವಾಗಲಿ, ದುಡ್ಡು ಬರಲಿ ಎಂದು ಮಾಡಿದ್ದಾರೆ. ಯಶಸ್ವಿನಿ ಕಾರ್ಯಕ್ರಮ ಮಾಡಿದ್ದಾರೆ, ಇನ್ನೊಂದು ಒಳ್ಳೆಯ ಸ್ಕೀಮವನ್ನೂ ಮಾಡಿದ್ದಾರೆ. ಇವೆಲ್ಲವೂ ರೈತರಿಗೆ ರೀಚ್ ಆಗಲಿ ಎಂದು ಮಾಡಿದ್ದಾರೆ. ಇವರು ರೈತರ ಪರವಾಗಿ ಇಷ್ಟೆಲ್ಲಾ ಕಾರ್ಯಕ್ರಮವನ್ನು ಹಚ್ಚಿಕೊಂಡಿದ್ದರೂ ಕೂಡ ನೀವು ಏನೂ ಮಾಡಿಲ್ಲ, ಎಂದು ಹೇಳಿ ಅವರಿಗೆ ಹೈಟೆಕ್, ಇ–ಟೆಕ್ ಮಾಡಿದ್ದೀರಿ ಎಂದು ಹೇಳುತ್ತೀರಿ. ಇದನ್ನು ನೀವುಗಳು ಅಪ್ರೀಷಿಯೇಟ್ ಮಾಡಬೇಕು. With all his knowledge ಇಷ್ಟಾದರೂ ಮಾಡಲು ರೈತರ ಮೇಲೆ ಮಮತೆ ಇಟ್ಟಿದ್ದಾರೆ ಎನ್ನುವ ಮಾತನ್ನು ಹೇಳಲು ಇಚ್ಛೆಪಡುತ್ತೇನೆ. ಶಾರ್ಟ್ ಟರ್ಮ್ ಆಗಿ ಮಾಡಿರತಕ್ಕಂಥ ಕೆಲಸಗಳ ಜೆಸ್ಟ್ ಇದು. ಹೇಳಲು ಇನ್ನೂ ಬೇಕಾದಷ್ಟು ಇವೆ. ಆದರೆ ಸಮಯದ ಆಭಾವವಿದೆ. Short term policy towards tackling the 'bara' programme, in drought situation, ಇದಿಷ್ಟು ಮಾಡಿದ್ದಾರೆ. In emergency they have done their best, with the available resources. Now coming to the ಲಾಂಗ್ ಟರ್ಮ್‌ನಲ್ಲಿ ಏನು ಮಾಡಬಹುದು ಎನ್ನತಕ್ಕಂಥದ್ದನ್ನೂ ಕೂಡ ಯೋಚನೆ ಮಾಡಿದ್ದಾರೆ. He has got that State perspective thinking ನಮ್ಮಲ್ಲಿ ಬಜೆಟ್ ಮಂಡಿಸಿದಂಥ ಸಂದರ್ಭದಲ್ಲಿ ಒಂದು ಶೀರ್ಷಿಕೆಯನ್ನು ನಾನು ನೋಡಿದೆ. ಆ ಕಾಪಿ ಈಗ ನನಗೆ ಸಿಗುತ್ತಿಲ್ಲ. ಎಲ್ಲೋ ಸಿಕ್ಕಿ ಹಾಕಿಕೊಂಡು ಬಿಟ್ಟಿದೆ. ಅದೇನೆಂದರೆ, ಪಶ್ಚಿಮ ದಿಕ್ಕಿಗೆ ಹರಿಯತಕ್ಕಂಥ ನದಿಗಳು, ಅಂದರೆ ಯಾವ ಯಾವ ನದಿಗಳು ವೇಸ್ಟ್ ಆಗಿ ಹರಿದು ಹೋಗುತ್ತಿವೆ ಅವುಗಳನ್ನು ಅಗ್ರಿಕಲ್ಚರ್‌ಗೆ ಡೈವಟ್ ಮಾಡಬೇಕು ಎಂದು ಹೇಳಿದ್ದಾರೆ. ನೀವು ವೇಸ್ಟ್ ಆಗಿ ಸಮುದ್ರಕ್ಕೆ ಹೋಗುತ್ತಿದೆ, ಅದು ಸಮುದ್ರಕ್ಕೆ ಹೋಗಬಾರದು ಎಂದು ಹೇಳಿ, he has taken up one of the heads also in the budget.

6.30 ಪಿಎಂ

ಜಾಸ್ತಿ ದುಡ್ಡು ಕೊಟ್ಟಿಲ್ಲ ಅದು ಬೇರೆ ಮಾತು. ಆದರೆ ಕೊಡಿ ಎಂದು ನಾನು ಇವತ್ತು ಒತ್ತಾಯ ಮಾಡುತ್ತಿದ್ದೇನೆ. ಅದು ಒಳ್ಳೆಯ ಸ್ಕೀಂ. ಈ ಸೌತ್ ಕೆನರಾದಲ್ಲಿ ಮಳೆ ಆಗುತ್ತಿದೆ. ನದಿ ನೀರೆಲ್ಲಾ ಸಮುದ್ರಕ್ಕೆ ಹೊರಟು ಹೋಯಿತು. divert it to someother. Place like Shimoga, ಶಿವಮೊಗ್ಗ ಮಲೆನಾಡು ಏರಿಯಾ ಎಂದು ಅವರು ಒಂದು ಬೋರ್ಡ್ ಮಾಡಿಕೊಂಡು ಕುಳಿತಿದ್ದಾರೆ. ಅಲ್ಲಿ ಈ ಮಲೆನಾಡು ಏರಿಯಾ ಬೋರ್ಡ್‌ನ್ನು ನಾವು ತೆಗೆಯಬೇಕು. ಅಲ್ಲಿ ಮಳೆ ಇಲ್ಲ ಬೆಳೆ ಇಲ್ಲ. ಅದನ್ನು ಈಗ ನಾವು ಯಾವ ಮಲೆನಾಡು ಎಂದು ಕರೆಯುವುದಕ್ಕೆ ಆಗುತ್ತದೆ? ಆ ಬೋರ್ಡ್‌ನ್ನು ನಾವು ಈಗ ಮೈಸೂರಿಗೆ ಕೊಡಬೇಕೆಂದು ಕೇಳಬೇಕಷ್ಟೆ. ಹಾಗೆಯೇ ನ್ಯಾಷನಲ್ ಲೆವೆಲ್‌ನಲ್ಲಿ ಕೂಡ ಹಿರಿಯಣ್ಣನಾದ ಕೇಂದ್ರ ಸರ್ಕಾರ ಏನು ಮಾಡಿದೆ ಎಂದರೆ ಈ ನ್ಯಾಷನಲ್ ರಿವರ್‌ಗಳನ್ನೂ ಕೂಡ ಜಾಯಿನ್ ಮಾಡಬೇಕೆಂದು ಏನು ವಿಚಾರ ಮಾಡಿದ್ದಾರೆ it is a beautiful scheme. ಇದು ಒಳ್ಳೆಯ ಸ್ಕೀಂ. ಇದರಲ್ಲಿ ರಾಜಕೀಯ, ಸುಡುಗಾಡು ಆ ಪಕ್ಷ, ಈ ಪಕ್ಷ, ಎನ್ನುವ ಮಾತೇ ಇಲ್ಲ. Inter-linking of the rivers waste ಆಗಿ ಇವತ್ತು ಗಂಗಾ ಮತ್ತು ಬ್ರಹ್ಮಪುತ್ರ ನದಿಯ ನೀರು ಏನು ವೇಸ್ಟ್ ಆಗಿ ಸಮುದ್ರಕ್ಕೆ ಹೋಗುತ್ತಿದೆ, ಈಗ ನಮ್ಮ ಬಿ.ಜೆ.ಪಿ. ಯವರು ನಗುತ್ತಿದ್ದಾರೆ ನೋಡ್ರಿ, ಇಲ್ಲಿಯವರೆಗೆ ಅವರು ಕೊರಗುತ್ತಾ ಕುಳಿತಿದ್ದರು. It is a national perspective ತಾವು ಕೇಂದ್ರದಲ್ಲಿ ಮಾಡಿರತಕ್ಕಂಥ ಕೆಲಸ ಅದ್ಭುತವಾದದ್ದು, as the Chief Minister opposed it? ನಮ್ಮ ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಎಸ್.ಎಂ. ಕೃಷ್ಣರವರು ನ್ಯಾಷನಲ್ ರಿವರ್ ಅನ್ನು ಇಂಟರ್‌ಲಿಂಕ್ ಮಾಡಬೇಡ ಎಂದು ಅಪೋಸ್ ಮಾಡಿದ್ದಾರೆಯೇ? ಆದರೆ ಅಲ್ಲಿ ಬೇರೆ ಎರಡು ಸ್ಟೇಟ್‌ನವರು ಇಂಟರ್ ಲಿಂಕ್ ಮಾಡುವುದು ಬೇಡ ಎಂದು ಅಪೋಸ್ ಮಾಡಿಕೊಂಡು ಕುಳಿತಿದ್ದಾರೆ. ಈ ನ್ಯಾಷನಲ್ ರಿವರ್‌ಗಳನ್ನು ಇಂಟರ್‌ಲಿಂಕ್ ಮಾಡಬೇಡಿ, ಅದನ್ನು ಮಾಡಿದರೆ ನಮಗೇನೋ ರೋಗ ಎಂದು ಹೇಳಿಕೊಂಡು ಕುಳಿತಿದ್ದಾರೆ. But has got that magnanimity. It is a good scheme ಬರುವುದಾದರೆ ಬರಲಿ ಎನ್ನತಕ್ಕಂಥ ವಿಚಾರವನ್ನು ಇಟ್ಟುಕೊಂಡಿದ್ದಾರೆ. See, these are all long term tackling of our drought situation ಕಾರ್ಯಕ್ರಮ ಆಗಿದೆ, ಇದನ್ನು ಮಾಡುವಂಥದ್ದರಲ್ಲಿ ನಾವೆಲ್ಲರೂ ಕೂಡ ಸಾಕ್ರಿಫೈಸ್ ಮಾಡಬೇಕಾಗುತ್ತದೆ. It is a nature declared emergency. ಅಲ್ಲಿ ಡಬ್ಲ್ಯೂಟಿಓದಲ್ಲಿ ಒಂದು ಸಲ ರಕ್ತ ಕೊಡಿ ಎಂದು ಹೇಳಿದರಲ್ಲಾ, ರಕ್ತ ಕೊಡಿ ಎನ್ನುವವರ ಕ್ಯೂ ಅನ್ನು ತಡೆಯಲಿಕ್ಕೆ ಪೋಲೀಸ್‌ನವರು ಅಗಾಧವಾಗಿ ಬರಬೇಕಾಯಿತಂತೆ. ಅದೆಲ್ಲೋ ನ್ಯೂಯಾರ್ಕ್‌ನಲ್ಲೂ, ಚಿಕಾಗೋದಲ್ಲಿ

ಆಯಿತಲ್ಲರೀ. ಅಷ್ಟು ಜನ ನಮ್ಮ ದೇಶ, ನಮ್ಮದು ಇದು ಎಂದು ಬರುತ್ತದಲ್ಲಾ, ಆವಾಗ ಯಾವ ಚೀಫ್ ಮಿನಿಸ್ಟರ್ ಇವರೇ ಇರಲಿ, ಮತ್ತೊಬ್ಬರು ಇರಲಿ, ನಾವೇ ಇರಲಿ, ನೀವೆ ಇರಲಿ anybody can tackle it, if not, ಬರೀ ಗಾಳೀಲಿ. ಕುಳಿತುಕೊಂಡು ಕತ್ತಿ ವರಸೆ ಮಾಡಿದ ಹಾಗೆ ಇದು. ಇದು ಆಗಬಾರದೆನ್ನುವ ಮಾತನ್ನು ಹೇಳುತ್ತಾ, ಇನ್ನೊಂದು ಸೆಂಟ್ರಲ್ ಗವರ್ನಮೆಂಟ್‌ನಿಂದ ಆಗಬೇಕಾಗಿದೆ. Third method of tackling the drought situation, it is by the Central Government only. ಸೆಂಟ್ರಲ್ ಗವರ್ನಮೆಂಟ್‌ಗೆ ಬರತಕ್ಕಂಥ ಆದಾಯದಲ್ಲಿ ನಮಗೆ devolution of funds ಇದೆಯಲ್ಲಾ ಅದೇ ಒಂದು ದೊಡ್ಡ ಟಾಪಿಕ್. ನಾವೆಲ್ಲಾ ಅಸೆಂಬ್ಲಿ ಮೆಂಬರ್ಸ್ ಒಪ್ಪಿಗೆ ಕೊಡುವುದಾದರೆ ಇದರ ಬಗ್ಗೆ ಡಿಬೇಟ್ ಆಗಬೇಕು. Devolution of equal distribution of funds from the Central Government to the States, it is not equal, you look to the facts, ನೀವು ಯಾವುದಾದರೂ ದಾಖಲೆಯನ್ನು ತೆಗೆದು ನೋಡಿ. ಆ ಡೆವಲ್ಯೂಷನ್ ಪ್ರಾಪರ್ ಆಗಿ ಆಗುತ್ತಿಲ್ಲ. ಇಂಟರ್‌ಸ್ಟೇಟ್ ಕೌನ್ಸಿಲ್ ಎಂದು ಕಾನ್ಸ್ಟಿಟ್ಯೂಷನ್‌ನಲ್ಲಿ ಒಂದು ಬಾಡಿ ಅನ್ನು ಕ್ರಿಯೇಟ್ ಮಾಡಿದ್ದಾರೆ. ಆ ಬಾಡಿನಲ್ಲಿ ಇದನ್ನು ಟ್ಯಾಕಲ್ ಮಾಡಬೇಕು. ಇಲ್ಲಿ ಪಕ್ಷದ ಪ್ರಶ್ನೆ ಇಲ್ಲವೇ ಇಲ್ಲ. ನಾವು ನೀವು ಎಲ್ಲಾ ಸೇರಿ ಮಾಡಬೇಕು. ದುಡ್ಡು ಬಂದರೆ, ಬಸ್ಸು ಬಂದರೆ ಇಡೀ ಊರಿಗೆ ಬರುತ್ತದೆ. ಏನು ನಮ್ಮ ಬಿಜೆಪಿನವರು ಹಾಕಿಸಿದರು, ದಳದವರು ಹಾಕಿಸಿದರು, ನಮ್ಮ ಕಾಂಗ್ರೆಸ್‌ನವರು ಹಾಕಿಸಿದರು ಎನ್ನುವ ಪ್ರಶ್ನೆ ಅದು ಅಲ್ಲ. It is serving the people who have elected us. ನಮ್ಮ ಮಾನ್ಯ ಮಿತ್ರರು ಇಲ್ಲಿ ಏನು ಇದ್ದಾರೆ ಅವರೆಲ್ಲರನ್ನೂ ಕೂಡ ಇಲ್ಲಿ ನಾನು ಮನಸ್ಸು ಪೂರ್ವಕವಾಗಿ ಪ್ರಾರ್ಥನೆ ಮಾಡುತ್ತೇನೆ, ಇದರಲ್ಲಿ ಯಾವ ರಾಜಕಾರಣವನ್ನೂ ತರಬೇಡಿ, ಅಲ್ಲಿ ಅಂದರೆ ಕೇಂದ್ರದಲ್ಲಿ ನಮ್ಮವರು ಕೆಲವು ಜನ ಏನೋ ಕೆಲವು ವಿಚಾರ ಹೇಳಿದಾಗ ನೀವು ಏನು ಮಾಡಿದಿರಿ ferocious ಆಗಿಬಿಟ್ಟಿದ್ದೀರಿ ಕೆಲವು ಸಂದರ್ಭದಲ್ಲಿ. ನಾನು ತಮಗೆ ಒಂದು ಗಾದೆ ಮಾತನ್ನು ಹೇಳುತ್ತೇನೆ. 'There is a slip between the lip and the coffee cup'. ನೀವು ಏನು ಕಾಫಿ ಹಿಡಿದುಕೊಂಡಿದ್ದೀರಲ್ಲಾ, ಈ ಕಾಫಿ ತಂದು ಕೈಗೆ ಹಿಡಿದುಕೊಂಡು ಕುಡಿಯುವ ವರೆಗೆ ಸ್ಲಿಪ್ ಆಗುವ ಚಾನ್ಸ್ ಇರುತ್ತದೆ. Don't think that you can hold the power for-ever. In politics no body is permanent, foe, and enemy, ಇದನ್ನು ತಾವು ಜ್ಞಾಪಕದಲ್ಲಿ ಇಟ್ಟುಕೊಂಡು ತಾವು ಈ ಬಗ್ಗೆ ನಮ್ಮ ಸರ್ಕಾರದೊಡನೆ ಸಹಕಾರ ಕೊಡಬೇಕು ಎನ್ನತಕ್ಕಂಥ ಮನವಿಯನ್ನು ಸಲ್ಲಿಸುತ್ತಾ, ಈ ಸೀಸನ್ ಬಗ್ಗೆ ನನಗೊಂದು ಚಿಂತನೆ ಬಂದು ಬಿಟ್ಟಿದೆ. ಇದುವರೆಗೆ ನಾವು ವಿಂಟರ್ ಸೀಸ್, ಆಟಂ ಸೀಸನ್, ಹಿಂಗಾರು ಸೀಸನ್, ಮುಂಗಾರು ಸೀಸನ್ ಎಂದು ಕರೆಯುತ್ತಿದ್ದೆವು. ಆ ಸೀಸನ್ನೇ ಹೋಯಿತು ಎಂದು ಕಾಣುತ್ತದೆ. ಈಗ ಇರುವುದೇ ಎರಡು ಸೀಸನ್. ಅದು ಯಾವುದೆಂದರೆ ಅತಿ ವೃಷ್ಟಿ ಇಲ್ಲದಿದ್ದರೆ ಅನಾವೃಷ್ಟಿ. ಅತಿ ವೃಷ್ಟಿ ಬಂದರೂ ಕೆಲವು ಜನರಿಗೆ ಅನುಕೂಲವೇ. ಅನಾವೃಷ್ಟಿ ಬಂದರೂ ಕೆಲವು ಜನರಿಗೆ ಅನುಕೂಲವೇ. ಆದರೆ ರೈತರಿಗೆ ಮಾತ್ರ ಮೂರು ನಾಮವೇ. This system ಏನು ನಡೆಯುತ್ತದೆ this, we have to tackle it. ಯಾರು ಇದ್ದರೇನಂತೆ one has to tackle it. It is a disease. It should be given the medicine. ಅದನ್ನು ನಾವು ಮಾಡದೇ ಇದ್ದರೆ ನಮಗೇನೂ ಪರ್ಮನೆಂಟ್ ಸಲ್ಯೂಷನ್ಸ್ ಸಿಗಲಾರದು ಎನ್ನತಕ್ಕಂಥ

ಮಾತನ್ನು ಹೇಳುತ್ತಾ, ನಮ್ಮ ಕನ್ನಡದಲ್ಲಿ ಒಂದು ಗಾದೆ ಮಾತು ಬರುತ್ತದೆ, ಶ್ರೀ ಮಹದೇವ ಪ್ರಸಾದ್ ಹೇಳಿದ ಮೇಲೆ ಸಲ್ಯೂಷನ್ ಅನ್ನು ಕೊಡಲೇ ಬೇಕು. ಗುಂಡ್ಲುಪೇಟೆ ಯಾವಾಗಲೂ ಬರದಲ್ಲಿಯೇ ಇರುತ್ತದೆ. ಅವರಿಗೆ ಆದಷ್ಟು ಬೇಗ ಸಲ್ಯೂಷನ್ಸ್ ಕೊಟ್ಟರೆ ಇದನ್ನು ಟಾಕಲ್ ಮಾಡಿಕೊಂಡು ಬಿಡುತ್ತಾರೆ. ಅವರಿಗೆ ಅನುಕೂಲ ಆಗಲಿ ಎಂದು ಹೇಳುವವನೇ ನಾನು; ಬಡತನ ಬಂದರೆ ಹಿರೀಕರು ಒಂದು ಮಾತನ್ನು ಹೇಳುತ್ತಿದ್ದರು. ಹೊಟ್ಟೆ ಬಟ್ಟೆ ಕಟ್ಟಬೇಕು ಎನ್ನತಕ್ಕಂಥ ಮಾತನ್ನು ಹೇಳುತ್ತಿದ್ದರು. ಬಡತನ ಬಂದು ನಮಗೆ ತೊಂದರೆ ಆದಾಗ ಹೊಟ್ಟೆಬಟ್ಟೆ ಕಟ್ಟಿ ಬಾಳಬೇಕಪ್ಪಾ ಇದ್ದ ಹಾಗೆ ಇದ್ದರೆ ಎಲ್ಲವನ್ನೂ ಕಳೆದುಕೊಳ್ಳುತ್ತೀರಪ್ಪಾ ಎನ್ನತಕ್ಕಂಥ ಮಾತನ್ನು ಹೇಳಿದರು. ಇವತ್ತು ನಮಗೆ ಬಂದಿರುವ ರೋಗವೇ ಅದು. ಹೊಟ್ಟೆ ಬಟ್ಟೆ ಕಟ್ಟಲೇಬೇಕಾಗುತ್ತದೆ. ಇಲ್ಲದಿದ್ದರೆ whether he, me or you or anybody ಅದನ್ನು ಮಾಡದೇ ಇದ್ದರೆ ನಮಗೇನೂ ಉಳಿಗಾಲ ಆಗಲ್ಲ ಎನ್ನತಕ್ಕಂಥ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತಾ, ಒಂದಂತೂ ಈ ಸಂದರ್ಭದಲ್ಲಿ ನಮ್ಮ ಎಲ್ಲಾ ಮಿತ್ರರು ಒಪ್ಪುವುದಾದರೆ ಒಂದು ಯುನಾನಿಮಸ್ ರೆಸಲ್ಯೂಷನ್ ಅನ್ನು ಮಾಡುವುದು ಸೂಕ್ತ ಎಂದು ನಾನು ತಮ್ಮಲ್ಲಿ ಅಪೀಲ್ ಮಾಡುತ್ತೇನೆ. ಏನೆಂದರೆ, ಸೆಂಟ್ರಲ್ ಗವರ್ನ್‌ಮೆಂಟ್‌ನವರು ಎಲ್ಲಾ ಕಡೆಯೂ ಯಾವ ಯಾರ್ಡ್‌ಸ್ಟಿಕ್‌ನಲ್ಲಿ ತಾವು ಹಣವನ್ನು ಈ ಬರಗಾಲ ಪರಿಸ್ಥಿತಿಯಲ್ಲಿ ಟ್ಯಾಕಲ್ ಮಾಡಲಿಕ್ಕ, ಅದು ರಾಜಾಸ್ಥಾನ ಇರಬಹುದು, ಅಥವಾ ಬೇರೆ ರಾಜ್ಯವಾಗಿರಬಹುದು, ಅದೇ ರೀತಿಯ ಯಾರ್ಡ್ ಸ್ಟಿಕ್‌ನಲ್ಲಿ ಹಣ ಕೊಡುವಂಥದ್ದನ್ನು ಮಾಡಬೇಕೆಂದು ಒಮ್ಮತವಾಗಿ ನಾವೆಲ್ಲಾ ಸರ್ವಾನುಮತದಿಂದ ಕೇಂದ್ರ ಸರ್ಕಾರವನ್ನು ಒತ್ತಾಯ ಮಾಡುತ್ತೇವೆ ಎನ್ನುವಂಥ ಒಂದು ನಿರ್ಣಯವನ್ನು ನಾವು ಇಲ್ಲಿ ತೆಗೆದುಕೊಳ್ಳಲೇ ಬೇಕು. ಮತ್ತು ನದಿಗಳನ್ನು ಜೋಡಿಸತಕ್ಕಂಥದ್ದನ್ನು ಬಹಳಷ್ಟು ಬೇಗನೆ ಕಾರ್ಯಗತ ಮಾಡಬೇಕು. ಅದು ಬಿಟ್ಟು ಪೊಲಿಟಿಕಲ್ ಇಶ್ಯೂ ಮಾಡಿಕೊಂಡು, ಎಲೆಕ್ಷನ್‌ಗೋಸ್ಕರ ಇಟ್ಟುಕೊಂಡು, ಉದ್ಘಾಟನೆ ಮಾಡಿಕೊಂಡು ಮಾಡುತ್ತೇವೆನ್ನುವುದು ಅದೆಲ್ಲಾ ಬೇಡ. You have to be sincere. ಅದನ್ನು ಬಹಳ ಬೇಗನೆ ಮಾಡಿಕೊಟ್ಟರೆ ಆದಷ್ಟು ಬೇಗ ಆಗುತ್ತದೆ. ಅದನ್ನು ಮಾಡಬೇಕು, ಮತ್ತು ನಮ್ಮ ಪಶ್ಚಿಮಘಟ್ಟದ ರಿವರ್‌ಗಳು ಮತ್ತು ಪೂರ್ವಘಟ್ಟದ ರಿವರ್‌ಗಳು ಎಲ್ಲಾ ವೇಸ್ಟ್ ಆಗಿ ಸಮುದ್ರ ಸೇರುತ್ತವೆಯಲ್ಲಾ, ಅದೆಲ್ಲವನ್ನೂ ಕೂಡ ಇವತ್ತು ಟ್ಯಾಕಲ್ ಮಾಡುವಂಥ ವಿಚಾರ ಆಗಬೇಕು. ಇನ್ನು ಕೊನೆಯಲ್ಲಿ ಮಾನ್ಯ ಮುಖ್ಯಮಂತ್ರಿಗಳಿಗೆ ಒಂದು ಥ್ಯಾಂಕ್ಸ್ ಹೇಳಬೇಕಾಗುತ್ತದೆ. ಮೈಸೂರಿನ ನನ್ನ ಕಾನ್ಸ್ಟಿಟ್ಯೂಯನ್ಸಿಗೆ ವರುಣಾ ಚಾನಲ್ ಎಂದು ಬರುತ್ತದೆ. ಅದು ಅವರ ಜಿಲ್ಲೆಯದು; ಕೆ.ಆರ್.ಎಸ್. ಇರುವುದು ಅವರ ಅಂದರೆ ಮುಖ್ಯಮಂತ್ರಿಗಳ ಜಿಲ್ಲೆಯಲ್ಲಿ. ನಿಮಗೆಲ್ಲಾ ಆ ಸಮಸ್ಯೆಗಳೆಲ್ಲ ಗೊತ್ತಿದೆ. ಯಾರೋ ಪುಣ್ಯಾತ್ಮ ಮೊನ್ನೆ ಬಂದು "ಇವರೆಲ್ಲಾ ಬಂದ ಮೇಲೆ ಇವರಿಂದ ಬರ ಬಂತು, ಸುಡುಗಾಡು ಬಂತು ಎಂದು ಹೇಳಿದರು. ರೀ ಹೋಗ್ರಿ ಮಳೆ ಬರದಿರುವುದಕ್ಕೆ ಯಾರ ಯಾರನ್ನೋ ಬೈಯುತ್ತೀರಿ, ಹೋಗ್ರೀ, ನಿಮಗೆ ಬುದ್ಧಿ ಇಲ್ಲ ಎಂದು ಹೇಳಿಬಿಟ್ಟು ಅವರನ್ನು ಕಳುಹಿಸಿದೆ. ಕೆ.ಆರ್.ಎಸ್. ನಲ್ಲಿ 80 ಅಡಿ ನೀರು ಬಂತು. 80 ಅಡಿ ನೀರು ಬಂದಾಗ ನಾವೆಲ್ಲಾ ಯುನಾನಿಮಸ್ ಆಗಿ ಮಂಡ್ಯ ಸ್ನೇಹಿತರು ನಾವೆಲ್ಲಾ ಒಂದು ತೀರ್ಮಾನ ತೆಗೆದುಕೊಂಡೆವು,– ಅದೇನೆಂದರೆ, ಮೊದಲು ಬದುಕುವುದನ್ನು ಕಲಿಯೋಣ ಆ ಮೇಲೆ ಬೆಳೆಸುವುದನ್ನು ನೋಡೋಣ, ಯೋಚನೆ ಮಾಡೋಣ, ಏನು ತೊಂದರೆಯಿಲ್ಲ, ಕುಡಿಯುವ ನೀರಿಗೆ ಎಲ್ಲಾ ಕಡೆ ತೊಂದರೆ ಆಗಿದೆಯಪ್ಪಾ, ನಾವೇನು ಬೇಕಾದಷ್ಟು ಗೋಕಟ್ಟೆಗಳು ಅವು ಇವು ಏನು ಜಲಾನಯನದಲ್ಲಿ ಮಾಡಿಕೊಂಡು ಕುಳಿತಿದ್ದೇವೆ, ಅದಕ್ಕೆ ಮೊದಲು ನೀರು ತುಂಬಿಸೋಣ

ಎನ್ನುವ ಆ ತೀರ್ಮಾನವನ್ನು ನಾವು ಯುನಾನಿಮಸ್ ಆಗಿ ತೆಗೆದುಕೊಂಡೆವು. ಅದನ್ನು ತೆಗೆದುಕೊಳ್ಳುವುದರಲ್ಲಿ ಕೂಡ ಅವರು ಸಹಕಾರ ಕೊಟ್ಟಿದ್ದಾರೆ. ಅದನ್ನು ವಿರೋಧ ಮಾಡಿಲ್ಲ, ಬೆಳೆ ಕೊಡು ಎನ್ನತಕ್ಕಂಥ ಯೋಚನೆ ಅವರು ಮಾಡಿಲ್ಲ, 74 ಅಡಿವರೆಗೆ ಕೂಡ ನೀರು ಕೊಡುತ್ತೇವೆ ಎನ್ನತಕ್ಕಂಥ ಮಾತನ್ನು ಹೇಳಿದ್ದಾರೆ, ಏಕೆಂದರೆ he is seriously worried ಏನು ಟ್ಯಾಕಲ್ ಮಾಡಿದರೆ ಆಗುತ್ತದಪ್ಪಾ ಎನ್ನುವುದರ ಬಗ್ಗೆ, ಅದನ್ನು ಅವರು ಒಬ್ಬರಾಗಿ ಮೂರು ವರ್ಷದಿಂದ ಸತತವಾಗಿ ಇರುವಂಥ ಬರವನ್ನು ಎಫೆಕ್ಟೀವ್ ಆಗಿ ಇದ್ದಂಥ ರಿಸೋರ್ಸಸ್‌ನಲ್ಲಿ ಮ್ಯಾನೇಜ್ ಮಾಡಿರತಕ್ಕಂಥದ್ದಕ್ಕೋಸ್ಕರ ನಾನು ತಮ್ಮೆಲ್ಲರ ಪರವಾಗಿ ಮಾನ್ಯ ಮುಖ್ಯಮಂತ್ರಿಗಳಿಗೆ ವಂದನೆಯನ್ನು ಸಲ್ಲಿಸುತ್ತಾ, ಬರ ವಿಚಾರವಾಗಿ ಮಾತನಾಡುವುದಕ್ಕೆ ನನಗೆ ಅವಕಾಶ ಕೊಟ್ಟಿದ್ದಕ್ಕಾಗಿ ಮಾನ್ಯ ಉಪಾಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ. ನಮಸ್ಕಾರ.

ಉಪಾಧ್ಯಕ್ಷರು:- ಈಗ ಸದನವನ್ನು ನಾಳೆ ದಿನಾಂಕ 17ನೇ ಜುಲೈ 2003 ರಂದು ಬೆಳಿಗ್ಗೆ 11–00 ಗಂಟೆವರೆಗೆ ಮುಂದುಡಿತ್ತಿದ್ದೇನೆ.

(ಸದನವು ಸಂಜೆ 6 ಗಂಟೆ 37 ನಿಮಿಷಕ್ಕೆ ಮುಂದೂಡಲ್ಪಟ್ಟು ಪುನಃ ದಿನಾಂಕ 17ನೇ ಜುಲೈ 2003ರ ಗುರುವಾರದಂದು ಬೆಳಿಗ್ಗೆ 11–00 ಗಂಟೆಗೆ ಸೇರಲು ನಿಶ್ಚಯಿಸಿತು).

6. ಅನುಬಂಧ 1

ಸೂಳ್ಯ ಕ್ಷೇತ್ರ ವ್ಯಾಪ್ತಿಯ ಪ್ರಾಥಮಿಕ ಶಾಲೆಗಳಲ್ಲಿ 8ನೇ ತರಗತಿಯನ್ನು ಪ್ರಾರಂಭಿಸುವ ಬಗ್ಗೆ

2862(3383): ಶ್ರೀ ಅಂಗಾರ ಎಸ್. (ಸೂಳ್ಯ) ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಸೂಳ್ಯ ವಿಧಾನ ಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಎಷ್ಟು ಕಡೆ ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ 8ನೇ ತರಗತಿಯನ್ನು ಪ್ರಾರಂಭಿಸಲಾಗಿದೆ; ಪೂರ್ಣ ವಿವರ ನೀಡುವುದು;

ಆ) ಹಾಗಿದ್ದಲ್ಲಿ, 8ನೇ ತರಗತಿಗೆ ಅವಶ್ಯಕತೆಯಿರುವ ಆಧ್ಯಾಪಕರನ್ನು ಒದಗಿಸಲಾಗಿದೆಯೆ; ಇಲ್ಲದಿದ್ದರೆ, ಎಷ್ಟು ಸಮಯದಲ್ಲಿ ಅಧ್ಯಾಪಕರನ್ನು ಒದಗಿಸಲಾಗುವುದು?

ಶ್ರೀ ಬಿ.ಕೆ. ಚಂದ್ರಶೇಖರ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು):

ಅ) ಸೂಳ್ಯ ವಿಧಾನ ಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ 3 ಕಡೆ ಹಿರಿಯ ಪ್ರಾಥಮಿಕ ಶಾಲೆಗಳನ್ನು 8ನೇ ತರಗತಿಯನ್ನು ಪ್ರಾರಂಭಿಸಲಾಗಿದೆ.

1. ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಎಣ್ಣೂರು
2. ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಕಲ್ಮಡಕ
3. ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಕೊಲ್ವಾರು

ಆ) ಹೊಸದಾಗಿ ಪ್ರಾರಂಭವಾದ 8ನೇ ತರಗತಿಯ ಶಾಲೆಗಳಿಗೆ ಅರ್ಹ ಶಿಕ್ಷಕರನ್ನು ನಿಯೋಜಿಸಿಕೊಳ್ಳುವ ಬಗ್ಗೆ ಸಂಬಂಧಿಸಿದ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಸೂಕ್ತ ನಿರ್ದೇಶನ ನೀಡಲಾಗಿದೆ. ಹಾಗೂ ಕ್ರಮಬದ್ಧ ಖಾಯಂ ಶಿಕ್ಷಕರನ್ನು ನೇಮಿಸಿಕೊಳ್ಳುವ ಬಗ್ಗೆ ತುರ್ತು ಕ್ರಮ ತೆಗೆದುಕೊಳ್ಳಲಾಗುತ್ತಿದೆ.

ರಾಜ್ಯದ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಮಂಜೂರಾತಿ ವಿವರ

2864(3385): ಶ್ರೀ ಅಂಗಾರ ಎಸ್. (ಸೂಳ್ಯ) ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?